₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 18.08.2024 ಸಂಪುಟ: 67 ಸಂಚಿಕೆ: 102 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ದಾರಿದೀಪೋಕ್ತಿ

ಒಂದೆಡೆ ಕುಳಿತು ಬೇರೆಯವರ ಬಗ್ಗೆ ಮಾತಾಡುವವರನ್ನು ನಂಬಬಾರದು. ಕಾರಣ ನೀವು ಎದ್ದೇಳುತ್ತಿದ್ದಂತೆ, ಮಾತುಕತೆಯ ವಿಷಯ ನೀವೇ ಆಗಿರುತ್ತೀರಿ. ಇಂಥವರ ಬಾಯಿಚಪಲಕ್ಕೆ ಯಾರು ಬೇಕಾದರೂ ಗುರಿಯಾಗುತ್ತಾರೆ. ಇವರು ಅಪಾಯಕಾರಿಗಳು.

ವಕ್ರತುಂಡೋಕ್ತಿ

ಅಮೆರಿಕ ವೀಸಾ ಸಿಕ್ಕವರು ರಾಜಯೋಗಿಗಳು. ಸಿಗದವರು ಯೋಗಿರಾಜರು.

ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪ್ಯಾರಿಸ್‌ನಿಂದ ಭಾರತಕ್ಕೆ ಮರಳಿದ ಕುಸ್ತಿಪಟು ವಿನೇಶ್ ಫೋಗಟ್ ಅವರಿಗೆ ದೆಹಲಿಯ ಇಂದಿರಾ ಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ನೆರೆದಿದ್ದ ನೂರಾರು ಅಭಿಮಾನಿಗಳು ಅದ್ದೂರಿ ಸ್ವಾಗತ ಕೋರಿದರು.

ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ | ಗೆಹ್ಲೋಟ್ ಕೇಂದ್ರ ಸರಕಾರದ ಕೈಗೊಂಬೆ, ಚುನಾಯಿತ ಸರಕಾರ ಅಭದ್ರಗೊಳಿಸುವ ಷಡ್ಯಂತ್ರ: ಸಿಎಂ ವಾಗ್ದಾಳಿ | ನಾಯಕನ ಬೆಂಬಲಕ್ಕೆ ನಿಂತ ಕೈ ಪಡೆ, ರಾಜೀನಾಮೆ ಪ್ರಶ್ನೆಯೇ ಇಲ್ಲ, ಕಾನೂನು ಹೋರಾಟಕ್ಕೆ ಸಿದ್ಧ ಎಂದ ಡಿಸಿಎಂ | ರಾಷ್ಟ್ರವ್ಯಾಪಿ ಹೋರಾಟಕ್ಕೆ ಕಾಂಗ್ರೆಸ್ ಸಿದ್ಧತೆ, ಆ.19ರಂದು ರಾಜ್ಯಾದ್ಯಂತ ಪ್ರತಿಭಟನೆಗೆ ಕೆಪಿಸಿಸಿ ಸೂಚನೆ | ರಾಜ್ಯಪಾಲರ ಆದೇಶದ ಬೆನ್ನಲ್ಲೇ ಹೈಕೋರ್ಟ್‌ನಲ್ಲಿ 'ಕೇವಿಯಟ್', ಕಾಂಗ್ರೆಸ್ ಕಾರ್ಯಕರ್ತರ ಆಕ್ರೋಶ | ಪಾದಯಾತ್ರೆಗೆ ಸಿಕ್ಕ ಯಶಸ್ಸು: ಪ್ರತಿಪಕ್ಷ ನಾಯಕ ಅಶೋಕ ವ್ಯಾಖ್ಯಾನ, ರಾಜೀನಾಮೆಗೆ ವಿಜಯೇಂದ್ರ ಒತ್ತಾಯ

ಗವರ್ನಮೆಂಟ್ vs ಗವರ್ನರ್

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು ರಾಜ್ಯ ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ನಿವೇಶನ ಹಂಚಿಕೆ ಪ್ರಕರಣ ಸಂಬಂಧ ಸಿದ್ದರಾಮಯ್ಯ ಅವರ ಪಾತ್ರ ಕುರಿತು ತನಿಖೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮತಿ ನೀಡಿದ್ದಾರೆ. ಆರ್‌ಟಿಐ ಕಾರ್ಯಕರ್ತರಾದ ಟಿ. ಜೆ. ಅಬ್ರಹಾಂ ಮತ್ತು ಮೈಸೂರಿನ ಸ್ನೇಹಮಯಿ ಕೃಷ್ಣ ಎಂಬವರ ದೂರಿನ ಮೇರೆಗೆ ರಾಜ್ಯಪಾಲರು ಆರು ಪುಟಗಳ ಆದೇಶ ಹೊರಡಿಸಿದ್ದು, ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17- ಎ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ- 2023ರ ಸೆಕ್ಷನ್ 218ರ ಅಡಿಯಲ್ಲಿ ತನಿಖೆಗೆ ಅನುಮತಿ ನೀಡಿರುವುದಾಗಿ ತಿಳಿಸಿದ್ದಾರೆ.

- ಸಿಎಂ ಬೆನ್ನಿಗೆ ನಿಂತ ಇಂಡಿ ಒಕ್ಕೂಟ
- ರಾಷ್ಟ್ರಮಟ್ಟದಲ್ಲಿ ಹೋರಾಟ ಸಂಘಟಿಸಲು ಸಿದ್ಧತೆ
- ರಾಜಭವನಕ್ಕೆ ಪರೇಡ್‌ಗೆ ಸಚಿವರ ಸಿದ್ಧತೆ
- ರಾಜ್ಯಾದ್ಯಂತ ಸಿದ್ದು ಬೆಂಬಲಿಗರಿಂದ ಪ್ರತಿಭಟನೆ
- ರಾಜ್ಯಪಾಲರ ನಡೆ ಸಂವಿಧಾನ ವಿರೋಧಿ ಎಂದ ನಾಯಕರು
- ಪ್ರಾಸಿಕ್ಯೂಷನ್‌ಗೆ ಡೋಂಟ್ ಕೇರ್

ತಮ್ಮ ಪ್ರಾಸಿಕ್ಯೂಷನ್ ಬಗ್ಗೆ ಪ್ರತಿಕ್ರಿಯಿಸಿರುವ ಸಿದ್ದರಾಮಯ್ಯ, ಕೇಂದ್ರ ಮತ್ತು ರಾಜ್ಯ ಬಿಜೆಪಿ ನಾಯಕರ ಕುಮ್ಮಕ್ಕಿನಿಂದ ತಮ್ಮ ವಿರುದ್ಧ ರಾಜ್ಯಪಾಲರು ತನಿಖೆಗೆ ಆದೇಶ ನೀಡಿದ್ದು, ಇದಕ್ಕೆ ಕಾನೂನಿನ ಬಲವಿಲ್ಲ. ಯಾವುದೇ ತಪ್ಪು ಮಾಡದ ಕಾರಣ ತಾವು ರಾಜೀನಾಮೆ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ. ಸಿಎಂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ಬೆನ್ನಿಗೇ ಕಾಂಗ್ರೆಸ್ ನಾಯಕರು ಸರಣಿ ಸಭೆಗಳನ್ನು ನಡೆಸಿದ್ದು ಸಿದ್ದರಾಮಯ್ಯ ಅವರ ಬೆಂಗಾವಲಾಗಿ ನಿಲ್ಲಲು ನಿರ್ಧರಿಸಿದ್ದಾರೆ. ಕಾಂಗ್ರೆಸ್ ಹೈಕಮಾಂಡ್ ಕೂಡ ಈ ಪ್ರಕರಣವನ್ನು ಕೇಂದ್ರ ಸರಕಾರದ ವಿರುದ್ಧದ ಹೋರಾಟದ ಭಾಗವಾಗಿ ಪರಿಗಣಿಸಲು ನಿರ್ಧರಿಸಿದೆ.

ಪ್ರತಿಭಟನೆಗೆ ಸಿದ್ಧತೆ: ಇದೇ ವೇಳೆ ಸಿಎಂ ಮತ್ತು ಕಾಂಗ್ರೆಸ್ ನಾಯಕರು ಕಾನೂನು ತಜ್ಞರ ಸರಣಿ ಸಭೆ ನಡೆಸಿದ್ದು ಮುಂದಿನ ರಾಜಕೀಯ ಹೋರಾಟಕ್ಕೆ ಸಿದ್ಧತೆ ನಡೆಸಿಕೊಂಡಿದ್ದಾರೆ. ಮತ್ತೊಂದೆಡೆ ಬಿಜೆಪಿ ನಾಯಕರು ತಮ್ಮ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ತೀರ್ಮಾನಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈ ನಡುವೆ ರಾಜ್ಯಪಾಲರ ನಡೆಯನ್ನು ಖಂಡಿಸಿ ರಾಜ್ಯಾದ್ಯಂತ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲು ಕೆಪಿಸಿಸಿ ತೀರ್ಮಾನಿಸಿದ್ದು, ಸೋಮವಾರ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಲಾಗಿದೆ. ಈ ಮೂಲಕ ರಾಜಭವನ ಹಾಗೂ ಕೇಂದ್ರ ಸರಕಾರದ ವಿರುದ್ಧ ಜನಾಂದೋಲನ ರೂಪಿಸಲು ತೀರ್ಮಾನಿಸಲಾಗಿದೆ.

ಸಿಎಂ ನೇತೃತ್ವದಲ್ಲಿಯೇ ಸಂಪುಟ ಸಭೆ: ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುತ್ತಿದ್ದಂತೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನಿವಾಸಕ್ಕೆ ಸಚಿವರು, ಹಿರಿಯ ಶಾಸಕರು, ಕಾನೂನು ತಜ್ಞರು ಸೇರಿದಂತೆ ಹಲವರು ಭೇಟಿ ನೀಡಿ, ಸಿದ್ದರಾಮಯ್ಯ ಅವರೊಂದಿಗೆ ಮುಂದಿನ ಹೋರಾಟದ ಕುರಿತು ಚರ್ಚಿಸಿದರು. ಈ ವೇಳೆ ಯಾವುದೇ ಕಾರಣಕ್ಕೂ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬಾರದು ಎಂದು ಒತ್ತಾಯಿಸಿದರು.

→ 4

ರಾಜ್ಯಪಾಲರ ನಿರ್ಧಾರಕ್ಕೆ ಕಾನೂನಿನ ಬಲ ಇಲ್ಲ. ನಾನು ಯಾವ ಕಾರಣಕ್ಕೆ ರಾಜೀನಾಮೆ ನೀಡಬೇಕು? ನನ್ನ ಪ್ರಕಾರ ರಾಜ್ಯಪಾಲರೇ ರಾಜೀನಾಮೆ ನೀಡಬೇಕು. ಅವರ ನಿರ್ಧಾರ ವಿರುದ್ಧ ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ.

– **ಸಿದ್ದರಾಮಯ್ಯ** ಮುಖ್ಯಮಂತ್ರಿ

ಏನಿದು ಪ್ರಾಸಿಕ್ಯೂಷನ್ ಅನುಮತಿ?

ರಾಜ್ಯದ ಮುಖ್ಯಸ್ಥರಾಗಿರುವ ಸಿಎಂ ವಿರುದ್ಧ ಕಾನೂನು ಉಲ್ಲಂಘನೆ ಆರೋಪ ಕೇಳಿಬಂದಾಗ ರಾಜ್ಯಪಾಲರು ಕೈಗೊಳ್ಳುವ ಕಾನೂನು ಕ್ರಮ ಇದಾಗಿದೆ.

ಕಾನೂನಿನ ವಿನಾಯಿತಿ ಇದೆಯೇ

ಇತರೆ ಸಾರ್ವಜನಿಕರಂತೆ ಸಿಎಂ ಕೂಡ ಸಂಪೂರ್ಣವಾಗಿ ಕಾನೂನು ಕ್ರಮದ ರಕ್ಷಣೆಯನ್ನು ಹೊಂದಿರುವುದಿಲ್ಲ. ಆದರೂ ಕೆಲವು ಮುನ್ನೆಚ್ಚರಿಕೆಗಳಿವೆ. ಉದಾಹರಣೆಗೆ, ಮೊಕದ್ದಮೆಯನ್ನು ಹೂಡಬೇಕಾದರೆ, ರಾಜ್ಯಪಾಲರ ಪೂರ್ವಾನುಮತಿಯನ್ನು ನೀಡಬೇಕಾಗಬಹುದು.

ನ್ಯಾಯಾಲಯ ಪ್ರಕ್ರಿಯೆ

ಸಿಎಂ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್ ನೀಡಿದ ಬಳಿಕ ಈ ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಲಿದೆ. ಅಲ್ಲಿ ಸಿಎಂ ಅನ್ನು ಕೂಡ ಇತರೆ ಆರೋಪಿಗಳಂತೆ ಪರಿಗಣಿಸಲಾಗುವುದು. ನ್ಯಾಯಾಲಯದ ಪ್ರಕ್ರಿಯೆಯಲ್ಲಿ ಆರೋಪ ಪಟ್ಟಿ ಹಾಕುವುದು, ಸಾಕ್ಷಿ ನೀಡುವುದು ಮತ್ತು ವಿಚಾರಣೆ ನಡೆಸಲಾಗುವುದು.

ಸಿಎಂ ಮುಂದಿರುವ ಆಯ್ಕೆ

- ಪ್ರಾಸಿಕ್ಯೂಷನ್ ಅನುಮತಿ ಪ್ರಶ್ನಿಸಿ ಹೈಕೋರ್ಟ್‌ಗೆ ಹೋಗಬಹುದು.
- ತನಿಖೆಗೆ ಅನುಮತಿ ನೀಡದಂತೆ ಕೆಳ ನ್ಯಾಯಾಲಯದಲ್ಲಿಯೇ ಅರ್ಜಿ
- ರಾಜಕೀಯ ಹೋರಾಟದ ಮೂಲಕ ಕೇಂದ್ರದ ಮೇಲೆ ಒತ್ತಡ
- 2022ರಲ್ಲಿ ಮುಡಾ ಸೈಟ್ ಸಿಎಂಗೆ ಹಂಚಿಕೆ. ಹೀಗಾಗಿ ರಾಜ್ಯಪಾಲರಿಗೆ ಅಧಿಕಾರ ಇಲ್ಲವೆಂದು ವಾದ
- ಪ್ರಕರಣ ಸಂಬಂಧ ತನಿಖೆ ಅನುಮತಿ ಸ್ಪೀಕರ್ ವ್ಯಾಪ್ತಿಗೆ ಸೇರಿದೆ ಎಂದು ಕೋರ್ಟ್‌ನಲ್ಲಿ ಪ್ರಸ್ತಾಪ
- ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದಾಕ್ಷಣ ಹಿಂದೆ ಯಾವುದೇ ಸಿಎಂ ರಾಜೀನಾಮೆ ನೀಡಿದ ನಿದರ್ಶನವಿಲ್ಲ
- ಎಚ್‌ಡಿಕೆ ಸೇರಿದಂತೆ ತನಿಖೆ ಅನುಮತಿ ಕೋರಿ ರಾಜ್ಯಪಾಲರ ಮುಂದಿರುವ ಇತರ ಅರ್ಜಿಗಳ ಉಲ್ಲೇಖ

ಮುಡಾ ಪ್ರಕರಣದ ಟೈಮ್ ಲೈನ್

2024ರ ಜುಲೈ 5: ಮೈಸೂರಿನ ಹಂಚ್ಯಾ-ಸಾತಗಳ್ಳಿ ಎ ಮತ್ತು ಬಿ ವಲಯ ಮತ್ತು ದೇವನೂರು 3ನೇ ಹಂತದ ಬಡಾವಣೆಯಲ್ಲಿನ ಮುಡಾ ಒಟ್ಟು 130 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ. ಈ ಜಮೀನಿನಲ್ಲಿ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರ ಜಮೀನಿದೆ. ನಗರ ಪಾಲಿಕೆಯು ಈ ಬಡಾವಣೆಗಳಲ್ಲಿ ಒಟ್ಟು 8,486 ನಿವೇಶನಗಳನ್ನು ಅಭಿವೃದ್ಧಿಪಡಿಸಿ 2001-02ರಲ್ಲಿ ಹಂಚಿಕೆ ಮಾಡಿದೆ. ಈ ಸೈಟ್‌ಗಳನ್ನು ಅಭಿವೃದ್ಧಿಪಡಿಸಲು 130 ಎಕರೆ ಭೂಮಿಯನ್ನು ಎಷ್ಟು ಬಳಸಲಾಗಿದೆ. ಬಳಕೆಯಾಗದ ಭೂಮಿಯ ಯಾವ ಡಿನೋಟಿಫೈ ಮಾಡಲಾಗಿದೆ ಎಂಬುದು ಸ್ಪಷ್ಟವಾಗಿಲ್ಲ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ವಿಜಯನಗರ ಪೊಲೀಸರಿಗೆ ದೂರು ನೀಡಿದ್ದರು. ಸಿದ್ದರಾಮಯ್ಯ, ಅವರ ಪತ್ನಿ ಪಾರ್ವತಿ, ಸೋದರ ಮಾವ ಮಲ್ಲಿಕಾರ್ಜುನ ಮತ್ತಿತರರು ನಕಲಿ ಸೃಷ್ಟಿಸಿದ್ದಾರೆ ಎಂದು ಆರೋಪಿಸಿದ್ದರು.

ಜುಲೈ 25: ಮುಡಾ ಹಗರಣದ ಸಂಬಂಧ ಮುಖ್ಯ ಆರೋಪಿಯಾಗಿರುವ ಸಿಎಂ ಸಿದ್ದರಾಮಯ್ಯ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರ ಒಪ್ಪಿಗೆ ಪಡೆಯುವುದಾಗಿ ಟಿಜೆ ಅಬ್ರಹಾಂ ಘೋಷಿಸಿದರು.

ಜುಲೈ 8: ಮುಡಾ ಪ್ರಕರಣ ಸಂಬಂಧ ಸಿಎಂ ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ದೂರು ದಾಖಲಾಗಿತ್ತು. ಸಿದ್ದರಾಮಯ್ಯ ಅಧಿಕಾರ ದುರ್ಬಳಕೆ ಮಾಡಿದ್ದಾರೆ ಎಂದು ಉಲ್ಲೇಖಿಸಲಾಯಿತು. ಸ್ನೇಹಮಯಿ ಕೃಷ್ಣ ಖಾಸಗಿ ಅಪರಾಧ ದೂರು ಅನ್ನು ದಾಖಲಿಸಿದರು.

ಆಗಸ್ಟ್ 13: ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರಿಗೆ ಹೊಸ ದೂರು ನೀಡಲಾಯಿತು. ಮುಖ್ಯಮಂತ್ರಿ ಅಧಿಕಾರ ದುರುಪಯೋಗ ಪಡಿಸಿಕೊಂಡು ಕಾನೂನು ಪ್ರಕ್ರಿಯೆಗಳನ್ನು ಉಲ್ಲಂಘಿಸಿದ್ದಾರೆ ಎಂದು ಸ್ನೇಹಮಯಿ ಕೃಷ್ಣ ದೂರಿನಲ್ಲಿ ಉಲ್ಲೇಖಿಸಿದ್ದರು.

ಏನಿದು ಮುಡಾ ಹಗರಣ?

ಸಿಎಂ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಸಿದ್ದರಾಮಯ್ಯ ಅವರಿಗೆ ಮೈಸೂರಿನ ಪ್ರಮುಖ ಪ್ರದೇಶದಲ್ಲಿ ಮುಡಾ ಸ್ವಾಧೀನಪಡಿಸಿಕೊಂಡಿರುವ ಭೂಮಿಗಿಂತ ಅಧಿಕ ಮೌಲ್ಯದ ನಿವೇಶನವನ್ನು ಪರಿಹಾರವಾಗಿ ಹಂಚಿಕೆ ಮಾಡಲಾಗಿದೆ ಎಂಬುದು ಆರೋಪವಾಗಿದೆ. ಮುಡಾದಿಂದ ಪಾರ್ವತಿ ಅವರಿಗೆ 50:50 ಅನುಪಾತದ ಯೋಜನೆಯಡಿ ಅವರ 3.16 ಎಕರೆ ಜಮೀನಿಗೆ ಬದಲಾಗಿ 14ನಿವೇಶನಗಳನ್ನು ಮಂಜೂರು ಮಾಡಲಾಗಿದೆ. ಪಾರ್ವತಿ ಅವರಿಗೆ 3.16 ಎಕರೆ ಜಮೀನಿನ ಮೇಲೆ ಯಾವುದೇ ಕಾನೂನು ಹಕ್ಕು ಇಲ್ಲ ಎಂಬುದು ಆರ್‌ಟಿಐ ಕಾರ್ಯಕರ್ತರ ವಾದವಾಗಿದೆ. ಮುಡಾ ಹಗರಣದ ಆರೋಪ ಪ್ರಬಲವಾದ ಹಿನ್ನೆಲೆ ತನಿಖೆಗಾಗಿ ಕಾಂಗ್ರೆಸ್ ಸರಕಾರ ಜುಲೈ 14 ರಂದು ಮಾಜಿ ಹೈಕೋರ್ಟ್ ನ್ಯಾಯಮೂರ್ತಿ ಪಿ. ಎನ್. ದೇಸಾಯಿ ನೇತೃತ್ವದಲ್ಲಿ ಏಕಸದಸ್ಯ ತನಿಖಾ ಆಯೋಗವನ್ನು ರಚಿಸಿತು. ಜುಲೈ 26ರಂದು ಟಿ ಜೆ ಅಬ್ರಹಾಂ ಸಲ್ಲಿಸಿದ್ದ ಅರ್ಜಿ ಆಧಾರದ ಮೇಲೆ ರಾಜ್ಯಪಾಲರು ಸಿಎಂಗೆ ಕಾರಣ ಕೇಳಿ, ಸರಕಾರಕ್ಕೆ ಶೋಕಾಸ್ ನೋಟಿಸ್ ಜಾರಿ ಮಾಡಿದ್ದರು. ಆಗಸ್ಟ್ 1ರಂದು ಸಿಎಂ ಗೈರಿನಲ್ಲಿ ಸಂಪುಟ ನಿರ್ಧಾರ ಕೈಗೊಂಡು, ಶೋಕಾಸ್ ನೋಟಿಸ್ ಹಿಂಪಡೆಯುವಂತೆ ರಾಜ್ಯಪಾಲರಿಗೆ ಸಲಹೆ ಮಾಡಿ, ಅರ್ಜಿಯನ್ನು ತಿರಸ್ಕರಿಸಲಾಗಿತ್ತು.

ರಾಜ್ಯಪಾಲರ ಕಚೇರಿ ದುರ್ಬಳಕೆ ಮಾಡಿಕೊಂಡು ಸುಳ್ಳು ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸಿಲುಕಿಸಿ ಸರಕಾರ ಅಸ್ಥಿರಗೊಳಿಸುವ ಷಡ್ಯಂತ್ರ ನಡೆಯುತ್ತಿದೆ. ಇಡೀ ಕಾಂಗ್ರೆಸ್ ಪಕ್ಷ ಹಾಗೂ ಸರಕಾರ ಸಿದ್ದರಾಮಯ್ಯ ಅವರ ಬೆನ್ನಿಗೆ ನಿಲ್ಲುತ್ತದೆ, ಅವರು ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ.

– **ಡಿ.ಕೆ.ಶಿವಕುಮಾರ್** ಉಪಮುಖ್ಯಮಂತ್ರಿ

ರಾಜ್ಯಪಾಲರ ಆದೇಶದಲ್ಲಿ ಏನಿದೆ?

ಮುಡಾ ಹಗರಣ: ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17 ಎ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ- 2023ರ ಸೆಕ್ಷನ್ 218ರಡಿಯಲ್ಲಿ ಸಿಎಂ ವಿರುದ್ಧ ತನಿಖೆಗೆ ಆದೇಶ

ಬೆಂಗಳೂರು: ಆರ್‌ಟಿಐ ಕಾರ್ಯಕರ್ತರಾದ ಟಿ. ಜೆ. ಅಬ್ರಹಾಂ, ಮೈಸೂರಿನ ಸ್ನೇಹಮಯಿ ಕೃಷ್ಣ ಮತ್ತು ಪ್ರದೀಪ್ ಕುಮಾರ್ ಎಂಬವರ ದೂರಿನ ಮೇರೆಗೆ ರಾಜ್ಯಪಾಲರು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಸೆಕ್ಷನ್ 17-ಎ ಮತ್ತು ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ- 2023ರ ಸೆಕ್ಷನ್ 218ರ ಅಡಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಆರೋಪ ತನಿಖೆಗೆ ಅನುಮತಿ ನೀಡಿರುವುದಾಗಿ ಆರು ಪುಟಗಳ ಆದೇಶದಲ್ಲಿ ತಿಳಿಸಲಾಗಿದೆ.

ಆದೇಶದಲ್ಲಿ ಏನಿದೆ?: ಮುಖ್ಯಮಂತ್ರಿ ವಿರುದ್ಧ ಆರೋಪಗಳಿಗೆ ಸಂಬಂಧಿಸಿ ಸಲ್ಲಿಕೆಯಾಗಿರುವ ದೂರುಗಳು, ಕಾನೂನು ತಜ್ಞರ ಅಭಿಪ್ರಾಯ ಮತ್ತು ಸಂಪುಟದ ನಿರ್ಣಯವನ್ನು ಪರಿಶೀಲಿಸಲಾಗಿದೆ. ಸಿಎಂ ವಿರುದ್ಧ ಎರಡು ಬಗೆಯ ಆರೋಪಗಳಿವೆ. ದೂರಿನಲ್ಲಿ ಉಲ್ಲೇಖಿಸಿರುವ ಆರೋಪಗಳಿಗೆ ಪೂರಕ ದಾಖಲೆಗಳು ಇವೆ. ಈ ಹಿನ್ನೆಲೆಯಲ್ಲಿ ಆರೋಪಗಳ ಕುರಿತ ತಟಸ್ಥ, ವಸ್ತುನಿಷ್ಠ ಮತ್ತು ನಿಷ್ಪಕ್ಷಪಾತ ತನಿಖೆ ಅಗತ್ಯವಿದೆ. ಅರ್ಜಿಗಳ ಆಧಾರದ ಮೇಲೆ ಜುಲೈ 26ರಂದು ಮುಖ್ಯಮಂತ್ರಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿ, ವಿವರಣೆ ಕೇಳಲಾಗಿತ್ತು. ಆಗಸ್ಟ್ ಒಂದರಂದು ಸಂಪುಟದ ನಿರ್ಣಯಗಳು ನನ್ನ ಕಚೇರಿಗೆ ತಲುಪಿದವು. ಸಿದ್ದರಾಮಯ್ಯ ಅವರ ಪ್ರತಿಕ್ರಿಯೆ ಆಗಸ್ಟ್ 3ರಂದು ನನ್ನ ಕಚೇರಿ ತಲುಪಿತು. ಐಎಎಸ್ ಅಧಿಕಾರಿ ವೆಂಕಟಾಚಲಪತಿ ನೇತೃತ್ವದಲ್ಲಿ ಮುಡಾದಲ್ಲಿನ ಅಕ್ರಮ ತನಿಖೆಗೆ ಸಮಿತಿ ರಚಿಸಲಾಗಿತ್ತು. ಬಳಿಕ ತನಿಖಾ ಆಯೋಗದ ಕಾಯ್ದೆ 1952ರ ಅಡಿಯಲ್ಲಿ ಉನ್ನತ ಮಟ್ಟದ ಏಕ ವ್ಯಕ್ತಿ ತನಿಖಾ ಸಮಿತಿ ರಚಿಸಲಾಯಿತು. ಆರೋಪ ಕೇಳಿ ಬಂದಿರುವ ವ್ಯಕ್ತಿಯೇ ತನಿಖೆ ಹೇಗಿರಬೇಕು ಎಂದು ನಿರ್ಧರಿಸುವುದು ಕಾನೂನು ಸಮ್ಮತವಲ್ಲ. ಈ ಹಿನ್ನೆಲೆಯಲ್ಲಿ ಸಂಪುಟ ನಿರ್ಧಾರ ಕಾನೂನುಬಾಹಿರವಾಗಿದೆ ಎಂದು ರಾಜ್ಯಪಾಲರು ತಿಳಿಸಿದ್ದಾರೆ.

ಸಿಎಂ ಸೂಚನೆ ಮೇರೆಗೆ ಮುಖ್ಯ ಕಾರ್ಯದರ್ಶಿ ಅವರು ಆಗಸ್ಟ್ ಒಂದರಂದು ಸಂಪುಟ ಸಭೆ ಕರೆದು, ಶೋಕಾಸ್ ನೋಟಿಸ್ ಮಂಡಿಸಿ, ಚರ್ಚಿಸಿದ್ದಾರೆ.

→ 4

ಪುಟ ತೆರೆದಂತೆ...



ಜಸ್ವತ್ ಸಿಂಗ್ ಎಂಬ ವಿಚಿತ್ರ ಖಯಾಲಿಯ ರಾಜಕಾರಣಿ!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಹೊಸ ಕ್ರಿಮಿನಲ್ ಕಾನೂನುಗಳ ವೈಶಿಷ್ಟ್ಯ
ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

ಕುರಿ ಹೊಲಸು ತಿನ್ನಲ್ಲ, ಕುರುಬ ತಪ್ಪು ಮಾಡಲ್ಲ. ಯಾವ ಅಕ್ರಮವನ್ನೂ ಮಾಡದ ಸಿದ್ದರಾಮಯ್ಯ ಅವರ ಪರವಾಗಿ ನಾವೆಲ್ಲರೂ ಇರುತ್ತೇವೆ. ಬೃಹತ್ ಜನಾಂದೋಲನ ರೂಪಿಸುತ್ತೇವೆ. ರಾಜ್ಯಪಾಲರು ದುರುದ್ದೇಶದಿಂದ, ಕೇಂದ್ರ ಸರಕಾರದ ಕೈ ಗೊಂಬೆಯಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಖಂಡನೀಯ.

ಈಶ್ವರಾನಂದಪುರಿ ಸ್ವಾಮೀಜಿ
ಕನಕಗುರುಪೀಠ, ಹೊಸದುರ್ಗ

ರಕ್ಷಿತ್ ಶೆಟ್ಟಿಗೆ ಮತ್ತೆ ಹಾಡಿನ ಕಿರಿಕ್

ಬೆಂಗಳೂರು: ಕಾಪಿರೈಟ್ ಉಲ್ಲಂಘನೆ ಪ್ರಕರಣದಲ್ಲಿ ನಟ ರಕ್ಷಿತ್ ಶೆಟ್ಟಿಗೆ 20 ಲಕ್ಷ ರು. ಠೇವಣಿ ಇಡುವಂತೆ ದೆಹಲಿ ಹೈಕೋರ್ಟ್ ಆದೇಶ ನೀಡಿದೆ. 'ನ್ಯಾಯ ಎಲ್ಲಿದೆ' ಚಿತ್ರದ ನ್ಯಾಯ ಎಲ್ಲಿದೆ..' ಹಾಡು ಮತ್ತು ಗಾಳಿ ಮಾತು' ಚಿತ್ರದ 'ಒಮ್ಮೆ ನಿನ್ನನ್ನು' ಹಾಡನ್ನು 'ಬ್ಯಾಚುಲರ್ ಪಾರ್ಟಿ' ಸಿನಿಮಾದಲ್ಲಿ ಅನಧಿಕೃತವಾಗಿ ಬಳಸಲಾಗಿದೆ ಎಂದು ಎಂಆರ್‌ಟಿ ಮ್ಯೂಸಿಕ್ ಪಾಲುದಾರ ನವೀನ್ ಕುಮಾರ್ ದೂರು ನೀಡಿದ್ದರು.

ಫನ್‌ತರಂಗ

– ರಘುಪತಿ ಶೃಂಗೇರಿ –

ವೈದ್ಯರಿಗೆ ಕಾನೂನು ರಕ್ಷೆ
ವೈದ್ಯಕೀಯ ಸಿಬ್ಬಂದಿ ಮೇಲೆ ಕೈ ಮಾಡಿದರೆ 6 ಗಂಟೆಗಳಲ್ಲಿ ಎಫ್‌ಐಆರ್



ಟಿಬಿ ಡ್ಯಾಂ; ಗೇಟ್ ಅಳವಡಿಕೆ ಯಶಸ್ವಿ

ವಿಜಯನಗರ: ತುಂಗಭದ್ರಾ ಜಲಾಶಯದಲ್ಲಿ ಮುರಿದುಹೋದ 19ನೇ ಗೇಟ್‌ನಿಂದ ಹೊರಹರಿಯುತ್ತಿದ್ದ ನೀರನ್ನು ಸಂಪೂರ್ಣ ವಾಗಿ ನಿಲ್ಲಿಸಲು ತಜ್ಞರ ತಂಡ ಸಫಲವಾಗಿದೆ. 3 ದಿನಗಳಿಂದ ನಡೆಯುತ್ತಿದ್ದ ಕಾರ್ಯಾಚರಣೆಗೆ ಯಶಸ್ಸು ದೊರೆತಿದ್ದು, ಪೋಲಾಗಲಿದ್ದ ನೀರು ಉಳಿಸುವಲ್ಲಿ ತಜ್ಞ ಕನ್ನಯ್ಯ ನಾಯ್ಡು ತಂಡ ಸಫಲವಾಗಿದೆ.

ಬಾಂಗ್ಲಾ ಹಿಂಸೆ: 650 ಮಂದಿ ಸಾವು

ಢಾಕಾ: ಮೀಸಲು ವಿರೋಧಿಸಿ ಬಾಂಗ್ಲಾದೇಶದಲ್ಲಿ ನಡೆದ ಹಿಂಸಾಚಾರದಲ್ಲಿ ಜುಲೈ 16ರಿಂದ ಆಗಸ್ಟ್ 11ರ ನಡುವೆ ಸುಮಾರು 650 ಮಂದಿ ಮೃತಪಟ್ಟಿದ್ದಾರೆ. ಮೃತರಲ್ಲಿ ಪ್ರತಿಭಟನಾಕಾರರು, ಪತ್ರಕರ್ತರು, ಭದ್ರತಾ ಪಡೆಗಳ ಸಿಬ್ಬಂದಿ, ಅಲ್ಲಿ ನೆರೆದಿದ್ದ ಜನರು ಸೇರಿದ್ದಾರೆ ಎಂದು ಯುಎನ್ ಮಾನವ ಹಕ್ಕುಗಳ ಕಚೇರಿ ಪ್ರಾಥಮಿಕ ವರದಿಯಲ್ಲಿ ಹೇಳಿದೆ.

ಸರಕಾರಿ-ಖಾಸಗಿ ಆಸ್ಪತ್ರೆಗಳ ವೈದ್ಯರೆಲ್ಲಾ ಭಾಗಿ | ಚಿಕಿತ್ಸೆ ದೊರೆಯದೆ ರೋಗಿಗಳ ಪರದಾಟ

ದೇಶಾದ್ಯಂತ ವೈದ್ಯರ ಪ್ರತಿಭಟನೆ

ದೆಹಲಿ: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ಮುಂಜಾನೆ ಕರ್ತವ್ಯನಿರತ 31 ವರ್ಷದ ಕಿರಿಯ ವೈದ್ಯೆಯ ಅತ್ಯಾಚಾರ-ಬರ್ಬರ ಕೊಲೆ ಖಂಡಿಸಿ, ಕರ್ತವ್ಯನಿರತ ವೈದ್ಯರ-ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆಗೆ ಆಗ್ರಹಿಸಿ ದೇಶಾದ್ಯಂತ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳ ವೈದ್ಯರು ಶನಿವಾರ ಬೆಳಗ್ಗೆ 6ಗಂಟೆಯಿಂದ 24 ಗಂಟೆಗಳ ಪ್ರತಿಭಟನೆ ಆರಂಭಿಸಿದ್ದು, ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಾಗದೇ ರೋಗಿಗಳು ಪರಿತಪಿಸುವಂತಾಗಿದೆ.

- ಹೊರರೋಗಿ ವಿಭಾಗದ ಸೇವೆಗಳು ಸ್ಥಗಿತ
- ಅಪಘಾತ- ತುರ್ತು ಸೇವೆ ವಿಭಾಗದಲ್ಲಷ್ಟೇ ಸೇವೆ

ದೆಹಲಿ, ಕೋಲ್ಕತ್ತ, ಮುಂಬೈ, ಚೆನ್ನೈ, ಬೆಂಗಳೂರು ಸೇರಿ ದೇಶದ ಎಲ್ಲೆಡೆಯ ಸರಕಾರಿ-ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ರಿಂದ ವೈದ್ಯಕೀಯ ಸೇವೆಗಳು ಲಭ್ಯವಿಲ್ಲದೇ ರೋಗಿಗಳು ಪರದಾಡಿದರು. ಭಾನುವಾರ ಬೆಳಗ್ಗೆ 6ರವರೆಗೂ ಪ್ರತಿಭಟನೆ-ಆರೋಗ್ಯ ಸೇವೆಗಳ ಸ್ಥಗಿತ ಮುಂದುವರಿಯಲಿದೆ.

ರಾಜ್ಯದಲ್ಲೂ ರೋಗಿಗಳ ಪರದಾಟ: ವೈದ್ಯರ ಪ್ರತಿಭಟನೆ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ರಾಜ್ಯಾದ್ಯಂತ ವಿವಿಧ ಆಸ್ಪತ್ರೆಗಳಿಗೆ ಆಗಮಿಸಿದ ರೋಗಿಗಳಿಗೆ ತುರ್ತು ಚಿಕಿತ್ಸೆ ಸಿಗದೆ ಪರದಾಡುವಂತಾಯಿತು. ರಾಜಧಾನಿ ಬೆಂಗಳೂರಿನ ಬಹುತೇಕ ಆಸ್ಪತ್ರೆಗಳಲ್ಲಿ ಒಪಿಡಿ ಹೊರತುಪಡಿಸಿ ತುರ್ತು ಚಿಕಿತ್ಸೆ, ಅಪಘಾತ ಚಿಕಿತ್ಸೆಗಳು ಮಾಮೂಲಿಯಂತೆ ನಡೆದವು.

ಬೆಂಗಳೂರು, ತುಮಕೂರು, ಮಂಡ್ಯ, ಮದ್ದೂರು, ಮೈಸೂರು, ಚಿಕ್ಕಬಳ್ಳಾಪುರ, ಕೋಲಾರ ಸೇರಿದಂತೆ ಮತ್ತಿತರ ಕೇಂದ್ರ ಸ್ಥಳಗಳಲ್ಲಿ ವೈದ್ಯರು ಪ್ರತಿಭಟನೆ ನಡೆಸಿದ್ದರಿಂದ ಹೊರರೋಗಿಗಳ ಚಿಕಿತ್ಸೆಗೆ ತೊಂದರೆ ಉಂಟಾಗಿತ್ತು. ರಾಜಧಾನಿ ಬೆಂಗಳೂರಿನ ವಿಕ್ಟೋರಿಯಾ, ಕೆ.ಸಿ.ಜನರಲ್ ಆಸ್ಪತ್ರೆ, ಜಯದೇವ, ನಿಮ್ಹಾನ್ಸ್, ಇಎಸ್‌ಐ ಸೇರಿದಂತೆ ಮತ್ತಿತರ ಆಸ್ಪತ್ರೆಗಳಲ್ಲಿ ಒಪಿಡಿ ಬಂದ್ ಆಗಿರುವುದರಿಂದ ತುರ್ತು ಚಿಕಿತ್ಸೆ ಅಗತ್ಯ ಇರುವ ರೋಗಿಗಳಿಗೆ ಮಾತ್ರ ತಪಾಸಣೆ ಮಾಡಲಾಯಿತು.

ಕೋಲ್ಕತ್ತಾ ಮೂಲದ ಟ್ರೈನಿ ವೈದ್ಯೆಯ ಅತ್ಯಾಚಾರ ಮತ್ತು ಕೊಲೆ ಪ್ರಕರಣ ಖಂಡಿಸಿ ಬೆಂಗಳೂರಿನಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಮತ್ತು ವೈದ್ಯರು ಪ್ರತಿಭಟನೆ ಮಾಡಿದರು.

ರಜೆ ನೀಡದಂತೆ ಸುತ್ತೋಲೆ

ರೋಗಿಗಳಿಗೆ ಯಾವುದೇ ರೀತಿಯ ಸಮಸ್ಯೆಯಾಗದಂತೆ ನೋಡಿಕೊಳ್ಳುವಂತೆ ವೈದ್ಯರಿಗೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಸೂಚನೆ ನೀಡಿದ್ದರು. ವೈದ್ಯರು ತುರ್ತು ರೋಗಿಗಳಿಗೆ ಚಿಕಿತ್ಸೆ ನೀಡಿ ದರು. ಪ್ರತಿಭಟನೆ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ವೈದ್ಯರಿಗೆ ರಜೆ ನೀಡಬಾರದೆಂದು ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಸುತ್ತೋಲೆ ಹೊರಡಿಸಿದ್ದು, ಕರ್ತವ್ಯಕ್ಕೆ ಹಾಜರಾದ ವೈದ್ಯರು ಒಳರೋಗಿಗಳಿಗೆ ಹಾಗೂ ತುರ್ತು ರೋಗಿಗಳಿಗೆ ಚಿಕಿತ್ಸೆಗೆ ನೀಡಿದರು.

ಹಳಿ ತಪ್ಪಿದ ಸಬರಮತಿ ಎಕ್ಸ್‌ಪ್ರೆಸ್

ಕಾನ್ಪುರ: ಉತ್ತರ ಪ್ರದೇಶದ ವಾರಾಣಸಿಯಿಂದ ಗುಜರಾತ್‌ನ ಅಹಮದಾಬಾದ್‌ಗೆ ತೆರಳುತ್ತಿದ್ದ ಸಬರಮತಿ ಎಕ್ಸ್‌ಪ್ರೆಸ್ ರೈಲಿನ 20 ಬೋಗಿ ಶನಿವಾರ ಮುಂಜಾನೆ 3ರ ವೇಳೆ ಉತ್ತರ ಪ್ರದೇಶದ ಕಾನ್ಪುರ-ಭೀಮಸೇನ್ ನಿಲ್ದಾಣಗಳ ನಡುವೆ ಹಳಿ ತಪ್ಪಿವೆ. ಆಗಷ್ಟೇ ನಿಲ್ದಾಣದಿಂದ ಹೊರಟಿದ್ದರಿಂದ ರೈಲು ವೇಗದಲ್ಲಿರಲಿಲ್ಲ. ಹಾಗಾಗಿ ಸಾವು-ನೋವು ಸಂಭವಿಸಿಲ್ಲ.

ಒಪಿಎಸ್ ಜಾರಿಗೆ ಸಮಿತಿ ರಚನೆ

ಅಂಜುಂ ಪರ್ವೇಜ್ ಅಧ್ಯಕ್ಷತೆಯಲ್ಲಿ ಐದು ಜನರ ಸಮಿತಿ

ಬೆಂಗಳೂರು: ರಾಜ್ಯದಲ್ಲಿ ಜಾರಿ ಇರುವ ರಾಷ್ಟ್ರೀಯ ಪಿಂಚಣಿ ಯೋಜನೆಯ ಬದಲಾಗಿ ಹಳೆಯ ಪಿಂಚಣಿ ಯೋಜನೆಯನ್ನು ಜಾರಿ ಮಾಡಲು ಸಾಧ್ಯತೆಗಳ ಪರಿಶೀಲನೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರ ಅಧ್ಯಕ್ಷತೆಯಲ್ಲಿ 5 ಜನರ ಸಮಿತಿ ರಚಿಸಿ ಸರಕಾರ ಆದೇಶ ಹೊರಡಿಸಿದೆ.

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೇಶ್ ಕುಮಾರ್ ಸಿಂಗ್, ಬೆಂಗಳೂರು ವಿಭಾಗ ಪ್ರಾದೇಶಿಕ ಆಯುಕ್ತ ಅಮ್ಲ್ಯಾನ್ ಆದಿತ್ಯ ಬಿಸ್ವಾಸ್, ಆರ್ಥಿಕ ಇಲಾಖೆಯ (ವಿತ್ತೀಯ ಸುಧಾರಣೆಗಳು) ಸರಕಾರದ ಕಾರ್ಯದರ್ಶಿ ಡಾ. ವಿಶಾಲ್. ಆರ್ ಸಮಿತಿಯ ಸದಸ್ಯರಾಗಿದ್ದು, ಆರ್ಥಿಕ ಇಲಾಖೆಯ (ವೆಚ್ಚ) ಕಾರ್ಯದರ್ಶಿ ಡಾ. ಎಂ.ಟಿ.ರೇಜು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ ಎಂದು ಸರಕಾರದ ಆದೇಶದಲ್ಲಿ ತಿಳಿಸಲಾಗಿದೆ. ಹಿಂದಿನ ಡಿಫೈನ್ಸ್ ಪಿಂಚಣಿ ಯೋಜನೆಯ ಮರು ಜಾರಿ ಮಾಡಿದ ರಾಜ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಿರುವುದರ ಕುರಿತು ಕೈಗೊಂಡಿರುವ ಕ್ರಮದ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ಸಮಿತಿಗೆ ಸೂಚಿಸಲಾಗಿದೆ.

ಎನ್‌ಪಿಎಸ್ ನೌಕರರ ಸಂಘ ವಿರೋಧ

ಹಳೇ ಪಿಂಚಣಿ ಯೋಜನೆ ಜಾರಿಗೆ ಸಮಿತಿ ರಚನೆಯ ಸರಕಾರದ ನಿರ್ಧಾರಕ್ಕೆ ಕರ್ನಾಟಕ ರಾಜ್ಯ ಸರಕಾರಿ ಎನ್‌ಪಿಎಸ್ ನೌಕರರ ಸಂಘ ವಿರೋಧ ವ್ಯಕ್ತಪಡಿಸಿದೆ. ಈ ಕುರಿತು ಮಾತನಾಡಿರುವ ಸಂಘದ ರಾಜ್ಯಾಧ್ಯಕ್ಷ ಶಾಂತಾರಾಮ್, ಎನ್‌ಪಿಎಸ್ ಯೋಜನೆಯನ್ನು ರದ್ದುಗೊಳಿಸುವ ವಿಷಯವನ್ನು ವಿಳಂಬಗೊಳಿಸುತ್ತಿರುವ ಕ್ರಮದಿಂದ ಸಮಸ್ತ ನೌಕರರಿಗೆ ನಿರಾಸೆ ಉಂಟಾಗಿರುತ್ತದೆ. ಎನ್‌ಪಿಎಸ್ ಯೋಜನೆಯನ್ನು ಈಗಾಗಲೇ ರದ್ದುಗೊಳಿಸಿರುವ ರಾಜಸ್ಥಾನ, ಛತ್ತೀಸ್‌ಗಡ, ಜಾರ್ಖಂಡ್ ಮತ್ತು ಹಿಮಾಚಲ ಪ್ರದೇಶಗಳು ಯಾವುದೇ ಸಮಿತಿ ರಚಿಸಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಎನ್‌ಪಿಎಸ್ ನೌಕರರ ಸಂಘವು ನಿರ್ಣಾಯಕ ಹೋರಾಟಕ್ಕೆ ಕರೆ ನೀಡುವ ಕುರಿತು ನಿರ್ಣಯ ಕೈಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ರಾಜ್ಯಪಾಲರ ನಡೆ ಖಂಡನೀಯ: ಶಾಸಕ

ಕೊಪ್ಪಳ: ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ಕರ್ನಾಟಕ ರಾಜ್ಯಪಾಲರ ನಡೆ ತೀವ್ರ ಖಂಡನೀಯ. ರಾಜಭವನವನ್ನು ರಾಜಕೀಯ ಭವನವಾಗಿ ಪರಿವರ್ತನೆ ಮಾಡಿದ್ದಾರೆ ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಹೇಳಿದ್ದಾರೆ. ಈ ಬಗ್ಗೆ ಪ್ರಕಟಣೆ ನೀಡಿ, ರಾಜ್ಯಪಾಲರು ಕೇಂದ್ರ ಸರಕಾರದ ಕೈಗೊಂಬೆ ಆಗುವ ಮೂಲಕ ಸಂವಿಧಾನದ ಮಗ್ಗುಲೆ ಮಾಡುತ್ತಿದ್ದಾರೆ.

ಹಿಂದುಳಿದ ವರ್ಗದ ನಾಯಕ ಜನಪರ ಆಡಳಿತ ನಡೆಸುವುದು ಅರಗಿಸಿಕೊಳ್ಳಲಾಗದೆ, ಕೇಂದ್ರ ಬಿಜೆಪಿ ಸರಕಾರ ಸಿಎಂ ಸಿದ್ದರಾಮಯ್ಯ ಹಾಗೂ ಕಾಂಗ್ರೆಸ್ ಸರಕಾರವನ್ನು ಅಸ್ಥಿರಗೊಳಿಸಲು ರಾಜಭವನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಸಿದ್ದರಾಮಯ್ಯ ಅವರು ಯಾವುದೇ ಕಾರಣಕ್ಕೂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ. ಹೈಕಮಾಂಡ್, ರಾಜ್ಯದ ಸಚಿವರು ಹಾಗೂ ಶಾಸಕರು ಸಿಎಂ ಸಿದ್ದರಾಮಯ್ಯ ಅವರ ಪರ ಇದ್ದೇವೆ ಎಂದು ತಿಳಿಸಿದ್ದಾರೆ.

ನಂಬಿಕೆ ಜಗದಂಬಿಕೆ
ಗುರು
ಪ್ರತಿ ಗುರುವಾರ

ಸಾಕ್ಷ್ಯನಾಶ ಮಾಡುವ ಹುನ್ನಾರ | ಐಎಂಎ ಶಾಖೆಯಿಂದ ತಹಸೀಲ್ದಾರ್‌ಗೆ ಮನವಿ

ಹತ್ಯೆ ಖಂಡಿಸಿ ಐಎಂಎ ಪ್ರತಿಭಟನೆ

ಮಾನ್ವಿ: ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಭಾರತೀಯ ವೈದ್ಯಕೀಯ ಸಂಘದ ತಾಲೂಕು ಶಾಖೆ ಹಾಗೂ ಪಟ್ಟಣದ ಕೆಪಿಎಸ್‌ವಿಎಸ್ ಆಯುರ್ವೇದಿಕ್ ಮೆಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ವತಿಯಿಂದ ತಹಸೀಲ್ದಾರ ರಾಜು ಪಿರಂಗಿಯವರಿಗೆ ಐಎಂಎ ತಾ. ಅಧ್ಯಕ್ಷ ಡಾ. ಶರಣಪ್ಪ ಬಲ್ಲಟಗಿ ಮನವಿ ಸಲ್ಲಿಸಿದರು.

ಅಲ್ಲಿನ ಆಡಳಿತ ಹಾಗೂ ಪೊಲೀಸ್ ಇಲಾಖೆ ಇದುವರೆಗೂ ಯಾವುದೇ ಕ್ರಮವನ್ನು ಕೈಗೊಂಡಿಲ್ಲದೆ ಇರುವುದು ಹಲವು ಅನುಮಾನಗಳಿಗೆ ಆಸ್ಪದ ನೀಡುತ್ತಿರುವುದು ವೈದ್ಯ ಸಮೂಹವನ್ನು ಆಘಾತಕ್ಕಿಡು ಮಾಡಿದೆ. ಈ ಘಟನೆ ಖಂಡಿಸಿ ಭಾರತೀಯ ವೈದ್ಯಕೀಯ ಸಂಘದಿಂದ ಆ.17 ಬೆಳಗೆ ಯಿಂದ ಆ. 18 ರವರೆಗೆ ತುರ್ತು ಸಂದರ್ಭ ಪರಿಸ್ಥಿತಿಯ ಚಿಕಿತ್ಸೆಯನ್ನು ಹೊರತು ಪಡಿಸಿ ವೈದ್ಯ ಸೇವೆಯನ್ನು ಹಿಂತೆಗೆದು ಕೊಳ್ಳುವ ಮೂಲಕ ಪ್ರತಿಭಟನೆ ನಡೆಸಲಾಗುತ್ತಿದೆ ಹಾಗೂ ಮೃತ ವೈದ್ಯೆಯ ಆತ್ಮಕ್ಕೆ ಶಾಂತಿಯನ್ನು ಕೋರಿ ಸಂತಪ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಪಟ್ಟಣದ ಬಸವ ವೃತ್ತದಿಂದ ತಹಸೀಲ್ದಾರ್ ಕಚೇರಿಯವರೆಗೆ ನೂರಾರು ವೈದ್ಯ ವಿದ್ಯಾರ್ಥಿಗಳು ಹಾಗೂ ವೈದ್ಯರು ಪ್ರತಿಭಟನೆ ಮೆರವಣಿಗೆ ಮೂಲಕ ಆಗಮಿಸಿ ಮನವಿ ಸಲ್ಲಿಸಿದರು.

ಐಎಂಎ. ತಾಲೂಕು ಘಟಕದ ಡಾ. ಬಸವಪ್ರಭು ಪಾಟೀಲ್ ಬೆಟ್ಟದೂರ್, ಡಾ. ವೆಂಕಟೇಶ, ಡಾ. ರಮ್ಯವೀರವಲ್ಲಿ, ಡಾ. ರೋಹಿಣಿ ಮಾನ್ವಿಕರ್, ಡಾ. ಕಾವ್ಯ, ಡಾ. ಸುರೇಶಬಾಬು, ಡಾ. ರಾಘವೇಂದ್ರ, ಡಾ. ಸಜ್ಜದ್ ಪ್ರಯೋಗ ಶಾಲಾ ತಂತ್ರಜ್ಞಾರಾದ ದೇವೇಂದ್ರ ದುರ್ಗದ, ಕೆ.ಪಿ.ಎಸ್.ವಿ.ಎಸ್. ಆಯುರ್ವೇದಿಕ್ ಮೇಡಿಕಲ್ ಕಾಲೇಜ್ ಮತ್ತು ಆಸ್ಪತ್ರೆಯ ಪ್ರಚಾರ್ಯರಾದ ಡಾ. ಜೀವನೇಶ್ವರಯ್ಯ, ಮುಖ್ಯ ವೈದ್ಯಾಧಿಕಾರಿ ಡಾ. ನಾರಾಯಣ, ಡಾ. ವಿಕ್ರಮಾದಿತ್ಯ, ಡಾ. ಅಬುಜುಬೇರ, ಡಾ. ವೈಜಾಯಂತಿ, ಡಾ. ಪ್ರಿಯಾಂಕ ಸೇರಿದಂತೆ ಇನ್ನಿತರರು ಇದ್ದರು.

ಮಾನ್ವಿ ಪಟ್ಟಣದ ತಹಸೀಲ್ದಾರ್ ಕಚೇರಿಯಲ್ಲಿ ಭಾರತೀಯ ವೈದ್ಯಕೀಯ ಸಂಘದ ತಾಲೂಕು ಶಾಖೆ ಹಾಗೂ ಕೆ.ಪಿ.ಎಸ್.ವಿ.ಎಸ್. ಆಯುರ್ವೇದಿಕ್ ಮೇಡಿಕಲ್ ಕಾಲೇಜ್ ಮತ್ತು ಆಸ್ಪತ್ರೆ ವಿದ್ಯಾರ್ಥಿಗಳಿಂದ ಪ್ರತಿಭಟನೆ.

> ಆಗಸ್ಟ್ 9 ರಂದು ಮುಂಜಾನೆ ಕಲ್ಕತ್ತಾದ ಕೆ.ಆರ್.ಮೆಡಿಕಲ್ ಕಾಲೇಜ್ ಕರ್ತವ್ಯ ನಿರತ ಸ್ನಾತಕೋತ್ತರ ವೈದ್ಯೆಯ ಮೇಲೆ ಕೆಲವು ದುಷ್ಕರ್ಮಿಗಳು ಅತ್ಯಚಾರ ನಡೆಸಿ ಕೊಲೆ ಮಾಡಿದ್ದಾರೆ. ನಂತರ ಆ.15 ರಂದು ದೊಡ್ಡ ಗುಂಪಿನಲ್ಲಿ ಆಸ್ಪತ್ರೆಗೆ ಬಂದು ಸಾಕ್ಷಿಗಳನ್ನು ನಾಶಪಡಿಸುವ ಉದ್ದೇಶದಿಂದ ದಂದಾಲೆ ನಡೆದಿದೆ.
>
> – ರಾಜು ಪಿರಂಗಿ, ತಹಸೀಲ್ದಾರ

ಬಾಂಗ್ಲಾದಲ್ಲಿ ಹಿಂದೂಗಳ ರಕ್ಷಣೆಗೆ ಕೇಂದ್ರಕ್ಕೆ ಮನವಿ

ರಾಯಚೂರು: ಬಾಂಗ್ಲಾದೇಶ ಹಿಂಸಾಚಾರ ತೀವ್ರ ಸ್ವರೂಪ ಪಡೆದಿದ್ದು , ಬಾಂಗ್ಲಾ ದೇಶ ಹಿಂದೂಗಳ ರಕ್ಷಣೆ ಮಾಡಬೇಕು ಎಂದು ಹಿಂದೂಗಳ ಹಿತ ರಕ್ಷಣೆ ಸಮಿತಿ ಮುಖಂಡರು ಜಿಲ್ಲಾಧಿಕಾರಿಗಳ ಮೂಲಕ ಪ್ರಧಾನಿ ನರೇಂದ್ರ ಮೋದಿಗೆ ಮನವಿ ರವಾನಿಸಿ ಆಗ್ರಹಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ ಹಲ್ಲೆ ಮತ್ತು ದೌರ್ಜನ್ಯ ನಡೆಯುತ್ತಿದೆ. ಆದ್ದರಿಂದ ಕೇಂದ್ರ ಸರಕಾರ ಬಾಂಗ್ಲಾ ದೇಶ ಹಿಂಸಾಚಾರ ಅತ್ಯಂತ ಗಂಭೀರವಾಗಿ ಪರಿಗಣಿಸಿ ಈ ಕೂಡಲೇ ಹಿಂದೂಗಳ ರಕ್ಷಣೆ ಮಾಡಬೇಕು ಎಂದು ಆಗ್ರಹಿಸಿದರು.

ಬಾಂಗ್ಲಾದೇಶ ಹಿಂದೂಗಳೇ ನೀವು ಭಯ ಬೀತರಾಗಬೇಡಿ ನಿಮ್ಮೊಂದಿಗೆ ನಾವಿದ್ದೇವೆ ಎಂದು ಘೋಷಣ ಕೂಗಿದರು. ಬಾಂಗ್ಲಾ ದೇಶದಲ್ಲಿ ಇತ್ತೀಚೆಗೆ ನಡೆದ ವಿದ್ಯಮಾನಗಳ ನಂತರ ಅಲ್ಲಿನ ಕೆಲ ಮತಾಂಧರು ಅಲ್ಪಸಂಖ್ಯಾತ ಹಿಂದೂಗಳ ಮನೆಗೆ ಬೆಂಕಿ ಹಚ್ಚಿ ಅವರನ್ನು ಹತ್ಯೆ ಮಾಡಿದ್ದಾರೆ. ದೇವಸ್ಥಾನಗಳನ್ನು ಧ್ವಂಸಗೊಳಿಸಿದ್ದಾರೆ.

ಹಿಂದೂಗಳಿಗೆ ರಕ್ಷಣೆ ಇಲ್ಲದಂತಾಗಿದೆ. ಕೇಂದ್ರ ಸರ್ಕಾರ ಕೂಡಲೇ ಮಧ್ಯಸ್ಥಿಕೆ ವಹಿಸಿ ಹಿಂದೂಗಳಿಗೆ ಅಗತ್ಯ ರಕ್ಷಣೆ ಕೊಡ ಬೇಕು ಎಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಶಾಸಕ ಡಾ. ಶಿವರಾಜ ಪಾಟೀಲ್, ಯಲ್ಲಪ್ಪ, ಶ್ರೀನಿವಾಸ್, ಸತ್ಯನಾರಾಯಣ ಸೇರಿ ದಂತೆ ಹಿಂದೂ ಕಾರ್ಯಕರ್ತರು ಉಪಸ್ಥಿತರಿದ್ದರು.

ವೈದ್ಯರಿಂದ ಮೌನ ಪ್ರತಿಭಟನೆ

ಮುದಗಲ್: ಆಯುಷ್ ಫೆಡರೇಶನ್ ಆಫ್ ಇಂಡಿಯಾ, ಭಾರತೀಯ ವೈದ್ಯಕೀಯ ಸಂಘ (ಐಎಂಎ) ಲಿಂಗಸುಗೂರು, ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜ್, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜ್ ಲಿಂಗಸು ಗೂರು ಸಂಯುಕ್ತಾಶ್ರಯದಲ್ಲಿ ವೈದ್ಯರ ಮೇಲೆ ಆಗುತ್ತಿರುವ ಹಲ್ಲೆ, ದೌರ್ಜನ್ಯ, ಖಂಡಿಸಿ ಪಟ್ಟಣದಲ್ಲಿ ಮೌನ ಪ್ರತಿಭಟನೆ ನಡೆಸಿದರು.

ಕುಷ್ಟಗಿಯಲ್ಲಿ ಭಾರಿ ಮಳೆ: ಅಸ್ತವ್ಯಸ್ತ

ಕುಷ್ಟಗಿ: ತಾಲೂಕಿನಾದ್ಯಂತ ಶನಿವಾರ ಬೆಳಗಿನ ಜಾವ ಗುಡುಗು- ಸಿಡಿಲು ಸಹಿತ ಸುರಿದ ಭಾರಿ ಮಳೆಗೆ ಕುಷ್ಟಗಿ ಪಟ್ಟಣ ಸೇರಿ ತಾಲೂಕಿನ ಕೆಲ ಗ್ರಾಮದಲ್ಲಿ ಅವಾಂತರ ಸೃಷ್ಟಿಯಾಗಿ, ಜನ ಜೀವನ ಅಸ್ತವ್ಯಸ್ತವಾಗಿದೆ.

ಪಟ್ಟಣದ ಸಂದೀಪ ನಗರ, ವಾಸವಿ ನಗರ, ಸಂತ ಶಿಶುನಾಳ ಷರೀಫ್ ನಗರದ ಮನೆ, ಶಾಲೆಗಳಿಗೆ ಹಾಗೂ ಟೆಂಗುಂಟಿ ರಸ್ತೆ ಬದಿಯ ತೋಟ, ಜಮೀನುಗಳಲ್ಲಿ ಮಳೆನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ಹಾನಿಯಾಗಿದೆ. ತಾಲೂಕಿನ ಟೆಂಗುಂಟಿ ಗ್ರಾಮದ ರಸ್ತೆಗಳು ಸೇರಿದಂತೆ ಬಹುತೇಕ ಮನೆಗಳಲ್ಲಿ ಮಳೆನೀರು ನುಗ್ಗಿ ಅರ್ಧ ಊರು ಕೆರೆಯಂತಾಗಿದೆ. ಗ್ರಾಮದ ಪಕ್ಕದಲ್ಲಿ ಹಿರೇಹಳ್ಳ ಹಾದುಹೋಗಿದ್ದು, ಹಳ್ಳಕ್ಕೆ ಎಂದೂ ಕಂಡರಿಯದಂತ ಮಳೆನೀರು ಎಥೇಚ್ಚವಾಗಿ ಹರಿದುಬಂದ ಪರಿಣಾಮ ಅಕ್ಕಪಕ್ಕದ ಜಮೀನುಗಳಲ್ಲಿ ಒಡ್ಡು ಹೊಡೆದು ಜಲಾವೃತವಾಗಿದೆ. ತೊಗರಿ ಬೆಳೆ ಸೇರಿದಂತೆ ತೋಟಗಾರಿಕೆ ಬೆಳೆಗಳು ಹಾಳಾಗಿವೆ. ಜತೆಗೆ ಮನೆಗಳಲ್ಲಿ ಇರಿಸಿದ್ದ ದವಸ ಧಾನ್ಯಗಳು, ಅಡುಗೆ ಸಾಮಗ್ರಿಗಳು ಹಾಳಾಗಿವೆ. ಅದೇರೀತಿ ನಿಡಶೇಸಿ ಗ್ರಾಮದ ಮನೆಗಳು ಸಹ ಜಲಾವೃತಗೊಂಡು ಹಾನಿ ಜತೆಗೆ ಜನರ ನಿದ್ದೆಗೆಡಿಸಿದೆ.

ಬೆಳಗಿನ ಜಾವ ಎರಡುಗಂಟೆ ಸುಮಾರಿಗೆ ಗುಡುಗು ಸಹಿತ ಆರಂಭವಾದ ಮಳೆ ಬೆಳಗಿನ ಜಾವ ಆರುಗಂಟೆಯ ವರೆಗೂ ಸತತವಾಗಿ ಭಾರಿ ಪ್ರಮಾಣದಲ್ಲಿ ಸುರಿದಿದ್ದು, ಬೃಹದಾಕಾರದ ನಿಡಶೇಸಿ ಕೆರೆ ತುಂಬಿ ಹರಿಯುವ ಹಂತಕ್ಕೆ ತಲುಪಿದೆ.

ಕುಷ್ಟಗಿ ತಾಲೂಕು ಟೆಂಗುಂಟಿ ಗ್ರಾಮದಲ್ಲಿ ಮಳೆ ನೀರು ನುಗ್ಗಿ ರಸ್ತೆ ಮನೆಗಳೆಲ್ಲ ಜಲಾವೃತಗೊಂಡು ಕೆರೆಯಂತಾಗಿರುವುದು.

THIS IS A PUBLIC ANNOUNCEMENT FOR INFORMATION PURPOSES ONLY AND IS NOT A PROSPECTUS ANNOUNCEMENT AND DOES NOT CONSTITUTE AN INVITATION OR OFFER TO ACQUIRE, PURCHASE OR SUBSCRIBE TO SECURITIES.
INITIAL PUBLIC OFFERING OF EQUITY SHARES ON THE MAIN BOARD OF THE STOCK EXCHANGES IN COMPLIANCE WITH CHAPTER II OF THE SECURITIES AND EXCHANGE BOARD OF INDIA (ISSUE OF CAPITAL AND DISCLOSURE REQUIREMENTS) REGULATIONS, 2018, AS AMENDED ("SEBI ICDR REGULATIONS"). NOT FOR RELEASE, PUBLICATION OR DISTRIBUTION DIRECTLY OR INDIRECTLY, OUTSIDE INDIA.

PUBLIC ANNOUNCEMENT

(Please scan the QR Code to view the DRHP)

TRUALT BIOENERGY

TRUALT BIOENERGY LIMITED

Our Company was originally incorporated as "TruAlt Energy Limited" as a public limited company under the Companies Act, 2013, pursuant to a certificate of incorporation dated on March 31, 2021, by the Registrar of Companies, Karnataka at Bangalore ("**RoC**"). The name of our Company was subsequently changed to "TruAlt Bioenergy Limited", pursuant to a special resolution passed in the extra-ordinary general meeting of the Shareholders held on June 1, 2022, pursuant to which a fresh certificate of incorporation consequent upon change of name was issued by the RoC on July 1, 2022. For further details of change in name of the Company, see *"History and Certain Corporate Matters"* on page 296 of the draft red herring prospectus dated August 16, 2024 (the "**DRHP**" or the "**Draft Red Herring Prospectus**").

Corporate Identity Number: U15400KA2021PLC145978
Registered Office: Survey No. 166, Kulali Cross, Jamkhandi Mudhol Road, Bagalkot – 587313, Karnataka, India; **Tel:** 083502 00005
Corporate Office: No S 904/A 9th Floor WTC Brigade Gateway Campus No 26/1, Malleswaram West, Bangalore – 560055, Karnataka, India; **Tel:** 080-23255000
Contact Person: Sudheer Sannapaneni, Company Secretary and Compliance Officer; **E-mail:** cs@trualtbioenergy.com; **Website:** https://www.trualtbioenergy.com/

OUR PROMOTERS: VIJAYKUMAR MURUGESH NIRANI, VISHAL NIRANI AND SUSHMITHA VIJAYKUMAR NIRANI

INITIAL PUBLIC OFFERING OF UP TO [●] EQUITY SHARES OF FACE VALUE OF ₹ 10 EACH ("EQUITY SHARES") OF TRUALT BIOENERGY LIMITED (OUR "COMPANY" OR THE "COMPANY" OR THE "ISSUER") FOR CASH AT A PRICE OF ₹[●] PER EQUITY SHARE (INCLUDING A SHARE PREMIUM OF ₹[●] PER EQUITY SHARE) (THE "OFFER PRICE") AGGREGATING UP TO ₹[●] LAKHS (THE "OFFER") COMPRISING A FRESH ISSUE OF UP TO [●] EQUITY SHARES OF FACE VALUE OF ₹ 10 EACH BY OUR COMPANY AGGREGATING UP TO ₹ 75,000 LAKHS (THE "FRESH ISSUE") AND AN OFFER FOR SALE OF UP TO 36,00,000 EQUITY SHARES OF FACE VALUE OF ₹ 10 EACH AGGREGATING UP TO ₹[●] LAKHS, COMPRISING AN OFFER FOR SALE OF UP TO 18,00,000 EQUITY SHARES OF FACE VALUE OF ₹ 10 EACH AGGREGATING UP TO ₹[●] LAKHS BY DHRAKSAYANI SANGAMESH NIRANI, AND UP TO 18,00,000 EQUITY SHARES OF FACE VALUE OF ₹ 10 EACH AGGREGATING UP TO ₹[●] LAKHS BY SANGAMESH RUDRAPPA NIRANI (COLLECTIVELY, THE "SELLING SHAREHOLDERS", AND EACH INDIVIDUALLY, AS A "SELLING SHAREHOLDER" AND SUCH OFFER FOR SALE OF EQUITY SHARES BY THE SELLING SHAREHOLDERS, THE "OFFER FOR SALE"). THE OFFER WILL CONSTITUTE [●]% OF THE POST-OFFER PAID-UP EQUITY SHARE CAPITAL OF OUR COMPANY.

OUR COMPANY, IN CONSULTATION WITH THE BRLMS, MAY CONSIDER A PRIVATE PLACEMENT, RIGHTS ISSUE, PREFERENTIAL OFFER OR ANY OTHER METHOD OF SPECIFIED SECURITIES AS MAY BE PERMITTED UNDER APPLICABLE LAWS, TO ANY PERSON(S), FOR AN AGGREGATE AMOUNT NOT EXCEEDING ₹ 15,000 LAKHS ("PRE-IPO PLACEMENT"), PRIOR TO FILING OF THE RED HERRING PROSPECTUS WITH THE ROC. THE PRE-IPO PLACEMENT, IF UNDERTAKEN, WILL BE AT A PRICE TO BE DECIDED BY OUR COMPANY, IN CONSULTATION WITH THE BRLMS. IF THE PRE-IPO PLACEMENT IS COMPLETED, THE AMOUNT RAISED PURSUANT TO THE PRE-IPO PLACEMENT WILL BE REDUCED FROM THE FRESH ISSUE, SUBJECT TO THE OFFER COMPLYING WITH RULE 19(2)(B) OF THE SCRR. THE PRE-IPO PLACEMENT, IF UNDERTAKEN, SHALL NOT EXCEED 20% OF THE SIZE OF THE FRESH ISSUE. PRIOR TO THE COMPLETION OF THE OFFER, OUR COMPANY SHALL APPROPRIATELY INTIMATE THE SUBSCRIBERS TO THE PRE-IPO PLACEMENT, PRIOR TO ALLOTMENT PURSUANT TO THE PRE-IPO PLACEMENT, THAT THERE IS NO GUARANTEE THAT OUR COMPANY MAY PROCEED WITH THE OFFER OR THE OFFER MAY BE SUCCESSFUL AND WILL RESULT INTO LISTING OF THE EQUITY SHARES ON THE STOCK EXCHANGES. FURTHER, RELEVANT DISCLOSURES IN RELATION TO SUCH INTIMATION TO THE SUBSCRIBERS OF THE PRE-IPO PLACEMENT (IF UNDERTAKEN) SHALL BE APPROPRIATELY MADE IN THE RELEVANT SECTIONS OF THE RED HERRING PROSPECTUS AND THE PROSPECTUS.

THE PRICE BAND AND THE MINIMUM BID LOT WILL BE DECIDED BY OUR COMPANY IN CONSULTATION WITH THE BRLMS AND WILL BE ADVERTISED IN ALL EDITIONS OF [●] (A WIDELY CIRCULATED ENGLISH NATIONAL DAILY NEWSPAPER), ALL EDITIONS OF [●] (A WIDELY CIRCULATED HINDI NATIONAL DAILY NEWSPAPER) AND [●] EDITIONS OF [●] (A WIDELY CIRCULATED KANNADA DAILY NEWSPAPER, KANNADA BEING THE REGIONAL LANGUAGE OF KARNATAKA, WHERE OUR REGISTERED OFFICE IS LOCATED), AT LEAST TWO WORKING DAYS PRIOR TO THE BID/OFFER OPENING DATE AND SUCH ADVERTISEMENT SHALL BE MADE AVAILABLE TO BSE LIMITED ("BSE") AND NATIONAL STOCK EXCHANGE OF INDIA LIMITED ("NSE", AND TOGETHER WITH THE BSE, THE "STOCK EXCHANGES") FOR THE PURPOSE OF UPLOADING ON THEIR RESPECTIVE WEBSITES.

THE FACE VALUE OF THE EQUITY SHARES IS ₹10 EACH AND THE OFFER PRICE IS [●] TIMES THE FACE VALUE OF THE EQUITY SHARES

In case of any revision in the Price Band, the Bid/Offer Period will be extended by at least three additional Working Days after such revision in the Price Band, subject to the Bid/Offer Period not exceeding 10 Working Days. In cases of force majeure, banking strike or similar unforeseen circumstances, our Company may, for reasons to be recorded in writing, extend the Bid /Offer Period for a minimum of one Working Day, subject to the Bid/Offer Period not exceeding 10 Working Days. Any revision in the Price Band and the revised Bid/Offer Period, if applicable, shall be widely disseminated by notification to the Stock Exchanges, by issuing a press release, and also by indicating the change on the respective websites of the BRLMs and at the terminals of the members of the Syndicate and by intimation to Designated Intermediaries and the Sponsor Bank, as applicable.

The Offer is being made through the Book Building Process, in terms of Rule 19(2)(b) of the Securities Contracts (Regulation) Rules, 1957, as amended ("**SCRR**") read with Regulation 31 of the SEBI ICDR Regulations and in compliance with Regulation 6(2) of the SEBI ICDR Regulations, wherein not less than 75% of the Offer shall be available for allocation on a proportionate basis to Qualified Institutional Buyers ("**QIBs**", and such portion, the "**QIB Portion**"), provided that our Company in consultation with the BRLMs may allocate up to 60% of the QIB Portion to Anchor Investors on a discretionary basis (the "**Anchor Investor Portion**"). One-third of the Anchor Investor Portion shall be reserved for domestic Mutual Funds, subject to valid Bids being received from the domestic Mutual Funds at or above the Anchor Investor Allocation Price in accordance with the SEBI ICDR Regulations. In the event of undersubscription, or non-allocation in the Anchor Investor Portion, the balance Equity Shares shall be added to the QIB Portion (other than Anchor Investor Portion) ("**Net QIB Portion**"). Further, 5% of the Net QIB Portion shall be available for allocation on a proportionate basis to Mutual Funds only, and the remainder of the Net QIB Portion shall be available for allocation on a proportionate basis to all QIBs, including Mutual Funds, subject to valid Bids being received at or above the Offer Price. However, if the aggregate demand from Mutual Funds is less than 5% of the Net QIB Portion, the balance Equity Shares available for allocation in the Mutual Fund Portion will be added to the remaining Net QIB Portion for proportionate allocation to QIBs. If at least 75% of the Offer cannot be Allotted to QIBs, then the entire application money will be refunded forthwith. Further, (a) not more than 15% of the Offer shall be available for allocation to Non-Institutional Investors (out of which one third portion shall be reserved for Bidders with Bids exceeding ₹2.00 lakhs and up to ₹10.00 lakhs and two-third portion shall be reserved for Bidders with Bids exceeding ₹10.00 lakhs) and (b) not more than 10% of the Offer shall be available for allocation to Retail Individual Investors in accordance with the SEBI ICDR Regulations, subject to valid Bids being received from them at or above the Offer Price. All potential Bidders, other than Anchor Investors, are mandatorily required to participate in the Offer through the Application Supported by Blocked Amount ("**ASBA**") process by providing details of their respective ASBA Account and UPI ID in case of UPI Bidders, as applicable, pursuant to which the corresponding Bid Amount, which will be blocked by the Self Certified Syndicate Banks ("**SCSBs**") or the Sponsor Bank, as the case may be, to the extent of their respective Bid Amounts. Anchor Investors are not permitted to participate in the Anchor Investor Portion through the ASBA process. For details, see *"Offer Procedure"* beginning on page 566 of the DRHP.

This public announcement is being made in compliance with the provisions of Regulation 26(2) of the SEBI ICDR Regulations to inform the public that our Company is proposing, subject to applicable statutory and regulatory requirements, receipt of requisite approvals, market conditions and other considerations, to make an initial public offering of its Equity Shares pursuant to the Offer and has filed the DRHP with SEBI and the Stock Exchanges.

Pursuant to Regulation 26(1) of the SEBI ICDR Regulations, the DRHP filed with SEBI shall be made available to the public for comments, if any, for period of at least 21 days, from the date of such filing by hosting it on the website of SEBI at www.sebi.gov.in, on the websites of the Stock Exchanges, i.e., BSE at www.bseindia.com, NSE at www.nseindia.com, the websites of the BRLMs, i.e., DAM Capital Advisors Limited at www.damcapital.in, SBI Capital Markets Limited at www.sbicaps.com and the website of our Company at https://www.trualtbioenergy.com/. Our Company hereby invites the public to give their comments on the DRHP filed with SEBI with respect to disclosures made in the DRHP. The members of public are requested to send a copy of their comments to SEBI and/or to the Company Secretary and Compliance Officer of our Company and/or the BRLMs at their respective addresses mentioned herein. All comments must be received by SEBI and/or our Company and/or the BRLMs and/or the Company Secretary and Compliance Officer of our Company at their respective addresses mentioned herein in relation to the Offer on or before 5:00 p.m. on the 21st day from the aforesaid date of filing of the DRHP with SEBI.

Investments in equity and equity-related securities involve a degree of risk and investors should not invest any funds in the Offer unless they can afford to take the risk of losing their entire investment. Investors are advised to read the risk factors carefully before taking an investment decision in the Offer. For taking an investment decision, investors must rely on their own examination of our Company and the Offer, including the risks involved. The Equity Shares in the Offer have not been recommended or approved by the SEBI, nor does SEBI guarantee the accuracy or adequacy of the contents of the DRHP. Specific attention of the investors is invited to *"Risk Factors"* beginning on page 34 of the DRHP.

Any decision to invest in the Equity Shares described in the DRHP may only be made after the red herring prospectus ("**Red Herring Prospectus**") has been filed with the RoC and must be made solely on the basis of such Red Herring Prospectus as there may be material changes in the Red Herring Prospectus from the DRHP.

The Equity Shares, when offered, through the Red Herring Prospectus, are proposed to be listed on the Stock Exchanges being BSE and NSE.

For details of the main objects of the Company as contained in its Memorandum of Association, see "*History and Certain Corporate Matters*" on page 296 of the DRHP.

The liability of the members of the Company is limited. For details of the share capital, capital structure of the Company and the names of the signatories to the Memorandum of Association and the number of shares subscribed by them see "*Capital Structure*" on page 109 of the DRHP.

BOOK RUNNING LEAD MANAGERS		REGISTRAR TO THE OFFER
DAM CAPITAL	SBICAPS Complete Investment Banking Solutions	Bigshare Services Pvt. Ltd.
DAM Capital Advisors Limited One BKC, Tower C, 15th Floor, Unit No. 1511, Bandra Kurla Complex, Bandra (East), Mumbai 400 051 Maharashtra, India **Tel.:** +91 22 4202 2500; **E-mail:** trualt.ipo@damcapital.in **Investor Grievance E-mail:** complaint@damcapital.in **Website:** www.damcapital.in **Contact person:** Chandresh Sharma **SEBI Registration No.:** MB/INM000011336	**SBI Capital Markets Limited** 1501, 15th Floor, A & B Wing, Parinee Crescenzo G Block, Bandra Kurla Complex, Bandra East Mumbai 400 051 Maharashtra, India **Tel.:** +91 22 4006 9807; **E-mail:** trualt.ipo@sbicaps.com **Investor Grievance E-mail:** investor.relations@sbicaps.com **Website:** www.sbicaps.com **Contact person:** Karan Savardekar / Sambit Rath **SEBI Registration No.:** INM000003531	**Bigshare Services Private Limited** S6-2 Pinnacle Business Park, Mahakali Caves Road Next to Ahura Centre, Andheri (East) Mumbai 400 093 Maharashtra, India **Tel.:** +91 22 62638200; **E-mail:** ipo@bigshareonline.com **Investor Grievance E-mail:** investor@bigshareonline.com **Website:** www.bigshareonline.com **Contact person:** Jibu John **SEBI Registration No.:** INR000001385

All capitalized terms used herein and not specifically defined shall have the same meaning as ascribed to them in the DRHP.

For **TRUALT BIOENERGY LIMITED**
On behalf of the Board of Directors
Sd/-
Sudheer Sannapaneni
Company Secretary and Compliance Officer

Place : Bangalore, Karnataka
Date : August 17, 2024

TRUALT BIOENERGY LIMITED is proposing, subject to receipt of requisite approvals, market conditions and other considerations, to make an initial public offer of its Equity Shares and has filed the DRHP with SEBI and the Stock Exchanges. The DRHP is available on the website of SEBI at www.sebi.gov.in, on the websites of the Stock Exchanges, i.e., BSE at www.bseindia.com, NSE at www.nseindia.com, the websites of the BRLMs, i.e., DAM Capital Advisors Limited at www.damcapital.in, SBI Capital Markets Limited at www.sbicaps.com and the website of our Company at https://www.trualtbioenergy.com/. Potential investors should note that investment in equity shares involves a high degree of risk and for details relating to such risk, see "*Risk Factors*" on page 34 of the DRHP. Potential investors should not rely on the DRHP for making any investment decision.

The Equity Shares offered in the Offer have not been and will not be registered under the United States Securities Act of 1933 ("**U.S. Securities Act**") or any other applicable law of the United States and, unless so registered, may not be offered or sold within the United States, except pursuant to an exemption from, or in a transaction not subject to, the registration requirements of the U.S. Securities Act and applicable state securities laws. Accordingly, the Equity Shares are being offered and sold (i) within the United States only to persons reasonably believed to be "qualified institutional buyers" (as defined in Rule 144A under the U.S. Securities) in transactions exempt from, or not subject to, the registration requirements of the U.S. Securities Act, and (ii) outside the United States in offshore transactions as defined in and in compliance with Regulation S under the U.S. Securities Act and the applicable laws of the jurisdiction where those offers and sales are made. There will be no public offering of the Equity Shares in the United States.

CONCEPT

ಪಟ್ಟಣ ಪಂಚಾಯತ ಕಾರ್ಯಾಲಯ ಕೊಲ್ಹಾರ

–:ವಾಣಿಜ್ಯ ಮಳಿಗೆಗಳ ಹರಾಜಿನ ಪರತ್ತುಗಳು:–

1) ಸೂಚಿತ ಮಳಿಗೆಗಳ ಹರಾಜನ್ನು ಪುರಸಭೆ ಕಾಯ್ದೆ 1964 ಕಲಂ 72(2)ರ ಅಡಿ ನಡೆಸಲಾಗುವುದು.
2) ದಿನಾಂಕ:23–08–2024ರಂದು ಬೆಳಗ್ಗೆ/ಮಧ್ಯಾಹ್ನ 1:00 ಗಂಟೆಗೆ ನಡೆಯುವ ಬಹಿರಂಗ ಹರಾಜನ್ನು ಸಾರ್ವಜನಿಕರ ಆಧ್ಯತೆ ಮೇರೆಗೆ ಸರ್ಕಾರ ನಿಗಧಿಪಡಿಸಿದ ಬಾಡಿಗೆ ಮೇಲೆ ಬಹಿರಂಗ ಹರಾಜ ಲೀಲಾವು ಮಾಡಲಾಗುವದು.
3) ವಾಣಿಜ್ಯ ಸಂಕೀರ್ಣ ಮಾಗಗಳಲ್ಲಿ ಸರಾಯಿ, ಬ್ಯಾಂಡಿ, ಮಾದಕ ಪಾನೀಯಗಳು, ಹಸಿ ಮಾಂಸದ ವ್ಯಾಪಾರ ಮತ್ತು ಪ್ರಿಂಟಿಂಗ್ ಪ್ರೆಸ್ ಲೇತ ಮಶೀನ್ ವಗೈರೆ ನಡೆಸುವುದಕ್ಕೆ ಅವಕಾಶ ಇರುವುದಿಲ್ಲ.
4) ಮಳಗೆಗಳ ಬಾಡಿಗೆಯನ್ನು ಹರಾಜಿನಲ್ಲಿ ಅಂತಿಮವಾಗಿ ಪಡೆದ ಬಿಡ್ ದಾರನಿಗೆ ಬಾಡಿಗೆ ಹಣದ ಮೇಲೆ ಪ್ರತಿ 3 ವರ್ಷಗಳಗೊಮ್ಮೆ ಶೇ.10 ರಷ್ಟು ಬಾಡಿಗೆ ಹಣ ಹೆಚ್ಚಿಗೆ ಮಾಡಲಾಗುವುದು.
5) ನಿಗಧಿಪಡಿಸಿದ ಬಾಡಿಗೆ ಮೊತ್ತಕ್ಕೆ ಹರಾಜು ನಡೆಸಲಾಗುವುದು. ಸೂಚಿತ ಹರಾಜಿನಲ್ಲಿ ಅಂತಿಮವಾಗಿ ಬೇಡಿದ ಬಿಡ್ ದಾರರು ಪೂರ್ಣ ಖಾಯಂ ಠೇವಣಿ ಮೊತ್ತ ಹಾಗೂ ವಾರ್ಷಿಕ ಬಾಡಿಗೆ ಮೊತ್ತದ 1/4 ರಷ್ಟು ಹಣವನ್ನು ಸ್ಥಳದಲ್ಲಿಯೇ ತುಂಬಿ ಉದ ಹಣವನ್ನು 7 ದಿನಗಳಲ್ಲಿ ಸಂದಾಯ ಮಾಡಿ ಚಲನ್ ಪಡೆಯತಕ್ಕದ್ದು. ತಪ್ಪಿದ್ದಲ್ಲಿ ಹರಾಜು ರದ್ದು ಪಡಿಸಿ ಈ ಹಿಂದೆ ತುಂಬಿದ ಮುಂಗಡ ಡೆಪಾಜಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಂಡು ಮನ: ಲೀಲಾವು ಮಾಡಲಾಗುವುದು.ಹಾಗೂ ಹರಾಜಿನಲ್ಲಿ ಭಾಗವಹಿಸುವದಕ್ಕೆ 1000 ರೂ ಈ ಕಾರ್ಯಾಲಯಕ್ಕೆ ಚಲನ ಮುಖಾಂತರ ಭರಿಸುವುದು ಹಣ ಮರ ನೀಡಲಾಗುವುದಿಲ್ಲ
6) ಹರಾಜಿನಲ್ಲಿನ ಬಿಡ್ ಮಾಡಿರುವವರು ಮಳಗೆಗೆ ನೀರಿನ ವ್ಯವಸ್ಥೆ ಬೇಕಾದಲ್ಲಿ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ ಪಡೆಯತಕ್ಕದ್ದು.
7) ಪ್ರತಿ ತಿಂಗಳನ ವಿದ್ಯುತ್‌ಚ್ಚಕ್ತಿ ಬಿಲ್ ನ್ನು ಬಿಡ್ ದಾರರೇ ಹೆಸ್ಕಾಂ ಇಲಾಖೆಗೆ ಕಟ್ಟತಕ್ಕದ್ದು.
8) ಸೂಚಿತ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳನ್ನು ಮಾತ್ರ ಕ್ರಮವಾಗಿ ಹರಾಜು ಮಾಡಲಾಗುವುದು. ಯೋಗ್ಯ ಬಾಡಿಗೆ ಬಂದಲ್ಲಿ ನೀಡಲಾಗುವುದು ಮತ್ತು ಯಾವುದೇ ರೀತಿಯಿಂದ ಬಾಡಿಗೆ ಅವಧಿ ಮಧ್ಯದಲ್ಲಿ ಮಳಿಗೆಯನ್ನು ಖಾಲಿ ಮಾಡಿದಲ್ಲಿ ಅಂದರೆ 3 ವರ್ಷದೊಳಗೆ ತೆರವುಗೊಳಿಸಿದಲ್ಲಿ ಶೇ.50% ರಷ್ಟು 3 ರಿಂದ 6 ವರ್ಷದೊಳಗೆ ತೆರವುಗೊಆಸಿದಲ್ಲಿ ಶೇ 30% ರಷ್ಟು 6 ರಿಂದ 9 ವರ್ಷದೊಳಗೆ ತೆರವುಗೊಳಿಸಿದಲ್ಲಿ ಶೇ 20 ರಷ್ಟು 9 ರಿಂದ 2 ವರ್ಷದೊಳಗೆ ತೆರವುಗೊಳಿಸಿದಲ್ಲಿ ಶೇ 10 ರಷ್ಟು ಈ ರೀತಿಯಾಗಿ ಡೆಪಾಜಿಟ್ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.
9) ಬಾಡಿಗೆ ಕರಾರು ಪತ್ರವನ್ನು ಬಿಡ್ ದಾರರು ತಮ್ಮ ಸ್ವಂತ ಖರ್ಜಿನಿಂದ ಉಪನೊಂದಣಿ ಅಧಿಕಾರಿಗಳು ಬಸವನಬಾಗೇವಾಡಿ ಇವರಲ್ಲಿ ಬಾಡಿಗೆ ಕರಾರು ಪತ್ರವನ್ನು ನೊಂದಣಿ ಮಾಡಿಸಿ ನೀಡಿದ ನಂತರವೇ ಮಳಗೆಯ ಕಟ್ಟಾ ಕೂಡಲಾಗುವುದು.
10) ಸೂಚಿತ ಮಳೆಗೆ ಬಾಡಿಗೆಯನ್ನು ಪ್ರತಿ ತಿಂಗಳ 10ನೇ ದಿನಾಂಕದ ಒಳಗಾಗಿ ಪಾವತಿ ಮಾಡದಿದ್ದಲ್ಲಿ ಶೇ.2%ರಷ್ಟು ಬಡ್ಡಿ ಆಕರಣ ಮಾಡಲಾಗುವುದು
11) ಬಾಡಿಗೆ ಅವಧಿ 12 ವರ್ಷ ಪೂರ್ಣಗೊಂಡ ತಕ್ಷಣ ಮಳಿಗೆಯನ್ನು ಯಾವೂದೇ ಕಾರಣ ತೋರಿಸದೇ ಪಟ್ಟಣ ಪಂಚಾಯತ ಕಡ್ಡಾಕ್ಕ ಒಪ್ಪಿಸತಕ್ಕದ್ದು.
12) ಹರಾಜಿನಲ್ಲಿ ಮಳಿಗೆ ಮಾಗಣಿ ಮಾಡಿ ಕಬ್ಜಾ ಪಡೆದವರು ಸ್ವಂತ ಉದ್ಯೋಗ ವ್ಯವಹಾರ ನಡೆಸತಕ್ಕದ್ದು. ಇದಕ್ಕೆ ತಪ್ಪಿ ಬೇರೆಯವರಿಗೆ ಬಾಡಿಗೆ ನೀಡಿದ್ದು ಕಂಡುಬಂದಲ್ಲಿ ಯಾವುದೇ ತಿಳುವಳಿಕೆ ನೀಡದೇ ಬಾಡಿಗೆದಾರನ ಹಕ್ಕು ರದ್ದುಪಡಿಸಿ ಮಳಿಗೆಯನ್ನು ಕಬ್ಜಾ ಪಡೆಯಲಾಗುವುದು.
13) ಹರಾಜಿನಲ್ಲಿ ಬಾಡಿಗೆ ಪಡೆದವರು ಮಳಿಗೆಯಲ್ಲಿ ಪಟ್ಟಣ ಪಂಚಾಯತ ಅನುಮತಿ ಇಲ್ಲದೆ ಕಟ್ಟಡದಲ್ಲಿ ಯಾವುದೇ ಬದಲಾವಣೆ ಸುಧಾರಣಿ ವಗೈರೆ ಮಾಡತಕ್ಕದಲ್ಲ ಹಾಗೂ ಅನಿರೀಕ್ಷಿತ ಘಟನೆಯಿಂದ ನಡೆಸುವ ವ್ಯವಹಾರ ಉದ್ಯೋಗಕ್ಕೆ ಧಕ್ಕೆ/ನಷ್ಟ ಉಂಟಾಗಿ ವ್ಯವಹಾರ ಸ್ಥಗಿತಗೊಂಡಲ್ಲ ಪಟ್ಟಣ ಪಂಚಾಯತ ಹೊಣೆ ಇರುವುದಿಲ್ಲ.
14) ಸೂಚಿತ ಮಳಿಗೆಯಲ್ಲಿ ವ್ಯಾಪಾರ ನಡೆಯುವ ಪೂರ್ವದಲ್ಲಿ ನಡೆಸುವ ವ್ಯವಹಾರ ಕುರಿತು ಉದ್ಯೋಗಕ್ಕೆ ಪಟ್ಟಣ ಪಂಚಾಯತ ಲೈಸನ್ಸ ಪಡೆದು ವ್ಯವಹಾರ/ಉದ್ಯೋಗ ನಡೆಸತಕ್ಕದ್ದು. ಒಂದು ವೇಳೆ ಬೇರೆಯವರ ಹೆಸರಿನಿಂದ ಲೈಸನ್ಸ ಪಡೆದಿರುವುದು ಕಂಡು ಬಂದಲ್ಲಿ ಲೀಸ್ ರದ್ದು ಪಡಿಸಿ, ಮಳಿಗೆಯನ್ನು ಕಬ್ಜಾ ಪಡೆಯಲಾಗುವುದು.
15) ಹರಾಜಿನಲ್ಲಿ ಯಶಸ್ವಿಯಾದವರಿಗೆ ಮಾಸಿಕ ಬಾಡಿಗೆಯ ಮೇಲೆ ಶೇ.5%ರಷ್ಟು ಸರ್ವಿಸ್ ಟ್ಯಾಕ್ಸ್ ಪ್ರತ್ಯೇಕವಾಗಿ ಅನ್ವಯವಾಗುತ್ತದೆ ಹಾಗೂ ಕೇಂದ್ರ/ರಾಜ್ಯ ಸರಕಾರದಿಂದ ಕಾಲ ಕಾಲಕ್ಕೆ ಬರುವ ಆದೇಶಗಳು ಹಾಗೂ ಸುತ್ತೋಲೆಗಳು ಸಹ ಅನ್ವಯವಾಗುತ್ತವೆ.
16) ಪರಿಶಿಷ್ಟ ಜಾತಿ ಅಲಾವಿನಲ್ಲಿ ಭಾಗವಹಿಸುವ ಮುನ್ನ ಚಾಲ್ತಿಯಲ್ಲಿರುವ ಜಾತಿ ಪ್ರಮಾಣ ಪತ್ರ ಮತ್ತು ಗುರುತಿನ ಚೀಟಿ ಹಾಜರು ಪಡಿಸಿ ಠೇವಣಿ ಹಣ ತುಂಬಿ ಲೀಲಾವಿನಲ್ಲಿ ಭಾಗವಹಿಸುವುದು.
(ಸಾಮಾನ್ಯ ವರ್ಗದವರು ಗುರುತಿನ ಚೀಟಿ ಹಾಜರುಪಡಿಸಿ ಭಾಗವಹಿಸುವುದು.)
17) ಲೀಲಾವಿನಲ್ಲಿ ಭಾಗವಹಿಸುವವರು ಮಳಗೆಗಳಗೆ ರೂ, 44323.00 ಮುಂಗಡ ಠೇವಣಿ ಹಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಕೃತ ಬ್ಯಾಂಕಗಳಿಂದ ಡಿಮಾಂಡ್ ಡ್ರಾಫ್ಟ್ "ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಕೊಲ್ಹಾರ" ಇವರಿಗೆ ಸಂದಾಯವಾಗುಂತೆ ಮಾತ್ರ ಸ್ವೀಕರಿಸಲಾಗುವುದು. ಒಂದು ಬಾರಿ ಮಳಗೆಪಡೆದವರು ಪುನ: ಹರಾಜು ಕೂಗುವಂತಿಲ್ಲ. ಒಂದು ವೇಳೆ ಲೀಲಾವಿನಲ್ಲಿ ಒಂದಕ್ಕಿಂತ ಹೆಚ್ಚಿಗೆ ಮಳಗೆ ಬೇಡುವವರಿದ್ದಲ್ಲಿ ಪ್ರತಿ ಮಳಿಗೆಗೆ ಪ್ರತ್ಯೇಕವಾಗಿ ಮುಂಗಡ ಠೇವಣಿ ಡಿ.ಡಿಯನ್ನು ಮೊದಲೇ ಸಲ್ಲಿಸತಕ್ಕದ್ದು ಡಿಡಿ ಗಳನ್ನು ಸ್ವೀಕರಿಸುವ ದಿನಾಂಕ: 17–08–2024 ರಿಂದ ಹರಾಜು ಪ್ರಾರಂಭಬಾಗುವವರೆಗೆ ಮಾತ್ರ ಅವಕಾಶವಿರುತ್ತದೆ.
18) ಲೀಲಾವಿನಲ್ಲಿ ಭಾಗವಹಿಸಿದವರು ಲೀಲಾವು ಬೇಡಿಕೆಯನ್ನು ಪ್ರತಿ ಬೇಡಿಕೆಗೆ 500/– ಕ್ಕಿಂತ ಕಡಿಮೆ ಇಲ್ಲದಂತೆ ಬೇಡತಕ್ಕದ್ದು
19) ಮಳಗೆಗಳ ಹರಾಜಿನಲ್ಲಿ ಯೋಗ್ಯ ಮಾಗಣಿ ಬಂದಲ್ಲಿ ಮಾತ್ರ ಲೀಲಾವು ಮಂಜೂರಿಗೆ ಕ್ರಮ ಜರುಗಿಸಲಾಗುವುದು. ಯಾವೂದೇ ರೀತಿಯ ತಂಟೆ ತಕರಾರುಗಳಿಗೆ ಪಟ್ಟಣ ಪಂಚಾಯತ ನಿರ್ಣಯವೇ ಅಂತಿಮವಾಗುವುದು.
20) ಸರಕಾರದಿಂದ ಕಾಲ ಕಾಲಕ್ಕೆ ಹೊರಡಿಸುವ ಸುತ್ತೋಲೆಗಳು/ಮಾರ್ಗಸೂಚಿಗಳು/ ಆದೇಶಗಳಗೆ ಭದ್ದರಾಗಿರತಕ್ಕದ್ದು
21) ಘನತ್ಯಾಜ್ಯ ವಸ್ತು ವಿಲೇವಾರಿ ಸೇವಾ ಶುಲ್ಕವನ್ನು ಘನತ್ಯಾಜ್ಯ ವಸ್ತು ವಿಲೇವಾರಿ ಕಾಯ್ದೆ 2015 ಪ್ರತ್ಯೇಕವಾಗಿ ಸಂದಾಯ ಮಾಡುವದು.
22) ಮಳಿಗೆಗಳನ್ನು ಯಾವತ್ತು ಸುಸ್ಥಿತಿಯಲ್ಲಿ ಇಟ್ಟಕೊಳ್ಳತಕ್ಕದ್ದು.
23) ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಕಿರಿಯ ಅಭಿಯಂತರರನ್ನು ಹಾಗೂ ಕಂದಾಯ ವಿಭಾಗದವರನ್ನು ಸಂಪರ್ಕಿಸಬಹುದಾಗಿರುತ್ತದೆ.
24) ಹರಾಜಿನಲ್ಲಿ ಬಾಕಿ ಉಳಿದ ಕೆಳಗಿನಂತೆ ವಾಣಿಜ್ಯ ಮಳಿಗೆಗಳ ಮಿಸಲಾತಿ ಇರುತ್ತದೆ.

ಸಾಮಾನ್ಯ	ಪ.ಜಾತಿ
10, 14, 16,17 & 23	73

ಸಹಿ/–
(ಶ್ರೀ ಉಮೇಶ ಚಲವಾದಿ)
ಮುಖ್ಯಾಧಿಕಾರಿ
ಪಟ್ಟಣ ಪಂಚಾಯತ ಕೊಲ್ಹಾರ

ಸಹಿ/–
(ಶ್ರೀ ಎಸ್.ಎಸ್ ನಾಯಕಲಮಠ)
ಅಡಕತಾಧಿಕಾರಿಗಳು
ಪಟ್ಟಣ ಪಂಚಾಯತ ಕೊಲ್ಹಾರ

ಎಐಎಂಎಸ್‌ಎಸ್ ಸಂಘಟನೆಯಿಂದ ಪ್ರತಿಭಟನೆ

ಕಲ್ಕತ್ತಾದ ವೈದ್ಯಕೀಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಕೊಲೆ ಘಟನೆ ಖಂಡಿಸಿ ಎಐಎಂಎಸ್ ಎಸ್ ಕಾರ್ಯಕರ್ತರು ಕೊಪ್ಪಳದ ಅಶೋಕ ವೃತ್ತದಲ್ಲಿ ಪ್ರತಿಭಟಿಸಿದರು.

ಕೊಪ್ಪಳ: ಕಲ್ಕತ್ತಾದ ಸರಕಾರಿ ವೈದ್ಯಕೀಯ ಕಾಲೇಜಿನ ಸ್ನಾತಕೋತ್ತರ ವಿದ್ಯಾರ್ಥಿನಿಯನ್ನು ಹತ್ಯಾಚಾರ ಮಾಡಿ ಕೊಲೆ ಮಾಡಿದ ಘಟನೆ ಖಂಡಿಸಿ ಹಾಗೂ ಪ್ರತಿಭಟನಾಕಾರರ ಮೇಲೆ ಅಲ್ಲಿನ ಸರಕಾರ ಮಾಡಿದ ದಾಳಿ ವಿರೋಧಿಸಿ ಎಐಎಂಎಸ್‌ಎಸ್ ಸಂಘಟನೆ ಕಾರ್ಯಕರ್ತರು ನಗರದ ಅಶೋಕ ವೃತ್ತದಲ್ಲಿ ಶನಿವಾರ ಪ್ರತಿಭಟಿಸಿದರು.

ಸಂಘಟನೆ ಜಿಲ್ಲಾ ಸಮಿತಿ ಸದಸ್ಯೆ ಶಾರದ ಗಡ್ಡಿ ಮಾತನಾಡಿ, ಮಹಿಳೆಯರ ಮತ್ತು ಮಕ್ಕಳ ಮೇಲಿನ ಹತ್ಯಾಚಾರ ಹಾಗೂ ಕೊಲೆ ಪ್ರಕರಣ ಸಾಕಷ್ಟು ನಡೆಯುತ್ತಿವೆ. ಘಟನೆಗೆ ವ್ಯವಸ್ಥೆ ಮತ್ತು ಆಳುವ ಸರಕಾರಗಳೇ ಕಾರಣ. ದೆಹಲಿಯ ನಿರ್ಭಯ ಘಟನೆಯಿಂದ ಹಿಡಿದು ಹಲವಾರು ಹೆಣ್ಣು ಮಕ್ಕಳ ಮೇಲೆ ಇಂಥ ಹತ್ಯಾಚಾರ ಕೊಲೆ ನಡೆಯುತ್ತಾ ಬಂದಿದೆ. ಇದರ ಬಗ್ಗೆ ಸರಕಾರ ಸೂಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಘಟನೆ ಮರುಕಳಿಸುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಜಿಲ್ಲಾ ಸಂಚಾಲಕಿ ಎಂ. ಮಂಜುಳಾ ಮಾತನಾಡಿ, ಹೆಣ್ಣು ಮಕ್ಕಳಿಗೆ ಭದ್ರತೆ ಕೊಡುವಲ್ಲಿ ಸರಕಾರ ಮತ್ತು ವ್ಯವಸ್ಥೆ ವಿಫಲವಾಗಿದೆ. ಈ ಪುರುಷ ಪ್ರಧಾನ ಸಮಾಜ ದಲ್ಲಿ ಹೆಣ್ಣು ಮಕ್ಕಳನ್ನು ಕೇವಲ ಭೋಗದ ವಸ್ತುವಿ ನಂತ ಕಾಣುತ್ತಿವೆ. ಅಷ್ಟೇ ಅಲ್ಲದೆ ಮೊಬೈಲ್ ವೆಬ್ ಸೈಟ್ಸ್ ಗಳಲ್ಲಿ ವ್ಯಾಪಕವಾಗಿ ಅಶ್ಲೀಲ ಸಿನಿಮಾ ಸಾಹಿತ್ಯ ಹರಿಬಿಡುತ್ತಿರುವುದರಿಂದ ಮಕ್ಕಳು ಹಾಗೂ ಯುವಜನರು ದಾರಿ ತಪ್ಪುತ್ತಿದ್ದಾರೆ. ಇದು ಕೂಡ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಹಾಗೂ ಹತ್ಯಾಚಾರ ಗಳಿಗೆ ಮುಖ್ಯ ಕಾರಣ. ಇದು ತಿಳಿದಿದ್ದರೂ ಸರಕಾರ ಇಂಥ ಅಶ್ಲೀಲ ಸೈಟ್ ಬ್ಯಾನ್ ಮಾಡದಿರುವುದು ವಿಪರ್ಯಾಸ ಎಂದು ತರಾಟೆಗೆ ತೆಗೆದುಕೊಂಡರು.

ಜಿಲ್ಲಾ ಸಂಚಾಲಕರಾದ ಗಂಗರಾಜ ಅಳ್ಳಳ್ಳಿ, ಜಿಲ್ಲಾ ಕಾರ್ಯದರ್ಶಿ ಶರಣು ಪಾಟೀಲ್ ಮಾತನಾಡಿದರು. ಕಾರ್ಯಕರ್ತರಾದ ಲ ಪ್ರದೀಪ್, ದೇವರಾಜ ಹೊಸಮನಿ, ಮೌನೇಶ, ಸುಮ್ಮಯ, ಗಿರೀಶ, ಮಾರುತಿ, ಕೃಷ್ಣ, ಮಹೇಶ ಹಾಗೂ ಹುಸೇನ ಬಿ, ಜ್ಯೋತಿ, ರೇಣುಕಾ, ಗೌತಮ್, ಮಂಜುನಾಥ್, ಹುಲಿಗೆಮ್ಮ, ಶ್ರೀದೇವಿ ಸೇರಿ ವಿವಿಧ ಕಾಲೇಜಿನ 400ಕ್ಕೂ ಹೆಚ್ಚು ವಿದ್ಯಾರ್ಥಿಗಳು, ಉಪನ್ಯಾಸಕರು, ವೈದ್ಯರು, ಇದ್ದರು.

ಸಮಾಚಾರ ಸಣ್ಣದಲ್ಲ

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಅಥಣಿ: ತಾಲೂಕಾ ಶಿಶು ಅಭಿವೃದ್ಧಿ ಯೋಜನೆ ವ್ಯಾಪ್ತಿಯಲ್ಲಿ ಖಾಲಿ ಇರುವ 07 ಅಂಗನವಾಡಿ ಕಾರ್ಯಕರ್ತೆ ಹಾಗೂ 07 ಅಂಗನವಾಡಿ ಸಹಾಯಕಿಯರ ಹುದ್ದೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಕರೆಯಲಾಗಿತ್ತು. ಆಗಸ್ಟ್ 4ರವರೆಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ ತಾಂತ್ರಿಕ ಸಮಸ್ಯೆ ಉಂಟಾಗಿರುವುದರಿಂದ ಆನ್‌ಲೈನ್‌ದಲ್ಲಿ ಅರ್ಜಿ ಸಲ್ಲಿಸಲು ಅವಧಿಯನ್ನು ಬರುವ ಅಗಸ್ಟ್ 25ರ ವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ ಅಥಣಿ ಇವರನ್ನು ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ-08289-295150 ರ ಮುಖಾಂತರ ಸಂಪರ್ಕಿಸಬಹುದು ಎಂದು ತಾಲೂಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಗೆ ತಿಳಿಸಿದ್ದಾರೆ.

ಹಲವೆಡೆ ವಿದ್ಯುತ್ ವ್ಯತ್ಯಯ ಇಂದು

ಬೈಲಹೊಂಗಲ: 33 ಕೆವ್ಹಿ ಮುರಗೋಡ ಲಿಂಕ್ ಲೈನ್ ನಿರ್ಮಾಣ ಕಾಮಗಾರಿ ಕೈಗೊಳ್ಳುತ್ತಿರುವದರಿಂದ 110/33/11 ಬೈಲಹೊಂಗಲ ವಿದ್ಯುತ್ ಉಪಕೇಂದ್ರದಿಂದ ವಿತರಣೆಯಾಗುವ ಕ್ರಾಸಿಂಗ ಇರುವ ಮಾರ್ಗಗಳಿಗೆ ದಿ. 18 ರಂದು ಭಾನುವಾರ ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ವರೆಗೆ ಎಪಿಎಂಸಿ, ಎಸಿ ಆಫಿಸ್, ವಾಟರ್ ಸಪ್ಲೈ, ಮುರಗೋಡ ರಸ್ತೆ, ಹೊಸೂರ ರಸ್ತೆ, ಅನಿಗೋಳ ಬಾಯಪಾಸ ರಸ್ತೆ, ಎಂ ಜಿ ಕಾಲೋನಿ, ಕೆ ಇ ಬಿ ವಸತಿ ಗೃಹ, ಚೆನ್ನಮ್ಮ ವೃತ್ತ, ಚೆನ್ನಮ್ಮ ಬ್ಯಾಂಕ್, ಹಳೇ ಆರ್ ಟಿ ಒ ಆಫೀಸ್, ಪೋಸ್ಟ್ ಆಫೀಸ್, ಇಂಚಲ ರಸ್ತೆ, ಬಾಗವಾನ ಚಾಳ, ಬಸ್ ನಿಲ್ದಾಣ, ಸೋಮವಾರ ಪೇಟೆ, ಸಂಗೊಳ್ಳಿ ರಾಯಣ್ಣ ವೃತ್ತ, ಮಡಿವಾಳರ ಚಾಳ, ಪ್ರಭು ನಗರ, ಅನಿಗೋಳ, ಬೈಲವಾಡ, ಚಿವಟಗುಂಡಿ, ಲಕ್ಕುಂಡಿ, ನಾಗನೂರ, ವಕ್ಕುಂದ, ಕೊರವಿಕೊಪ್ಪ, ನಯಾನಗರ ಹಾಗೂ ಸುತ್ತಲಿನ ಗ್ರಾಮಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುವುದು ಎಂದು ಹೆಸ್ಕಾಂ ಕಾರ್ಯ ನಿರ್ವಾಹಕ ಇಂಜನಿಯರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರಿಗೆ ವ್ಯವಸ್ಥೆಗೆ ಅರ್ಜಿ ಆಹ್ವಾನ

ಹುಕ್ಕೇರಿ: 2024-25 ನೇ ಸಾಲಿನಲ್ಲಿ ಅಕ್ಟೋಬರ 12ರಂದು. (ವಿಜಯದಶಮಿ)ರಂದು. ಮಹಾರಾಷ್ಟ್ರದ ನಾಗಪುರ ದೀಕ್ಷಾ ಭೂಮಿಯಲ್ಲಿ ಜರುಗುವ ದಮ್ಮ ಪ್ರವರ್ತನ ದಿನ ಕಾರ್ಯಕ್ರಮಕ್ಕೆ ಸಾರಿಗೆ ವ್ಯವಸ್ಥೆಯ ಕಲ್ಪಿಸುವುದಕ್ಕಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ವೆಬ್‌ಸೈಟ್‌ನಲ್ಲಿ (https:swdservices.karnataka.gov.in) ಆನ್‌ಲೈನ್ ಮೂಲಕ ಅರ್ಜಿ ಕರೆಯಲಾಗಿದೆ. ಆ.31 ರಂದು ಕೊನೆಯ ದಿನವಾಗಿದ್ದು ಡಾ.ಬಿ.ಆರ್.ಅಂಬೇಡ್ಕರ ಅನುಯಾಯಿಗಳಿಗಳು ನಿಗದಿತ ದಿನಾಂಕದೊಳಗಾಗಿ ಅರ್ಜಿಸಲ್ಲಿಸಬೇಕು ಎಂದು ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಗ್ರಾಪಂ ಅಧ್ಯಕ್ಷೆ ಅನಿತಾ ಸಿದಪ್ಪ ದಳವಾಯಿ

ಹಾರೂಗೇರಿ: ಯಲ್ಪಾರಟ್ಟಿ ಗ್ರಾಮ ಪಂಚಾಯಿತಿ ಎರಡನೇ ಅವಧಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಅನಿತಾ ಸಿದ್ದಪ್ಪ ದಳವಾಯಿ ಉಪಾಧ್ಯಕ್ಷೆಯಾಗಿ ಗಿರಿಜಾ ಪಾರಿಸ ಮಾಂಗ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಹಿಂದುಳಿದ ಅ ವರ್ಗ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಪರಿಶಿಷ್ಟ ಜಾತಿಗೆ ನಡೆದ ಚುನಾವಣಾ ಪ್ರಕ್ರಿಯೆಯಲ್ಲಿ ಚುನಾವಣಾಧಿಕಾರಿಯಾಗಿ ತಾಲೂಕ ಪಶು ಆಸ್ಪತ್ರೆಯ ಸಹಾಯಕ ನಿರ್ದೇಶಕ ಡಾ.ಎಂ.ಬಿ.ಪಾಟೀಲ ಭಾಗಿಯಾಗಿದ್ದರು.

ಮುರಗೋಡ ಸಿಪಿಐಗೆ ಸಿಎಂ ಸೇವಾ ಪದಕ

ಯರಗಟ್ಟಿ : ಪೊಲೀಸ್ ಇಲಾಖೆಯಲ್ಲಿ ಶ್ಲಾಘನೀಯ ಸೇವೆ ಸಲ್ಲಿಸಿದ ಮುರಗೋಡ ಪೊಲೀಸ್ ಠಾಣೆಯ

ಸರ್ಕಲ್ ಇನ್‌ಸ್ಪೆಕ್ಟರ್ ಅವರಿಗೆ ಮುಖ್ಯಮಂತ್ರಿ ವಿಶಿಷ್ಟ ಸೇವಾ ಪದಕ ಲಭಿಸಿದೆ. 78ನೇ ಸ್ವಾತಂತ್ರ್ಯ ಸಂಭ್ರಮದ ನಿಮಿತ್ತ 2024-25ನೇ ಸಾಲಿನ ಮುಖ್ಯಮಂತ್ರಿ ಪದಕವನ್ನು ಮುರಗೋಡ ಸರ್ಕಲ್ ಇನ್ ಸ್ಪೆಕ್ಟರ್ ಈರಯ್ಯ ಮಠಪತಿ ಅವರು ಪಡೆದಿದ್ದಾರೆ. ಮೂಲತಃ ಬಾಗಲಕೋಟೆ ಜಿಲ್ಲೆಯ ಜಮಖಂಡಿ ಗ್ರಾಮದ ಇವರು 2007ರಲ್ಲಿ ಮೈಸೂರಿನಲ್ಲಿ ಪಿಎಸ್ಐ ತರಬೇತಿ ಪಡೆ ದು ಮೊದಲ ಬಾರಿಗೆ ಬೆಂಗಳೂರಿನ ಆನೇಕಲ್ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ಆಗಿ ನೇಮಕಗೊಂಡರು. ನಂತರ 2019ರಲ್ಲಿ ಇಂಟರ್ನಲ್ ಸೆಕ್ಯೂರಿಟಿ ಡಿವಿಜನ್ ಹಾವೇರಿ ಇಲ್ಲಿಗೆ ಸರ್ಕಲ್ ಇನ್ಸ್ಪೆಕ್ಟರ್ ಆಗಿ ಮುಂಬಡ್ತಿ ಪಡೆದರು. 2021ರ ಜಮಖಂಡಿ ಪೊಲೀಸ್ ಠಾಣೆ ಗೆ ಸಿಪಿಐ ಆಗಿ ನಂತರ 2023ರಲ್ಲಿ ಮುರಗೋಡ ಪೊಲೀಸ್ ಠಾಣೆ ಯ ಸಿಪಿಐ ನೇಮಕಗೊಂಡರು. ಕೊಲೆ ಪ್ರಕರಣ, ಕಳ್ಳತನ, ದರೋ ಡೆ, ಸುಲಿಗೆ ಹಲವಾರು ಕಳ್ಳತನ ಹಾಗೂ ಇತರ ಕ್ಲಿಷ್ಟಕರ ಪ್ರಕರಣ ಗಳನ್ನು ಬೇಧಿಸಿದ್ದಾರೆ. ಇವರಿಗೆ ಬೆಳಗಾವಿ ಎಸ್ಪಿ ಡಾ. ಭೀಮಾಶಂಕರ ಗುಳೆದ ಹಾಗೂ ರಾಮದುರ್ಗ ಡಿಎಸ್ಪಿ ಎಂ. ಪಾಂಡುರಂಗಯ್ಯ ಅವರು ಮತ್ತು ಯರಗಟ್ಟಿ-ಮುರಗೋಡ ಪೊಲೀಸ್ ಠಾಣೆ ಸಿಬ್ಬಂದಿ ವರ್ಗದವರು ಗ್ರಾಮಸ್ಥರು ಅಭಿನಂದನೆ ಸಲ್ಲಿಸಿದ್ದಾರೆ.

ಆನಂದದ ಆಲ್ಬಂ
ವಿವಾಹ್
ಪ್ರತಿ ಬುಧವಾರ

ಪ್ರತಿ ಶುಕ್ರವಾರ
ಸಿನಿಮಾಸ್
ಜಾಸ್ತಿ ಮಾಸ್ ಜಾಸ್ತಿ ಕ್ಲಾಸ್

ಹೊಸ ವೈಜ್ಞಾನಿಕ ಪದ್ಧತಿ ಅಳವಡಿಸಿ

ಬೆಳೆಗಳಿಗೆ ಡ್ರೋನ್ ಮೂಲಕ ಪೋಷಕಾಂಶಗಳ ಸಿಂಪಡಣೆಗೆ ಸಚಿವರಿಂದ ಚಾಲನೆ

ಬೆಳಗಾವಿ: ಜಿಲ್ಲಾ ಪಂಚಾಯತ್, ಕೃಷಿ ಇಲಾಖೆ ಹಾಗೂ ರೋಟರಿ ಕ್ಲಬ್ ವತಿಯಿಂದ ಹತ್ತರಗಿ ಬಳಿಯ ಕೃಷಿ ಜಮೀನಿನಲ್ಲಿ ಆಯೋಜಿಸಲಾದ ಸೋಯಾ ಅವರೆ ಬೆಳೆಗೆ ಡ್ರೋನ್ ಮೂಲಕ ಪೋಷಕಾಂಶಗಳ ಸಿಂಪಡಣೆ ಕಾರ್ಯಕ್ಕೆ ಲೋಕೋಪಯೋಗಿ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಡ್ರೋನ್ ಮೂಲಕ ಪೋಷಕಾಂಶಗಳ ಸಿಂಪರಣೆ ರೈತರ ಕೃಷಿ ಚಟುವಟಿಕೆಗಳಿಗೆ ಅನುಕೂಲ ಮಾಡಿಕೊಡುವ ವಿನೂತನ ಪದ್ಧತಿಯಾಗಿದೆ. ರೈತ ಬಾಂಧವರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು. ಇದರಿಂದ ರೈತರಿಗೆ ಬಹಳಷ್ಟು ಅನುಕೂಲವಾಗಲಿದೆ ಎಂದು ಹೇಳಿದರು.

ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರು ಮಾತನಾಡಿ, ಸೋಯಾ ಅವರೆ ಬೆಳೆಗೆ ಪೋಷಕಾಂಶಗಳ ಸಿಂಪರಣೆಗೆ ಸುಮಾರು 37 ಡ್ರೋನ್‌ಗಳು ಬಳಕೆ ಮಾಡಲಾಗುತ್ತಿದೆ. ರೈತರು ಬೆಳೆದ ವಿವಿಧ ಬೆಳೆಗಳಿಗೆ ಪೋಷಕಾಂಶ ಮತ್ತು ರಸಗೊಬ್ಬರಗಳನ್ನು ಸಿಂಪರಣೆ ಮಾಡಲು ಈ ವಿಧಾನ ಸುಲಭವಾಗಿದೆ ಎಂದು ಹೇಳಿದರು.

ಪ್ರತಿ ಎಕರೆ ಸಿಂಪರಣೆಗೆ ಸುಮಾರು 400 ರುಪಾಯಿ ಖರ್ಚು ತಗಲುತ್ತದೆ. ಡ್ರೋನ್ ಮೂಲಕ ವಿವಿಧ ಬೆಳೆಗಳಿಗೆ ಕೀಟನಾಶಕ, ರಸಗೊಬ್ಬರ ಸಿಂಪರಣೆ ಮಾಡಬಹುದು. ರೈತರಿಗೆ ತಾಂತ್ರಿಕತೆಯ ಅರಿವು ಮೂಡಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಆಯೋಜನೆ ಮಾಡಲಾಗಿದೆ.ಆಯಾ ರೈತ ಸಂಪರ್ಕ ಕೇಂದ್ರದಲ್ಲಿ ಅಥವಾ ಕೃಷಿ ಇಲಾಖೆಯನ್ನು ಸಂಪರ್ಕಿಸಿ ಡ್ರೋನ್ ಬಳಕೆ ಬಗ್ಗೆ ಮಾಹಿತಿ ಪಡೆಯಬಹುದಾಗಿದೆ. ಕಿತ್ತೂರು ಬೈಲಹೊಂಗಲ ಬಾಗೇವಾಡಿಯಲ್ಲಿ ಕಬ್ಬು ಬೆಳೆಗೆ ಈಗಾಗಲೇ ಬಳಕೆ ಮಾಡಲಾಗುತ್ತಿದೆ.

ಡ್ರೋನ್ ಮೂಲಕ ಪೋಷಕಾಂಶಗಳ ಸಿಂಪಡಣೆ ಕಾರ್ಯಕ್ಕೆ ಸಚಿವ ಸತೀಶ್ ಜಾರಕಿಹೊಳಿ ಚಾಲನೆ ನೀಡಿದರು.

ವಿವಿಧ ಖಾಸಗಿ ಉದ್ಯಮಗಳ ರೈತ ಸ್ನೇಹಿ ಯೋಜನೆ ಇದಾಗಿದೆ. ರೈತರಿಗೆ ತಲುಪಿಸಲು ಕೃಷಿ ಇಲಾಖೆ ಈ ಕಾರ್ಯಕ್ರಮ ಆಯೋಜಿಸಿದ್ದು, ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕೃಷಿ ಇಲಾಖೆಯ ಉಪ ನಿರ್ದೇಶಕರಾದ ಡಾ.ಎಚ್.ಡಿ.ಕೋಳೆಕರ, ಡಾ.ಕೊಂಗವಾಡ, ಹುಕ್ಕೇರಿ ತಹಶೀಲ್ದಾರ ಮಂಜುಳಾ ನಾಯಕ, ರೋಟರಿ ಜಿಲ್ಲಾ ಗವರ್ನರ್ ಶರದ್ ಪೈ, ರೋಟರಿ ಅಧ್ಯಕ್ಷ ಸುಹಾಸ್ ಚಂಡಕ್, ಚೇರಮನ್ ಪ್ರಶಾಂತ ಹಾಲಪ್ಪನವರ, ಡಾ.ಶಿಲ್ಪಾ ಕೋಡಕಣಿ, ಮುಕುಂದ ಬಾಂಗ್, ಡಾ.ಸಂತೋಷ ಪಾಟೀಲ, ಸಂದೀಪ್ ನಾಯ್ಕ, ನಿತೀನ್ ಗುಜ್ಜರ್, ಡಾ.ಶಂಕರ್ ಗೋಯೆಂಕಾ, ಚಂದ್ರಕಾಂತ ಪಾಟೀಲ(ಬೇಡಕಿಹಾಳ) ಮತ್ತಿತರರು ಉಪಸ್ಥಿತರಿದ್ದರು.

ರೈತಸ್ನೇಹಿ ಡ್ರೋನ್ ಗಳ ಬಳಕೆಯಿಂದ ರೈತರಿಗೆ ಸಮಯ, ಶ್ರಮ ಉಳಿತಾಯದ ಜತೆಗೆ ಆರ್ಥಿಕ ಹೊರೆ ಕಡಿಮೆಯಾಗಲಿದೆ. ಈ ಕುರಿತು ಕೃಷಿ ಇಲಾಖೆಯಿಂದ ರೈತರಿಗೆ ತಿಳುವಳಿಕೆ ಕೂಡ ಮೂಡಿಸಲಾಗುತ್ತದೆ.

– ಶಿವನಗೌಡ ಪಾಟೀಲ ಕೃಷಿ ಇಲಾಖೆ ಜಂಟಿ ನಿರ್ದೇಶಕ

ಮತ್ತಷ್ಟು ಅಭಿವೃದ್ಧಿ ಹೊಂದಲು ಕರೆ

ಹೊಸ ತಂತ್ರಜ್ಞಾನ ಬಳಕೆ ಮೂಲಕ ಎಲ್ಲ ರೈತರು ಕೃಷಿ ಚಟುವಟಿಕೆಗಳನ್ನು ಇನ್ನಷ್ಟು ವೇಗವಾಗಿ ನಿರ್ವಹಿಸಲು ಸಹಾಯಕ ವಾಗಿದೆ. ಇದರಿಂದ ಸಮಯ, ಹಣ ಉಳಿತಾಯವಾಗಲಿದೆ. ಇಂತಹ ವೈಜ್ಞಾನಿಕ ಪದ್ಧತಿಯನ್ನು ಬಳಸಿಕೊಂಡು ಕೃಷಿ ಕ್ಷೇತ್ರದಲ್ಲಿ ರೈತರು ಮತ್ತಷ್ಟು ಅಭಿವೃದ್ಧಿ ಹೊಂದಬೇಕು ಎಂದು ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದರು.

ಅತ್ಯಾಚಾರ ಕೊಲೆ ಪ್ರಕರಣ: ಎಬಿವಿಪಿಯಿಂದ ಪ್ರತಿಭಟನೆ

ಬೆಳಗಾವಿ: ಪಶ್ಚಿಮ ಬಂಗಾಳದ ಕೊಲ್ಕತ್ತಾದ ಆರ್ ಜಿ ಕರ್ ವೈದ್ಯಕೀಯ ಕಾಲೇಜಿನ ಸೆಮಿನಾರ್ ಹಾಲ್ ನಲ್ಲಿ ಸ್ನಾತಕೋತ್ತರ ತರಬೇತಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದ ಅತ್ಯಾಚಾರ ಕೊಲೆ ಪ್ರಕರಣ ಖಂಡಿಸಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ನೇತೃತ್ವದಲ್ಲಿ ವೈದ್ಯಕೀಯ ವಿದ್ಯಾರ್ಥಿಗಳು ಬೆಳಗಾವಿಯಲ್ಲಿ ಪ್ರತಿಭಟನೆ ಮಾಡಿದರು.

ನಗರದ ಚನ್ನಮ್ಮ ವೃತ್ತದಲ್ಲಿ ಜಮಾಯಿಸಿದ್ದ ಪ್ರತಿಭಟನಾಕಾರರು, ಅಲ್ಲಿಂದ ಪ್ರತಿಭಟನಾ ಮೆರವಣಿಗೆ ಮೂಲಕ ತೆರಳಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಈ ಘಟನೆ ಮಾನವೀಯ ಸಮಾಜ ತಲೆತಗ್ಗಿಸುವಂತೆ ಆಗಿದೆ. ಕಾಲೇಜಿನ ಸೆಮಿನಾರ್ ಹಾಲ್ ನಲ್ಲಿ ಅತ್ಯಾಚಾರ ಮಾಡುವ ಸ್ಥಿತಿಗೆ ವ್ಯಕ್ತಿಗಳು ಬಂದಿರುವುದಕ್ಕೆ ಮೂಲ ಕಾರಣ ಅಲ್ಲಿನ ರಾಜ್ಯ ಸರಕಾರ ಹಿಂದಿನ ಎಷ್ಟೋ ಪ್ರಕರಣದ ಆರೋಪಿಗಳಿಗೆ ಶಿಕ್ಷೆಯನ್ನು ವಿಧಿಸದೆ ಆರೋಪಿಗಳ ಬೆನ್ನಿಗೆ ನೀರವಾಗಿ ಮಮತಾ ಬ್ಯಾನರ್ಜಿ ಸರಕಾರ ನಿಂತಿರುವುದು ಹಲವು ಪ್ರಕರಣಗಳಲ್ಲಿ ಕಂಡು ಬಂದಿದೆ. ಇಂತಹ ಸರಕಾರಗಳ ನಡೆಯಿಂದ ಮತ್ತೆ ಮತ್ತೆ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳು ನಡೆಯುತ್ತಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕಳೆದ ಹಲವು ತಿಂಗಳುಗಳಿಂದ ಪಶ್ಚಿಮ ಬಂಗಾಳದಲ್ಲಿ ಮಹಿಳೆಯರ ಸುರಕ್ಷತೆಗೆ ಸಂಬಂಧಿಸಿದ ಘಟನೆಗಳು ನಡೆಯುತ್ತಿವೆ. ಪಶ್ಚಿಮ ಬಂಗಾಳದ ಮಮತಾ ಸರಕಾರವು ಇಂತಹ ದುಷ್ಕೃತ್ಯಗಳಲ್ಲಿ ತೊಡಗಿರುವ ಜನರನ್ನು ರಕ್ಷಿಸಲು ಪ್ರಯತ್ನಿಸುತ್ತಿದೆ. ಈ ಹಿಂದೆ ಟಿಎಂಸಿ ಗೂಂಡಾಗಳಿಂದ ಇಂತಹ ಅನೇಕ ಅತ್ಯಾಚಾರಗಳು ನಡೆದಿವೆ ಆದರೆ ಮಮತಾ ಸರಕಾರ ಅವರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರಲಿಲ್ಲ. ಬಂಗಾಳದಲ್ಲಿ ನಡೆಯುತ್ತಿರುವ ಈ ಘಟನೆಗಳು ಮಾನವೀಯತೆಗೆ ನಾಚಿಕೆಗೇಡು ಸಂಗತಿಯಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಎಬಿವಿಪಿ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಸಚಿನ ಹಿರೇಮಠ, ಜಿಲ್ಲಾ ಸಂಚಾಲಕ ಪ್ರಶಾಂತ ಶೆಲ್ಲಿಕೇರಿ, ನಗರ ಕಾರ್ಯದರ್ಶಿ ರೋಹಿತ್ ಅಳಕುಂಟೆ, ಕುಶಾಲ ಗೋಡಗೇರಿ, ಪ್ರೀತಮ್ ಉಪರಿ ಇದ್ದರು.

ವಾಹನ ನಿಲುಗಡೆಗೆ ಸೂಕ್ತ ವ್ಯವಸ್ಥೆ ಕಲ್ಪಿಸಲು ಸೂಚನೆ

ಹುಕ್ಕೇರಿ: ಬಸ್ ನಿಲ್ದಾಣ ಬಳಿ ಖಾಸಗಿ ವಾಹನಗಳು ಹಾಗೂ ಅಲ್ಲಿನ ವ್ಯಾಪಾರಸ್ಥರು ಅಕ್ರಮಿಸಿಕೊಂಡ ರಸ್ತೆಯಿಂದಜನರಿಗೆತೊಂದರೆಯಾಗುತ್ತಿದೆ. ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವೋ ಅಥವಾ ಖಾಸಗಿ ವಾಹನಗಳ ನಿಲ್ದಾಣವೋಎಂದು ತಿಳಿಯದಾಗಿದೆ.

ಖಾಸಗಿ ಬಸ್ ನಿಲ್ದಾಣದಿಂದ ಬೇರೆಡೆ ವಾಹನ ನಿಲುಗಡೆಗೆ ವ್ಯವಸ್ಥೆ ಕಲ್ಪಿಸಿ ಎಂದು ಶಾಸಕ ನಿಖಿಲ ಕತ್ತಿ ಸಿಪಿಐ ಮಹಾಂತೇಶ ಬಸ್ಸಾಪೂರ ಸೂಚಿಸಿದರು.

ಪಟ್ಟಣದ ಪಿಕಾರ್ಡ ಬ್ಯಾಂಕ್‌ದಲ್ಲಿ ಕ್ಷೇತ್ರದ ಜನರಕುಂದು ಕೊರತೆ ಸಭೆಯಲ್ಲಿ ಮಾತನಾಡಿದರು. ರಸ್ತೆ ಅತಿಕ್ರಮಿಸಿಕೊಂಡ ವ್ಯಾಪಾರಸ್ಥರ ಮೇಲೆ ಸೂಕ್ತ ಕ್ರಮಕೈಗೊಂಡು ಜನರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ತಾಕೀತು ಮಾಡಿದರು.

ಅತಿವೃಷ್ಟಿಯಿಂದ ಹಾಳಾದ ರಸ್ತೆ, ಶಿಥಿಲಾವಸ್ಥೆಯಲ್ಲಿರುವ ಶಾಲಾ ಕೊಠಡಿಗಳು ಸೇರಿದಂತೆ ತಾಲೂಕಿನಲ್ಲಿ ಆಗಬೇಕಾಗಿರುವ ಅಭಿವೃದ್ಧಿ ಕಾರ್ಯಗಳನ್ನು ಪಟ್ಟಿ ಮಾಡಿ ವಾರದೊಳಗೆ ತಲುಪಿಸುಬೇಕು ತಾಲೂಕಾಡಳಿತಕ್ಕೆ ತಿಳಿಸಿದರು. ಇತ್ತೀಚೆಗೆ ಸುರಿದ ಭಾರಿ ಮಳೆಯಿಂದ ಕ್ಷೇತ್ರದ ಬಹಳಷ್ಟು ರಸ್ತೆಗಳು ಹಾಳಾಗಿವೆ. ಸರಕಾರಿ ಕಟ್ಟಡಗಳು ಮತ್ತು ಶಾಲಾ ಕೊಠಡಿಗಳು ಸೋರುತ್ತಿವೆ. ಇಂತಹವುಗಳನ್ನು ಗುರುತಿಸಿ ಅವುಗಳ ದುರಸ್ತಿಗೆ ಬೇಕಾದ ವೆಚ್ಚ ತಿಳಿಸಬೇಕು ಎಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ತಾ.ಪಂ ಇ.ಒ ಟಿ.ಆರ್.ಮಲ್ಲಾಡದ, ಬಿ.ಇ.ಒ ಪ್ರಭಾವತಿ ಪಾಟೀಲ, ಸಿಪಿಐ ಮಹಾಂತೇಶ ಬಸ್ಸಾಪೂರೆ, ಜಿ.ಪಂಇಂಜನೀ ಯರಿಂಗ್ ವಿಭಾಗದ ಎ.ಇ.ಇ ಶಶಿಕಾಂತ ವಂದಾಳೆ, ಹಾಗೂ ಮುಖಂಡರು ಉಪಸ್ತಿತರಿದ್ದರು.

ರಾಯಣ್ಣ ಪುತ್ಥಳಿ ಅನಾವರಣ

ಮೂಡಲಗಿ: ನಮ್ಮ ರಾಷ್ಟ್ರೀಯ ಹಬ್ಬ ಸ್ವಾತಂತ್ರ್ಯೋತ್ಸವದ ದಿನದಂದು ಹುಟ್ಟಿ, ಗಣ ರಾಜ್ಯೋತ್ಸವದಂದು ಮರಣ ಹೊಂದಿದ ಸಂಗೊಳ್ಳಿ ರಾಯಣ್ಣನ ದೇಶಪ್ರೇಮ ಇಂದಿಗೂ, ಎಂದೆಂದಿಗೂ ಅಮರ ಎಂದು ಶಾಸಕ ಮತ್ತು ಬೆಮ್ಯುಲ್ ಅಧ್ಯಕ್ಷ ಬಾಲಚಂದ್ರ ಜಾರಕಿಹೊಳಿ ಅವರು ಹೇಳಿದರು.

ತಾಲೂಕಿನ ಕಲ್ಲೊಳ್ಳಿ ಪ.ಪಂ ಕಚೇರಿಯ ಹತ್ತಿರ ನಿರ್ಮಾಣಗೊಂಡ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಪುತ್ಥಳಿಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ರಾಯಣ್ಣನಂತಹ ಕೆಚ್ಚದೆಯ ಶೂರರ ಜೀವನವು ಪ್ರತಿಯೊಬ್ಬ ವ್ಯಕ್ತಿಗೂ ಮಾದರಿಯಾಗಿದೆ ಎಂದು ತಿಳಿಸಿದರು.

ಕಿತ್ತೂರು ಸಂಸ್ಥಾನ ಮತ್ತು ನಮ್ಮ ದೇಶದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ಬ್ರಿಟಿಷ್ ರ ವಿರುದ್ಧ ಹೋರಾಟ ಮಾಡಿದರು. ಕಿತ್ತೂರು ಚೆನ್ನಮ್ಮನ ಬಲಗೈ ಬಂಟನಾಗಿ ಸಂಸ್ಥಾನ ವನ್ನು ಉಳಿಸಿಕೊಳ್ಳಲು ಅಹೋ ರಾತ್ರಿ ವೀರಯೋಧನಂತೆ ಕ್ರಾಂತಿ ಮಾಡಿದ ನಮ್ಮ ರಾಯಣ್ಣನು ಇಡೀ ಮನುಕುಲದ ಆಸ್ತಿ. ರಾಯಣ್ಣನವರಂತಹ ರಾಷ್ಟ್ರ ಪ್ರೇಮಿಗಳ ನ್ನು ಕೇವಲ ಒಂದು ಸಮು ದಾಯಕ್ಕೆ ಸೀಮಿತಗೊಳಿಸಬೇಡಿ ಎಂದು ಅವರು ಹೇಳಿದರು.ಶಾಸಕ ಬಾಲ ಚಂದ್ರ ಜಾರಕಿ ಹೊಳಿ ಅವರನ್ನು ಸಮಾಜ ಬಾಂಧವರು ಕಂಬಳಿ ಹೊದಿಸಿ ಆತ್ಮೀಯ ವಾಗಿ ಸತ್ಕರಿಸಿದರು. ಕವಲಗುಡ್ಡದ ಅಮರೇಶ್ವರ ಮಹಾರಾಜ ರು ಈ ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದರು.

ವೈದ್ಯೆ ಹತ್ಯೆ ಖಂಡಿಸಿ ಮುಷ್ಕರ

ಅಥಣಿ: ಕಲ್ಕತ್ತಾದಲ್ಲಿ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಕೇಂದ್ರದ ವೈದ್ಯಕೀಯ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ವಿದ್ಯಾರ್ಥಿನಿಯ ಮೇಲೆ ಸಾಮೂಹಿಕ ಅತ್ಯಾಚಾರ ಹಾಗೂ ಕೊಲೆ ಪ್ರಕರಣವನ್ನು ಖಂಡಿಸಿ ಅಥಣಿ ಐಎಂಎ ವತಿಯಿಂದ ಮೇಣದಬತ್ತಿಯನ್ನು ಬೆಳಗಿಸಿ ವಿನೂತನ ರೀತಿಯಲ್ಲಿ ಪ್ರತಿಭಟನೆ ಮೆರವಣಿಗೆ ನಡೆಸಿದರು.

ಈ ವೇಳೆ ಪಟ್ಟಣದ ಹಿರಿಯ ವೈದ್ಯ ಡಾ. ಮಲ್ಲಿಕಾರ್ಜುನ ಹಂಜಿ ಮಾತನಾಡಿ ಕಲ್ಕತ್ತಾದಲ್ಲಿ ವೈದ್ಯಕೀಯ ಮಹಾವಿದ್ಯಾಲಯ ದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾ ರ್ಥಿನಿಯ ಮೇಲೆ ದುಷ್ಕರ್ಮಿಗಳು ಅತ್ಯಾ ಚಾರ ಮಾಡಿ ಕೊಲೆಗೈದಿದ್ದು ಅವಮಾನ ವೀಯ ಘಟನೆ. ಈ ದುಷ್ಕರ್ತ್ಯವನ್ನು ಅಥಣಿಯ ಎಲ್ಲಾ ವೈದ್ಯರು ಮತ್ತು ಐಎಸ್ಐ ವತಿಯಿಂದ ತೀವ್ರವಾಗಿ ಖಂಡಿಸುತ್ತೇವೆ. ಅಲ್ಲಿನ ಸರಕಾರ ಕೂಡಲೇ ಆರೋಪಿಯನ್ನ ಬಂಧಿಸಿ ಕಠಿಣ ಶಿಕ್ಷೆ ವಿಧಿಸಬೇಕು. ಅಲ್ಲಿ ವೈದ್ಯರು ಪ್ರತಿಭಟನೆಗೆ ಹೇಳಿದಾಗ ಅಲ್ಲಿನ ಸರಕಾರ ಅತ್ಯಾಚಾರಕ್ಕೆ ಸಂಬಂಧಿಸಿದ ಸಾಕ್ಷಿಗಳನ್ನ ನಾಶಪಡಿಸಿದೆ. ಈ ಘಟನೆಯನ್ನು ಸಿಬಿಐಗೆ ಒಪ್ಪಿಸಿ, ಸೂಕ್ತ ತನಿಖೆ ಕೈಕೊಳ್ಳಬೇಕು. ದೇಶದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಸರಕಾರ ಕಟ್ಟೆಚರ ವಹಿಸಬೇಕೆಂದು ಆಗ್ರಹಿಸಿದರು.

ಅಥಣಿ ಪಟ್ಟಣದಲ್ಲಿ ವೈದ್ಯರು ಕಲ್ಕತ್ತಾ ಘಟನೆಯನ ಖಂಡಿಸಿ ಮುಷ್ಕರ ನಡೆಸಿದರು.

ಪಟ್ಟಣದ ಬುಧವಾರ ಪೇಟದಿಂದ ಡಾ. ಬಿ ಆರ್ ಅಂಬೇಡ್ಕರ್ ವೃತ್ತದ ವರೆಗೆ ನಡೆದ ಮೆರವಣಿಗೆಯಲ್ಲಿ ಎಲ್ಲ ವೈದ್ಯರು, ಮತ್ತು ನರ್ಸಿಂಗ್ ವಿಭಾಗದ ವಿದ್ಯಾರ್ಥಿನಿಯರು ಕೈಯಲ್ಲಿ ಮೇಣದ ಬತ್ತಿಯನ್ನು ಹಿಡಿದು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಒತ್ತುವರಿ ಜಮೀನು ಅರಣ್ಯಾಧಿಕಾರಿಗಳ ಸ್ವಾಧೀನಕ್ಕೆ

ಕಾರ್ಯಾಚರಣೆಗೆ ಖಾಸಗಿಯವರ ಆಕ್ಷೇಪಣೆ | ನೊಂದ ಕುಟುಂಬಗಳಿಂದ ಕಣ್ಣೀರು

ರಾಯಬಾಗ: ಪಟ್ಟಣದ ಹೊರ ವಲಯದಲ್ಲಿರುವ ಅರಣ್ಯವನ್ನು ಕೆಲವು ಖಾಸಗಿಯವರು ಒತ್ತುವರಿ ಮಾಡಿಕೊಂಡು ಸಾಗುವಳಿ ಮಾಡಿಕೊಂಡಿದ್ದು, ಅರಣ್ಯ ಇಲಾಖೆಯ 35 ಜನರ ತಂಡ ಜೆಸಿಬಿ ಮುಖಾಂತರ ನೆಲಸಮ ಮಾಡಿ ಸ್ವಾಧೀನ ಪಡೆಯಲಾಗಿದೆ ಎಂದು ಅರಣ್ಯಾಧಿಕಾರಿ ಉಮೇಶ ಪ್ರಧಾನಿ ಹೇಳಿದರು.

ಕಾರ್ಯಾಚರಣೆಗೆ ಆಕ್ಷೇಪಣೆ ವ್ಯಕ್ತಪಡಿಸಿದ ಖಾಸಗಿಯವರಾದ ಸಂಜು ಸದಾಶಿವ ತರಾಳ ಇವರು ತಮ್ಮ ಸಂಕಟವನ್ನು ಹೇಳುತ್ತಾ ನಾವು ಎಷ್ಟೋ ವರ್ಷಗಳಿಂದ ನಮ್ಮ ಪೂರ್ವಜರು ಉಳುಮೆ ಮಾಡುವ ಭೂಮಿ ಈಗ ಏಕಾಏಕಿ ಜೆಸಿಬಿ ತಂದು ನಮ್ಮ ಜೀವನೋಪಾಯಕ್ಕೆ ಆಧಾರವಾಗಿದ್ದ ಬಿತ್ತಿದ ಬೆಳೆಯನ್ನೂ ಕೂಡಾ ನೋಡದೇ, ಸಾಗುವಳಿ ಮಾಡುತ್ತಿದ್ದ ಭೂಮಿಯನ್ನು ವಶಪಡಿಸಿಕೊಂಡರೆ ನಮ್ಮ ಕುಟುಂಬಗಳ ಸ್ಥಿತಿ ಅತಂತ್ರವಾಗುತ್ತದೆ. ನಮ್ಮ ಜಾನುವಾರುಗಳಿಗೆ ಮೇವಿಲ್ಲದೇ ಬಿಸಿಲು ಮಳೆಯಲ್ಲಿ ಆಶ್ರಯವಿಲ್ಲದೇ ತೊಂದರೆ ಅನುಭವಿಸಬೇಕಾಗುತ್ತದೆ. ಜಾನುವಾರುಗಳ ಸೆಡ್ಡಗಳನ್ನೂ ಕೂಡಾ ನಾಶಪಡಿಸಿದ್ದೀರಿ. ನಮಗೆ ಮುಂದೇನು ಎಂಬ ಚಿಂತೆಯಲ್ಲಿ ದಿನ ಕಳೆಯುವಂತಾಗಿದೆ ಎಂದು ನೊಂದ ಕುಟುಂಬಗಳು ಕಣ್ಣಿರು ಹಾಕುವಂತಾಗಿದೆ. ನಮಗೆ ನ್ಯಾಯಾಲಯಕ್ಕೆ ಹೋಗಲು ಅವಕಾಶ ಮಾಡಿಕೊಡಿ. ಇಲ್ಲವಾದರೆ ನಮಗೆ ನ್ಯಾಯ ದೊರಕಿಸಿಕೊಡಿ ಎಂದು ಪರಿಪರಿಯಾಗಿ ಬೇಡಿಕೊಂಡರೂ ಕರುಣೆ ಇಲ್ಲದೇ ಕಾರ್ಯಾಚರಣೆ ನಿಲ್ಲಿಸದೇ ಅಮಾನವೀಯವಾಗಿ ನಡೆದುಕೊಂಡಿದ್ದಾರೆ. ಒಂದೇ ದಿನ ಮುಂಚಿತವಾಗಿ ನೋಟಿಸ ನಮಗೆ ದೊರಕಿದೆ. ನ್ಯಾಯಾಲಯಕ್ಕೆ ಹೋಗಿ ತಡೆಯಾಜ್ಞೆ ತರಲು ನಮಗೆ ಅವಕಾಶವೇ ಸಿಕ್ಕಿಲ್ಲ. ನಮಗೀಗ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಳ್ಳುವದೊಂದೇ ದಾರಿ ಎಂದು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಪಟ್ಟಣದ ಹೊರವಲಯದಲ್ಲಿ ತೆರವುಗೊಳಿಸುತ್ತಿರುವ ಜಮೀನು.

ಕಾರ್ಯಾಚರಣೆಯಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಾಗರಾಜ ಭೀಮಗೋಳ, ರಾಮದುರ್ಗ ಸಹಾಯಕ ಅರಣ್ಯಾಧಿಕಾರಿ ವಾಸಿಂ ಟಿ. ಹಾಗೂ ಚಿಕ್ಕೋಡಿ, ಅಥಣಿ ಅರಣ್ಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ತೆರವು ಕಾಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸಂತ್ರಸ್ತರಾದ ರವಿ ತರಾಳ, ಸಂಜು ತರಾಳ ರೇಖಾ ತರಾಳ, ವೈಶಾಲಿ ತರಾಳ, ಲಲಿತಾ ತರಾಳ, ಸುಶೀಲಾ ತರಾಳ, ಕಲಾವತಿ ತರಾಳ, ವಿನಯ, ಸಂದೀಪ ಸಾಯಿ, ಶ್ರೀಧರ ತರಾಳ ಗಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

30 ವರ್ಷ ನಿರಂತರ ಸೇವೆ | 500ಕ್ಕೂ ಅಧಿಕ ಟೂರ್ಸ್ | ಜನ ವಿಶ್ವಾಸ ಗಳಿಸಿದ ಸಂಸ್ಥೆ

ಒತ್ತಡ ಬಿಡಿ, ಅಡಿಗಾಸ್ ಜತೆ ಪ್ರವಾಸ ಮಾಡಿ

ಬೆಂಗಳೂರು: ಸತತ ಪಯತ್ನ, ಕಠಿಣ ಪರಿಶ್ರಮ ಹಾಗೂ ಹೊಸತನ್ನು ಅಳವಡಿಸಿಕೊಂಡು ಅದನ್ನು ಜಾರಿಗೊಳಿಸುವುದು ಪ್ರತಿ ಉದ್ಯಮದ ಯಶಸ್ಸಿನ ಕೀಲಿ ಕೈ. ಅದರಲ್ಲೂ, ಮಾಹಿತಿ ತಂತ್ರಜ್ಞಾನದ ಈ ಯುಗದಲ್ಲಿ, ದಿನಕ್ಕೊಂದು ಹೊಸ ಆವಿಷ್ಕಾರಾದ ಪರ್ವಕಾಲದಲ್ಲಿ, ನಿರಂತರವಾಗಿ, ವಿಭಿನ್ನವಾಗಿ ಯೋಜನೆಗಳನ್ನು ಮೈಗೂ ಡಿಸಿಕೊಂಡು ಅವುಗಳ ಅನುಷ್ಠಾನದಲ್ಲಿ ಶಿಸ್ತಿನಿಂದ ಶ್ರಮಿಸುವುದು ಅತೀ ಅಗತ್ಯ. ಅಂತಹ ಉದ್ಯಮಗಳಲ್ಲಿ ಮುಂಚೂಣಿಯಲ್ಲಿ ನಿಲ್ಲಬಲ್ಲ ಸಂಸ್ಥೆಗಳಲ್ಲೊಂದು ಶ್ರೀಯುತ ಕೆ. ನಾಗರಾಜ್ ಅಡಿಗರ ಕನಸಿನ ಕೂಸು ಅಡಿಗಾಸ್ ಯಾತ್ರಾ,

Adigas yatra®
For Your all Travel Needs...

ಅಡಿಗಾಸ್ ವರ್ಲ್ಡ್ ಸಂಸ್ಥೆ. ಈ ಸಂಸ್ಥೆಗೀಗ 30 ರ ಹರೆಯ. ನಡೆದು ಬಂದ ದಾರಿ, ಎದುರಿಸಿದ ಸವಾಲುಗಳು ಲೆಕ್ಕವಿಲ್ಲದಷ್ಟು.

ವಿಶ್ವಾಸ ಮತ್ತು ನಂಬಿಕೆ ಎಂಬ ಎರಡು ಆಧಾರ ಸ್ಥಂಬಗಳ ಮೇಲೆ ನಿಂತಿರುವ ಪ್ರವಾಸೋದ್ಯಮ ಕ್ಷೇತ್ರದಲ್ಲಿ 30 ವರ್ಷಗಳಿಂದ ತೊಡಗಿಸಿಕೊಂಡಿರುವ ಅಡಿಗಾಸ್ ಸಂಸ್ಥೆ ಅಪಾರ ಜನ ಮನ್ನಣೆಯನ್ನು ಗಳಿಸಿದೆ. ಹಾದಿ ಬೀದಿ ಗೊಂದರಂತೆ ದಿನವೂ ಆರಂಭವಾಗಿ ಮುಚ್ಚಿ ಹೋಗುವ ನೂರಾರು ಟೂರ್ ಆಪರೇಟರ್ ಗಳ ಮಧ್ಯೆ ಅಡಿಗಾಸ್ ಸಂಸ್ಥೆ ತನ್ನದೇ ಛಾಪನ್ನು ಮೂಡಿಸಿ ಯಶಸ್ವಿಯಾಗಿ ಮುನ್ನಡೆದಿದೆ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಹಲವಾರು ಪ್ರಶಸ್ತಿಗಳು ಸಂಸ್ಥೆಯ ಮುಡಿಗೇರಿದೆ. ಭಾರತ ಸರಕಾರದ ಪ್ರವಾಸೋದ್ಯಮ ಸಚಿವಾಲಯದ ಅನುಭವಿ ಸೇವಾ ಪೂರೈಕೆದಾರ , ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯಿಂದ ಮಾನ್ಯತೆ, ಸತತ 4 ವರ್ಷಗಳಿಂದ ಅತ್ಯುತ್ತಮ ಪ್ರವಾಸಿ ಸಂಸ್ಥೆ ಎಂಬ ಹೆಗ್ಗಳಿಕೆ ಮತ್ತು ಪ್ರಶಸ್ತಿ, ಇಕನಾಮಿಕ್ಸ್ ಟೈಮ್ಸ್ ನಿಂದ ಉತ್ತಮ ಪ್ರವಾಸಿ ಸಂಸ್ಥೆ ಎಂಬ ಪ್ರಶಸ್ತಿ ಹೀಗೆ ಹತ್ತು ಹಲವಾರು, ಸಂಸ್ಥೆಯ ಯಶಸ್ಸಿಗೆ ಹಿಡಿದ ಕೈಗನ್ನಡಿ.

ಉತ್ತಮ ಮೂಲ ಸೌಲಭ್ಯ

ಯಾವುದೇ ರೀತಿಯ home ಸಿಕ್ ಭಾವನೆ ಪ್ರವಾಸಿಗರಿಗೆ ಕಾಡುವುದಿಲ್ಲ. ವಿಶ್ವದರ್ಜೆಯ ಹೆಸರಾಂತ ಹೋಟೆಲ್ ಗಳಲ್ಲಿ ವಾಸ್ತವ್ಯ, ಸುಖಾಸೀನ, ಐಷಾರಾಮಿ ಬಸ್ ಗಳಲ್ಲಿ ಪ್ರಯಾಣ, ಕನ್ನಡ ಬಲ್ಲ ಅನುಭವಿ ಟೂರ್ ಮ್ಯಾನೇಜರ್, ಭಾರತೀಯ ರೆಸ್ಟೋರೆಂಟ್ ಗಳಲ್ಲಿ ಮೊದಲೇ ಕಾದಿರಿಸಿದ ಉತ್ತಮ ಊಟ ಉಪಾಹಾರಗಳು ಇವೆಲ್ಲಾ ಪ್ರವಾಸಿಗರನ್ನು ಸೆಳೆಯುವಲ್ಲಿ ಯಶಸ್ವಿಯಾಗಿದೆ.

ಪ್ರವಾಸಿಗರಿಂದ ಮೆಚ್ಚುಗೆ ಗಳಿಸಿದ ಸಂಸ್ಥೆ

ಪ್ರತಿಯೊಬ್ಬ ಪ್ರವಾಸಿಗನೂ ಕಡ್ಡಾಯ ವಾಗಿ ಪಾವತಿಸಬೇಕಾದ ಡ್ರೈವರ್ ಟಿಪ್ಸ್, ಗೈಡ್ ಚಾರ್ಜಸ್, ಟ್ರಾವೆಲ್ ಇನ್ಸೂರೆನ್ಸ್, ವೀಸಾ ಎಲ್ಲವೂ ಒಳ ಗೊಂಡ ಪ್ರವಾಸ ಮತ್ತು ವಿಶ್ವ ವಿಖ್ಯಾ ತ ಪ್ರವಾಸಿ ತಾಣಗಳಿಗೆ ಯಾವುದೇ ಹೆಚ್ಚುವರಿ ಶುಲ್ಕವ ನ್ನೂ ಸಂಸ್ಥೆ ವಿಧಿ ಸದೇ ಪ್ರವಾಸಿಗರ ಮೆಚ್ಚುಗೆಯನ್ನು ಗಳಿಸಿದೆ.

ವಿದೇಶಿ ಪ್ರವಾಸಕ್ಕೆ ಅಡಿಗಾಸ್ ಮೊದಲ ಆಯ್ಕೆ

ಅಡಿಗಾಸ್ ಸಂಸ್ಥೆಯು ಪ್ರವಾಸಿಗರ,ಯಾತ್ರಿಕರ ಅಭಿರುಚಿ ಹಾಗೂ ಬೇಡಿಕೆಗೆ ಅನುಗುಣವಾಗಿ 500ಕ್ಕೂ ಹೆಚ್ಚು ಪ್ರವಾಸಗಳನ್ನು ದೇಶಿಯ, ಅಂತಾರಾಷ್ಟ್ರೀಯ, ಗ್ರಾಹಕಾನುಕೂಲಿತ ಹಾಗೂ ಮಧುಚಂದ್ರ ಪ್ರವಾಸಗಳು ಯೋಜಿಸಿದೆ. ಅಂತಾರಾಷ್ಟ್ರೀಯ ಪ್ರವಾಸಗಳಲ್ಲಿ ಯುರೋಪ್, ಯುಕೆ, ಆಸ್ಟ್ರೇಲಿಯಾ, ದುಬೈ, ಇಂಡೋನೇಷಿಯಾ, ಸಿಂಗಾಪುರ್, ಮಲೇಷಿಯಾ, ಥೈಲ್ಯಾಂಡ್, ಬಾಲಿ, ಶ್ರೀಲಂಕಾ, ನೇಪಾಳ ಮತ್ತು ಭೂತಾನ್ ಪ್ರವಾಸಗಳು ಅಪಾರ ಜನ ಮನ್ನಣೆಯನ್ನು ಗಳಿಸಿವೆ. ಬಹುತೇಕ ಪ್ರವಾಸಿಗರಿಗೆ ವಿದೇಶಿ ಪ್ರವಾಸಕ್ಕೆ ಅಡಿಗಾಸ್ ಮೊದಲ ಆಯ್ಕೆ ಯಾಗಿರುತ್ತದೆ. ಅದಕ್ಕೆ ಕಾರಣಗಳು ಹಲವಾರು. ಸಹ ಪ್ರಯಾಣಿಕರು ಕರ್ನಾಟಕದವರೇ ಆಗಿದ್ದು, ಅವರ ಆಚಾರ ವಿಚಾರ, ಭಾಷೆ, ಸಂಸ್ಕೃತಿ ಹಾಗೂ ಉಟೋಪಹಾರದಲ್ಲಿ ಸಾಮ್ಯತೆ ಇರುವುದರಿಂದ ಪ್ರವಾಸವೂ ಯಶಸ್ವಿಯಾಗುತ್ತದೆ.

ಸಂಪರ್ಕಿಸಬೇಕಾದ ವಿಳಾಸಗಳು

- ಬೆಂಗಳೂರು: 9449478944
- ಬಸವನಗುಡಿ: 144 ದುರ್ಗಾ ಮ್ಯಾನ್ಷನ್ ಡಿ.ವಿ.ಜಿ.ರಸ್ತೆ, ಬಸವನಗುಡಿ-080-26616678, 7022259008
- ಮಲ್ಲೇಶ್ವರಂ: 1ನೇ ಮುಖ್ಯ, ಸಂಪಿಗೆ ರಸ್ತೆ 080-23346678, 7022259003
- ರಾಜರಾಜೇಶ್ವರಿ ನಗರ: ಬಿಡಿಎ ಶಾಪಿಂಗ್ ಕಾಂಪ್ಲೆಕ್ಸ್ ಕೆಂಚನಹಳ್ಳಿ ಮುಖ್ಯರಸ್ತೆ: 08026696678 7483366378
- 7483366378 ವಿಜಯನಗರ: ಕೆಎಸ್‌ಎಸ್ ಬಿಲ್ಡಿಂಗ್ ಹೊಸಹಳ್ಳಿ ಮೆಟ್ರೋ ಸ್ಟೇಶನ್ ಹತ್ತಿರ 080-23356678, 7022259002
- ಹಾಸನ: ಖಾದಿ ಭವನ ಬಸ್‌ಸ್ಟ್ಯಾಂಡ್ ರೋಡ್ 08172261888, 8884679122
- ಹುಬ್ಬಳ್ಳಿ: 0836-4258944, 7022259001

ಸಮಾಚಾರ ಸಣ್ಣದಲ್ಲ

ವೈದ್ಯ ಸಿಬ್ಬಂದಿ ರಕ್ಷಣೆ ಕಾಯ್ದೆಯಲ್ಲಿ ತಿದ್ದುಪಡಿ

ಮಂಗಳೂರು: ವೈದ್ಯರು, ನರ್ಸ್, ವೈದ್ಯಕೀಯ ಸಿಬ್ಬಂದಿಗೆ ರಕ್ಷಣೆ ಒದಗಿಸುವ ನಿಟ್ಟಿನಲ್ಲಿ ಕಾಯ್ದೆಯಲ್ಲಿ ತಿದ್ದುಪಡಿ ತರಲಾಗಿದ್ದು, ರಾಜ್ಯಪಾಲರ ಅಂಕಿತ ಬಾಕಿ ಇದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್

ಹೇಳಿ ದರು. ಕೋಲ್ಕತ್ತದಲ್ಲಿ ವೈದ್ಯ ವಿದ್ಯಾರ್ಥಿನಿ ಮೇಲೆ ನಡೆದಿರುವ ಅತ್ಯಾಚಾರ ಘಟನೆ ಆತಂಕ ಮೂಡಿಸಿದೆ. ಈ ಕಾರಣಕ್ಕೆ ವೈದ್ಯರು ಮುಷ್ಕರ ನಡೆಸುತ್ತಿರುವುದರಿಂದ ಸ್ವಲ್ಪ ಮಟ್ಟಿಗೆ ಸಾರ್ವಜನಿಕರಿಗೆ ತೊಂದರೆಯಾಗಬಹುದು. ಆದರೆ ಎಲ್ಲ ತುರ್ತು ಸೇವೆಗಳು ಲಭ್ಯ ಇರುತ್ತವೆ ಎಂದರು. ವೈದ್ಯರು, ಆಸ್ಪತ್ರೆ ಸಿಬ್ಬಂದಿ ರಾತ್ರಿಯಿಡೀ ಕೆಲಸ ಮಾಡುತ್ತಾರೆ. ಮಹಿಳಾ ಸಿಬ್ಬಂದಿ ಕೂಡ ಇರುತ್ತಾರೆ. ಎಲ್ಲರ ಸುರಕ್ಷತೆಯೂ ಮುಖ್ಯವಾಗಿದೆ. ಸುರಕ್ಷತೆ ಎನ್ನುವುದು ಆಸ್ಪತ್ರೆ ನಡೆಸುವವರ ಜವಾಬ್ದಾರಿಯೂ ಆಗಿದೆ. ಆಸ್ಪತ್ರೆ ವೈದ್ಯರು, ನರ್ಸ್, ಸಿಬ್ಬಂದಿ ಸುರಕ್ಷತೆಗೆ ಚರ್ಚಿಸಲು ಮಂಗಳವಾರ ಎಲ್ಲ ಆಸ್ಪತ್ರೆಗಳ ಮುಖ್ಯಸ್ಥರ ಸಭೆ ಕರೆಯಲಾಗಿದೆ ಎಂದರು.

68 ಸಾವಿರಕ್ಕೂ ಹೆಚ್ಚು ಜನರಿಗೆ 'ಆಶಾಕಿರಣ'

ಹಾವೇರಿ: ದೃಷ್ಟಿದೋಷದಿಂದ ಬಳಲುತ್ತಿರುವ ಮಕ್ಕಳು ಹಾಗೂ ವಯಸ್ಕರನ್ನು ತಪಾಸಣೆಗೆ ಒಳಪಡಿಸಿ ಉಚಿತವಾಗಿ ಕನ್ನಡಕ ವಿತರಿಸುವ ಆಶಾಕಿರಣ ಯೋಜನೆಗೆ ಜಿಲ್ಲೆಯ ಜನರಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಯೋಜನೆ ಜಾರಿಯಾದ ದಿನದಿಂದ ಇದುವರೆಗೂ 68,075 ಮಂದಿಗೆ ಉಚಿತವಾಗಿ ಕನ್ನಡಕ ವಿತರಿಸಲಾಗಿದೆ. ಜಿಲ್ಲೆಯ ಮಕ್ಕಳು ಹಾಗೂ ಹಿರಿಯ ನಾಗರಿಕರು ದೃಷ್ಟಿದೋಷದಿಂದ ಬಳಲುತ್ತಿದ್ದ ಪ್ರಕರಣಗಳು ಹೆಚ್ಚಾಗಿ ವರದಿಯಾಗುತ್ತಿದ್ದವು. ಜನರ ಕಣ್ಣುಗಳ ತಪಾಸಣೆ ಹಾಗೂ ಅಂಧತ್ವ ನಿವಾರಣೆ ಉದ್ದೇಶದಿಂದ ಕೇಂದ್ರ ಸರ್ಕಾರದ ಸಹಯೋಗದಲ್ಲಿ ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಅಭಿಯಾನದಡಿ 2023ರ ಆಗಸ್ಟ್‌ನಲ್ಲಿ ಆಶಾಕಿರಣ' ಯೋಜನೆ ಜಾರಿ ಮಾಡಲಾಗಿತ್ತು.

ತುಂಗಭದ್ರಾ ಅಣೆಕಟ್ಟು ಈಗ ಭದ್ರ

19ನೇ ಕ್ರಸ್ಟ್ ಗೇಟ್‌ನಲ್ಲಿ 2ನೇ ಎಲಿಮೆಂಟ್ ಅಳವಡಿಸುವಲ್ಲಿ ಯಶಸ್ವಿ

ಹೊಸಪೇಟೆ: ತಾಲ್ಲೂಕಿನ ಮುನಿರಾಬಾದ್‌ನಲ್ಲಿರುವ ತುಂಗಭದ್ರಾ ಜಲಾಶಯದಲ್ಲಿ ಕೊಚ್ಚಿ ಹೋಗಿರುವ 19ನೇ ಕ್ರಸ್ಟ್ ಗೇಟ್ ಸ್ಥಳದಲ್ಲಿ ಎರಡನೇ ಎಲಿಮೆಂಟ್ ಅಳವಡಿಕೆ ಕಾರ್ಯ ಯಶಸ್ವಿಯಾಗಿ ಮುಗಿದಿದೆ.

ರಭಸವಾಗಿ ಹರಿಯುತ್ತಿರುವ ನೀರಿನ ನಡುವೆಯೂ ಶನಿವಾರ ಕಾರ್ಯಾಚರಣೆ ನಡೆಸಿದ ಸಿಬ್ಬಂದಿ ಎರಡು ಬೃಹತ್ ಕ್ರೇನ್‌ಗಳ ನೆರವಿನಿಂದ ಎರಡನೇ ಎಲಿಮೆಂಟ್ ಅಳವಡಿಕೆ ಮಾಡಿದರು.

- 4 ಅಡಿ ಎತ್ತರದ ಎಲಿಮೆಂಟ್‌ಗಳ ಜೋಡಣೆ
- ಶುಕ್ರವಾರ ರಾತ್ರಿ ಅಳವಡಿಸಿದ್ದ ಮೊದಲ ಎಲಿಮೆಂಟ್
- ಶನಿವಾರ 3.10ಕ್ಕೆ ಕೆಲಸ ಮುಕ್ತಾಯ

ನಾಲ್ಕು ಅಡಿ ಎತ್ತರದ ಒಟ್ಟು ಐದು ಎಲಿಮೆಂಟ್ ಅಳವಡಿಕೆ ಮಾಡಲಾಗುತ್ತಿದ್ದು, ಶುಕ್ರವಾರ ರಾತ್ರಿ ಮೊದಲ ಎಲಿಮೆಂಟ್ ಅಳವಡಿಕೆಯಾಗಿತ್ತು. ಜಲಾಶಯ ಗೇಟ್ ಹಾಗೂ ಸುರಕ್ಷತಾ ತಜ್ಞ ಕನ್ನಯ್ಯನಾಯ್ಡು ನೇತೃತ್ವದಲ್ಲಿ ಮೊದಲ ಕಾರ್ಯಾಚರಣೆ ನಡೆದಿತ್ತು.

ಶನಿವಾರ ಮಧ್ಯಾಹ್ನ 1.50ರ ಸುಮಾರಿಗೆ ಆರಂಭವಾದ ಎರಡನೇ ಎಲಿಮೆಂಟ್ ಆಳವಡಿಕೆ ಕಾರ್ಯ 3.10ಕ್ಕೆ ಮುಕ್ತಾಯವಾಯಿತು. ಇನ್ನು ಮೂರು ಎಲಿಮೆಂಟ್ ಅಳವಡಿಕೆ ಕಾರ್ಯ ಬಾಕಿ ಉಳಿದಿದೆ. ಕಳೆದ ಶನಿವಾರ ರಾತ್ರಿ ಗೇಟ್ ಕೊಚ್ಚಿ ಹೋಗಿ ಅಪಾರ ಪ್ರಮಾಣದ ನೀರು ಪೋಲಾಗಿದೆ.

ತುಂಗಭದ್ರಾ ಜಲಾಶಯಕ್ಕೆ ಒಟ್ಟು 32 ಕ್ರಸ್ಟ್ ಗೇಟ್ ಗಳಿದ್ದು ಎರಡನೇ ಎಲಿಮೆಂಟ್ ಅಳವಡಿಸುವಾಗ 24 ಗೇಟ್ ಮೂಲಕ ನೀರು ಹರಿಸಲಾಗುತ್ತಿತ್ತು. ಹಂತಹಂತವಾಗಿ ಒಂದೊಂದೇ ಗೇಟ್ ಬಂದ್ ಮಾಡಿ ಹೊಸ ಎಲಿಮೆಂಟ್ ಮೇಲೆ ಹೆಚ್ಚು ನೀರು ಹರಿಸಲಾಯಿತು. ಈ ಎಲಿಮೆಂಟ್ ಶಕ್ತಿ ಪರೀಕ್ಷೆಗೆ ಇದೇ ರೀತಿಯ ಪ್ರಯೋಗ ಮಾಡಲಾಗುತ್ತದೆ ಎಂದು ಟಿ.ಬಿ. ಮಂಡಳಿ ಅಧಿಕಾರಿಯೊಬ್ಬರು ತಿಳಿಸಿದರು.

ಈ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದ ಸಾಧ್ಯವಾದಷ್ಟು ನೀರು ಜಲಾಶಯದಲ್ಲಿಯೇ ಉಳಿಸಿ ಗೇಟ್ ಅಳವಡಿಕೆ ಕಾರ್ಯ ನಡೆಸಿದ್ದೇವೆ. ಮಲೆನಾಡಿನ ಭಾಗದಲ್ಲಿ ಉತ್ತಮ ಮಳೆಯಾಗಲಿದ್ದು ಕೆಲವೇ ದಿನಗಳಲ್ಲಿ ಜಲಾಶಯ ಮರಳಿ ಭರ್ತಿಯಾಗುವ ವಿಶ್ವಾಸವಿದೆ. ನೀರು ರಭಸವಾಗಿ ಹರಿಯುವಾಗಲೇ ಎಲಿಮೆಂಟ್ ಅಳವಡಿಕೆ ಕಾರ್ಯದಲ್ಲಿ ಯಶಸ್ಸು ಪಡೆದಿದ್ದೇವೆ.

ಸಿದ್ಧವಾಗುವ ತನಕ!

ಈಗಾಗಲೇ 30 ಟಿಎಂಸಿ ನೀರು ಉಳಿಸಿದ್ದೇನೆ, 90 ಟಿಎಂಸಿ ಅಡಿ ನೀರು ನಿಶ್ಚಿತವಾಗಿ ಸಿಗುತ್ತದೆ ಎಂದು ಕ್ರಸ್ಟ್ ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರೈತರು ಆತಂಕಪಡಬಾರದು, ಇನ್ನುಮುಂದೆ 90 ಟಿಎಂಸಿ ಅಡಿ ನೀರು ಸಂಗ್ರಹಕ್ಕೆ ಯಾವುದೇ ತೊಂದರೆ ಇಲ್ಲ ಎಂದರು. ಬಾಕಿ ಉಳಿದ ಗೇಟ್‌ಗಳ ಅಳವಡಿಕೆ ಸೋಮವಾರ ಪೂರ್ಣಗೊಳ್ಳಲಿದೆ, ಇದು ಸ್ಟಾಪ್ ಲಾಗ್ ಗೇಟ್ ಅಲ್ಲ, ಇದು ಸ್ಟಾಪ್ ಲಾಗ್ ಅಷ್ಟೇ. ಅಂದರೆ ತಾತ್ಕಾಲಿಕ ತಡೆಗೋಡೆ ರೀತಿಯ ಗೇಟ್ ಅಷ್ಟೇ ಎಂದರು. ಮುಂದೆ ಕ್ರಸ್ಟ್ ಗೇಟ್ ಸಿದ್ಧವಾಗುವ ತನಕ ಇದು ಸಮರ್ಥವಾಗಿ ನೀರು ತಡೆಹಿಡಿಯುತ್ತದೆ, ಆದರೆ ಅಣೆಕಟ್ಟೆಯ ನೀರಿನ ನಿರ್ವಹಣೆಗಾಗಿ ಕ್ರೆಸ್ಟ್ ಗೇಟ್ ಸಜ್ಜುಗೊಳಿಸುವಂತೆ ಶಿಫಾರಸು ಮಾಡಿ ವರದಿ ನೀಡುತ್ತೇನೆ ಎಂದರು.

ಸರಕಾರದಿಂದ ಗೇಟ್‌ಗಳ ವಿನ್ಯಾಸ ತರಿಸಿಕೊಳ್ಳುತ್ತಿದ್ದರೆ ಕೆಲಸ ಇನ್ನೂ ಆರಂಭವಾಗುತ್ತಿರಲಿಲ್ಲ, ನಮ್ಮ ಬಳಿ ವಿನ್ಯಾಸದ ಬಗ್ಗೆ ನಿಖರ ಮಾಹಿತಿ ಇತ್ತು. ಹೀಗಾಗಿ ಕೆಲವೇ ಗಂಟೆಗಳಲ್ಲಿ ವಿನ್ಯಾಸ ಸಿದ್ಧಗೊಳಿಸಿ ಮೂರು ಕಂಪನಿಗಳಿಂದ ಗೇಟ್ ಸಿದ್ಧಪಡಿಸುವ ಕೆಲಸ ನಡೆಯಿತು.

-ಕನ್ನಯ್ಯ ನಾಯ್ಡು ಕ್ರಸ್ಟ್‌ಗೇಟ್ ತಜ್ಞ

ಜಲಾಶಯ	ಗರಿಷ್ಠ ಮಟ್ಟ	ಇಂದಿನ ಮಟ್ಟ	ಒಳಹರಿವು
ಕೆಆರ್‌ಎಸ್	124.80	123.20	16625
ಕಬಿನಿ	2284	2282.27	4509
ಹಾರಂಗಿ	2859	2857.55	2786
ಹೇಮಾವತಿ	2922	2921.45	10348
ತುಂಗಭದ್ರಾ	1633	1623.32	44721
ಆಲಮಟ್ಟಿ	1704.81	1704.70	22432
ನಾರಾಯಣಪುರ	1615	1614.78	14675
ಲಿಂಗನಮಕ್ಕಿ	1819.12	1816.90	9249

ಕಾರ್ಮಿಕರಿಗೆ ₹2 ಲಕ್ಷ ಬಹುಮಾನ

ಹೊಸಪೇಟೆ: ತುಂಗಭದ್ರಾ ಜಲಾಶಯಕ್ಕೆ ಗೇಟ್ ಅಳವಡಿಕೆ ಕಾರ್ಯಾಚರಣೆಯಲ್ಲಿ ಜೀವದ ಹಂಗು ತೊರೆದು ಕೆಲಸ ಮಾಡಿದ ಕಾರ್ಮಿಕರಿಗೆ ಕೊಪ್ಪಳ ಸಂಸದ ಕೆ. ರಾಜಶೇಖರ ಹಿಟ್ನಾಳ 2 ಲಕ್ಷ ರು. ಬಹುಮಾನ ನೀಡಿದರು. ಅಣೆಕಟ್ಟೆಯ ಸೇತುವೆ ಮೇಲೆ ತೆರಳಿ ಎಲ್ಲ ಸಿಬ್ಬಂದಿಯನ್ನು ಅಭಿನಂದಿಸಿದ ಅವರು ಬಹುಮಾನದ ಮೊತ್ತ ನೀಡಿ ದರು. ಎಲ್ಲ ಅಧಿಕಾರಿಗಳು ಕಾಳಜಿ ವಹಿಸಿ ಕಾರ್ಯಾಚರಣೆ ಯಶಸ್ವಿ ಯಾಗಲು ಕಾರಣರಾಗಿದ್ದಾರೆ. ಸಂಘಟಿತವಾಗಿ ಕೆಲಸ ಮಾಡಿದ್ದಕ್ಕೆ ಯಶಸ್ಸು ಸಾಧ್ಯವಾಗಿದೆ ಎಂದು ರಾಜಶೇಖರ ಹೇಳಿದರು.

ಗವರ್ನಮೆಂಟ್ vs ಗವರ್ನರ್

← ಮೊದಲಪುಟದಿಂದ

ತಜ್ಞರ ಜತೆ ಚರ್ಚಿಸಿದ ಬೆನ್ನಲ್ಲೇ, ವಿಶೇಷ ಸಚಿವ ಸಂಪುಟ ಸಭೆ ಕರೆದು ರಾಜ್ಯಪಾಲರ ನಡೆಯ ವಿರುದ್ಧ ಖಂಡನಾ ನಿರ್ಣಯ ತೆಗೆದುಕೊಳ್ಳಲು ತೀರ್ಮಾನಿಸಲಾಗಿತ್ತು. ಆದರೆ ಅದಾದ ಬಳಿಕ, ಸಂಪುಟವನ್ನು ರದ್ದುಗೊಳಿಸಲಾಯಿತು. ಆದರೆ ಸಂಜೆ ವೇಳೆಗೆ ಮುಖ್ಯಮಂತ್ರಿ ನೇತೃತ್ವದಲ್ಲಿಯೇ ಸಭೆ ನಡೆಸಲಾಯಿತು.

ಸಿಎಂ ರಾಜೀನಾಮೆಗೆ ಪ್ರತಿಪಕ್ಷ ಆಗ್ರಹ: ರಾಜ್ಯಪಾಲರಿಂದ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡುತ್ತಿದ್ದಂತೆ ಬಿಜೆಪಿ-ಜೆಡಿಎಸ್ ನಾಯಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹ ಹೆಚ್ಚಿಸಿದ್ದಾರೆ. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಕೇಂದ್ರ ಸಚಿವ ಕುಮಾರಸ್ವಾಮಿ, ಪ್ರತಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಹಲವು ನಾಯಕರು ಮುಖ್ಯಮಂತ್ರಿಗಳ ವಿರುದ್ಧ ಅಭಿಯೋಜನೆಗೆ ಅವಕಾಶ ರಾಜ್ಯಪಾಲರು ಅವಕಾಶ ಆದೇಶ ನೀಡಿದ್ದಾರೆ. ಆದ್ದರಿಂದ ಕೂಡಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ರಾಜ್ಯಾದ್ಯಂತ ಪ್ರತಿಭಟನೆ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಆದೇಶ ನೀಡುತ್ತಿದ್ದಂತೆ, ರಾಜ್ಯದ ಹಲವು ಭಾಗದಲ್ಲಿ ಪ್ರತಿಭಟನೆ ಆರಂಭವಾಗಿದೆ. ಇದರೊಂದಿಗೆ ಕುರುಬ ಸಮುದಾಯ ಸೇರಿದಂತೆ ವಿವಿಧ ಹಿಂದುಳಿದ ಸಮುದಾಯ ಮಠಗಳು ಮುಖ್ಯಮಂತ್ರಿಗಳ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅವಕಾಶ ನೀಡಿರುವುದನ್ನು ಖಂಡಿಸಿ ಖಂಡನಾ ನಿರ್ಣಯವನ್ನು ಕೈಗೊಂಡಿದೆ. ಇದರೊಂದಿಗೆ ಜಿಲ್ಲೆಗಳಲ್ಲಿ ವಿವಿಧ ಸಂಘಟನೆಗಳು ಪ್ರತಿಭಟನೆ ಆರಂಭಿಸಿವೆ.

ಸಿಎಂ ಬೆನ್ನಿಗೆ ನಿಲ್ಲುವಂತೆ ಸೂಚನೆ: ಈ ನಡುವೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ರಾಜೀನಾಮೆಗೆ ಆಗ್ರಹಿಸುವಂತೆ ಬಿಜೆಪಿಗರು ಆಗ್ರಹಿಸುತ್ತಿದ್ದಂತೆ, ಇತ್ತ ಕಾಂಗ್ರೆಸ್ ಹೈಕಮಾಂಡ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆನ್ನಿಗೆ ಪಕ್ಷದ ಶಾಸಕರು, ಸಚಿವರು ನಿಲ್ಲುವಂತೆ ಪಕ್ಷದ ಹೈಕಮಾಂಡ್ ಸೂಚನೆ ನೀಡಿದೆ. ಇದರ ಬೆನ್ನಲ್ಲೇ, ಕಾಂಗ್ರೆಸ್ ಶಾಸಕರು, ಸಚಿವರು ಸೇರಿದಂತೆ ಹಲವ ನಾಯಕರು ಸಿಎಂ ಪರ ಹೇಳಿಕೆ ನೀಡುವುದರೊಂದಿಗೆ, ರಾಜ್ಯಪಾಲರ ವಿರುದ್ಧ 'ವಾಗ್ದಾಳಿ' ನಡೆಸಿದ್ದಾರೆ.

..ಆದೇಶದಲ್ಲಿ ಏನಿದೆ?

← ಮೊದಲಪುಟದಿಂದ

ವಿಚಾರಣೆಗೆ ಅನುಮತಿ ಕೋರಿರುವ ಅರ್ಜಿಗಳನ್ನು ತಿರಸ್ಕರಿಸುವಂತೆ ರಾಜ್ಯಪಾಲರಿಗೆ ಸಲಹೆ ನೀಡುವ ನಿರ್ಣಯವನ್ನು ಸಂಪುಟ ಸಭೆ ನಡೆಸಲಾಗಿದೆ. ಸಿಎಂ ಸಲಹೆಯಂತೆ ರಚನೆಯಾದ ಸಂಪುಟ ಸಭೆಯಲ್ಲಿ ಸಿಎಂ ವಿರುದ್ಧ ದೂರುಗಳನ್ನು ತಿರಸ್ಕರಿಸುವ, ಸಲಹೆ ನೀಡುವ ನಿರ್ಣಯ ಮಾಡಲಾಗಿದೆ. ಈ ನಿರ್ಣಯವು ವಿಶ್ವಾಸಾರ್ಹವಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ. ಮಧ್ಯಪ್ರದೇಶ ವಿಶೇಷ ಪೊಲೀಸ್ ಘಟಕ ಮತ್ತು ಮಧ್ಯಪ್ರದೇಶ ಸರ್ಕಾರದ ನಡುವಣ ವ್ಯಾಜ್ಯದಲ್ಲಿ ಸುಪ್ರೀಂ ಕೋರ್ಟ್ 2004ರಲ್ಲಿ ನೀಡಿರುವ ತೀರ್ಪು ಕೆಲವು ವಿಶೇಷ ಸಂದರ್ಭದಲ್ಲಿ ಸಂಪುಟದ ಸಲಹೆಯನ್ನು ಸ್ವೀಕರಿಸುವುದು ರಾಜ್ಯಪಾಲರ ವಿವೇಚನೆಗೆ ಬಿಟ್ಟದ್ದು ಎಂದು ಉಲ್ಲೇಖಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ದಾಖಲೆ ಲಭ್ಯವಿದ್ದಾಗಲೂ ತನಿಖೆಗೆ ಅನುಮತಿ ನಿರಾಕರಿಸಿದರೆ ಇದರಿಂದ ಪ್ರಜಾಪ್ರಭುತ್ವ ಅಪಾಯಕ್ಕೆ ಸಿಲುಕುತ್ತದೆ. ತಟಸ್ಥ, ವಸ್ತುನಿಷ್ಠ ಮತ್ತು ಪಕ್ಷಾತೀತ ತನಿಖೆ ನಡೆಸುವ ಅಗತ್ಯ ಇದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಪ್ರೊ. ಮಹೇಶ್ ಚಂದ್ರ ಗುರು ವಿಧಿವಶ

ಮೈಸೂರು: ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ವಿಭಾಗದ ನಿವೃತ್ತ ಪ್ರಾಧ್ಯಾಪಕ ಹಾಗೂ ಪ್ರಗತಿಪರ ಚಿಂತಕ ಪ್ರೊ. ಮಹೇಶ್‌ಚಂದ್ರ ಗುರು ಹೃದಯಘಾತದಿಂದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಅವರಿಗೆ 68 ವರ್ಷ ವಯಸ್ಸಾಗಿತ್ತು.

ಕೆಲ ದಿನಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಮಹೇಶ್‌ಚಂದ್ರ ಗುರು ಅವರನ್ನು ಇಲ್ಲಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಗ್ಯಾಂಗ್ರಿನ್ ಕಾರಣದಿಂದ ಕಾಲುನೋವಿನ ಸಮಸ್ಯೆ ಎದುರಿಸುತ್ತಿದ್ದ ಅವರು ಶನಿವಾರ ಸಂಜೆ ಹೃದಯಾಘಾತಕ್ಕೆ ಒಳಗಾಗಿ ಮೃತಪಟ್ಟಿದ್ದಾರೆ. 80ರ ದಶಕದಲ್ಲಿ ಹೈದರಬಾದ್ ನಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಯಾಗಿ ಸೇವೆ ಆರಂಭಿಸಿದ ಪ್ರೊ.ಮಹೇಶ್‌ಚಂದ್ರ ಗುರು ಬಳಿಕ ಮಂಗಳೂರು ವಿವಿಯಲ್ಲಿ ಪತ್ರಿಕೋದ್ಯಮ, ಪ್ರಾಧ್ಯಾಪಕಾರಾಗಿ ಪಾದರ್ಪಣೆ ಮಾಡಿದರು. ಬಳಿಕ ಮೈಸೂರು ವಿವಿಗೆ ವರ್ಗಾವಣೆಗೊಂಡು 2019 ರಲ್ಲಿ ಸೇವೆಯಿಂದ ನಿವೃತ್ತರಾದರು. ನಿವೃತ್ತಿ ಬಳಿಕ ಪ್ರಗತಿಪರ ಚಳವಳಿಗಳಲ್ಲಿ ಗಣನೀಯವಾಗಿ ಗುರುತಿಸಿಕೊಂಡಿದ್ದ ಮಹೇಶ್‌ಚಂದ್ರ, ದಸರಾ ವೇಳೆ ಮಹಿಷಾ ದಸರಾ ಆಚರಣೆಯಲ್ಲಿ ಮುಖ್ಯ ಪಾತ್ರ ವಹಿಸಿದ್ದರು.

ನವಕರ್ನಾಟಕ ಪ್ರಕಾಶನದ ರಾಜಾರಾಮ್ ನಿಧನ

ಬೆಂಗಳೂರು: ಕರ್ನಾಟಕದ ಪ್ರಸಿದ್ಧ ಪ್ರಕಾಶನ ಸಂಸ್ಥೆಯಾಗಿರುವ ನವಕರ್ನಾಟಕ ಪ್ರಕಾಶನದ ವ್ಯವಸ್ಥಾಪಕ ನಿರ್ದೇಶಕರಾಗಿದ್ದ ಆರ್.ಎಸ್. ರಾಜಾರಾಮ್ ಶನಿವಾರ ಬೆಳಗ್ಗೆ ಬೆಂಗಳೂರಿನ ಅಬ್ಬಿಗೆರೆಯಲ್ಲಿರುವ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

1960ರಿಂದ ನವಕರ್ನಾಟಕ ಪ್ರಕಾಶನದಲ್ಲಿ ಕೆಲಸಕ್ಕೆ ಸೇರಿ, ತಮ್ಮ ಕ್ರಿಯಾಶೀಲತೆ, ಬದ್ಧತೆಯಿಂದಾಗಿ ಸಂಸ್ಥೆಯ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಿಸಿ ನವಕರ್ನಾಟಕ ಪ್ರಕಾಶನವನ್ನು ರಾಜ್ಯದಲ್ಲಿ, ಕನ್ನಡ ಓದುಗರ ಮಧ್ಯೆ ವ್ಯಾಪಕವಾಗಿ ಬೆಳೆಸಿದ ಕೀರ್ತಿ ರಾಜಾರಾಮ್ ಅವರಿಗೆ ಸಲ್ಲುತ್ತದೆ. ಕನ್ನಡ ಸಾಹಿತ್ಯ, ವೈಚಾರಿಕ ಲೋಕಕ್ಕೆ ವಿಭಿನ್ನವಾದ ಕೃತಿಗಳನ್ನು ರಾಜಾರಾಮ್ ಪರಿಚಯಿಸಿದ್ದಾರೆ. ವಿಶ್ವಕಥಾಕೋಶ, ಕರ್ನಾಟಕ ಏಕೀಕರಣ ಇತಿಹಾಸ, ಸ್ವತಂತ್ರ್ಯ ಗಂಗೆಯ ಸಾವಿರ ತೊರೆಗಳು, ಲೋಕಾಯತ, ಜ್ಞಾನ-ವಿಜ್ಞಾನ-ಕೋಶ, ಕರ್ನಾಟಕ ಕಲಾದರ್ಶನ, ಲೋಕ-ಜ್ಞಾನ-ಮಾಲೆ, ಇಗೋ ಕನ್ನಡ, ವಿಶ್ವಮಾನ್ಯರು, ಲೋಕತತ್ವಶಾಸ್ತ್ರ ಪ್ರವೇಶಿಕೆ ಇಂತಹ ಹಲವಾರು ಯೋಜನೆಗಳನ್ನು ರಾಜ್ಯದ, ದೇಶದ ಪ್ರತಿಭಾನ್ವಿತ ಚಿಂತಕರ, ಲೇಖಕರ ಮೂಲಕ ಬರೆಯಿಸಿ, ಪ್ರಕಟಿಸಿ ಕನ್ನಡ ಸಾಹಿತ್ಯ ಲೋಕಕ್ಕೆ ಅರ್ಥಪೂರ್ಣವಾದ ಕೃತಿಗಳನ್ನು ಕೊಡುವಲ್ಲಿ ರಾಜಾರಾಮ್ ಅವರ ಪಾತ್ರ ದೊಡ್ಡದಾಗಿದೆ. ಪುಸ್ತಕಗಳ ಮೂಲಕ ಮಾನವಕುಲದ ಸೇವೆ ಎಂಬ ಘೋಷಣೆಯೊಂದಿಗೆ ಕರ್ನಾಟಕದಲ್ಲಿ ವೈಚಾರಿಕ, ಜನಪರ, ಪ್ರಗತಿಪರ ಎಡಪಂಥೀಯ ಸಾಹಿತ್ಯವನ್ನು ನವಕರ್ನಾಟಕ ಪ್ರಕಾಶನ ಹೊರತರುವಲ್ಲಿ ರಾಜಾರಾಮ್ ಅವರ ಪಾತ್ರ ಸ್ಮರಣೀಯವಾದದ್ದು. ಕರ್ನಾಟಕದಲ್ಲಿ ಪುಸ್ತಕ ಓದುವ ಸಂಸ್ಕೃತಿಯನ್ನು ಬೆಳೆಸುವಲ್ಲಿ ಅವರ ಪಾತ್ರ ಪ್ರಮುಖವಾಗಿದೆ. ಪುಸ್ತಕ ಪ್ರ ದರ್ಶನ ತಂಡಗಳನ್ನು ಕಟ್ಟಿ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ, ತಾಲೂಕು ಕೇಂದ್ರಗಳಲ್ಲಿ ಪುಸ್ತಕ ಪ್ರದರ್ಶನಗಳನ್ನು ಏರ್ಪಡಿಸಿ ರಾಜ್ಯದ ಮೂಲೆ ಮೂಲೆಗೆ ಪ್ರಮುಖ ಲೇಖಕರ ವಿಭಿನ್ನ ವಸ್ತು ವಿಷಯದ ಕೃತಿಗಳು ತಲುಪುವಂತೆ ಮಾಡುವಲ್ಲಿ ಅವರ ಕ್ರಿಯಾಶೀಲತೆ ಕೆಲಸ ಮಾಡಿದೆ.

ಮಂಗಳೂರು ಮಹಾನಗರಪಾಲಿಕೆ

DMA/2024-25/WORK INDENT NO.23833, 24366, 24101, 23893 ದಿನಾಂಕ: 13-08-2024

ಟೆಂಡರ್ ಪ್ರಕಟಣೆ E-PROCUREMENT OF KARNATAKA

ಮಂಗಳೂರು ಮಹಾನಗರಪಾಲಿಕೆ ವ್ಯಾಪ್ತಿಯಲ್ಲಿ 2023-24ನೇ ಸಾಲಿನ ಮಹಾನಗರಪಾಲಿಕೆ ಅನುದಾನದಲ್ಲಿ DMA/2024-25/WORK INDENT NO.23833, 24366, 24101, 23893 ಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. 4 ಕಾಮಗಾರಿಗಳ ಒಟ್ಟು ಮೊತ್ತ ರೂಪಾಯಿ 35.00 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 02-09-2024, ಅಪರಾಹ್ನ 4.00** ಗಂಟೆ. ಹೆಚ್ಚಿನ ವಿವರವನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **kppp.karnataka.gov.in** ಮುಖಾಂತರ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು
ಮಹಾನಗರಪಾಲಿಕೆ ಮಂಗಳೂರು.

DIPR/MNG/KSMCA/444/24-25 dt: 17.08.2024

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ

ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.
Phone:080-29907088, e-mail-dcfrural@gmail.com

ಸಂಖ್ಯೆ: ಎ7/ಉಅಸಂ/ಬೆಗ್ರಾವಿ/ಕಾಂ.ವಾಲ್/ಸಿ.ಆರ್-35/2024-25 ದಿನಾಂಕ: 16.08.2024

ಕೆ.ಪಿ.ಪಿ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್ ಪ್ರಕಟಣೆ

2024-25 ನೇ ಸಾಲಿನಲ್ಲಿ ಬೆಂಗಳೂರು ಗ್ರಾಮಾಂತರ ವಿಭಾಗದ ವ್ಯಾಪ್ತಿಯ ಹೊಸಕೋಟೆ ವಲಯದಲ್ಲಿ ಡಿಮಾರ್ಕೇಷನ್ ಯೋಜನೆಯಡಿ **Construction of compound wall with Arch and installation of gates** ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ಗುತ್ತಿಗೆದಾರರಾಗಿ ನೋಂದಾಯಿಸಿಕೊಂಡಿರುವ ಅರ್ಹ ಗುತ್ತಿಗೆದಾರರಿಂದ ಇ-ಪೋರ್ಟಲ್‌ನಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ಸಲ್ಲಿಸಲು ಕೊನೆಯ **ದಿನಾಂಕ: 26.08.2024 ರಂದು ಅಪರಾಹ್ನ 4.00 ಗಂಟೆಯವರೆಗೆ** ಸ್ವೀಕರಿಸಲಾಗುವುದು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 27.08.2024 ರ ಅಪರಾಹ್ನ 4.00 ಗಂಟೆಗೆ** ಹಾಗೂ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 28.08.2024 ರ ಅಪರಾಹ್ನ 4.00 ಗಂಟೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ **ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ** ರವರ ಕಛೇರಿಯಿಂದ ಖುದ್ದಾಗಿ ಅಥವಾ **ದೂರವಾಣಿ ಸಂಖ್ಯೆ 080-29907088** ಮೂಲಕ ಕಛೇರಿಯ ಕೆಲಸದ ಅವಧಿಯಲ್ಲಿ ಪಡೆಯಬಹುದು.

ಸಹಿ/- ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಂಗಳೂರು ಗ್ರಾಮಾಂತರ ವಿಭಾಗ, ದೇವನಹಳ್ಳಿ.

ವಾಸಾಸಂಇ/ವಾ.ಪ್ರ/1519/ ಮಣಿಪಾಲ/2024-25

ಪಟ್ಟಣ ಪಂಚಾಯತ ಕಾರ್ಯಾಲಯ ಎಮ್.ಕೆ. ಹುಬ್ಬಳ್ಳಿ-591118

ತಾ : ಚ,ಕಿತ್ತೂರ, ಜಿ : ಬೆಳಗಾವಿ ದೂ : 08288-274040
E-Mail:itstaff_ulb_mkhubballi@yahoo.com

ಕ್ರ:ಸಂ:ಪಪಂ.ಎಂ.ಕೆ.ಹು:ಲೋಕೊ ವಿಭಾಗ:ISWM/2024-25 ದಿನಾಂಕ:14/08/2024

ಟೆಂಡರ್ ಪ್ರಕಟಣೆ:
॥ಇ-ಪ್ರೋಕ್ಯೂರಮೆಂಟ್ ಮುಖಾಂತರ॥

ಸನ್ 2024-25ನೇ ಸಾಲಿನ Integral Solid Waste Management (ISWM) DPR under SBM ಯೋಜನೆ ಅನುದಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲು-1, 2, ಕೆ.ಜಿ-1 ನಿಯಮದನ್ವಯ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಇ-ಪ್ರೋಕ್ಯೂರಮೆಂಟ್ ಮುಖಾಂತರ ಮಾತ್ರ ಟೆಂಡರ ಸಲ್ಲಿಸಬಹುದು.

ಪ್ಯಾ. ಕ್ರ.ಸಂ:1:ಕಾಮಗಾರಿಗಳ ವಿವರ / ಇಂಡೆಂಟ್ ಸಂಖ್ಯೆ:DMA/2024-25/OW/WORK_INDENT26096, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):2.80, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):55,000/-,ಪ್ಯಾ. ಕ್ರ.ಸಂ:2:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2024-25/OW/ WORK_INDENT26114, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 25.68, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):1,00,000/-, ಪ್ಯಾ. ಕ್ರ.ಸಂ:3:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2024-25/OW/WORK_INDENT26134,ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ): 8.00, ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):20,000/-, ಪ್ಯಾ. ಕ್ರ.ಸಂ:4: ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2024-25/IND2920, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):36.00,ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):54,000/-, ಪ್ಯಾ. ಕ್ರ.ಸಂ:5:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2024-25/IND2919, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):10.15, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):22,013/-, ಪ್ಯಾ. ಕ್ರ.ಸಂ:6:ಕಾಮಗಾರಿಗಳ ವಿವರ/ಇಂಡೆಂಟ್ ಸಂಖ್ಯೆ:DMA/2024-25/IND2987, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):65.00,ಇ.ಎಂ.ಡಿ ಮೊತ್ತ (ರೂ.ಗಳಲ್ಲಿ):1,30,000/-, ಪ್ಯಾ.ಕ್ರ.ಸಂ:7:ಕಾಮಗಾರಿಗಳವಿವರ/ಇಂಡೆಂಟ್ ಸಂಖ್ಯೆ:DMA/2024-25/IND2986, ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ):6.75, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):17,000/-,ಪ್ಯಾ. ಕ್ರ.ಸಂ:8:ಕಾಮಗಾರಿಗಳ ವಿವರ/ಇಂಡೆಂಟ್‌ಸಂಖ್ಯೆ:DMA/2024-25/OW/WORK_INDENT26134, ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):8.00,ಇ.ಎಂ.ಡಿ ಮೊತ್ತ (ರೂ. ಗಳಲ್ಲಿ):20,000/-

ಟೆಂಡರ್ ಸಲ್ಲಿಸುವ ಮೊದಲು ಗುತ್ತಿಗೆದಾರರು ಅತ್ಯಂತ ಅವಶ್ಯಕವಾಗಿ ಟೆಂಡರುಗಳಿಗೆ ಸಂಬಂಧಿಸಿದಂತೆ ನಿಯಮ ನಿಭಂದಣೆಗಳನ್ನು ಓದಿ ಪಾಲಿಸಬೇಕು.

ಟೆಂಡರ ಪಾರ್ಮ ವೆಬ್ ಸೈಟಿನಿಂದ ಡೌನ್ ಲೋಡ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: 12-08-2024,ಭರ್ತಿ ಮಾಡಿದ ಟೆಂಡರಗಳನ್ನು ಅಪಲೋಡ್ (Upload) ಮಾಡುವ ಕೊನೆಯ ದಿನಾಂಕ:28-08-2024 ಸಾಯಂಕಾಲ:4:00 ಘಂಟೆಯವರೆಗೆ,ಟೆಂಡರಗಳನ್ನು ತೆರೆಯುವ ದಿನಾಂಕ:29-08-2024 ರ ಬೆಳಿಗ್ಗೆ 4:00 ಘಂಟೆಯ ನಂತರ ತೆರೆಯಲಾಗುವುದು. ಹೆಚ್ಚಿನ ಮಾಹಿತಿ ಮತ್ತು ಶರತ್ತುಗಳಿಗಾಗಿ Website: https://kppp.karnataka.gov.in ವೆಬ್‌ಸೈಟನಲ್ಲಿ ನೋಡಬಹುದು.

ಸಹಿ/-ಮುಖ್ಯಾಧಿಕಾರಿಗಳು
ಪಟ್ಟಣ ಪಂಚಾಯತ
ಎಂ.ಕೆ.ಹುಬ್ಬಳ್ಳಿ

ಸಹಿ/-ಆಡಳಿತಾಧಿಕಾರಿಗಳು
ಪಟ್ಟಣ ಪಂಚಾಯತ ಎಂ.ಕೆ.ಹುಬ್ಬಳ್ಳಿ
ಹಾಗೂ ತಹಶಿಲ್ದಾರರು, ಚ.ಕಿತ್ತೂರ

DIPR/BGM/RO-NO-638/KSMCA/2024-25

ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ -584133, ರಾಯಚೂರು, ಕರ್ನಾಟಕ, ಭಾರತ
Email:- registrarrur@gmail.com, +918532200975
https://raichuruniversity.ac.in

No. RUR/BOA/Corr/2024-25/01 Date: 15.08.2024

ತಿದ್ದುಪಡಿ

ರಾಯಚೂರು ವಿಶ್ವವಿದ್ಯಾಲಯದ ಬೋಧಕ (ಪ್ರಾಧ್ಯಾಪಕ ಮತ್ತು ಸಹ-ಪ್ರಾಧ್ಯಾಪಕ) ಹುದ್ದೆಗಳ ನೇಮಕಾತಿ ಅಧಿಸೂಚನೆ ಸಂಖ್ಯೆ: RUR/BOA/ADVT/2024/388, Dated: 08.07.2024 ಕ್ಕೆ ಸಂಬಂಧಿಸಿದಂತೆ 'ತಿದ್ದುಪಡಿ'ಯನ್ನು ಹೊರಡಿಸಲಾಗಿದೆ. ಇದರ ಹೆಚ್ಚಿನ ವಿವರ ರಾಯಚೂರು ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣ https://raichuruniversity.ac.in. ದಲ್ಲಿ ಲಭ್ಯವಿರುತ್ತದೆ. ಈ ಹುದ್ದೆಗಳಿಗೆ ಅರ್ಜಿಸಲ್ಲಿಸುವ ಕೊನೆಯ ದಿನಾಂಕವನ್ನು 26.08.2024 ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಮತ್ತೆ ಅರ್ಜಿ ಸಲ್ಲಿಸಬೇಕಾಗಿರುವುದಿಲ್ಲ. ಆದರೆ ಯಾವುದೇ ಹೆಚ್ಚುವರಿ ಮಾಹಿತಿಯಿದ್ದರೆ, ಅವರು ಮೇಲೆ ತಿಳಿಸಿದ ದಿನಾಂಕ ಮತ್ತು ಸಮಯದ ಒಳಗೆ 08 ಸೆಟ್‌ಗಳಲ್ಲಿ ಒದಗಿಸಬಹುದು.

ಸಹಿ/- ಕುಲಸಚಿವರು,
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

DIP/RCR/228/KSMCA/227/2024-25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No: 08372-238782 Fax No. 08372-237268
E.Mail : eepwdgad@gmail.com

ನಂ:ಕಾನಿಇಂಗಃಲೋಇ:ಪಿಬಿ-5:5054 2024-25/1981
ದಿನಾಂಕ : 17-08-2024

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ಲೆಕ್ಕ ಶೀರ್ಷಿಕೆ **5054-04-337-0-01-154** ಅನುದಾನದ ಅಡಿಯಲ್ಲಿಯ ಒಟ್ಟು : **250.00** ಲಕ್ಷ ಮೊತ್ತದಲ್ಲಿ ಒಟ್ಟು **01** ಕಾಮಗಾರಿಗೆ (ಕನಿಷ್ಠ ಮೊತ್ತ ರೂ. **250.00** ಲಕ್ಷ ಹಾಗೂ ಗರಿಷ್ಠ ಮೊತ್ತ ರೂ. **250.00** ಲಕ್ಷ) ಕೆಪಿಪಿಪಿ **(kppp)** ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ **(kppp)** ಸ್ಟಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ-4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ **http://www.kppp.karnataka.gov.in/** ದಲ್ಲಿ ನೋಡಿಕೊಳ್ಳಬಹುದು.

Work Indent No : **11859**

ಮೇಲಿನ ಕಾಮಗಾರಿಗಳ ಟೆಂಡರ ವಿವರ ಪಶ್ನೋತ್ತರ ದಿನಾಂಕ : **12-09-2024** ಟೆಂಡರ್ ಸಲ್ಲಿಸುವ ದಿನಾಂಕ : **17-09-2024** ತಾಂತ್ರಿಕ/ಆರ್ಥಿಕ ಬಿಡ್ ತೆರೆಯುವ ದಿನಾಂಕ : **18-09-2024** ಆರ್ಥಿಕ ಬಿಡ್ ತೆರೆಯುವ ದಿನಾಂಕ : **19-09-2024**

The amount put to tender and tendered amount are inclusive of 18% GST and all other taxes.

ಸಹಿ/- ಕಾರ್ಯಪಾಲಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ

ವಾಸಾಸಂಇ/ಗದಗ/ಕೆಎಸ್‌ಎಂಸಿಎ/162/2024-25

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ಕಾನಿಇಂ/ಸಕಾನಿಇಂ/2024-25/24909-13 ದಿನಾಂಕ: 17.08.2024

:: ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆಪಿಪಿಪಿ ಪೋರ್ಟಲ್ ಮುಖಾಂತರ) ::

ಪಿಸಿ-1367: ಕಾರ್ಯ ಮತ್ತು ಪಾಲನಾ ವಲಯ, ಗು.ವಿ.ಸ.ಕಂ.ನಿ. ಕಲಬುರಗಿಗೆ ಸ್ಟಾರ್ 1 ಸ್ಟಾರ್ ರೇಟೆಡ್ 25 ಕೆವಿಎ ವಿದ್ಯುತ್ ಪರಿವರ್ತಕಗಳನ್ನು ತಯಾರಿಕೆ ಮತ್ತು ಪೂರೈಕೆ. ಟೆಂಡರ್ ಮೊತ್ತ: **ರೂ: 888.30 ಲಕ್ಷ.**
ಪಿಸಿ-1368: ಕಾರ್ಯ ಮತ್ತು ಪಾಲನಾ ವಲಯ, ಗು.ವಿ.ಸ.ಕಂ.ನಿ. ಬಳ್ಳಾರಿಗೆ ಸ್ಟಾರ್ 1 ಸ್ಟಾರ್ ರೇಟೆಡ್ 25 ಕೆವಿಎ ವಿದ್ಯುತ್ ಪರಿವರ್ತಕಗಳನ್ನು ತಯಾರಿಕೆ ಮತ್ತು ಪೂರೈಕೆ. ಟೆಂಡರ್ ಮೊತ್ತ: **ರೂ: 888.30 ಲಕ್ಷ.**
ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **19.08.2024** ರಂದು ಅಥವಾ ನಂತರ, ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: **03.09.2024 @ 17:30 ಗಂಟೆಗೆ,** ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **05.09.2024 @ 11:00 ಗಂಟೆಗೆ,** ಆರ್ಥಿಕ ಬಿಡ್ ತೆರೆಯುವ ದಿನಾಂಕ: **06.09.2024 @ 11:00 ಗಂಟೆಗೆ.**
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ-585 102. ಮೊ.ಸಂ: 94483 59006. ಅಂತರ್ಜಾಲತಾಣದ ವಿಳಾಸ: **https://kppp.karnataka.gov.in.**

ಸಹಿ/- ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/354/ಕೆ.ಎಸ್.ಎಂ.ಸಿ.&ಎ/2024-25

ನಗರಸಭಾ ಕಾರ್ಯಾಲಯ, ತಿಪಟೂರು

ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ, ದೂ: 08134-250785, E-mail:itstaff_ulb_tiptur@yahoo.co.in, www.tipturcity.mrc.gov.in

ನಂ.ನ.ಸ.ತಿ/ತಾಂಶಾ/ಸಿ.ಆರ್/38/2024-25 ದಿನಾಂಕ: 13.08.2024

ಟೆಂಡರ್/ಕೊಟೇಷನ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆಯ ಆದ್ಯಾದೇಶ 1999 - 2000ರ ನಿಯಮಗಳಂತೆ ನಗರಸಭೆಯ ವಿವಿದ ಅನುದಾನದಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅರ್ಹ ದರ್ಜೆಯ ಗುತ್ತಿಗೆದಾರರು ಗುತ್ತಿಗೆದಾರರಿಂದ ಹಾಗೂ ಸರಬರಾಜು ರವರುಗಳಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು KPPP Portal ವೆಬ್‌ಸೈಟ್‌ನಲ್ಲಿ (https://kppp.karnataka.gov.in) ಟೆಂಡರ್‌ಗಳನ್ನು ಸಲ್ಲಿಸಬಹುದು. (ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಕಛೇರಿಯಿಂದ ಪಡೆಯಬಹುದು)

ಕ್ರ. ಸಂ	ಇಂಡಟ್ ನಂಬರ್	ಅಂದಾಜು ಮೊತ್ತ ರೂ.ಲಕ್ಷ	ಇ.ಎಂ.ಡಿ ರೂಗಳಲ್ಲಿ	ಟೆಂಡರ್ ಸಲ್ಲಿಸುವ ಕಡೆಯ ದಿನಾಂಕ	ಟೆಂಡರ್ ತೆರೆಯುವ ಕಡೆಯ ದಿನಾಂಕ
1	DMA/2024-25/OW/WORK_INDENT 26028	50,00,000/-	1,00,000/-	26.08.2024	28.08.2024
2	DMA/2024-25/IND2600	3,50,000/-	8,750/-	27.08.2024	29.08.2024

ಕರ್ನಾಟಕ ಪುರಸಭಾ ಕಾಯ್ದೆ 1964 ನಿಯಮ 347ರಂತೆ ಕೆಲಸ ನಿರ್ವಹಿಸಲು ಕೊಟೇಷನ್ ಆಹ್ವಾನಿಸಲಾಗಿದೆ.

1	ವಾರ್ಡ್ ನಂ. 8 ಗುಬ್ಬಿ ಲೇಔಟ್ ಆರ್.ಟಿ.ಓ ಕಛೇರಿ ಹಿಂಭಾಗದ ರಸ್ತೆಯಲ್ಲಿ ಒಳಚರಂಡಿ ಕೊಳವೆ ಮಾರ್ಗ ಸ್ಥಳಾಂತರಿಸಿ ಮ್ಯಾನ್‌ಹೋಲ್ ನಿರ್ಮಿಸಲು ಕೊಟೇಷನ್ ಸಲ್ಲಿಸುವುದು
2	ಇನ್‌ಟೇಕ್‌ವೆಲ್, ಕೊಪ್ಪ ಪಂಪ್‌ಹೌಸ್ ಮತ್ತು ಈಚನೂರು ಜಾಕ್‌ವೆಲ್‌ನಲ್ಲಿ ಇರುವ ಮೋಟರ್ ಪಂಪ್‌ಗಳನ್ನು ನಿರ್ವಹಣೆ ಮಾಡಲು 68 Grade Lubricant Oil ಪೂರೈಕ್ಕೆ ಮಾಡಲು ಕೋಟೇಷನ್ ಸಲ್ಲಿಸುವುದು.
3	ಗೌರಿ ಗಣೇಶ್ ಹಬ್ಬದ ಪ್ರಯುಕ್ತ ಗೌರಿ ಗಣೇಶ್ ಮೂರ್ತಿಗಳನ್ನು ವಿಸರ್ಜನೆ ಮಾಡಲು ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿರುವುದರಿಂದ ತಿಪಟೂರು ನಗರ ಅಮಾನಿಕೆರೆಯ ಆವರಣದಲ್ಲಿರುವ ಕಲ್ಯಾಣಿಯಲ್ಲಿನ ಸಂಪೂರ್ಣ ಊಳು/ಮಣ್ಣನ್ನು ಎತ್ತಿಸಿ ಸ್ವಚ್ಚತೆ ಮಾಡಿಕೊಡುವುದು ಹಾಗೂ ಅಲಂಕಾರ ಮಾಡಿಕೊಡಲು ಕೊಟೇಷನ್ ಸಲ್ಲಿಸುವುದು.

ಸೂಚನೆ: ಕೊಟೇಷನ್ ಪ್ರಕಟಣೆಯು ದಿನಪತ್ರಿಕೆಯಲ್ಲಿ ಪ್ರಕಟಣೆ ಆದ 7 ದಿನಗಳ ಒಳಗೆ ಸಂಜೆ 5.30 ರ ಒಳಗೆ ಹಾಗೂ ಕೊನೆಯ ದಿನ ಸರ್ಕಾರಿ ರಜೆ ಬಂದಲ್ಲಿ ಮುಂದಿನ ದಿನ ಕಚೇರಿಗೆ ಕೊಟೇಷನ್ ಸಲ್ಲಿಸುವುದು.

ಸಹಿ/- ಪೌರಾಯುಕ್ತರು, ನಗರಸಭೆ,
ತಿಪಟೂರು.

DIPR/TUM/241/KSMCA/2024-25

ಟ್ವೀಟೂ-ಖಾರಾ

ಜೆ.ಪಿ ನಡ್ಡಾ, ಕೇಂದ್ರ ಸಚಿವ

ನ್ಯಾಷನಲ್ ಹೆರಾಲ್ಡ್‌ನಿಂದ ಮುಡಾ ಹಗರಣದವರೆಗೆ ಕಾಂಗ್ರೆಸ್ ಪಕ್ಷದ ಭ್ರಷ್ಟಾಚಾರ ಪರಂಪರೆ ಮುಂದುವರಿದಿದೆ. ದಲಿತ ಮತ್ತು ಅಲ್ಪಸಂಖ್ಯಾತರ ರಕ್ಷಕರು ಎಂದು ಕಾಂಗ್ರೆಸ್ ಬಿಂಬಿಸಿಕೊಳ್ಳುತ್ತಿದ್ದರೆ, ಅದೇ ಪಕ್ಷದ ಮುಖ್ಯಮಂತ್ರಿಯೊಬ್ಬರು ದಲಿತ ಕುಟುಂಬದ ಭೂಮಿ ಕಬಳಿಸಿಕೊಳ್ಳುವುದರಲ್ಲಿ ತೊಡಗಿದ್ದಾರೆ. ಇದು ಕಾಂಗ್ರೆಸ್‌ನ ಕಪಟತನ ಮತ್ತು ಕುಟುಂಬ ಕೇಂದ್ರಿತ ರಾಜಕಾರಣಕ್ಕೆ ಮತ್ತೊಂದು ನಿದರ್ಶನವಾಗಿದೆ.

ವೀಣಾ ಜೈನ್, ಬೆಂಗಳೂರು

ನಿಶ್ಚಿತವಾಗಿಯೂ ಯಾರೋ ನಿಮ್ಮನ್ನು ತಪ್ಪುದಾರಿಗೆಳೆದಿದ್ದಾರೆ. ಬಿಜೆಪಿ ಈ ವಿಷಯದಲ್ಲಿ ಸಮಯ ಮತ್ತು ಶಕ್ತಿ ವ್ಯರ್ಥಮಾಡುತ್ತಿದೆ. ಬಿಎಸ್ ಯಡಿಯೂರಪ್ಪ ಪ್ರಕರಣದಂತೆ ಮುಡಾ ಪ್ರಕರಣ ನ್ಯಾಯಾಲಯದಲ್ಲಿ ನಿಲ್ಲುವುದಿಲ್ಲ ಎಂಬುದು ಸ್ಪಷ್ಟ. ಜನರಲ್ಲಿ ಸಿದ್ದರಾಮಯ್ಯ ಬಗ್ಗೆ ಬಿಜೆಪಿ ಅನುಕಂಪ ಸೃಷ್ಟಿಸುತ್ತಿದೆ.

ಪ್ರಾಸಿಕ್ಯೂಷನ್ ವಿರುದ್ಧ ಸಿಡಿದೆದ್ದ ಮುಖ್ಯಮಂತ್ರಿ | ರಾಜೀನಾಮೆ ಪ್ರಶ್ನೆಯೇ ಇಲ್ಲ

ರಾಜ್ಯಪಾಲರೇ ರಾಜೀನಾಮೆ ನೀಡಬೇಕು: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಮುಡಾ ಹಗರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿದ್ದಾರೆ. ಈ ವಿಚಾರವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ವಿಧಾನಸೌಧದಲ್ಲಿ ರಾಜ್ಯ ಸಚಿವ ಸಂಪುಟ ಸಭೆ ಮಾಡಿದ್ದು, ರಾಜ್ಯಪಾಲರ ನಿರ್ಣಯವನ್ನು ಸಂಪುಟ ಸಭೆ ಖಂಡಿಸಿದೆ.

ಸಂಪುಟ ಸಭೆ ಬಳಿಕ ಬಳಿಕ ಮಾತನಾಡಿದ ಸಿದ್ದರಾಮಯ್ಯ, ನಾನು ಯಾವ ಕಾರಣಕ್ಕೆ ರಾಜೀನಾಮೆ ನೀಡಬೇಕು? ಯಾವ ಆಧಾರದ ಮೇಲೆ ನೀಡಬೇಕು? ನನ್ನ ಪ್ರಕಾರ ರಾಜ್ಯಪಾಲರೇ ರಾಜೀನಾಮೆ ನೀಡಬೇಕು. ಅವರ ನಿರ್ಧಾರಕ್ಕೆ ಕಾನೂನಿನ ಬಲ ಇಲ್ಲ. ಸಂವಿಧಾನದ ಪ್ರತಿನಿಧಿಗಳಾಗಿ ಅವರು ಕೆಲಸ ಮಾಡಬೇಕೇ ಹೊರತು ಬಿಜೆಪಿ ಪ್ರತಿನಿಧಿಯಾಗಿ ಕೆಲಸ ಮಾಡಬಾರದು. ನನ್ನ ಮೇಲೆ ಯಾಕೆ ರಾಜ್ಯಪಾಲರನ್ನು ಬಳಸಿಕೊಳ್ಳುತ್ತಿದ್ದಾರೆ? ರಾಜ್ಯಪಾಲರ ನಿರ್ಧಾರ ವಿರುದ್ಧ ನಾವು ಕೂಡ ಕಾನೂನು ಹೋರಾಟ ಮಾಡುತ್ತೇವೆ ಎಂದು ಸಾರಿದರು.

ಬಿಜೆಪಿ ವಿರುದ್ಧ ಸಿದ್ದರಾಮಯ್ಯ ಆಕ್ರೋಶ: ರಾಜ್ಯಪಾಲರು ಕಾನೂನು ಬಾಹಿರವಾಗಿ ಅನುಮತಿಸಿದ್ದಾರೆ. ಅವರು ಅನುಮತಿ ನೀಡಿದ್ದು ಕೂಡ ನಿಯಮದಲ್ಲಿ ಇಲ್ಲ. ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಾಗ ಕೇಂದ್ರ ಸರಕಾರದ ಎಸ್‌ಓಪಿ ಪಾಲಿಸಿಲ್ಲ. ನಮ್ಮ ಸರಕಾರ ಬಡವರ ಪರ ಇರುವ ಸರಕಾರ. ಬಿಜೆಪಿಯವರು ಗ್ಯಾರಂಟಿಗಳ ವಿರುದ್ಧವಿದ್ದಾರೆ. ನಾವು ನುಡಿದಂತೆ ನಡೆದಿದ್ದೇವೆ, ಬಡವರ ಪರ ಕೆಲಸ ಮಾಡುತ್ತಿದ್ದೇವೆ. ನನ್ನ ರಾಜಕೀಯವಾಗಿ ತೇಜೋವಧೆ ಮಾಡಲು ಅವರ ಈ ಪ್ರಯತ್ನ ಯಶಸ್ವಿಯಾಗಲ್ಲ. ನನ್ನ ತೇಜೋವಧೆ ಮಾಡುವುದು ಬಿಜೆಪಿಯವರ ಭ್ರಮೆ. ನಮ್ಮ ಅಭೂತಪೂರ್ವ ಗೆಲುವು ಅವರಿಗೆ ಸಹಿಸಲು ಆಗುತ್ತಿಲ್ಲ. ನಾವು ಬಡವರ ಪರ ಇದ್ದೇವೆಂದು ಗುರಿ ಮಾಡುತ್ತಿದ್ದಾರೆ. ರಾಜ್ಯಪಾಲರು ಈ ರೀತಿ ಮಾಡುತ್ತಾರೆಂದು ನಮಗೆ ಗೊತ್ತಿತ್ತು. ಇದರಿಂದ ನಾವು ಇನ್ನೂ ಗಟ್ಟಿಯಾಗುತ್ತಿದ್ದೇವೆ. ಇದರಿಂದ ಬಿಜೆಪಿ-ಜೆಡಿಎಸ್‌ನವರು ಬಯಲಿಗೆ ಬರುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಟಿಜೆ ಅಬ್ರಹಾಂ ದೂರು ನೀಡಿದ ಕೆಲ ಗಂಟೆಗಳಲ್ಲೇ ನನಗೆ ರಾಜ್ಯಪಾಲರ ಕಚೇರಿಯಿಂದ ಶೋಕಾಸ್ ನೋಟಿಸ್ ನೀಡಲಾಗಿದೆ. ಲೋಕಾಯುಕ್ತದವರು ಎಚ್.ಡಿ. ಕುಮಾರಸ್ವಾಮಿ, ಜೊಲ್ಲೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರ ಅನುಮತಿ ಕೋರಿದ್ದರು. ಎಚ್‌ಡಿಕೆ ವಿರುದ್ಧ ಪ್ರಾಥಮಿಕ ತನಿಖೆಯಲ್ಲಿ ಸಾಬೀತು ಎಂದು ಮನವಿ ಮಾಡಿದ್ದರು. ಆದರೆ ಮುಡಾ ಪ್ರಕರಣದಲ್ಲಿ ನನ್ನ ತನಿಖೆಯೇ ನಡೆದಿಲ್ಲ ಎಂದರು. ಫೆಬ್ರವರಿ 26ರಂದು ಮುರುಗೇಶ್ ನಿರಾಣಿ ವಿರುದ್ಧ ಅನುಮತಿ ಕೇಳಿದ್ದರು. ಭ್ರಷ್ಟಾಚಾರದಲ್ಲಿ ನೇರವಾಗಿ ಭಾಗಿದ್ದಾರೆ. ಹಾಗಾಗಿ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದ್ದಾರೆ. ಇವರೆಲ್ಲ ವಿರುದ್ಧ ರಾಜ್ಯಪಾಲರು ಅನುಮತಿ ಕೊಟ್ಟಿಲ್ಲ ಆದರೆ, ನನ್ನ ಪ್ರಕರಣದಲ್ಲಿ ಆತುರಾತುರವಾಗಿ ಅನುಮತಿ ಕೊಟ್ಟಿದ್ದಾರೆ ಎಂದು ಕಟುಟೀಕೆ ಮಾಡಿದರು.

ಕುರಿ ಹೊಲಸು ತಿನ್ನಲ್ಲ, ಕುರುಬ ತಪ್ಪು ಮಾಡಲ್ಲ



ಹೊಸದುರ್ಗ: ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ದುರುದ್ದೇಶದಿಂದ ಕೇಂದ್ರ ಸರಕಾರದ ಕೈಗೊಂಬೆಯಾಗಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು ಖಂಡನೀಯ ಎಂದು ಕಾಗಿನೆಲೆ ಕನಕ ಗುರುಪೀಠ ಹೊಸದುರ್ಗ ಶಾಖಾ ಮಠದ ಈಶ್ವರಾನಂದಪುರಿ ಸ್ವಾಮೀಜಿ ಅವರು ತಿಳಿಸಿದ್ದಾರೆ. ಕುರಿ ಹೊಲಸು ತಿನ್ನಲ್ಲ, ಕುರುಬ ತಪ್ಪುಮಾಡಲ್ಲ. ಆದರೆ ಒಂದು ಚುನಾಯಿತ ಸರಕಾರವನ್ನು ಅಭದ್ರಗೊಳಿಸುವ ಹುನ್ನಾರ ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾಡಿದ ಅಗೌರವ. ಅಷ್ಟಕ್ಕೂ ಅಧಿಕಾರದಲ್ಲಿರುವುದು ಹಿಂದುಳಿದ ವರ್ಗದ ಪ್ರಬಲ ಜನನಾಯಕ ಎಂದು ಸ್ವಾಮೀಜಿ ಎಚ್ಚರಿಕೆ ನೀಡಿದ್ದಾರೆ.

ಬೆಂಬಲಕ್ಕೆ ನಿಂತ ಸಚಿವ ಸಂಪುಟಕ್ಕೆ ಸಿದ್ದು ಥ್ಯಾಂಕ್ಸ್!

ಸಂಪುಟ ಸಭೆ ಮುಗಿಸಿ ವಾಪಸ್ ಬರುತ್ತಿದ್ದಂತೆಯೇ ಸಿದ್ದರಾಮಯ್ಯ ಅವರು ಡಿಕೆ ಶಿವಕುಮಾರ್ ಹಾಗೂ ಸಚಿವರಿಗೆ ಧನ್ಯವಾದ ತಿಳಿಸಿದರು. ತುರ್ತಾಗಿ ಸಚಿವ ಸಂಪುಟ ಸಭೆ ಕರೆಯಲಾಗಿತ್ತು. ಡಿ.ಕೆ ಶಿವಕುಮಾರ್, ಸಂಪುಟದ ಎಲ್ಲಾ ಸಹೋದ್ಯೋಗಿಗಳಿಗೆ ಧನ್ಯವಾದ ಸಲ್ಲಿಸುತ್ತೇನೆ. ಇಡೀ ಸಚಿವ ಸಂಪುಟ ನನ್ನ ಜತೆ ಇರುವುದಾಗಿ ಹೇಳಿದೆ. ಪಕ್ಷ ಕೂಡ ಇದನ್ನೇ ಹೇಳಿದೆ. ಪಕ್ಷ, ಸಚಿವರು, ಶಾಸಕರು ಬೆಂಬಲ ನೀಡಿದ್ದಾರೆ. ನನ್ನಜತೆ ಇರುತ್ತೇನೆಂದು ಹೈಕಮಾಂಡ್ ದೂರವಾಣಿ ಕರೆ ಮಾಡಿ ಹೇಳಿದೆ ಎಂದರು. ರಾಜ್ಯಪಾಲರು ನೀಡಿರುವ ಪ್ರಾಸಿಕ್ಯೂಷನ್ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ. ಇದು ರಾಜಕೀಯ ದುರುದ್ದೇಶದಿಂದ ಕೈಗೊಂಡ ನಿರ್ಧಾರ. ಸರಕಾರವನ್ನು ಅಸ್ಥಿರಗೊಳಿಸಲು ಯತ್ನ ಇದಾಗಿದೆ. ಬಿಜೆಪಿ, ಜೆಡಿಎಸ್ ಬಡವರ ಪರ ಇರುವ ಕಾರಣಕ್ಕೆ ಸರಕಾರದ ವಿರುದ್ಧ ಷಡ್ಯಂತ್ರ ಇದಾಗಿದೆ. ನಾವು ಗ್ಯಾರಂಟಿ ಯೋಜನೆಗಳನ್ನು ನೀಡಿದ್ದೇವೆ. ಬಿಜೆಪಿ, ಜೆಡಿಎಸ್ ನವರು ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದವು. ಮೋದಿ, ಅಮಿತ್ ಶಾ ಇದನ್ನು ವಿರೋಧಿಸಿದ್ದರು. ನನ್ನನ್ನ ರಾಜಕೀಯವಾಗಿ ತೇಜೋವಧೆ ಮಾಡಲು ಹೊರಟಿದ್ದಾರೆ. ಜನರು ನನ್ನ ಜತೆ ಇರೋವರೆಗೂ ಇದು ಸಾಧ್ಯವಿಲ್ಲ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ರಾಜ್ಯಪಾಲರು ಕೇಂದ್ರ ಸರಕಾರದ ಕೈಗೊಂಬೆಯಾಗಿದ್ದು, ರಾಜಭವನವು ಬಿಜೆಪಿ ಕಚೇರಿಯಾಗಿದೆ. ಮುಡಾ ಹಗರಣದ ನೆವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಷಡ್ಯಂತ್ರದ ಒಂದು ಭಾಗವಾಗಿದೆ. ಇದಕ್ಕೆ ಬಿಜೆಪಿಯವರು ಪಶ್ಚಾತ್ತಾಪ ಪಡಬೇಕಾಗುತ್ತದೆ.
ಎಂ.ಬಿ ಪಾಟೀಲ್, ಬೃಹತ್ ಕೈಗಾರಿಕಾ ಸಚಿವ

ರಾಜ್ಯ ಸರಕಾರವನ್ನು ದುರ್ಬಲಗೊಳಿಸಲು ಯತ್ನ. ಪ್ರಜಾಸತ್ತಾತ್ಮಕವಾಗಿ ಚುನಾಯಿತವಾಗಿರುವ ಸರ್ಕಾರವನ್ನು ದುರ್ಬಲಗೊಳಿಸಲು ಬಿಜೆಪಿ ರಾಜಭವನವನ್ನು ಸಾಧನವಾಗಿ ದುರುಪಯೋಗಪಡಿಸಿಕೊಳ್ಳುತ್ತಿದೆ. ಮುಖ್ಯಮಂತ್ರಿಯನ್ನು ಉದ್ದೇಶ ಪೂರ್ವಕವಾಗಿ ಸಿಲುಕಿಸಲು ಸಂಚು ನಡೆದಿದೆ.
- ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಸಿಎಂ ಸಿದ್ದರಾಮಯ್ಯ ವಿರುದ್ಧ ಬಿಜೆಪಿ ರಾಜಕೀಯ ಪ್ರೇರಿತವಾಗಿ ಮಾಡಿರುವ ಆರೋಪವನ್ನೇ ಆಧಾರವಾಗಿಟ್ಟುಕೊಂಡು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿರುವುದು ಸರಿಯಲ್ಲ. ರಾಜ್ಯಪಾಲರು ಅನುಸರಿಸಿರುವ ಪಕ್ಷಪಾತ ಧೋರಣೆಗೆ ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು, ಇಲ್ಲವೇ ಅವರನ್ನು ರಾಷ್ಟ್ರಪತಿ ವಜಾ ಮಾಡಬೇಕು.
- ಈಶ್ವರ್ ಖಂಡ್ರೆ, ಅರಣ್ಯ ಸಚಿವ

ರಾಜ್ಯಪಾಲರ ಕಚೇರಿಯನ್ನು ಬಿಜೆಪಿ ಕಚೇರಿಯಾಗಿ ಪರಿವರ್ತನೆ ಮಾಡಿಕೊಳ್ಳಲು ನಡೆಯುತ್ತಿರುವ ಹುನ್ನಾರದ ವಿರುದ್ಧ ಹೋರಾಟ ಮಾಡುತ್ತೇವೆ. ಪ್ರಜಾಪ್ರಭುತ್ವ ಹಾಗೂ ಸಂವಿಧಾನ ರಕ್ಷಣೆ ಮಾಡಬೇಕಿದೆ. ಮುಖ್ಯಮಂತ್ರಿಗಳ ವಿರುದ್ಧ ಕಾನೂನು ಬಾಹಿರವಾಗಿ ವಿಚಾರಣೆಗೆ ಅನುಮತಿ ನೀಡಲಾಗಿದೆ.
-ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಸಮಾಚಾರ ಸಣ್ಣದಲ್ಲ

ರಾಜ್ಯಪಾಲರ ಸಂಚು

ಬೆಳಗಾವಿ: ಕಾಂಗ್ರೆಸ್ ಸರಕಾರವನ್ನು ಅಸ್ಥಿರಗೊಳಿಸಲು ರಾಜ್ಯಪಾಲರು ಸಿಎಂ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿದ್ದಾರೆ. ಇದರ ವಿರುದ್ಧ ನಾವು ರಾಜಕೀಯ ಹಾಗೂ ಕಾನೂನು ಹೋರಾಟ ಮಾಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಸತೀಶ್ ಜಾರಕಿಹೊಳಿ ಎಚ್ಚರಿಕೆ ಕೊಟ್ಟಿದ್ದಾರೆ. ಶನಿವಾರ ಹತ್ತರಗಿಯಲ್ಲಿ ಪ್ರತಿಕ್ರಿಯೆ ನೀಡಿದ ಅವರು. ರಾಜ್ಯಪಾಲರು ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಆದೇಶ ಕೊಡುತ್ತಾರೆ ಎಂಬ ನಿರೀಕ್ಷೆಯಿತ್ತು. ನಮ್ಮ ಮುಂದೆ ಈಗ ಇರುವುದು ಕಾನೂನು ಹೋರಾಟ. ಜೊತೆಗೆ ಸಿಎಂ ರಾಜೀನಾಮೆ ಕೊಡುವ ಪ್ರಶ್ನೆಯೇ ಬರುವುದಿಲ್ಲ ಎಂದರು.

ರಾಜಕೀಯ ಪ್ರೇರಿತ



ವಿಜಯಪುರ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ವಿಚಾರಣೆಗೆ ರಾಜ್ಯಪಾಲರು ಅನುಮತಿ ನೀಡಿರುವುದು ರಾಜಕೀಯ ಪ್ರೇರಿತ ಎಂದು ಸಚಿವ ಶಿವಾನಂದ ಪಾಟೀಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ರಾಜ್ಯಪಾಲರಿಗೆ ಸಿಎಂ ಸಿದ್ದರಾಮಯ್ಯ ಸಾಕಷ್ಟು ಪುರಾವೆಗಳನ್ನು ನೀಡಿದ್ದರೂ ಬಹಳಷ್ಟು ಜನರ ವಿರುದ್ಧ ಪ್ರಾಸಿಕೂಷನ್ ಗೆ ಅನುಮತಿ ನೀಡಿಲ್ಲ. ರಾಜ್ಯಪಾಲರ ಮುಂದೆಯೇ ಅನೇಕ ಬಿಜೆಪಿ ನಾಯಕರ ಕಡತಗಳು ಬಾಕಿ ಉಳಿದಿವೆ ಎಂದರು.

ರಾಜೀನಾಮೆ ನೀಡಲಿ

ವಿಜಯಪುರ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು ಸ್ವಾಗತಾರ್ಹ ಎಂದು ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ. ಈ ಬಗ್ಗೆ ಟ್ವೀಟ್ ಮಾಡಿರುವ ಅವರು, ಅಧಿಕಾರದ ದುರುಪಯೋಗ, ನಿಯ ಮಾವಳಿಯ ಉಲ್ಲಂಘನೆ, ಅರ್ಹ ನಿವೇಶನದಾರರ ಹಿತಾಸಕ್ತಿ ಬಲಿಕೊಟ್ಟು, ತಮ್ಮ ಸ್ವಹಿತಾ ಸಕ್ತಿಗಳಿಗೆ ನಿಯಮಾವಳಿ ಉಲ್ಲಂಘಿಸಿದ್ದಾರೆ ಎಂದಿದ್ದಾರೆ.

ಹಠಮಾರಿತನ ಬಿಡಿ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಹಠಮಾರಿತನ ಬಿಟ್ಟು ರಾಜೀನಾಮೆ ಕೊಡಬೇಕು. ಈ ಮೂಲಕ ಕಾನೂನಿಗೆ ತಲೆ ಬಾಗುವುದು ಒಳ್ಳೆಯದು ಎಂದು ವಿಧಾನ ಪರಿಷತ್ ಸದಸ್ಯ ಎಚ್.ವಿಶ್ವನಾಥ್ ಸಲಹೆ ಮಾಡಿದ್ದಾರೆ. ನಾನು ಸಿದ್ದರಾಮಯ್ಯರಿಗೆ ಮೊದಲೇ ಹೇಳಿದ್ದೆ, ಕೇವಲ 14 ಸೈಟುಗಳಿಗೆ ಯಾಕೆ ಹೀಗೆ ಆಡ್ತೀರಾ. ಅದೆಲ್ಲವನ್ನೂ ವಾಪಸ್ ಕೊಡಿ, ತನಿಖೆಗೆ ಸಹಕರಿಸಿ ಎಂದಿದ್ದೆ ಎಂದರು.

ಸರಕಾರಿ ನೌಕರರ ಸಂಘದ ಕಾರ್ಯಕ್ರಮ, ಸಂಪುಟ ಸಭೆಯಲ್ಲಿ ಸಿಎಂ ಭಾಗಿ

ಪ್ರಾಸಿಕ್ಯೂಷನ್‌ಗೆ ಸಿದ್ದು ಡೋಂಟ್ ಕೇರ್!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರೂ, ಸಿಎಂ ಮಾತ್ರ ಡೋಂಟ್ ಕೇರ್ ರೀತಿ ತಮ್ಮ ದೈನಂದಿನ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದರು.

ಶನಿವಾರ ಬೆಳಗ್ಗೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುತ್ತಿದ್ದಂತೆ ಮುಖ್ಯಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಕರೆಸಿಕೊಂಡು ಚರ್ಚಿಸಿದ ಸಿದ್ದರಾಮಯ್ಯ , ಬಳಿಕ ಕಾನೂನು ಸಲಹೆಗಾರ ಪೊನ್ನಣ್ಣ ಸೇರಿದಂತೆ ಹಿರಿಯ ವಕೀಲರೊಂದಿಗೆ ಚರ್ಚಿಸಿದರು. ಈ ವೇಳೆ ಪಕ್ಷದ ಹೈಕಮಾಂಡ್ ಬೆಂಬಲ ಸಿಗುತ್ತಿದ್ದಂತೆ, ಸಕ್ರಿಯರಾದ ಮುಖ್ಯಮಂತ್ರಿ , ದೈನಂದಿನ ಚಟುವಟಿಕೆಯಲ್ಲಿ ತೊಡಗಿಸಿಕೊಂಡರು.

ಪ್ರಾಸಿಕ್ಯೂಷನ್ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಅವರ ಆಪ್ತರು ಸೇರಿದಂತೆ ಹಿರಿಯ ಸಚಿವರೆಲ್ಲ ನಿವಾಸಕ್ಕೆ ಆಗಮಿಸಿದರು. ಅವರೊಂದಿಗೆ ಚರ್ಚಿಸಿ, ಮುಂದಿನ ದಿನದಲ್ಲಿ ಯಾವ ರೀತಿಯಲ್ಲಿ ಹೋರಾಟ ನಡೆಸಬೇಕು ಎನ್ನುವ ಬಗ್ಗೆ ಸುದೀರ್ಘ ಚರ್ಚೆನಡೆಸಿದರು. ಈ ವೇಳೆ ಜಿಲ್ಲಾ ಕಾಂಗ್ರೆಸ್ ವತಿಯಿಂದ ಸೋಮವಾರ ರಾಜ್ಯಾದ್ಯಂತ ಪ್ರತಿಭಟನೆ ನಡೆಸಲು ತೀರ್ಮಾನಿಸಲಾಗಿದೆ.

ಸರಕಾರಿ ನೌಕರರ ಸಂಘದ ಕಾರ್ಯಕ್ರಮದಲ್ಲಿ ಭಾಗಿ: ರಾಜ್ಯ ಸರಕಾರ ಜಾರಿಗೊಳಿಸಿರುವ ಏಳನೇ ವೇತನ ಆಯೋಗದ ಶಿಫಾರಸು ಜಾರಿಗೊಳಿಸಿದ್ದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಅಭಿನಂದನಾ ಕಾರ್ಯಕ್ರಮವನ್ನು ಶನಿವಾರ ಅರಮನೆ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿತ್ತು. ಪ್ರಾಸಿಕ್ಯೂಷನ್ ಹಿನ್ನಲೆಯಲ್ಲಿ ಈ ಕಾರ್ಯಕ್ರಮಕ್ಕೆ ಭಾಗವಹಿಸುವುದಿಲ್ಲ ಎನ್ನುವ ಮಾತುಗಳು ಕೇಳಿಬಂದಿತ್ತು. ಆದರೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದಿನಂತೆ ಸಮಾರಂಭದಲ್ಲಿ ಭಾಗವಹಿಸಿದರು.

ಜನಪ್ರಿಯತೆ ಕುಗ್ಗಿಸಲು ಯತ್ನ



ಯಾದಗಿರಿ: ರಾಜ್ಯದಲ್ಲಿ ಉತ್ತಮ ಆಡಳಿತ ನಡೆಸಿ ಅಪಾರ ಜನಮನ್ನಣೆ ಗಳಿಸಿರುವ ಸಿಎಂ ಸಿದ್ದರಾಮಯ್ಯ ವಿರುದ್ಧ ವಿರೋಧ ಪಕ್ಷದವರು ಷಡ್ಯಂತ್ರ ರೂಪಿಸಿ ಮುಖ್ಯಮಂತ್ರಿ ಗಾದಿಯಿಂದ ಕೆಳಗಿಳಿಸಲು ರಾಜ್ಯಪಾಲರನ್ನು ಬಳಸಿಕೊಳ್ಳಲು ಮುಂದಾಗಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶರಣಬಸಪ್ಪಗೌಡ ದರ್ಶನಾಪುರ ಆರೋಪಿಸಿದರು. ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವ ರಾಜ್ಯಪಾಲರ ನಡೆಗೆ ಅಸಮಾಧಾನ ವ್ಯಕ್ತಪಡಿಸಿರುವ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಕಳಂಕರಹಿತ ರಾಜಕಾರಣಿ ಜೀವನದುದ್ದಕ್ಕೂ ಭ್ರಷ್ಟಾಚಾರ ಮುಕ್ತ ಆಡಳಿತ ನಡೆಸಿದ್ದಾರೆ ಎಂದರು.

ಮುಖ್ಯಮಂತ್ರಿ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ ರಾಜ್ಯಪಾಲರ ಕ್ರಮ ವಿರೋಧಿಸಿ ಕಲಬುರಗಿಯಲ್ಲಿ ಕಾಂಗ್ರೆಸ್ ಹಾಗೂ ವಿವಿಧ ಸಂಘಟನೆಗಳ ಕಾರ್ಯಕರ್ತರು ಭಾರಿ ಪ್ರತಿಭಟನೆ ನಡೆಸಿದರು.

ಮುಡಾ ಪ್ರಕರಣ: ಮುಖ್ಯಮಂತ್ರಿಯನ್ನು ಸಿಲುಕಿಸುವ ಹುನ್ನಾರ

ಕಲಬುರಗಿ: ಮುಡಾ ವಿಚಾರದಲ್ಲಿ ಸಿಎಂ ಸಿದ್ದರಾಮಯ್ಯ ಅವರನ್ನು ಸಿಲುಕಿಸುವ ಷಡ್ಯಂತ್ರ ಮತ್ತು ಚುನಾಯಿತ ಸರಕಾರವನ್ನು ದುರ್ಬಲಗೊಳಿಸುವ ಹುನ್ನಾರ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಆರೋಪಿಸಿದ್ದಾರೆ. ಸಿಎಂ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟ ಬಗ್ಗೆ ಸಾಮಾಜಿಕ ಜಾಲತಾಣದ ಮೂಲಕ ಪ್ರತಿಕ್ರಿಯೆ ನೀಡಿದ ಖರ್ಗೆ, ಮುಖ್ಯಮಂತ್ರಿಯನ್ನು ಮುಡಾ ಪ್ರಕರಣದಲ್ಲಿ ಸಿಲುಕಿಸಲು ಕೇಂದ್ರ ಸರಕಾರ ನಡೆಸಿರುವ ಸಂಚಾಗಿದೆ. ಚುನಾಯಿತ ಸರಕಾರವನ್ನು ದುರ್ಬಲ ಗೊಳಿಸಲು ರಾಜಭವನವನ್ನು ಬಿಜೆಪಿಯ ಅಸ್ತ್ರವಾಗಿ ದುರುಪಯೋಗ ಪಡಿಸಿಕೊಳ್ಳಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಎಚ್‌ಡಿಕೆ ವಿರುದ್ಧದ ವಿಚಾರಣೆಗೆ ನಿರ್ಣಯ ಕೈಗೊಳ್ಳದ ರಾಜ್ಯಪಾಲರು | ಹಲವು ಸಂಶಯ ಸೃಷ್ಟಿ

ರಾಜಭವನದಲ್ಲೇ ಧೂಳುಹಿಡಿದ ಹಳೆಯ ಪ್ರಕರಣಗಳು

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಮುಡಾ ಬೆಂಬಿಡದೇ ಕಾಡುತ್ತಿರುವಾಗ ಮೈತ್ರಿಯೊಳಗೆ ಅಕ್ರಮದ ಬಾಂಬ್ ಬಿದ್ದಿದೆ. 2007ರಲ್ಲಿ ಗಣಿಗೆ ಕೊಟ್ಟ ಅನುಮತಿ, ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳುತ್ತಿದೆ. ಅನುಮತಿಗೆ ಕೇಳಿದ ಪ್ರಾಸಿಕ್ಯೂಷನ್ ಮಾತ್ರ ರಾಜಭವನದಲ್ಲೇ ಧೂಳುಹಿಡಿದು ಕೂತಿರುವುದು ಹಲವು ಪ್ರಶ್ನೆಗಳನ್ನು ಹುಟ್ಟಿಹಾಕಿದೆ.

ಮಾಜಿ ಸಿಎಂ ಎಚ್‌ಡಿಕೆ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದ ಎಸ್‌ಐಟಿ ವಿಚಾರ ಹೊಸ ಸಂಘರ್ಷಕ್ಕೆ ಕಾರಣ ಆಗಿದೆ. ಗಣಿ ಅಕ್ರಮ ಪ್ರಕರಣದಲ್ಲಿ 2014ರಿಂದ ಲೋಕಾಯುಕ್ತದ ಎಸ್‌ಐಟಿಯು ವಿಚಾರಣೆ ನಡೆಸಿದೆ. ಪ್ರಕರಣದಲ್ಲಿ ಕುಮಾರಸ್ವಾಮಿ ತಪ್ಪಿತಸ್ಥರು ಎಂಬ ತೀರ್ಮಾನಕ್ಕೆ ಬಂದು ರಾಜ್ಯಪಾಲರಿಗೆ ಪ್ರಾಸಿಕ್ಯೂಷನ್‌ಗೆ ಅನುಮತಿ ಕೇಳಿದೆ. ಬರೋಬ್ಬರಿ 10 ತಿಂಗಳ ಹಿಂದೆಯೇ ಮನವಿ ಮಾಡಿಕೊಂಡಿದ್ದರೂ ರಾಜ್ಯಪಾಲರು ಯಾವುದೇ ತೀರ್ಮಾನ ತೆಗೆದುಕೊಂಡಿಲ್ಲ ಎಂಬ ಮಾತು ಕೇಳಿ ಬರುತ್ತಿದೆ. ಮೈತ್ರಿ ಪಕ್ಷದ ಕೆಲ ನಾಯಕರ ಹಳೆಯ ಪ್ರಕರಣಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುನ್ನಲೆಗೆ ತಂದಿದ್ದಾರೆ. ಅಲ್ಲದೆ ರಾಜ್ಯಪಾಲರ ತಾರತಮ್ಯ ಹಾಗೂ ಏಕಪಕ್ಷೀಯ ನಡವಳಿಕೆಯನ್ನು ಪ್ರಶ್ನಿಸಿದ್ದಾರೆ.

ಎಚ್‌ಡಿಕೆ ಮೇಲಿನ ಆರೋಪ ಏನು?: ಶ್ರೀ ಸಾಯಿ ವೆಂಕಟೇಶ್ವರ ಮಿನರಲ್ಸ್ ಎಂಬ ಬೋಗಸ್ ಸಂಸ್ಥೆಗೆ ಕುಮಾರಸ್ವಾಮಿ ಸಿಎಂ ಆಗಿದ್ದಾಗ ಈ ಆರೋಪ ಕೇಳಿಬಂದಿದೆ. 2007 ಡಿಸೆಂಬರ್ 6ರಂದು ಬಳ್ಳಾರಿಯ ಸಂಡೂರು ತಾಲೂಕಿನ ಭಾವಿಹಳ್ಳಿ, ತಿಮ್ಮಪ್ಪಗುಡಿಯಲ್ಲಿ 550 ಎಕರೆ ಜಾಗವನ್ನು ಗಣಿಗಾರಿಕೆಗೆ ಅಕ್ರಮವಾಗಿ ಗುತ್ತಿಗೆಗೆ ನೀಡಿದ್ದರು ಎನ್ನಲಾಗಿದೆ. ಸದರಿ ಗುತ್ತಿಗೆ ನೀಡುವಾಗ ಮಿನರಲ್ಸ್ ಕನ್ಸೆಷನ್ ನಿಯಮಗಳ, ನಿಯಮ 59 (2)ನ್ನ ಉಲ್ಲಂಘನೆ ಆರೋಪ ಇತ್ತು. ಈ ಅಕ್ರಮದ ಕುರಿತಾಗಿ ಎಫ್‌ಐಆರ್ ದಾಖಲಾಗಿ ಲೋಕಾಯುಕ್ತದ ಎಸ್‌ಐಟಿಯು ತನಿಖೆ ಕೈಗೆತ್ತಿಕೊಂಡು, ಚಾರ್ಜ್‌ಶೀಟ್ ಸಹ ಹಾಕಲಾಗಿದೆ. ಕುಮಾರಸ್ವಾಮಿ ಅವರ ಮೇಲೆ ತನಿಖೆ ಮುಗಿದು ಚಾಟ್ ಸಹ ಆಗಿದೆ. ಅವರು ತಪ್ಪಿತಸ್ಥರೆಂದೇ ಲೋಕಾಯುಕ್ತ ಎಸ್‌ಐಟಿಗೆ ಮನವರಿಕೆಯೂ ಆಗಿದೆ. ಆದರೂ ರಾಜ್ಯಪಾಲರು ಅನುಮತಿ ನೀಡಿಲ್ಲ. ಹೀಗಾಗಿ ರಾಜ್ಯಪಾಲರ ನಡೆಗೆ ಪಕ್ಷಪಾತ ಎನ್ನುವ ಆರೋಪ ಅಂಟಿಸಿದೆ. ಕೇವಲ ದೂರುದಾರರೊಬ್ಬರ ದೂರನ್ನಷ್ಟೇ ಆಧರಿಸಿ ಒಂದು ದಿನದಲ್ಲಿ ಶೋಕಾಸ್ ನೋಟಿಸ್ ನೀಡಿದ್ದು ಪ್ರಶ್ನೆ ಹುಟ್ಟುಹಾಕಿದೆ.

ಪತ್ನಿಗೆ ಮೈಸೂರಿನ ಮುಡಾದಿಂದ ಅಕ್ರಮ ನಿವೇಶನ ಹಂಚಿಕೆ ನಡೆದಿದೆ ಎಂಬ ಆರೋಪದಲ್ಲಿ ಸಿಲುಕಿರುವ ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅನುಮತಿ ನೀಡಿರುವುದು ಭಾರಿ ಚರ್ಚೆಗೆ ಗ್ರಾಸವಾಗಿದೆ. ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಹೆಸರಿನಲ್ಲಿ ಮುಡಾದಿಂದ ಅಕ್ರಮವಾಗಿ ನಿವೇಶನಗಳನ್ನು ಪಡೆದುಕೊಂಡಿದ್ದಾರೆ ಎಂದು ಆರೋಪಿಸಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರಿಗೆ ಮೈಸೂರು ಮೂಲದ ಸ್ನೇಹಮಯಿ ಕೃಷ್ಣ, ಮಡಿಕೇರಿಯ ಟಿ.ಜೆ. ಅಬ್ರಹಾಂ ಹಾಗೂ ಪ್ರದೀಪ್ ದೂರು ನೀಡಿದ್ದರು. ದೂರು ನೀಡಿದ್ದ ದಿನವೇ ಸಿದ್ದರಾಮಯ್ಯ ಅವರಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ನೋಟಿಸ್ ಜಾರಿ ಮಾಡಿದ್ದರು. ಇದೀಗ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ಆದೇಶಿಸಿದ್ದಾರೆ.

2011-15ರಲ್ಲಿ ನಡೆದ ನೇಮಕಾತಿಯಲ್ಲಿನ ಅಕ್ರಮ ಆರೋಪವನ್ನು ಮುರುಗೇಶ್ ನಿರಾಣಿ ಎದುರಿಸುತ್ತಿದ್ದಾರೆ. ಮೊಟ್ಟೆ ಖರೀದಿಯಲ್ಲಿ ಅಕ್ರಮ ಪ್ರಕರಣದಲ್ಲಿ ಶಶಿಕಲಾ ಜೊಲ್ಲೆ ಹಾಗೂ ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಜನಾರ್ದನ ರೆಡ್ಡಿ ವಿರುದ್ಧ ದೂರು ನೀಡಲಾಗಿದ್ದರೂ, ಇದುವರೆಗೆ ಯಾವುದೇ ಕ್ರಮವಾಗಿಲ್ಲ ಎಂಬುದು ಕಾಂಗ್ರೆಸ್‌ನ ದೂರಾಗಿದೆ.

ಬಿಎಸ್‌ವೈ ಪ್ರಕರಣದಲ್ಲಿ ಆದೇಶ ತಳ್ಳಿಹಾಕಿದ್ದ ಹೈಕೋರ್ಟ್



2011ರಲ್ಲಿ ಸಿಎಂ ಆಗಿದ್ದ ಬಿಜೆಪಿ ನಾಯಕ ಬಿಎಸ್ ಯಡಿಯೂರಪ್ಪ ಅವರ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಲಾಗಿತ್ತು. ಆಗ ರಾಜ್ಯಪಾಲರಾಗಿದ್ದವರು ಎಚ್. ಆರ್. ಭಾರದ್ವಾಜ್. ಕೇಂದ್ರದಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಅಧಿಕಾರದಲ್ಲಿತ್ತು ಎನ್ನುವುದು ಗಮನಾರ್ಹ. ರಾಜ್ಯದಲ್ಲಿ ಕಬ್ಬಿಣದ ಅದಿರು ಅಕ್ರಮ ಗಣಿಗಾರಿಕೆಯಲ್ಲಿ ಭಾಗಿಯಾದ ಆರೋಪಕ್ಕೆ ಸಿಲುಕಿದ್ದ ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರ ವಿರುದ್ಧ 1988ರ ಭ್ರಷ್ಟಾಚಾರ ತಡೆ ಕಾಯಿಯಡಿ ಕ್ರಮ ಜರುಗಿಸಲು ಕರ್ನಾಟಕ ಲೋಕಾಯುಕ್ತರಿಗೆ ಆಗಿನ ಎಚ್.ಆರ್. ಭಾರದ್ವಾಜ್ ಅನುಮತಿ ನೀಡಿದ್ದರು. 2015ರ ನವೆಂಬರ್‌ನಲ್ಲಿ ಈ ಪ್ರಾಸಿಕ್ಯೂಷನ್ ಅನುಮತಿಯ ಆದೇಶವನ್ನು ಕರ್ನಾಟಕ ಹೈಕೋರ್ಟ್ ಪಕ್ಕಕ್ಕಿರಿಸಿತ್ತು. ಪ್ರಾಸಿಕ್ಯೂಷನ್ ವಿರುದ್ಧ ಆಗಿನ ಸಂಪುಟ ನೀಡಿದ್ದ ಶಿಫಾರಸುಗಳನ್ನು ರಾಜ್ಯಪಾಲರು ಪರಿಗಣಿಸಿರಲಿಲ್ಲ ಎಂದು ಹೈಕೋರ್ಟ್ ವಿಭಾಗೀಯ ಪೀಠ ಹೇಳಿತ್ತು.

ಸ್ವಾಗತಾರ್ಹ ನಿರ್ಧಾರ

ಮೈಸೂರು: ಸಿಎಂ ವಿರುದ್ಧ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿದ ರಾಜ್ಯಪಾಲರ ನಿರ್ಧಾರವನ್ನು ಮಾಜಿ ಸಂಸದ ಪ್ರತಾಪ್ ಸಿಂಹ, ಸ್ವಾಗತಿಸಿದ್ದಾರೆ.

ಶನಿವಾರ ಪ್ರತಿಕ್ರಿಯೆ ನೀಡಿದ ಅವರು, ನಿವೇಶನ ವಾಪಸ್ ಕೊಟ್ಟು ಹಾಲಿ ನ್ಯಾಯಾಧೀಶರಿಂದ ತನಿಖೆ ಮಾಡಿಸಿ ಎಂಬ ನನ್ನ ಕಾಳಜಿ ಸಿಎಂಗೆ ಅರ್ಥವಾಗಲಿಲ್ಲ. ಹೀಗಾಗಿ ಗಂಡಾಂತರ ಮೈಮೇಲೆ ಎಳೆದುಕೊಂಡಿದ್ದಾರೆ.. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಮುನ್ನ ಬಿಜೆಪಿ ಮೇಲೆ ನೂರು ಆರೋಪ ಮಾಡಿತ್ತು. ಒಂದಾದರೂ ತನಿಖೆ ಸಿದ್ದರಾಮಯ್ಯ ಮಾಡಿಸಿದ್ದಾರಾ? ಯಾವ ಹಗರಣದ ಬಗ್ಗೆಯೂ ಸಣ್ಣ ತನಿಖೆ ಆಗಿಲ್ಲ. ದೊಡ್ಡ ದೊಡ್ಡವರು ಹೊಂದಾಣಿಕೆ ರಾಜಕಾರಣ ಮಾಡಿಕೊಂಡಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು. ಹವಾಲಾ ಹಗರಣದಲ್ಲಿ ಅಡ್ವಾಣಿ ಹೆಸರು ಬಂದ ಕೂಡಲೇ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಪ್ರಾಸಿಕ್ಯೂಷನ್ ಗೆ ಆದೇಶವಾದ ಕಾರಣ ಯಡಿಯೂರಪ್ಪ ರಾಜೀನಾಮೆ ಕೊಟ್ಟರು. ಕೇಜ್ರಿವಾಲ್ ಈಗ ಜೈಲಿನಿಂದಲೇ ಆಡಳಿತ ಮಾಡುತ್ತಿದ್ದಾರೆ. ಸಿಎಂ ಯಾವ ಹಾದಿ ಆಯ್ದುಕೊಳ್ಳುತ್ತಾರೋ ನೋಡೋಣ ಎಂದು ಪ್ರತಾಪಸಿಂಹ ಮಾರ್ಮಿಕ ವಾಗಿ ನುಡಿದರು.

{ಜಿ.ಪರಮೇಶ್ವರ್} ಗೃಹ ಸಚಿವ

ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಯಾವ ರೀತಿ ಅನುಮತಿ ಕೊಟ್ಟಿದ್ದಾರೋ ನೋಡಬೇಕು. ಕಾನೂನಾತ್ಮಕ ಹೋರಾಟ ಮಾಡ್ತೇವೆ ಅಂತಾ ಮೊದಲೇ ಹೇಳಿದ್ದೇವೆ. ಸಿಎಂ ಕಾನೂನು ತಂಡದ ಜತೆ ಚರ್ಚೆ ಮಾಡಿ ಮುಂದೆ ಹೋಗುತ್ತಾರೆ. ಸಚಿವ ಸಂಪುಟ ಸಲಹೆ ನೀಡಿದ ಮೇಲೂ ಕೊಟ್ಟಿದ್ದಾರೆ.

ಎಚ್‌ಡಿಕೆ, ಬಿವೈವಿ ಕಾರಣ

ಮೈಸೂರು: ರಾಜ್ಯಪಾಲರಿಂದ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಡಿಸಲು ಕುಮಾರಸ್ವಾಮಿ, ಪ್ರಹ್ಲಾದ್ ಜೋಶಿ, ವಿಜಯೇಂದ್ರ, ಅಶೋಕ್ ಪ್ರಭಾವ ಬಳಸಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ದೂರಿದ್ದಾರೆ. ಸುದ್ದಿ ಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಎರಡನೇ ಬಾರಿಗೆ ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ ಬೆನ್ನಲ್ಲೇ ಬಿಜೆಪಿ ನಾಯಕರು ಅವರನ್ನು ಕೆಳಗಿಳಿಸಲು ಯೋಜನೆ ಸಿದ್ಧಮಾಡಿದ್ದರು. ರಾಜಭವನವನ್ನು ಬಿಜೆಪಿ, ಜೆಡಿಎಸ್ ತಮ್ಮ ಕಚೇರಿ ಮಾಡಿಕೊಂಡಿರುವುದು ದುರ್ದೈವ ಎಂದು ಟೀಕಿಸಿದರು. ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಲೋಕಾಯುಕ್ತದಲ್ಲಿ ಪ್ರಕರಣ ದಾಖಲಿಸಬೇಕೆಂದು ರಾಜ್ಯಪಾಲರಿಗೆ ದೂರು ನೀಡಿದ್ದಾರೆ. ಶಶಿಕಲಾ ಜೊಲ್ಲೆ, ನಿರಾಣಿ ವಿರುದ್ಧ ಆರೋಪಗಳಿವೆ ಎಂದರು.

ಸಿಎಂ ರಾಜೀನಾಮೆ ಸೂಕ್ತ

ಮೈಸೂರು: ರಾಜ್ಯಪಾಲರು ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿರುವ ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ರಾಜೀನಾಮೆ ಕೊಡುವುದು ಸೂಕ್ತ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ ಅಭಿಪ್ರಾಯ ಪಟ್ಟಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ಕಾನೂನಾತ್ಮಕವಾಗಿ ಏನು ಮಾಡಬೇಕು, ಏನು ಇಂತಹ ವಿಚಾರದಲ್ಲಿ ಏನು ಕ್ರಮ ವಹಿಸಬೇಕು ಅದನ್ನು ಮಾಡುತ್ತಾರೆ. ರಾಜ್ಯಪಾಲರ ನಿರ್ಧಾರದಲ್ಲಿ ಏನೂ ತಪ್ಪಿಲ್ಲ. ಹಗರಣ ನಡೆದಿಲ್ಲ ಎಂದಾದರೆ, ಸಿದ್ದರಾಮಯ್ಯ ಅವರದ್ದು ಏನೂ ತಪ್ಪಿಲ್ಲ ಎಂದಾದರೆ ರಾಜೀನಾಮೆ ಕೊಟ್ಟು ತನಿಖೆಗೆ ಸಹಕರಿಸಲಿ, ತಪ್ಪಿಲ್ಲ ಎಂದು ವರದಿ ಬಂದಲ್ಲಿ ಮತ್ತೆ ತಮ್ಮ ಪದವಿಯಲ್ಲಿ ಮುಂದುವರಿಯಲಿ ಎಂದರು.

ರಾಜಭವನ ದುರ್ಬಳಕೆ

ಬಾಗಲಕೋಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ ನಡೆಸಲು ಕೇಂದ್ರ ಸರಕಾರ ರಾಜಭವನವನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಆರೋಪಿಸಿದ್ದಾರೆ. ರಾಜ್ಯಪಾಲರು ಕೇಂದ್ರದ ಕೈಗೊಂಬೆಯಂತೆ ವರ್ತಿಸಿದ್ದು, ರಾಜಕೀಯ ಪ್ರೇರಿತ ಕ್ರಮಗಳಿಂದಾಗಿ ಸಿಎಂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕು ಎಂಬ ಪ್ರಮೇಯವನ್ನು ರಾಜ್ಯ ಸರಕಾರ ನಿರಾಕರಿಸುತ್ತದೆ. ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿ ಇಂತಹ ಪಿತೂರಿಗಳನ್ನು ಎದುರಿಸುವ ಸಾಮರ್ಥ್ಯ ಕಾಂಗ್ರೆಸ್ ಸರಕಾರ ಮತ್ತು ಪಕ್ಷಕ್ಕೆ ಮತ್ತು 136 ಶಾಸಕರನ್ನು ಆಯ್ಕೆ ಮಾಡಿದ ಜನತೆಗೆ ಇದೆ ಎಂದು ತಿಳಿಸಿದ್ದಾರೆ. ಮುಖ್ಯಮಂತ್ರಿ ರಾಜೀನಾಮೆ ನೀಡಲು ಯಾವುದೇ ಕಾರಣಕ್ಕೂ ಜನರು ಹಾಗೂ ನಾವು ಬಿಡುವುದಿಲ್ಲ ಎಂದರು.

ರಾಜಕೀಯ ಪ್ರೇರಿತ ಕ್ರಮ

ರಾಯಚೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ರಾಜಕೀಯ ಪ್ರೇರಿತ ಆರೋಪದ ಆಧಾರದ ಮೇಲೆ ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವ ರಾಜ್ಯಪಾಲರ ಕ್ರಮ ಸರಿಯಲ್ಲ, ಕೂಡಲೇ ಅನುಮತಿ ಹಿಂದಕ್ಕೆ ಪಡೆಯಬೇಕೆಂದು ಸಣ್ಣ ನೀರಾವರಿ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು ಆಗ್ರಹಿಸಿದ್ದಾರೆ. ಈ ಬಗ್ಗೆ ಹೇಳಿಕೆ ನೀಡಿರುವ ಅವರು, ರಾಜಕೀಯ ದ್ವೇಷ ಮತ್ತು ಒತ್ತಡಕ್ಕೆ ರಾಜ್ಯಪಾಲರ ಕಚೇರಿಯನ್ನು ಬಳಸಿಕೊಳ್ಳಲಾಗಿದೆ. ಬಹುಮತದ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದಿರುವ ಸರಕಾರವನ್ನು ಅಸ್ಥಿರಗೊಳಿಸಲು ಬಿಜೆಪಿಯ ಹುನ್ನಾರ ಸಫಲವಾಗುವುದಿಲ್ಲ. ನಮ್ಮ ಮಂತ್ರಿ ಮಂಡಲ ಹಾಗೂ ರಾಜ್ಯದ ಜನತೆ ಮುಖ್ಯಮಂತ್ರಿ ಜೊತೆಗಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಜಸ್ವಂತ್ ಸಿಂಗ್ ಎಂಬ ವಿಚಿತ್ರ ಖಯಾಲಿಯ ರಾಜಕಾರಣಿ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

2020ರ ಸೆಪ್ಟೆಂಬರ್‌ನಲ್ಲಿ ನಮ್ಮನ್ನು ಅಗಲಿದ ಹಿರಿಯ ರಾಜಕಾರಣಿ ಜಸ್ವಂತ್ ಸಿಂಗ್‌ರನ್ನು ನೀವು ಮರೆತಿರಲಿಕ್ಕಿಲ್ಲ. ಅವರಿಗೆ ಒಂದು ವಿಚಿತ್ರ ಖಯಾಲಿಯಿತ್ತು. ಸಂಸತ್ ಸದಸ್ಯರನ್ನು ಕಂಡಾಗ ಅವರ ಹೆಸರಿನ ಬದಲು, ಅವರ ಲೋಕಸಭಾ ಕ್ಷೇತ್ರದ ಹೆಸರಿನಿಂದ ಮಾತಾಡಿಸುತ್ತಿದ್ದರು! ಸೋಮನಾಥ ಚಟರ್ಜಿ ಅವರಿಗಂತೂ 'ಬೋಲ್ಪುರ್‌ನ ಮಾನ್ಯ ಸದಸ್ಯರೇ' ಎಂದೇ ಕರೆಯುತ್ತಿದ್ದರು. ಮುಂಬೈನ ಉದ್ಯಮಿಗಳ ಜತೆ ಸಖ್ಯ ಹೊಂದಿದ್ದ ದಕ್ಷಿಣ ಮುಂಬೈ ಲೋಕಸಭಾ ಕ್ಷೇತ್ರದ ಸದಸ್ಯ ಮುರಳಿ ದೇವೋರಾ ಲೋಕಸಭೆಯಲ್ಲಿ ಪದೇ ಪದೆ ಅವರ ಮಾತಿಗೆ ಅಡ್ಡಿಪಡಿಸಿದಾಗ, 'The honourable member from Nariman Point' ಎಂದು ಹೇಳಿ ಸುಮ್ಮನೆ ಕುಳ್ಳಿರಿಸಿದ್ದರು. ಜಸ್ವಂತ್ ಸಿಂಗ್‌ಗೆ ತಮ್ಮ ಸಂಪರ್ಕಕ್ಕೆ ಬಂದ ಲೋಕಸಭಾ ಸದಸ್ಯರ ಹೆಸರಿನ ಜತೆಗೆ ಅವರ ಕ್ಷೇತ್ರಗಳ ಹೆಸರು ಗೊತ್ತಿತ್ತು. ಕೆಲವೊಮ್ಮೆ ಅವರು ಲೋಕಸಭಾ ಸದಸ್ಯನ ಹೆಸರನ್ನು ಮರೆತಿದ್ದಿದೆ, ಆದರೆ ಕ್ಷೇತ್ರದ ಹೆಸರನ್ನಂತೂ ಮರೆಯುತ್ತಿರಲಿಲ್ಲ.



ಕೇಂದ್ರ ಸಂಪುಟದಲ್ಲಿ ಜಸ್ವಂತ್ ಅವರ ಸಹೋದ್ಯೋಗಿಯಾದ ಅನಂತ್‌ಕುಮಾರ್ ಅವರು ಒಮ್ಮೆ, ಕರ್ನಾಟಕದ ಲೋಕಸಭಾ ಸದಸ್ಯರಾದ ರಾಮಚಂದ್ರ ವೀರಪ್ಪ ಅವರನ್ನು ಪರಿಚಯಿಸಿದರು. ಆಗ ಜಸ್ವಂತ್, 'Yes, I know, he is the honourable member from Bidar' ಎಂದು ಹೇಳಿ ಆಶ್ಚರ್ಯವನ್ನುಂಟು ಮಾಡಿದ್ದರು. ಒಮ್ಮೆ ಜಸ್ವಂತ್ ಸಿಂಗ್ ಅವರನ್ನು ಪತ್ರಕರ್ತರೊಬ್ಬರು, 'ನೀವೇಕೆ ಸಂಸದರನ್ನು ಅವರ ಕ್ಷೇತ್ರಗಳಿಂದ ಗುರುತಿಸುತ್ತೀರಿ?' ಎಂದು ಕೇಳಿದಾಗ, 'ಸಂಸದರ ಹೆಸರು ಗೊತ್ತಿದ್ದರೆ, ಅವರ ಕ್ಷೇತ್ರ ಗೊತ್ತಿರಲೇಬೇಕಲ್ಲ? ಅವರು ಯಾವ ಕ್ಷೇತ್ರದ ಸದಸ್ಯರು ಎಂಬುದನ್ನು ತಿಳಿದುಕೊಳ್ಳದೇ, ಅವರನ್ನು ತಿಳಿದುಕೊಳ್ಳುವುದು ಸಾಧ್ಯವೇ?' ಎಂದು ಹೇಳಿದ್ದರು.

ಜಸ್ವಂತ್ ಸಿಂಗ್ ಅವರು ಒಂದು ಕಾಲಕ್ಕೆ ವಾಜಪೇಯಿ ಸರಕಾರದಲ್ಲಿ ವಿದೇಶಾಂಗ ವ್ಯವಹಾರಗಳ ಖಾತೆ ಮತ್ತು ರಕ್ಷಣಾ ಖಾತೆ ಸಚಿವರಾಗಿದ್ದರು. ಕೆಲವು ಕಾಲ ಅವರು ಹಣಕಾಸು ಸಚಿವರೂ ಆಗಿದ್ದರು. ವಾಜಪೇಯಿ ಅವರ ಅತ್ಯಂತ ನಂಬುಗಸ್ಥರಾಗಿದ್ದರು. ಒಂದು ಸಂದರ್ಭದಲ್ಲಿ ಅವರು ಅತ್ಯಂತ ಮಹತ್ವದ ವಿಷಯಗಳನ್ನು ಮೊದಲು ಚರ್ಚಿಸುತ್ತಿದ್ದುದೇ ಜಸ್ವಂತ್ ಬಳಿ. ಒಮ್ಮೆ ಜಸ್ವಂತ್ ಸಿಂಗ್ ಅವರು ವಿದೇಶದಲ್ಲಿರುವ ಒಬ್ಬ ಅಧಿಕಾರಿಯ ಸೇವಾ ಅವಧಿ ವಿಸ್ತರಿಸಿದ್ದನ್ನು ರದ್ದುಗೊಳಿಸಿದರು. ಮರುದಿನವೇ ತಮ್ಮ ಹಿಂದಿನ ಆದೇಶವನ್ನು ಹಿಂದಕ್ಕೆ ಪಡೆದಿದ್ದರು. ಇದು ಸಣ್ಣ ವಿವಾದಕ್ಕೆ ಕಾರಣವಾಗಿತ್ತು. ಈ ಬಗ್ಗೆ ಪತ್ರಕರ್ತರು ಪ್ರಶ್ನಿಸಿದಾಗ, 'ನಿಮಗೆ ನಾನು ಎರಡು ಖಾತೆಗಳ ಮಂತ್ರಿ ಎಂಬುದು ಗೊತ್ತಿದ್ದೂ ಈ ಪ್ರಶ್ನೆ ಕೇಳಿದ್ದೀರಿ. ವಿದೇಶಾಂಗ ಸಚಿವನಾಗಿ ಅಧಿಕಾರಿಯ ಸೇವಾ ಅವಧಿಯನ್ನು ರದ್ದುಗೊಳಿಸಿದ್ದೇನೆ ಮತ್ತು ರಕ್ಷಣಾ ಸಚಿವನಾಗಿ, ಸೇವಾ ಅವಧಿ ವಿಸ್ತರಣೆಗೆ ಅನುಮತಿ ನೀಡಿದ್ದೇನೆ' ಎಂದು ಚಟಾಕಿ ಹಾರಿಸಿ, ತಮ್ಮ ಕ್ರಮವನ್ನು ಸಮರ್ಥಿಸಿಕೊಂಡಿದ್ದರು.

ಕ್ವೆಚಿಂಗ್ ಅಂದ್ರೇನು ಗೊತ್ತಾ?!

ಕೆಲವು ವರ್ಷಗಳ ಹಿಂದೆ, ಲಂಡನ್ನಿನ ಮಹಾನಗರಪಾಲಿಕೆಯಲ್ಲಿ ಒಬ್ಬ ಸದಸ್ಯನಿದ್ದ. ಆತನ ಹೆಸರು ಡೇವಿಡ್ ಕ್ವೆಚ್. ಆತ ಮಾತಾಡಲು ಎದ್ದು ನಿಂತರೆ ಒಂದೇ ಸಮನೆ ಕೀರಲು ದನಿಯಲ್ಲಿ ಕಿರುಚುತ್ತಿದ್ದ. ಅವನ ಮಾತುಗಳನ್ನು ಸಹಿಸಿಕೊಳ್ಳುವುದು ಅವನ ಪಕ್ಷದವರಿಗೇ ಅಸಹನೀಯವಾಗುತ್ತಿತ್ತು. ಕ್ವೆಚ್ ಮಾತಿಗೆ ನಿಂತರೆ ಎಲ್ಲರೂ ಹಣೆಹಣೆ ಚಚ್ಚಿಕೊಳ್ಳುತ್ತಿದ್ದರು. ಹಾಗಂತ ಕ್ವೆಚ್ ಮಾತುಗಳಲ್ಲಿ ವಿಷಯ ಇರುತ್ತಿದ್ದವು. ಆದರೆ ತನ್ನ ದನಿಯ ಏರಿಳಿತ, ದೀರ್ಘ ಭಾಷಣಗಳಿಂದ ಆತ ಬೋರು ಹೊಡೆಸುತ್ತಿದ್ದ. ಸ್ವಲ್ಪ ಹೊತ್ತಿನ ನಂತರ ಅವನ ಕೀರಲು ಮಾತನ್ನು ಕೇಳುವುದು ಸಾಧ್ಯವೇ ಇರಲಿಲ್ಲ. ಆದರೆ ಆತನಿಗೆ ಮಾತಾಡುವ ಚಟ (ನಮ್ಮ ಕೆಲವು ರಾಜಕಾರಣಿಗಳಂತೆ!). ಅಷ್ಟೇ ಅಲ್ಲ, ಎಲ್ಲಾ ವಿಷಯಗಳ ಚರ್ಚೆಯಲ್ಲೂ ಭಾಗವಹಿಸುತ್ತಿದ್ದ. ಕ್ವೆಚ್ ಮಾತಾಡಲು ಎದ್ದು ನಿಲ್ಲುತ್ತಿದ್ದಂತೆ, ಪ್ರತಿಪಕ್ಷಗಳ ಸದಸ್ಯರು ಅವನಿಗೆ ಮುಜುಗರವುಂಟು ಮಾಡಲು ಮುಂದಿನ ಮೇಜಿನ ಮೇಲೆ ತಲೆಯಿಟ್ಟು ಮಲಗಿದಂತೆ ನಟಿಸುತ್ತಿದ್ದರು.

ಆದರೆ ಕ್ವೆಚ್ ಅದಕ್ಕೆಲ್ಲಾ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ, ತಾನು ಹೇಳಬೇಕಾದುದನ್ನು ಹೇಳಿಯೇ ಕುಳಿತುಕೊಳ್ಳುತ್ತಿದ್ದ. ಒಮ್ಮೆ ಸದಸ್ಯರಿಗೆ, ಈ ದಿನ ಮಾತಾಡಲು ಕ್ವೆಚ್ ಸಮಯ ಕೇಳಿದ್ದಾನೆಂದು ಗೊತ್ತಾಯಿತು. ಯಾರೂ ಸದನಕ್ಕೆ ಬರದೇ ಹೊರಗಡೆಯೇ ಉಳಿಯಲು ನಿರ್ಧರಿಸಿದ್ದರು. ಇದು ಕ್ವೆಚ್‌ಗೆ ಗೊತ್ತಾಯಿತು. 'ನಾನೇನು ಮಾಡಲಿ? ನನ್ನ ದನಿಯಿರುವುದೇ ಹೀಗೆ. ನನಗೂ ಗೊತ್ತಾಗುತ್ತದೆ, ನನ್ನ ದನಿ ನಿಮಗೆ ಕಿರಿಕಿರಿಯುಂಟು ಮಾಡುತ್ತದೆಂದು. ಹಾಗೆಂದು ನನಗೆ ದನಿ ಬದಲಿಸಿ ಮಿಮಿಕ್ರಿ ಮಾಡಲು ಬರುವುದಿಲ್ಲ. ಹೀಗಾಗಿ ನೀವು ನನ್ನನ್ನು ಸಹಿಸಿಕೊಳ್ಳಲೇಬೇಕು. ನಿಮ್ಮ ಪುಣ್ಯ, ನಾನು ಸದನದಲ್ಲಿ ಮಾತಾಡುತ್ತೇನೆ, ಹಾಡುವುದಿಲ್ಲವಲ್ಲ. ಒಮ್ಮೆ ಹಾಡಿದ್ದರೆ, ನಿಮ್ಮ ಪರಿಸ್ಥಿತಿ ಏನಾಗುತ್ತಿತ್ತು ಎಂಬುದನ್ನು ತುಸು ಯೋಚಿಸಿ' ಎಂದು ಕಿಚಾಯಿಸಿದ್ದ.

'ಕ್ವೆಚ್ ಮಾತುಗಳನ್ನು ಕೇಳಿ ಯಾರೂ ವೋಟು ಹಾಕುವುದಿಲ್ಲ. ಆತನ ಕೆಲಸ ಮತ್ತು ಬದ್ಧತೆ ನೋಡಿ ಮತ ಹಾಕುತ್ತಾರೆ. ಈ ಕಾರಣದಿಂದ ಆತ ಸತತ ಆರಿಸಿ ಬರುತ್ತಾನೆ' ಎಂದು ಆತನ ಮತಕ್ಷೇತ್ರದ ಜನ ಮಾತಾಡಿಕೊಳ್ಳುತ್ತಿದ್ದರು. ಒಮ್ಮೆ ಆತ ಮಾತಾಡಲು ಎದ್ದು ನಿಲ್ಲುತ್ತಿದಂತೆ, 'ಕ್ವೆಚ್ ಮಾತಾಡಿದರೆ ಸಹಿಸಿಕೊಳ್ಳಲು ಸಾಧ್ಯವಿಲ್ಲ, ಅವರು ಏನು ಹೇಳಲು ಬಯಸಿದ್ದಾರೋ ಅದನ್ನು ಅವರು ಲಿಖಿತ ರೂಪದಲ್ಲಿ ಬರೆದುಕೊಂಡು ಬರಲಿ. ಅದನ್ನು ಅವರ ಪರವಾಗಿ ಬೇರೆಯವರು ಓದಲಿ. ಅವರ ಕರ್ಕಶ ದನಿಯನ್ನು ಕೇಳಲು ಸಾಧ್ಯವೇ ಇಲ್ಲ, ಅವರ ಮಾತು ಭಯಾನಕ ಶಬ್ದ ಮಾಲಿನ್ಯವನ್ನುಂಟುಮಾಡುತ್ತದೆ. ಇದು ಸದನದ ಗಾಂಭೀರ್ಯಕ್ಕೆ ಧಕ್ಕೆಯುಂಟುಮಾಡುತ್ತದೆ' ಎಂದು ಸದಸ್ಯರು ಕೂಗಾಡಿದರು. ಕ್ವೆಚ್‌ಗೆ ಬೇರೆಯವರನ್ನು ದೂರದೇ ಮಾತಾಡಲು ಬರುತ್ತಿರಲಿಲ್ಲ (ವೈಎನ್ಕೆ ಅವರು ಅವನನ್ನು ನೋಡಿದ್ದಿದ್ದರೆ 'ವಾಚಕರವಾಣಿ' ಎಂದು ಹೆಸರಿಡುತ್ತಿದ್ದರೇನೋ?!).

ಒಮ್ಮೆ ಕ್ವೆಚ್ ಎರಡೂವರೆ ಗಂಟೆ ಮಾತಾಡಿದಾಗ, ಸದನದಲ್ಲಿದ್ದ ಬಹುತೇಕ ಸದಸ್ಯರು ನಿದ್ದೆ ಹೋಗಿದ್ದರು. ಇನ್ನು ಕೆಲವರು ಸದನದಿಂದ ಹೊರಗೆ ಹೋಗಿದ್ದರು. ಈ ಪ್ರಸಂಗಕ್ಕೆ ಲಂಡನ್ನಿನ ಹೆಸರಾಂತ ಟ್ಯಾಬ್ಲಾಯ್ಡ್ ಪತ್ರಿಕೆ 'ದಿ ಸನ್' ಒಂದೇ ಪದದ ಶೀರ್ಷಿಕೆ ನೀಡಿತ್ತು– Kvetching! ಇದಕ್ಕಿಂತ ಪರಿಣಾಮಕಾರಿಯಾದ ಶೀರ್ಷಿಕೆ ಕೊಡಲು ಸಾಧ್ಯವೇ ಇಲ್ಲ ಬಿಡಿ. ಆಕ್ಸ್‌ಫರ್ಡ್ ಪದಕೋಶದಲ್ಲಿ Kvetch (ಕ್ವೆಚ್) ಅಂದರೆ ಸದಾ ದೂರುವವನು, ಬೇರೆಯವರ ಬಗ್ಗೆ ದೋಷಾರೋಪ ಮಾಡುವವನು, ಮಾತಿನಿಂದ ಕಿರುಕುಳ ಕೊಡುವವನು, ಕೀರಲು ಸ್ವರದಲ್ಲಿ ಮಾತಾಡುವವನು.. ಎಂಬೆಲ್ಲಾ ಅರ್ಥಗಳಿವೆ. (ಉದಾ: He was kvetching about the petrol price hike). ಕ್ವೆಚ್ ಹುಟ್ಟಿದಾಗ, ಅವನ ದನಿಯನ್ನು ಕೇಳಿಯೇ ತಂದೆ-ತಾಯಿ ಆ ಹೆಸರನ್ನು ಇಟ್ಟರಾ?!

ಬುಸಿಂಗೇನ್ ಆಮ್ ಹೊಚರೇನ್

ನಾನು ಕೆಲವು ವರ್ಷಗಳ ಹಿಂದೆ, ಸ್ವಿಜರ್‌ಲ್ಯಾಂಡ್ ಮತ್ತು ಜರ್ಮನಿ ನಡುವೆ ಇರುವ ಪುಟ್ಟ ಊರಾದ ಬುಸಿಂಗೇನ್ ಆಮ್ ಹೊಚರೇನ್‌ಗೆ ಹೋಗಿದ್ದೆ. ಇದು ನಮ್ಮ ಕರ್ನಾಟಕ-ಕೇರಳ ಗಡಿಯಲ್ಲಿರುವ ಹಲವು ಊರುಗಳಂತೆ. ಮನೆಯ ಅಂಗಳ ಅಥವಾ ಜಗುಲಿ ಕರ್ನಾಟಕದಲ್ಲಿದ್ದರೆ, ಹಿತ್ತಲು ಅಥವಾ ಬಚ್ಚಲಮನೆ ಕೇರಳದಲ್ಲಿ. ಈ ಊರನ್ನು ಸ್ವಿಜರ್‌ಲ್ಯಾಂಡ್‌ನಲ್ಲಿರುವ ಜರ್ಮನ್ ಊರು ಎಂದು ಕರೆಯುತ್ತಾರೆ. ಭೌಗೋಳಿಕವಾಗಿ ಬುಸಿಂಗೇನ್ ಆಮ್ ಹೊಚರೇನ್ ಜರ್ಮನಿಯಲ್ಲಿದೆ. ಆದರೆ ಸ್ವಿಜರ್‌ಲ್ಯಾಂಡ್ ಆಡಳಿತಕ್ಕೆ ಒಳಪಟ್ಟಿದೆ. ಸ್ವಿಸ್ ಫ್ರಾಂಕ್ ಕರೆನ್ಸಿ ಚಲಾವಣೆಯಲ್ಲಿರುವ ಏಕೈಕ ಜರ್ಮನ್ ಊರೆಂದರೆ ಇದೊಂದೇ. ತಮಾಷೆಯೆಂದರೆ, ಬುಸಿಂಗೇನ್ ಆಮ್ ಹೊಚರೇನ್‌ಗೆ ಸ್ವಿಜರ್‌ಲ್ಯಾಂಡ್ ಮತ್ತು ಜರ್ಮನಿಯ ಎರಡೆರಡು ಪೋಸ್ಟಲ್ ಕೋಡ್‌ಗಳಿವೆ. ಆ ಊರಿನಲ್ಲಿ ವಾಸಿಸುವ ಜನ ಆ ಎರಡೂ ದೇಶಗಳ ಫೋನ್ ನಂಬರ್ ಬಳಸುತ್ತಾರೆ. ವಿಚಿತ್ರ ಅಂದ್ರೆ, ಎಫ್ಸಿ ಬುಸಿಂಗೇನ್ ಎಂಬ ಜರ್ಮನ್ ಫುಟ್ಬಾಲ್ ತಂಡ ಸ್ವಿಜರ್‌ಲ್ಯಾಂಡ್ ಪರವಾಗಿ ಆಡುತ್ತದೆ. ಒಂದೂವರೆ ಸಾವಿರ ಜನಸಂಖ್ಯೆ ಇರುವ ಬುಸಿಂಗೇನ್ ಮೂಲತಃ ಪ್ರವಾಸಿ ತಾಣ. ಇಲ್ಲಿನ ಜನಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪ್ರವಾಸಿಗರು ಬರುತ್ತಾರೆ. ಕೆಲವು ವರ್ಷಗಳ ಕಾಲ ಸ್ವಿಸ್ ಮತ್ತು ಜರ್ಮನ್ ಸರಕಾರಗಳು ಈ ಒಂದು ಪುಟ್ಟ ಊರಿನ ಮೇಲೆ ನಿಯಂತ್ರಣ ಸಾಧಿಸಲು ಹಲವು ಸಲ ಕಿತ್ತಾಡಿಕೊಂಡಿದ್ದವು. ಈಗ ಈ ಎರಡೂ ದೇಶಗಳು ಪರಸ್ಪರ ಒಡಂಬಡಿಕೆ ಮಾಡಿಕೊಂಡಿದ್ದು, ಇದು ಉಭಯ ದೇಶಗಳಿಗೆ ಸೇರಿದ ವಿಶೇಷ ಊರು ಎಂದು ಪರಿಗಣಿಸಿ, ಸಮಾಧಾನಪಟ್ಟುಕೊಂಡಿವೆ.

ಬದಲಾಗುವ ಭಾಷೆ

ಕಳೆದ 25 ವರ್ಷಗಳಲ್ಲಿ ಇಂಗ್ಲಿಷ್ ಸೇರಿದಂತೆ, ಭಾರತದ ಎಲ್ಲಾ ಭಾಷೆಗಳೂ ಬದಲಾಗಿವೆ. ಹೊಸ ಹೊಸ ಪದಗಳು ಬಂದಿವೆ. ಇದಕ್ಕೆ ಪ್ರಮುಖ ಕಾರಣ ತಂತ್ರಜ್ಞಾನ ಮತ್ತು ನವಸಾಕ್ಷರರು. ಹೊಸ ಹೊಸ ಕ್ಷೇತ್ರಗಳಲ್ಲಿರುವವರು ಬರೆಯಲು ಆರಂಭಿಸಿದ್ದರಿಂದ, ಸಹಜವಾಗಿ ಭಾಷೆಗೆ ಹೊಸನೀರು ಬಂದು ಸೇರಿಕೊಳ್ಳುತ್ತಿದೆ.

ಕಳೆದ 25 ವರ್ಷಗಳಲ್ಲಿ ಕನ್ನಡವೂ ಸಾಕಷ್ಟು ಬದಲಾಗಿದೆ. ಕಾಲಕ್ಕೆ ತಕ್ಕಂತೆ ಭಾಷೆಯೂ ಬದಲಾಗಿದೆ. ಪ್ರತಿದಿನ ಹೊಸ ಹೊಸ ಪದಗಳು ಚಾಲನೆಗೆ ಬರುತ್ತಿವೆ. ಭಾಷಾ ರಚನೆಯೂ ಹೊಸ ದಿಕ್ಕಿಗೆ ಮುಖ ಮಾಡಿದೆ. ಇದಕ್ಕೆ ನಮ್ಮ ಟೆಕ್ಕಿಗಳ ಕೊಡುಗೆಯೂ ಅಪಾರ. ಹೊಸ ಹೊಸ ಲೇಖಕರು ದೊಡ್ಡ ಸಂಖ್ಯೆಯಲ್ಲಿ ಬರೆಯುತ್ತಿದ್ದಾರೆ. ಅದರಲ್ಲೂ ಫೇಸ್‌ಬುಕ್ ಸೇರಿದಂತೆ ಸಾಮಾಜಿಕ ಜಾಲತಾಣಗಳಲ್ಲಿ, ಬರಹಗಾರರು ಹೆಚ್ಚು ಕ್ರಿಯಾಶೀಲರಾಗಿದ್ದಾರೆ. ಕೆಲವರಂತೂ ಭಾಷೆಯನ್ನು ಚೆಂದವಾಗಿ ಬಳಸುತ್ತಿದ್ದಾರೆ. ಆದರೆ ಕೆಲ ವರ್ಷಗಳ ಹಿಂದೆ ಓದುಗರೊಬ್ಬರು ಹೇಳಿದ ಮಾತು ನಾನು ತುಸು ಯೋಚಿಸುವಂತೆ ಮಾಡಿತು. ಕಳೆದ ಏಳೂವರೆ ದಶಕಗಳಿಂದ ಪತ್ರಿಕೆಗಳನ್ನು ಓದುತ್ತಿರುವ ಅವರು ಹೇಳಿದರು– 'ಈಗಿನ ಪತ್ರಿಕೆಗಳಿಗೂ, ಐವತ್ತು-ಅರವತ್ತು ವರ್ಷಗಳ ಹಿಂದಿನ ಪತ್ರಿಕಾ ಭಾಷೆಗೂ ಬಹಳ ವ್ಯತ್ಯಾಸ. ನಾನು ಇತ್ತೀಚಿಗೆ ಹೊಸ ಭಾಷೆಗೆ ಒಗ್ಗಿಕೊಂಡಿದ್ದೇನೆ. ಇತ್ತೀಚಿನ ಎಲ್ಲಾ ಕನ್ನಡ ಪತ್ರಿಕೆಗಳು 'ಉದ್ದೇಶ' ಎಂದು ಬರೆಯುತ್ತವೆ. ಸಾಹಿತಿಗಳು ಸಹ ಹಾಗೇ ಬರೆಯುತ್ತಾರೆ. ಆದರೆ ಅದು 'ಉದ್ದಿಶ್ಯ' ಎಂದಾಗಬೇಕು. ಎಂಬತ್ತರ ದಶಕದವರೆಗೂ ಪತ್ರಕರ್ತರೆಲ್ಲ 'ಉದ್ದಿಶ್ಯ' ಎಂದೇ ಬರೆಯುತ್ತಿದ್ದರು. ಈಗ ಅದು ಉದ್ದೇಶವಾಗಿದೆ. ಈಗ ನೀವು ಉದ್ದಿಶ್ಯ ಎಂದು ಬರೆದರೆ, ಅದು ತಪ್ಪು ಎಂದು ಓದುಗರು ಭಾವಿಸಬಹುದು. ಈ ರೀತಿ, ನಾನು ನೂರಾರು ಪದಗಳನ್ನು ಉದಾಹರಿಸಬಲ್ಲೆ. ಹೀಗಾಗಿ ನನಗೆ ಪತ್ರಿಕೆ ಓದುವಾಗ ಬಹಳ ಕಿರಿಕಿರಿಯಾಗುತ್ತದೆ. ಆದರೆ ಈಗ ನಿಧಾನವಾಗಿ ಒಗ್ಗಿಕೊಂಡಿದ್ದೇನೆ. ಕಾಲಚಕ್ರ ತಿರುಗಿದಂತೆ, ನಾವೂ ಬದಲಾಗಲೇಬೇಕಲ್ಲ'.

ಇಂಗ್ಲಿಷ್ ಮತ್ತು ಲಾಜಿಕ್!

ಪ್ರತಿ ನಿಯಮ (Rule)ಕ್ಕೂ ಅಪವಾದ (exception) ಇರುವುದು ಸಹಜ. ಆದರೆ ಇಂಗ್ಲಿಷ್ ಎಂಥ ಲಾಜಿಕ್ ಇಲ್ಲದ ಭಾಷೆ ಅಂದರೆ, ಅಲ್ಲಿ ನಿಯಮಗಳಿಗಿಂತ ಹೆಚ್ಚು ಅಪವಾದಗಳಿವೆ. ಆದರೂ ಇದನ್ನು ಜಗತ್ತಿನಾದ್ಯಂತ ಜನ ಒಪ್ಪಿಕೊಂಡಿದ್ದಾರೆ ಮತ್ತು ಕೆಲವೇ ಕೆಲವು ಜನ ಸಮರ್ಪಕವಾಗಿ ಮಾತಾಡುತ್ತಾರೆ. ಇಂಗ್ಲಿಷ್ ಅಂದರೆ ಕೆಲವರಿಗೆ ಕಬ್ಬಿಣದ ಕಡಲೆ ಆಗಿರುವುದು ಸಹ ಅದಕ್ಕೇ.

ಕೆಲ ವರ್ಷಗಳ ಹಿಂದೆ, ಉದ್ಯಮಿ ಕಿರಣ್ ಮಜುಂದಾರ್ ಷಾ ಒಂದು ಟ್ವೀಟ್ ಮಾಡಿದ್ದರು– Jail ಮತ್ತು Prison ಎಂಬವು ಸಮಾನಾರ್ಥಕ (synonym) ಪದಗಳು. ವಿಚಿತ್ರ ಅಂದರೆ, Jailer ಮತ್ತು Prisoner ವಿರುದ್ಧಾರ್ಥಕ (antonyms) ಪದಗಳು. ಇಂಗ್ಲಿಷಿನಲ್ಲಿ ಒಂದು ಮಾತಿದೆ– A love that defies all logic is sometimes the most logical thing in the world. ಈ ಮಾತನ್ನು ಇಂಗ್ಲಿಷ್‌ಗೂ ಅನ್ವಯಿಸಬಹುದು.

ಕಪಿಲ್ ಪ್ರತಿಕ್ರಿಯೆ ಏನು?

ಇದು ಎಷ್ಟು ನಿಜವೋ ಗೊತ್ತಿಲ್ಲ, ಆದರೆ ಇಂಥದ್ದೊಂದು ಪ್ರಸಂಗವನ್ನು ನಾನು ಅಲ್ಲಲ್ಲಿ ಕೇಳಿದ್ದೇನೆ. 1983ರ ಕ್ರಿಕೆಟ್ ವಿಶ್ವಕಪ್‌ನಲ್ಲಿ ಜಿಂಬಾಬ್ವೆ ವಿರುದ್ಧ ಕಪಿಲ್ ದೇವ್ 175 ರನ್ ಹೊಡೆದು ಭಾರತಕ್ಕೆ ಅಚ್ಚರಿಯ ವಿಜಯ ತಂದುಕೊಟ್ಟಿದ್ದು ನೆನಪಿರಬಹುದು. ಭಾರತ ಒಂದು ಹಂತದಲ್ಲಿ 78 ರನ್ನಿಗೆ 7 ವಿಕೆಟ್ ಕಳೆದುಕೊಂಡು ಅತ್ಯಂತ ಶೋಚನೀಯ ಸ್ಥಿತಿಯಲ್ಲಿತ್ತು. ಆಗ ಕಪಿಲ್ ಆಡಲು ಬಂದರು. 138 ಬಾಲುಗಳಲ್ಲಿ, 16 ಬೌಂಡರಿ, 6 ಸಿಕ್ಸರ್ ನೆರವಿನಿಂದ, 175 ರನ್ ಹೊಡೆದು ಭಾರತಕ್ಕೆ ವೀರೋಚಿತ ವಿಜಯ ತಂದುಕೊಟ್ಟರು.



ಅಂಥ ಅದ್ಭುತ ಆಟವಾಡಿದ ಕಪಿಲ್ ದೇವ್‌ಗೆ ಪತ್ರಕರ್ತರು ಕೇಳಿದರು– 'ಭಾರತ ಎಂದಾದರೂ ನಿಮ್ಮಂಥ ಮತ್ತೊಬ್ಬ ಆಟಗಾರನನ್ನು ಹುಟ್ಟಿಸಬಹುದಾ, ರೂಪಿಸಬಹುದಾ?'. ಅದಕ್ಕೆ ಕಪಿಲ್ ತಕ್ಷಣ ಹೇಳಿದರು– 'ಅದು ಸಾಧ್ಯವಿಲ್ಲ, ಯಾಕೆಂದರೆ ನನ್ನ ತಂದೆ ತೀರಿಕೊಂಡಿದ್ದಾರೆ ಮತ್ತು ತಾಯಿಗೆ ವಯಸ್ಸಾಯಿತು'.

ಒಪ್ಪತಕ್ಕ ಮಾತು!

ಅಮೆರಿಕದ ಫುಟ್ಬಾಲ್ ಆಟಗಾರ ಟ್ರೆಂಟ್ ಶೆಲ್ಟನ್ ಜೀವನಗಾಥೆಯನ್ನು ಓದುತ್ತಿದ್ದೆ. ಆತ ಒಂದೆಡೆ ಬರೆದಿದ್ದ– 'ನನ್ನ ಎಲ್ಲಾ ಅಭಿಪ್ರಾಯಗಳನ್ನು ನೀವು ಒಪ್ಪಲಿಕ್ಕಿಲ್ಲ. ಆದರೆ ನನ್ನ ಒಂದು ಮಾತನ್ನು ಒಪ್ಪಿಯೇ ಒಪ್ಪುತ್ತೀರಿ'. ಹಾಗಾದರೆ ಅದ್ಯಾವ ಅಭಿಪ್ರಾಯ? 'ನೀವು ಕೆಲವರಿಗೆ ಎಷ್ಟೇ ಒಳ್ಳೆಯವರಾಗಿರಿ, ಉಪಕಾರ ಮಾಡಿ, ಅವರು ಮಾತ್ರ ತಮ್ಮ ಹಲ್ಕಾ ಬುದ್ಧಿಯನ್ನು ತೋರಿಸದೇ ಹೋಗುವುದಿಲ್ಲ. ನೀವು ಅವರನ್ನು ತಲೆಯ ಮೇಲೆ ಕುಳ್ಳಿರಿಸಿಕೊಂಡಿದ್ದು ಅವರಿಗೆ ಗೊತ್ತಿರುತ್ತದೆ, ಅದು ಗೊತ್ತಿದ್ದೂ ಅವರು ತಲೆ ಮೇಲೆಯೇ ಹೊಲಸು ಮಾಡಿ ಹೋಗುತ್ತಾರೆ. ನೀವು ಜೀವನದಲ್ಲಿ ಯಾರನ್ನು ಅತಿಯಾಗಿ ನಂಬುತ್ತೀರೋ, ಅವರು ತಾವು ನಂಬಿಕೆಗೆ ಅರ್ಹರಲ್ಲ ಎಂಬುದನ್ನು ನಿಮಗೆ ಮನವರಿಕೆ ಮಾಡಿ ನಿರ್ಗಮಿಸುತ್ತಾರೆ'.

ಇದನ್ನು ಯಾರೂ ಅಲ್ಲಗಳೆಯಲಾರರು. ಪ್ರತಿಯೊಬ್ಬರಿಗೂ ಇದು ಒಂದಿಲ್ಲೊಂದು ಸಂದರ್ಭದಲ್ಲಿ ಅನುಭವಕ್ಕೆ ಬಂದಿರುತ್ತದೆ.

ಹೀಗೊಂದು ವಿದಾಯಪತ್ರ!

ಟೆಕ್ಕಿಯೊಬ್ಬ ಬರೆದ ವಿದಾಯ ಪತ್ರವಿದು. ಇದರಲ್ಲಿ ತಮಾಷೆ, ವಿಡಂಬನೆ, ವ್ಯಂಗ್ಯ, ಕ್ರೌರ್ಯ ಎಲ್ಲವೂ ಮಿಳಿತವಾಗಿದೆ– 'ನಾನು ತೀರಿಕೊಂಡಾಗ ದಯವಿಟ್ಟು ನನ್ನ ಜತೆ ಪ್ರಾಜೆಕ್ಟ್ ವರ್ಕ್ ಮಾಡಿದ ಸ್ನೇಹಿತರನ್ನೆಲ್ಲ ಕರೆಯಿರಿ. ಹೊಂಡ ತೋಡಿ ನನ್ನ ದೇಹವನ್ನು ಕೆಳಗಿಡುವಾಗ ಅವರೆಲ್ಲರೂ ಇರಲಿ. ಕಾರಣ ನನ್ನನ್ನು ಕೆಳಗಿಸುವ ಕಡೆಯ ಅವಕಾಶ ಅವರಿಗೆ ಸಿಗಲಿ. ಅಲ್ಲದೇ ಅವರಿಗೆ ನನ್ನನ್ನು ಅದಕ್ಕಿಂತ ಕೆಳಕ್ಕಿಳಿಸುವ ಸಂದರ್ಭ ಮತ್ತೆ ಸಿಗಲಿಕ್ಕಿಲ್ಲ'.

ಶುದ್ಧ ನಿರುಪಯುಕ್ತ ಮಾಹಿತಿ!

ಕೆಲವು ವಿಷಯಗಳನ್ನು ತಿಳಿದುಕೊಂಡು ನಿಮಗೆ ಆಗುವುದೇನೂ ಇರುವುದಿಲ್ಲ. ಒಂದು ರೀತಿಯಲ್ಲಿ ಅವು ನಿಷ್ಪ್ರಯೋಜಕ ಮಾಹಿತಿ ಗಳು ಅಥವಾ ಜಂಕ್ ಇನ್ಫರ್ಮೇಷನ್. ಅವುಗಳನ್ನು ತಿಳಿದು ಕೊಳ್ಳುವುದರಿಂದ ಲಾಭವೂ ಇಲ್ಲ, ತಿಳಿದುಕೊಳ್ಳದೇ ಇರುವುದ ರಿಂದ ನಷ್ಟವೂ ಇಲ್ಲ. ಉದಾಹರಣೆಗೆ, ಅಮೆರಿಕದ ಖ್ಯಾತ ಗಾಯಕ ಫ್ರಾಂಕ್ ಸಿನಟ್ರ ತಾಯಿ ಇಟಲಿಯ ಲುಮ್ಯಾರ್ಘೋ ಎಂಬ ಊರಿನವಳು ಮತ್ತು ಅವಳಿಗೆ 2 ತಿಂಗಳಾದಾಗ ಅಮೆರಿಕಕ್ಕೆ ಬಂದಳು. ಹಾಗೆ ಮತ್ತೊಂದು ಮಾಹಿತಿ. ಬಗ್ಸ್ ಬನ್ನಿ ಎಂಬ ಕಾರ್ಟೂನ್ ಕ್ಯಾರೆಕ್ಟರ್ ಇದೆಯಲ್ಲ, ಅದನ್ನು 1930ರಲ್ಲಿ ಲಿಯಾನ್ ಶ್ಲೋಸೆಂಗರ್ ಎಂಬಾತ ನಿರ್ಮಿಸಿದ. ಎರಿಕ್ ಅಕ್ಕೆರ್ಸ್ಲಿಜೆಕ್ ಎಂಬಾತ 7.8 ಸೆಕೆಂಡುಗಳಲ್ಲಿ ರೂಬಿಕ್ ಕ್ಯೂಬ್‌ನ್ನು ಸರಿಯಾಗಿ ಜೋಡಿಸಿದ ಮತ್ತು ಈತ ನೆದರ್ಲಾಂಡ್ ದೇಶದವನು. ಈ ಮಾಹಿತಿ ತಗೊಂಡು ನಮಗೇನಾಗಬೇಕಾಗಿದೆ? ಇದನ್ನು ತಿಳಿದುಕೊಳ್ಳುವುದರಿಂದ ಏನಾದರೂ ಪ್ರಯೋಜನವಿದೆಯಾ? ತಿಳಿದುಕೊಳ್ಳದಿರುವುದರಿಂದ ಹಾನಿ ಇದೆಯಾ? ಯಾರಿಗೆ ಬೇಕಾಗಿವೆ ಈ ಮಾಹಿತಿ? ಡಾನ್ ವೂರಹೀಸ್ ಎಂಬ ಲೇಖಕನಿದ್ದಾನೆ. ಈತ ಮಾಹಿತಿ ಮೇನಿಯಾಕ್ (ಹುಚ್ಚ). ಸಿಕ್ಕಸಿಕ್ಕ ಮಾಹಿತಿಯನ್ನೆಲ್ಲಾ ಸಂಗ್ರಹಿಸುವುದು ಅವನ ಪರಮ ಹವ್ಯಾಸ. ಆ ಮಾಹಿತಿ ಯಿಂದ ಯಾರಿಗೂ ಪ್ರಯೋಜನ ಇಲ್ಲವೆನ್ನುವುದು ಗೊತ್ತು. ಆದರೂ ಅವನ್ನೆಲ್ಲಾ ಸೇರಿಸಿ, 13 ಪುಸ್ತಕಗಳನ್ನು ಮಾಡಿದ್ದಾನೆ. ಆಕರ್ಷಕ ಶೀರ್ಷಿಕೆಗಳನ್ನು ಇಡದಿದ್ದರೆ ಅವುಗಳನ್ನು ಯಾರೂ ಖರೀದಿಸುತ್ತಿರಲಿಲ್ಲ. The Perfectly Useless Book Of Useless Information ಎಂದು ಹೆಸರಿಟ್ಟಿದ್ದಾನೆ. ಇದೇ ಸರಣಿಯಲ್ಲಿ, The Extraordinary Book Of Useless Information, The Incredible Book Of Useless Information, The Super Book Of Useless Information... ಹೀಗೆ ಹಲವು ಪುಸ್ತಕಗಳನ್ನು ಬರೆದಿದ್ದಾನೆ. ಕೊನೆಗೆ ಈ ಸರಣಿಯ ಶೀರ್ಷಿಕೆಗಳೆಲ್ಲಾ ನೀರಸವೆಂದು ಆತನಿಗೆ ಅನಿಸಿರಬೇಕು, ಕೊನೆಯಲ್ಲಿ Disgusting Things; A Miscellany ಎಂಬ ಪುಸ್ತಕ ಬರೆದ. ಈ ಪುಸ್ತಕಗಳ ಮೇಲೆ ಆತ ನೀಡಿದ ಉಪಶೀರ್ಷಿಕೆಯೇನೆಂದರೆ, ಈ ಪುಸ್ತಕದಲ್ಲಿ ನಿಮಗೆ ಎಂದೂ ಉಪಯೋಗಕ್ಕೆ ಬಾರದ ಮಾಹಿತಿಯಿದೆ. ಆದರೂ ಯಾವುದಕ್ಕೂ ನಿಮಗೆ ಗೊತ್ತಿರಲಿ.

ಕವಿತಾ ಪಢ್‌ನೇ ದೋ ಹಮ್ಕೋ, ಆಮೇಲ್ ಬೇಕಿದ್ರೆ ಕೆಮ್ಕೋ!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

'ಅಡಚಣೆಗಾಗಿ ಕ್ಷಮಿಸಿ' ಎಂಬ ಪದಪುಂಜ ಆಗಾಗ ನಮ್ಮ ಕಿವಿಗಳಿಗೆ ಬೀಳುತ್ತಿರುತ್ತದೆ. ಅಥವಾ, ನಾವೇ ಅದನ್ನು ಬೇರೆಯವರಿಗೆ ಹೇಳುವ ಸಂದರ್ಭಗಳೂ ಬರುತ್ತವೆ. ಅಡಚಣೆ ಅಂದರೆ ಇಂಥದ್ದೇ ಅಂತೇನಿಲ್ಲ. ಮನುಷ್ಯರಿಂದಾದದ್ದೂ ಇರಬಹುದು, ಯಂತ್ರಗಳಿಂದಾದದ್ದೂ ಇರಬಹುದು. ಆದರೂ ಹೆಚ್ಚಾಗಿ ದೂಷಿಸುವುದು ಯಂತ್ರಗಳನ್ನೇ. ವೇದಿಕೆಯಲ್ಲಿ ಕಾರ್ಯಕ್ರಮ ಆರಂಭವಾಗುವುದು ತಡವಾಯಿತೆನ್ನಿ, ಅಥವಾ ಮರ್ಫಿಯ ನಿಯಮದಂತೆ ನಡುವೆ ಏನಾದರೂ ಅನಿರೀಕ್ಷಿತವಾದದ್ದು ಘಟಿಸಿ ಕಾರ್ಯಕ್ರಮದ ಓಘಕ್ಕೆ ಭಂಗ ವಾಯಿತೆನ್ನಿ– 'ತಾಂತ್ರಿಕ ಅಡಚಣೆಗಾಗಿ ಕ್ಷಮಿಸಿ' ಎಂದು ಎಮ್ಸಿಯಿಂದ ಉದ್ಘೋಷಣೆ ಮಾಡಿಸಿದರಾಯಿತು. ಸಭಿಕರು ಕೆಮ್ಮಂಗಿಲ್ಲ, ಹಾಗೆನ್ನುವಾಗ ನೆನಪಾಯ್ತು, ಕೆಮ್ಮು ಕೂಡ ಒಂಥರದ ಅಡಚಣೆಯೇ. ಟಿವಿಯಲ್ಲಿ, ರೇಡಿಯೊದಲ್ಲಿ ವಾರ್ತೆ ಓದುವವರನ್ನು ಕೇಳಿ ನೋಡಿ. ವಾರ್ತೆ ಓದುವಾಗ ನಡುವೆ ಕೆಮ್ಮು ಬಂದರೆ ಎಂಥ ಫಜೀತಿ, ಎಂಥ ಮುಜುಗರ! ಸಾಹಿತ್ಯಗೋಷ್ಠಿಯಲ್ಲಿ ಕವಿತೆ ಓದುವವರಿಗೂ ಅಷ್ಟೇ. ಸ್ವತಃ ಅವರಿಗೆ ಕೆಮ್ಮು ಬಂದರೂ ಕಷ್ಟವೇ. ಸಭಿಕರಲ್ಲಿ ಯಾರಾದರೂ ಕೆಮ್ಮಿದರೂ ಕಷ್ಟವೇ. ಒಂದೊಮ್ಮೆಗೆ ರಸಭಂಗ ಆದಂತೆಯೇ. ಬಹುಶಃ ಅದಕ್ಕೇ ಡುಂಡಿರಾಜರು ಬರೆದದ್ದು– 'ಕವಿತಾ ಪಢ್‌ನೇ ದೋ ಹಮ್ಕೋ; ಆಮೇಲ್ ಬೇಕಿದ್ರೆ ಕೆಮ್ಕೋ!' ಎಂದು.

ಅದನ್ನವರು ನಿಜವಾಗಿಯೂ ಒಂದು ಕೆಮ್ಮಿನ ಸಂದರ್ಭದಲ್ಲಿ ಆಶುಕವಿತೆಯಾಗಿ ಹೆಣೆದಿದ್ದಂತೆ. 'ಸ್ಫೂರ್ತಿಗಾಗಿ ಕಾಯುತ್ತ ಕೂರದೆ ಎಲ್ಲೆಂದರಲ್ಲಿ ಯಾವುದೋ ವಸ್ತು ಅಥವಾ ಘಟನೆಯ ಬಗ್ಗೆ ದಿಢೀರ್ ಕವನ ರಚಿಸುವುದು ಆಶುಕವಿತೆ. ಹಿಂದಿನ ಕಾಲದಲ್ಲಿ ಆಸ್ಥಾನಕವಿಗಳು ಮಹಾರಾಜರ ದರ್ಬಾರಿನಲ್ಲಿ ಅವರು ಸೂಚಿಸಿದ ವಿಷಯದ ಬಗ್ಗೆ ಆ ಕ್ಷಣದಲ್ಲೇ ಕವನ ಕಟ್ಟಿ ರಾಜನಿಂದ ಪಾರಿತೋಷಕ ಪಡೆಯುತ್ತಿದ್ದರಂತೆ. ಅವಧಾನ ಕಾರ್ಯಕ್ರಮಗಳಲ್ಲಿ ಈಗಲೂ ಅವಧಾನಿಗಳು ಆಶುಕವನ ರಚಿಸುತ್ತಾರೆ. ಅವರೆಲ್ಲ ಪ್ರತ್ಯುತ್ಪನ್ನಮತಿ ಆಗಿರಬೇಕಾಗುತ್ತದೆ. ನಮ್ಮ ಜನಪದ ಕವಿಗಳಲ್ಲಿ ಬಹಳಷ್ಟು ಜನರು ಆಶುಕವಿಗಳಾಗಿದ್ದರು. ಹನಿಗವನವು ಕೆಲವೇ ಸಾಲುಗಳಲ್ಲಿ ಮುಗಿಯುವುದರಿಂದ ಆಶುಕವನಕ್ಕೆ ಅದು ಸೂಕ್ತ ಎನ್ನಬಹುದು. ಕೆಲವು ವರ್ಷಗಳ ಹಿಂದೆ ಚಂದನ ಟಿವಿ ವಾಹಿನಿಯವರು ಏರ್ಪಡಿಸಿದ್ದ ಒಂದು ಹಾಸ್ಯ ಕವಿಗೋಷ್ಠಿಯಲ್ಲಿ ನಿರ್ವಾಹಕರು ಪದೇ ಪದೆ ಕೆಮ್ಮುತ್ತಿದ್ದರು. ಆಗ ನಾನು ಸ್ಥಳದಲ್ಲೇ ರಚಿಸಿ ಹೇಳಿದ ಆಶು ಚುಟುಕ ಇದು. ಈ ಕವಿತೆ ಅನಿರೀಕ್ಷಿತ ಪ್ರಾಸದಿಂದಾಗಿ ಈಗಲೂ ಓದುಗರಿಗೆ/ಕೇಳುಗರಿಗೆ ಖುಷಿ ನೀಡುತ್ತದೆ...' ಎಂದು ಡುಂಡಿರಾಜ್ 'ಹನಿಗವನ ಏನು? ಏಕೆ? ಹೇಗೆ?' ಪುಸ್ತಕದಲ್ಲಿ ಆಶುಕವಿತೆಗೆ ಉದಾಹರಣೆ ಕೊಡುತ್ತ ಹಮ್ಕೋ-ಕೆಮ್ಕೋ ಚುಟುಕದ ಹುಟ್ಟಿನ ಬಗ್ಗೆ ಬರೆದಿದ್ದಾರೆ.

ಅರವಿಂದ ಕೇಜ್ರಿವಾಲ್ ಕೆಮ್ಮುವ ಮುಖ್ಯಮಂತ್ರಿ ಎಂದೇ ಪ್ರಖ್ಯಾತ. ಪಾಪ, ಅವರಿಗದೊಂದು ಆರೋಗ್ಯದಲ್ಲಿ ತೊಂದರೆ. ದೆಹಲಿಯಿಂದ ಬೆಂಗಳೂರಿಗೆ ಬಂದು ಚಿಕಿತ್ಸೆ ಪಡೆಯುವಷ್ಟು ಜಟಿಲ ಸಮಸ್ಯೆ. ತಮ್ಮ ಭಾಷಣಗಳಲ್ಲಿ, ಸಂದರ್ಶನಗಳಲ್ಲಿ ಅವರಿಗೆ ಕೆಮ್ಮು ಅದೆಷ್ಟು ಅಡಚಣೆ ತಂದಿದೆಯೋ. ಐದು ವರ್ಷಗಳ ಹಿಂದೆ ದೆಹಲಿಯಲ್ಲಿ 'ನಮಾಮಿ ಗಂಗೆ' ಯೋಜನೆಯಡಿ ಯಮುನಾ ನದಿಯ ಪುನರುತ್ಥಾನಕ್ಕಾಗಿ ನಡೆದ ಕಾರ್ಯಕ್ರಮವೊಂದರಲ್ಲಿ ಕೇಜ್ರಿವಾಲ್‌ಗೆ ಕೆಮ್ಮಿನಿಂದಲೇ ಅವಮಾನವನ್ನೂ ಮಾಡಲಾಗಿತ್ತು. ಆ ಕಾರ್ಯಕ್ರಮದಲ್ಲಿ ಸಭಿಕರ ಮುಂದೆ ಮಾತನಾಡಲು ಕೇಜ್ರಿವಾಲ್ ಮುಂದಾದಾಗ, ಅಲ್ಲಿ ನೆರೆದಿದ್ದ ಬಿಜೆಪಿ ಕಾರ್ಯಕರ್ತರು ಒಟ್ಟಿಗೆ ಕೆಮ್ಮುವ ಮೂಲಕ ಅವರಿಗೆ ಮುಜುಗರ ತಂದಿದ್ದರು. ಆರೋಗ್ಯದ ಸಮಸ್ಯೆಯನ್ನು ಬಳಸಿಕೊಂಡು ಅಣಕ ಮಾಡುವ ಮೂಲಕ ಸಾರ್ವಜನಿಕವಾಗಿ ಇರಿಸುಮುರಿಸು ಆಗುವಂತೆ ಮಾಡಿದ್ದರು. 'ದಯವಿಟ್ಟು ಸುಮ್ಮನಿರಿ' ಎಂದು ಕೇಜ್ರಿವಾಲ್ ಮನವಿ ಮಾಡಿಕೊಂಡರೂ ಅಣಕ ಮುಂದುವರೆದಿತ್ತು. ಬಳಿಕ ನಿತಿನ್ ಗಡ್ಕರಿ 'ಇದು ಸರಕಾರಿ ಕಾರ್ಯಕ್ರಮ, ಶಾಂತಿ ಕಾಪಾಡಿ' ಎಂದು ತಿಳಿಹೇಳಿದ ಮೇಲಷ್ಟೇ ಕಾರ್ಯಕರ್ತರು ಸುಮ್ಮನಾದರಂತೆ. ಹಿಂದೊಮ್ಮೆ ಮಾಜಿ ಕ್ರಿಕೆಟರ್, ರಾಜಕಾರಣಿ ನವಜೋತ್ ಸಿಂಗ್ ಸಿಧು ಕೂಡ ಕೇಜ್ರಿವಾಲ್‌ರ ಕೆಮ್ಮಿನ ಸಮಸ್ಯೆಯನ್ನು ಅಣಕ ಮಾಡಿದ್ದರು. ಅದು ಸಾಮಾಜಿಕ ಜಾಲತಾಣದಲ್ಲಿ ಸಿಕ್ಕಾಪಟ್ಟೆ ವೈರಲ್ ಆಗಿತ್ತು. ಹಾಗಂತ ಇಲ್ಲಿ ನಾನು ಕೇಜ್ರಿವಾಲ್ ಬಗ್ಗೆ ಅನುಕಂಪ ಉಳ್ಳವನೆಂದೇನಲ್ಲ, ಆತನ ಕುತ್ಸಿತಮತಿ, ಭ್ರಷ್ಟಾಚಾರಗಳೆಲ್ಲ ನನಗೆ ಇಷ್ಟವಾಗುತ್ತದೆಂದೇ? ಖಂಡಿತ ಇಲ್ಲ. ಆದರೆ ಕೆಮ್ಮಿನ ಸಮಸ್ಯೆ ಅಣಕ ಮಾಡುವಂಥದ್ದಲ್ಲ ಎಂದಷ್ಟೇ ನನ್ನ ಪಾಯಿಂಟು.

ಇರಲಿ. ಈ ಕೆಮ್ಮು ಎಂಬುದು ಚಲನಚಿತ್ರಗಳಲ್ಲಿ, ಮುಖ್ಯವಾಗಿ ಚಿತ್ರಗೀತೆಗಳಲ್ಲಿ ಕೃತಕವಾಗಿ ಆದರೆ ಅತಿಸಹಜವೆಂಬಂತೆ ಕಾಣಿಸಿಕೊಳ್ಳುವುದು– ಅಲ್ಲ, ಕೇಳಿಸಿಕೊಳ್ಳುವುದು– ಕೂಡ ನನಗೊಂದು ಆಸಕ್ತಿಯ ಸಂಗತಿಯೇ. 'ಶಂಕರಾಭರಣಂ' ಚಿತ್ರದ ಕ್ಲೈಮ್ಯಾಕ್ಸ್ ದೃಶ್ಯದ 'ದೊರಕುನಾ ಇಟುವಂಟಿ ಸೇವಾ...' ಹಾಡು ಇದೆಯಲ್ಲ? ಅದರಲ್ಲಿ ಶಂಕರಶಾಸ್ತ್ರಿಗಳು (ಸೋಮಯಾಜುಲು ಅಭಿನಯಿಸಿದ ಪಾತ್ರ) ಮೊದಲ ಚರಣದ 'ರಾಗಾಲನಂತಾಲು ನೀ ವೇಯಿ ರೂಪಾಲು... ಭವರೋಗ ತಿಮಿರಾಲ ಪೋಕಾರ್ಚು

ದೀಪಾಲು...' ಸಾಲುಗಳನ್ನು ಎರಡೆರಡು ಸಲ ಹಾಡುತ್ತಾರೆ. ಮುಂದೆ 'ನಾದಾತ್ಮಕುಡವೈ ನಾಲೋನ ಚೆಲಿಗಿ...' ಸಾಲನ್ನು ಹಾಡುವಾಗ ಅವರಿಗೆ ಕೆಮ್ಮು ಬರಲಾರಂಭಿಸುತ್ತದೆ. ಸಂಗೀತ ನಿರ್ದೇಶಕ ಕೆ.ವಿ.ಮಹಾದೇವನ್ ಅಲ್ಲೊಂದು ಸಿಗ್ನಲ್ ನೋಟ್ 'ಟೆಡೇಂ...' ಎಂದು ಕೇಳುವಂತೆ ಮಾಡುತ್ತಾರೆ. ಅದು ಹಿನ್ನೆಲೆ ಗಾಯಕ ಎಸ್.ಪಿ.ಬಾಲುಗೆ ಸೂಚನೆ. ಅಲ್ಲಿಂದ ಏಕ್‌ದಂ ಕೆಮ್ಮು. 'ನಾ ಪ್ರಾಣದೀಪಮೈ ನಾಲೋನ ವೆಲಿಗೇ...' ಸಾಲನ್ನು ಕೆಮ್ಮುತ್ತಲೇ ಕಷ್ಟಪಟ್ಟು ಹಾಡುತ್ತಾರೆ. ತೆರೆಯ ಮೇಲೆ ಹಾಡನ್ನು ಶಂಕರ ಶಾಸ್ತ್ರಿಗಳ ಶಿಷ್ಯ ಮುಂದುವರೆಸುತ್ತಾನೆ (ತುಳಸಿ ಎಂಬ ಹೆಸರಿನ ಬಾಲನಟಿಯ ಅಭಿನಯ; ವಾಣಿ ಜಯರಾಂ ಹಿನ್ನೆಲೆಗಾಯನ). ಹಾಡು ಮುಗಿದಾಗ ವೇದಿಕೆಯ ಮೇಲೆಯೇ ಶಾಸ್ತ್ರಿಗಳ ಬದುಕಿನ ಹಾಡೂ ಮುಗಿಯುತ್ತದೆ. ಕಾಲಲ್ಲಿದ್ದ ಕಡಗವನ್ನು ಶಿಷ್ಯನಿಗೆ ತೊಡಿಸಿ ಕೊನೆಯುಸಿರೆಳೆಯುತ್ತಾರೆ. ಶಾಸ್ತ್ರಿಗಳ ಆರಾಧಕಿ ತುಳಸಿ (ಮಂಜುಭಾರ್ಗವಿ) ವೇದಿಕೆಯನ್ನೇರಿ ಶಾಸ್ತ್ರಿಗಳ ಪದತಲದಲ್ಲಿ ಕುಸಿದು ಪ್ರಾಣತ್ಯಾಗ ಮಾಡುತ್ತಾಳೆ. ಪ್ರೇಕ್ಷಕರ ಕರುಳು ಹಿಂಡುವ, ದಾರುಣ ಅಂತ್ಯದ ಚಿತ್ರವದು. ಅಂದಹಾಗೆ 'ದೊರಕುನಾ ಇಟುವಂಟಿ ಸೇವಾ...' ತೆಲುಗಿನಲ್ಲಿ ಎಸ್.ಪಿ.ಬಾಲು ಹಾಡಿದ್ದು ಮತ್ತು ಜತೆಗಿನ ಕೆಮ್ಮು ಸಹ ಅವರೇ ಸೇರಿಸಿದ್ದು ಅದೆಷ್ಟು ಪರ್ಫೆಕ್ಟಾಗಿ ಬಂದಿತ್ತೆಂದರೆ, ಶಂಕರಾಭರಣಂ ಚಿತ್ರ ಮಲಯಾಳಮ್‌ಗೆ ಡಬ್ ಆದಾಗ ಅದೊಂದು ಹಾಡಿನದು ಮಾತ್ರ ತೆಲುಗು ಆವೃತ್ತಿಯನ್ನೇ ಉಳಿಸಿಕೊಂಡಿದ್ದರಂತೆ.

ಕನ್ನಡದಲ್ಲೂ ಕೆಲವು ಕೆಮ್ಮಿನ ಚಿತ್ರಗೀತೆಗಳಿರುವುದನ್ನು ಈಗ ನಿಮ್ಮ ಗಮನಕ್ಕೆ ತರುತ್ತೇನೆ. 'ಶ್ರುತಿ ಸೇರಿದಾಗ' ಚಿತ್ರದ 'ಬೊಂಬೆಯಾಟವಯ್ಯಾ ನೀ ಸೂತ್ರಧಾರಿ ನಾ ಪಾತ್ರಧಾರಿ...' ಅಂಥದ್ದೊಂದು ಹಾಡು. ತೆರೆಯ ಮೇಲೆ ನಟನೆ ಹಾಸ್ಯನಟ ಉಮೇಶ್ ಅವರದು. ಅವರಿಗೆ ಹಿನ್ನೆಲೆಗಾಯನ, ನಿಜವಾಗಿಯೂ ಅಲ್ಲಿ ವೇದಿಕೆಯಲ್ಲೇ ತೆರೆಮರೆಯಲ್ಲಿ ನಿಂತ ಡಾ.ರಾಜಕುಮಾರ್ ಅವರಿಂದ. ಹಾಡಿನ ಎರಡು ಚರಣಗಳು ಮುಗಿದು ಸ್ವರಜತಿ ಹಾಡುವಾಗ ಅಸಲಿ ಹಾಡುಗಾರ ಅಣ್ಣಾವ್ರಿಗೆ ಕೆಮ್ಮು ಬರುತ್ತದೆ. ವೇದಿಕೆ ಮೇಲಿನ ನಕಲಿ ಹಾಡುಗಾರ ಉಮೇಶ್‌ಗೆ ಪೇಚಾಟ. ಸಭೆಯಲ್ಲಿದ್ದ ಬಾಲಣ್ಣ, ಸೇವಕನ ಮೂಲಕ ಉಮೇಶ್‌ಗೆ ಹಾಲು, ನೀರು, ಹಣ್ಣಿನರಸ ಎಲ್ಲ ತಂದು ಕುಡಿಯಲಿಕ್ಕೆ ಕೊಡಿಸಿ ಕೆಮ್ಮು ನಿವಾರಣೆಗೆ ನೆರವಾಗುತ್ತಾರೆ. ಸಭೆಯಲ್ಲಿ ಮುಂದಿನ ಸಾಲಲ್ಲೇ ಕುಳಿತಿದ್ದ ನಾಯಕಿ ಮಾಧವಿಗೆ ಇದು ಗೊತ್ತಾಗಿ ಆಕೆ ಎದ್ದು ವೇದಿಕೆಯ ಹಿಂದೆ ಹೋಗಿ ಅಣ್ಣಾವ್ರ ಜೊತೆ ಹಾಡನ್ನು ಮುಂದುವರೆಸುತ್ತಾರೆ. ಪ್ರೇಕ್ಷಕರು ಉಮೇಶ್ ಅವರೇ ಕೆಮ್ಮಿನ ಬಳಿಕ ಧ್ವನಿ ಕೀರಲಾಗಿ ಹೆಣ್ಣುಧ್ವನಿಯಲ್ಲಿ ಹಾಡ್ತಿದ್ದಾರೆ ಅಂದ್ಕೊಳ್ತಾರೆ! ತುಂಬ ಹಾಸ್ಯಮಯ ಸನ್ನಿವೇಶ ಅದು. ಹಾಗೆಯೇ, ಡಾ. ರಾಜ್-ಮಾಧವಿ ಅಭಿನಯದ 'ಹಾಲು ಜೇನು' ಚಿತ್ರದ 'ಹಾಯಾಗಿ ಕುಳಿತಿರು ನೀನು ರಾಣಿಯ ಹಾಗೆ...' ಹಾಡಿನಲ್ಲೂ ಕೆಮ್ಮು ಬರುತ್ತದೆ. ಅದರಲ್ಲೊಂದು ಕಡೆ ಮಾಧವಿ 'ಏನ್ರೀ ಇದು ಅವತಾರ? ಗಂಡ್ಸಾಗ್ ಹುಟ್ಟಿ ನೀವು ಅಡುಗೆ ಮಾಡೋದಾ?' ಎಂದು ಕೇಳುತ್ತಾರೆ. ಅಣ್ಣಾವ್ರು 'ಉಹ್ಹು ಉಹ್ಹು' ಎಂದು ಹುಸಿಯಾಗಿ ಕೆಮ್ಮಿದಂತೆ ನಟಿಸಿ 'ಭೀಮಸೇನ ನಳಮಹಾರಾಜರು ಗಂಡಸರಲ್ಲವೇ...' ಎಂದು ಹಾಡು ಮುಂದುವರೆಸುತ್ತಾರೆ. ಕ್ಯಾನ್ಸರ್‌ನಿಂದ ಬಳಲುವ ಮಾಧವಿ ಹಾಡಿನ ಕೊನೆಗೆ ನಿಜವಾಗಿಯೂ ಕೆಮ್ಮುತ್ತಾರೆ. ಅಣ್ಣಾವ್ರು ಆಕೆಯ ಆರೈಕೆ ಮಾಡುತ್ತಾರೆ.

'ಸೀತಾ' ಚಿತ್ರದ ಅತಿಜನಪ್ರಿಯ, ಮದುವೆ ಸಮಾರಂಭಗಳಲ್ಲಿ ಈಗಲೂ ಹಾಡಲ್ಪಡುವ 'ಮದುವೆಯ ಈ ಬಂಧ ಅನುರಾಗದ ಅನುಬಂಧ...' ಇದರ ರೇಡಿಯೊ ಆವೃತ್ತಿಯಲ್ಲಿ ಕೇಳಿಬರೋದು ಎರಡೇ ಚರಣಗಳು. ಆದರೆ ಸಿನಿಮಾ ಆವೃತ್ತಿಯಲ್ಲಿ 'ಸಿರಿತನದ ಸಿಹಿಯೋ ಬಡತನದ ಕಹಿಯೋ...' ಎಂದು ಆರಂಭವಾಗುವ ಮೂರನೆಯ ಚರಣವೂ ಇದೆ. ಅಲ್ಲಿ ಕೆಮ್ಮಿನಿಂದಾಗಿ ಹಾಡು ಒಮ್ಮೆ ಕ್ಷಣಕಾಲ ನಿಂತುಹೋಗುತ್ತದೆ. ಗಾಯಕ (ತೆರೆಯ ಮೇಲೆ ರಮೇಶ್ ಎಂಬ ಹಳೇಕಾಲದ ನಟನ ಅಭಿನಯ; ಹಿನ್ನೆಲೆ ಗಾಯನ ಎಸ್.ಪಿ.ಬಾಲು) ಒಂದು ಲೋಟ ನೀರು ಕುಡಿದು ಸಾವರಿಸಿಕೊಂಡ ಮೇಲೆ ಮುಂದುವರೆಯುತ್ತದೆ. 'ಗಡಿಬಿಡಿ ಗಂಡ' ಚಿತ್ರದಲ್ಲಿ ರವಿಚಂದ್ರನ್ ಜೊತೆ ಗಾಯನಸ್ಪರ್ಧೆಗೆ ಇಳಿಯುವ ತಾಯ್ ನಾಗೇಶ್ 'ನೀನು ನೀನೇ ಇಲ್ಲಿ ನಾನು ನಾನೇ...' ಹಾಡುವ ಮೊದಲು ಗಂಟಲು ಟೆಸ್ಟ್ ಮಾಡಿಕೊಳ್ಳುವ ಕೆಮ್ಮೊಂದಿದೆ. ಅಂತೆಯೇ 'ಗಾನಯೋಗಿ ಪಂಚಾಕ್ಷರಿ ಗವಾಯಿ' ಚಿತ್ರದ 'ಉಮಂಡ್ ಘುಮಂಡ್ ಘನ ಗರಜೇ ಬದರಾ...' ಹಾಡಿನಲ್ಲೂ (ತೆರೆಯ ಮೇಲೆ ಲೋಕೇಶ್; ಹಿನ್ನೆಲೆ ಗಾಯನ ಎಸ್.ಪಿ. ಬಾಲಸುಬ್ರಹ್ಮಣ್ಯಂ) ನಡುವೆ ಒಮ್ಮೆ ಗಾಯಕನನ್ನು ಕೆಮ್ಮು ತೀವ್ರವಾಗಿ ಬಾಧಿಸುತ್ತದೆ. ಬೆಂಗಳೂರಿನಲ್ಲಿ ವೈಎನ್‌ಕೆ-ಟಿಯೆಸ್ಸಾರ್ ಸಂಸ್ಮರಣಾರ್ಥ ನಡೆದ ಹಾಸ್ಯೋತ್ಸವವೊಂದರಲ್ಲಿ 'ಭಾಗ್ಯದ ಲಕ್ಷ್ಮೀ ಬಾರಮ್ಮ...' ಹಾಡುವಾಗ ಸಂಗೀತಗುರು ಕಿರ್ಲೋಸ್ಕರ್ ಸತ್ಯ ಅವರಿಗೆ ಕೆಮ್ಮು ಬಂದು ಆಮೇಲೆ ಹಾಡನ್ನು ಗುರುಗಳ ಶಿಷ್ಯ ರಫೀಕ್ ಮುಂದುವರೆಸುವ, 'ಭಾಗ್ಯಂದು ಲಕ್ಷ್ಮಿಗೆ ಬಾರಮ್ಮಾ... ಹೆಜ್ಜೆಯಮೇಲೆ ಹೆಜ್ಜೆಯ ಇಟ್‌ಬಿಟ್ಟಿ... ಮಜ್ಜಿಗೆಯೊಳ್ಗಿಂದು ಮಕ್ಖನ್‌ನ್ಹಂಗೇ... ಶುಕ್ರವಾರಂದು ನಮಾಜ್ ಟೇಮಿಗೆ...' ಎನ್ನುವ ಸೂಪರ್‌ಹಾಸ್ಯದ ಪ್ರಸಂಗವಂತೂ ಕಚಗುಳಿಯಿಡುವಂಥದ್ದು. ಸಭೆಯಲ್ಲಿದ್ದ ಆಗಿನ ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಬಿದ್ದುಬಿದ್ದು ನಗುವಂತೆ ಮಾಡಿದ್ದು. ಮತ್ತೆ, 'ಬಂಧನ' ಚಿತ್ರದ 'ಪ್ರೇಮದ ಕಾದಂಬರಿ ಬರೆದನು ಕಣ್ಣೀರಲಿ...' ತೆರೆಯ ಮೇಲೆ ವಿಷ್ಣುವರ್ಧನ್ ಕೆಮ್ಮುತ್ತ ಅಭಿನಯಿಸಿದ, ಹಿನ್ನೆಲೆಯಲ್ಲಿ ಎಸ್‌ಪಿಬಿ ಕೆಮ್ಮುತ್ತ ಹಾಡಿದ ಅದ್ಭುತವಾದ ಗೀತೆಯನ್ನು ಮರೆಯಲಿಕ್ಕುಂಟೇ! ನನಗನಿಸುವಂತೆ, ಕೆಮ್ಮು ಇರುವ ಚಿತ್ರಗೀತೆಗಳಲ್ಲಿ ಈ ಹಾಡಿಗೆ ಅಗ್ರಸ್ಥಾನ ಸಲ್ಲಬೇಕು. ಇದರಲ್ಲಿ ಎಸ್‌ಪಿಬಿ ಕೆಮ್ಮನ್ನು ಎಷ್ಟು ಲಯಬದ್ಧವಾಗಿ ಉಪಯೋಗಿಸಿದ್ದಾರೆಂದರೆ ಹಾಡಿನ ಲಯಕ್ಕೆ ಸ್ವಲ್ಪವೂ ತೊಂದರೆ ಇಲ್ಲದಂತೆ, ನಿಜವಾಗಿ ಹಾಡಿನ ಮಧ್ಯದಲ್ಲಿ ಕೆಮ್ಮು ಬಂದಿರುವಂತೆ ಕೇಳಿಸುತ್ತದೆ. ಎಸ್‌ಪಿಬಿ ಅವರೇ ಒಮ್ಮೆ 'ಎದೆ ತುಂಬಿ ಹಾಡುವೆನು' ಸಂಚಿಕೆಯಲ್ಲಿ ಹೇಳಿದ್ದಂತೆ 'ಪ್ರೇಮದ ಕಾದಂಬರಿ ಬರೆದನು ಕಣ್ಣೀರಲಿ...' ಹಾಡನ್ನು ಕೆಮ್ಮುತ್ತ ಹಾಡುವಾಗ ಅವರ ದೇಹದ ರಕ್ತವೆಲ್ಲ ಮಿದುಳಿಗೆ ಹರಿದಿತ್ತಂತೆ! ಹೀಗೆ ನೆನಪು ಮಾಡಿಕೊಳ್ಳುತ್ತ ಹುಡುಕುತ್ತ ಹೋದರೆ ಹಿಂದೀ ಚಿತ್ರಸಂಗೀತದಲ್ಲೂ 'ಖಾಂಸಿವಾಲೇ ಗಾನೇ' ನಮಗೆ ಸಿಗುತ್ತವೆ: 'ಸತ್ಯಂ ಶಿವಂ ಸುಂದರಂ' ಚಿತ್ರದ 'ಯಶೋಮತಿ ಮಯ್ಯಾ ಸೇ ಬೋಲೇ ನಂದಲಾಲಾ... (ಮನ್ನಾಡೇಗೆ ಕೆಮ್ಮು ಬಂದು ಲತಾ ಮಂಗೇಶ್ಕರ್ ಮುಂದುವರೆಸುತ್ತಾರೆ), 'ಪರಿಚಯ್' ಚಿತ್ರದ 'ಬೀತೀ ನಾ ಬಿತಾಯೀ ರೈನಾ... (ಭೂಪೇಂದ್ರಗೆ ಕೆಮ್ಮು ಬಂದು ಲತಾ ಮಂಗೇಶ್ಕರ್ ಮುಂದುವರೆಸುತ್ತಾರೆ) ಇತ್ಯಾದಿ.

ಆದರೆ ಕೆಮ್ಮು ಯಾವತ್ತಿಗೂ ನಮಗೆ ಅಡಚಣೆ ತರುವಂಥದು, ಕಿರಿಕಿರಿ ಉಂಟುಮಾಡುವಂಥದು ಎಂದೇ ತಿಳಿಯಬೇಕಿಲ್ಲ, ಸಿನಿಮಾಗಳಲ್ಲಿದ್ದಂತೆ ನಿಜಜೀವನದಲ್ಲೂ ನಾವು ಕೆಲವೊಮ್ಮೆ ಕೆಮ್ಮನ್ನು ಉದ್ದೇಶಪೂರ್ವಕ ಬರಿಸಿ ಉಪಯೋಗ ಮಾಡಿಕೊಳ್ಳುವುದೂ ಇದೆ. ಪಬ್ಲಿಕ್ ಟಾಯ್ಲೆಟ್‌ಗಳಿಗೆ– ಅದೇ, ಸಾರ್ವಜನಿಕ ಶೌಚಾಲಯಗಳಿಗೆ– ಮೂಗು ಮುಚ್ಚಿಕೊಂಡಾದರೂ ಹೋಗಿ ಪ್ರವೇಶಿಸುವ ಸಾಹಸವನ್ನು ನೀವು ಮಾಡಿದಿರಾದರೆ, ಅಲ್ಲಿ ಯಥಾಪ್ರಕಾರ ಬಾಗಿಲಿನ ಚಿಲಕ ಮುರಿದುಹೋಗಿದ್ದರೆ, ಒಳಗೆ ಧ್ಯಾನಪೀಠದಲ್ಲಿ ಕುಳಿತಾಗ ನಡುನಡುವೆ ಕೆಮ್ಮುವುದು ಅನಿವಾರ್ಯವಾಗುತ್ತದೆ. ನಮ್ಮ ಇರುವನ್ನು ಇತರರಿಗೆ ತಿಳಿಸುವ ಏಕೈಕ ಉಪಾಯವಾಗುತ್ತದೆ. ಹಾಗೆಯೇ, ಕೆಮ್ಮು ಕಾಲಿಂಗ್‌ಬೆಲ್‌ನ ಕೆಲಸವನ್ನೂ ಮಾಡುತ್ತದೆ ಎಂದು ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ ಅಭಿಪ್ರಾಯ. ಅವರದು ಮಾತ್ರವಲ್ಲ, ನಾವೆಲ್ಲರೂ ಕೆಮ್ಮನ್ನು ಕಾಲಿಂಗ್‌ಬೆಲ್‌ನಂತೆ ಬಳಸಿದವರೇ. 'ಕೃಷ್ಣೇಗೌಡನ ಆನೆ' ನೀಳ್ಗತೆಯ ಆರಂಭದಲ್ಲಿ ತೇಜಸ್ವಿಯವರು ಅದನ್ನು ಕಣ್ಣಿಗೆ ಕಟ್ಟುವಂತೆ– ಅಲ್ಲ, ಕಿವಿಗಳಿಗೆ ಕೆಮ್ಮು ಕೇಳುವಂತೆ– ಬಣ್ಣಿಸಿದ್ದಾರೆ: 'ಆವತ್ತು ಜೀಪಿನ ಅಡಿ ಬಿದ್ದುಕೊಂಡು ಅದರ ಗೇರ್ ಬಾಕ್ಸ್ ರಿಪೇರಿಯಲ್ಲಿ ತೊಡಗಿರಬೇಕಾದರೆ ಎರಡು ಖಾಕಿ ಪ್ಯಾಂಟ್ ಧಾರಿ ಕಾಲುಗಳು ನನ್ನತ್ತ ಬರುತ್ತಿರುವುದು ನನಗೆ ಜೀಪಿನ ಅಡಿಯಿಂದ ಕಾಣಿಸಿತು. ನನಗೆ ಪೊಲೀಸ್ ಡಿಪಾರ್ಟ್‌ಮೆಂಟ್ ಥಟ್ಟನೆ ಜ್ಞಾಪಕಕ್ಕೆ ಬಂದು ಗಾಬರಿಯಾದರೂ, ಅವು ಬೂಡ್ಸಿಲ್ಲದ ಕಾಲುಗಳಾದ್ದರಿಂದ ಬೇರೆ ಯಾವ ಡಿಪಾರ್ಟ್‌ಮೆಂಟಿನವು ಎಂದು ಬೋಲ್ಟುಗಳನ್ನು ಬಿಚ್ಚುತ್ತಾ ಹಾಗೇ ಯೋಚಿಸಿದೆ. ಬಂದಾತ ನಾನು ಜೀಪಿನ ಅಡಿ ಇದ್ದುದರಿಂದ ಅವನು ಬಂದುದನ್ನು ಗಮನಿಸಿಲ್ಲವೆಂದು ಬಗೆದು ಒಂದೆರಡು ಬಾರಿ ಕೆಮ್ಮಿದ. ನಮ್ಮ ಕಡೆ ಕೆಮ್ಮು ಕಾಲಿಂಗ್‌ಬೆಲ್ ಇದ್ದಹಾಗೆ. ಮನೆಯಬಳಿ ಯಾರೂ ಕಣ್ಣಿಗೆ ಬೀಳದಿದ್ದರೆ ಕೆಮ್ಮಿ ಕ್ಯಾಕರಿಸಿ ಗಲಾಟೆ ಮಾಡುತ್ತಾರೆ. ಬಹುಶಃ ಭಾಷೆ ಉಪಯೋಗಿಸಿ ಕರೆಯಬೇಕೆಂದಾದರೆ ಕೆಲವು ತೊಂದರೆಗಳಿವೆ ಎಂದು ತೋರುತ್ತದೆ. ಮನೆಯವರ ಹೆಸರು ಏನು? ಹೆಸರು ಹಿಡಿದು ಕರೆಯಬೇಕೋ? ಸ್ವಾಮೀ ಎನ್ನಬೇಕೋ? ಬಹುವಚನ ಉಪಯೋಗಿಸಬೇಕೋ? ಏಕವಚನವೋ? ಭಾಷೆ ಉಪಯೋಗಿಸಿ ಕರೆಯಬೇಕೆಂದರೆ ಏನೆಲ್ಲ ಬಿಕ್ಕಟ್ಟುಗಳನ್ನು ಎದುರಿಸಬೇಕು. ಅದರ ಬದಲು ಒಂದೆರಡು ಸಾರಿ ಕೆಮ್ಮಿದರೆ ಈ ಎಲ್ಲ ತೊಂದರೆಗಳೇ ಇರುವುದಿಲ್ಲ. ಆದ್ದರಿಂದ ಬಂದವ ಮತ್ತೂ ಒಂದೆರಡುಸಾರಿ ಕೆಮ್ಮಿದ.'

ಹಾಗೆ ಗಮನ ಸೆಳೆಯಲಿಕ್ಕಾಗಿ ಹುಸಿಕೆಮ್ಮು ಪ್ರಯೋಗವನ್ನು ಹುಲುಮಾನವರಷ್ಟೇ ಮಾಡುವುದೂ ಅಲ್ಲ. ಜಗದೊಡೆಯ ಜಗದೀಶ್ವರನೂ ಅದೇ ಟೆಕ್ನಿಕ್ ಬಳಸುತ್ತಾನಂತೆ. ಅದು ಕನ್ನಡದ ಕವಿ ಹರಿಹರನ ಕಲ್ಪನೆ. ಹರಿಹರ ಬರೆದ 'ನಂಬಿಯಣ್ಣನ ರಗಳೆ'ಯಲ್ಲಿ ನಂಬಿಯಣ್ಣನಿಗೆ ಆಗಲಿದ್ದ ಮದುವೆಯನ್ನು ತಪ್ಪಿಸಿ, ಆತ ಇನ್ನೊಬ್ಬಳನ್ನು ಲಗ್ನವಾಗುವಂತೆ ಮಾಡಬೇಕೆಂಬ ಉದ್ದೇಶದಿಂದ ಪರಶಿವನೇ ವೃದ್ಧ ಮಾಹೇಶ್ವರನ ವೇಷ ಧರಿಸಿ ಬರುವ ಸನ್ನಿವೇಶವೊಂದಿದೆ. 'ಕಯ್ಯ ಕೊಡೆಯಿಂ, ಮಯ್ಯತೆರೆಯಿಂ, ಜೋಲ್ವಪುರ್ವಿಂ, ನೇಲ್ವ ತೋಳತೊವಲಿಂ, ಇಟ್ಟ ವಿಭೂತಿಯಿಂ, ಊರಿದ ಯಷ್ಟಿಯ ಕೋಲಿಂ, ಪಿಡಿದ ಕಮಂಡಲದಿಂಯಿಳಿದ ಬೆಳುಗಡ್ಡದಿಂ, ನಡುಗುವ ನರೆದಲೆಯಿಂ, ನರೆತು ಸಡಿಲ್ವ ಸರ್ವಾಂಗದಿಂ, ಪುಣ್ಯಂ ಪಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತ್ತೊಮ್ಮೊಮ್ಮೆ ಗೊಹೆಗೊಹೆಗುಟ್ಟುತುಂ ಶಿಥಿಲಾಕ್ಷರಂಗಳಿಂ ನಮಃಶಿವಾಯ ನಮಃಶಿವಾಯ ಯೆನುತ್ತೆನಲಾರದಂತೆ ನಡುಗುತ್ತುಂ ಹೊರಗೆ ನೆರೆದ ನೆರವಿಗೆಲ್ಲಂ ನೋಡುತ್ತಿರಲು ಮೆಲ್ಲಮೆಲ್ಲನೆ ಚಪ್ಪರದ ಬಾಗಿಲ್ಗೆ' ಬಂದನಂತೆ ವೃದ್ಧಮಾಹೇಶ್ವರ.

ಹೊಸಗನ್ನಡದಲ್ಲಿ ಹೇಳುವುದಾರೆ– ಕೈಯಲ್ಲಿ ಕೊಡೆ, ಮೈತುಂಬ ಸುಕ್ಕು, ಜೋತಾಡುವ ಹುಬ್ಬು, ನೇತಾಡುವ ತೋಳಿನ ಚರ್ಮ, ಇಟ್ಟಿರುವ ವಿಭೂತಿ, ನೆಲಕ್ಕೆ ಊರಿದ ಊರುಗೋಲು, ಹಿಡಿದ ಕಮಂಡಲ, ಇಳಿಬಿಟ್ಟ ಬಿಳಿಯಗಡ್ಡ, ನಡುಗುವ ನರೆತ ತಲೆ, ನರೆತು ಹೋಗಿ ಸಡಿಲವಾಗಿರುವ ಸರ್ವಾಂಗದಿಂದ ಶಿಥಿಲವಾಗಿದ್ದ ವೃದ್ಧನು ಪುಣ್ಯವೇ ಹಣ್ಣಾದಂತೆ ಒಮ್ಮೊಮ್ಮೆ ಕೆಮ್ಮುತ್ತ, ಒಮ್ಮೊಮ್ಮೆ ಗೊರ್ ಗೊರ್ ಎಂದು ಶಬ್ದಮಾಡುತ್ತಾ, ತೊದಲುವ ಮಾತುಗಳಿಂದ ನಮಃಶಿವಾಯ ನಮಃಶಿವಾಯ ಎನ್ನುತ್ತಾ, ಎನ್ನಲಾರದಂತೆ ನಡುಗುತ್ತಾ, ಹೊರಗೆ ನೆರೆದಿದ್ದ ಜನರೆಲ್ಲಾ ನೋಡುತ್ತಿರಲು ಮದುವೆಚಪ್ಪರದ ಬಾಗಿಲಿಗೆ ಬಂದನಂತೆ. ವಿವಾಹ ಮಂಟಪದೊಳಗೆ ಹೋಗುತ್ತಿರುವ ತನ್ನನ್ನು ಯಾರೂ ನೋಡದೆ ಇರುವುದನ್ನು ಕಂಡು ಶಿವನು ಮೆಲ್ಲಮೆಲ್ಲನೆ ನೋಡುತ್ತಾ, ಮನದೊಳಗೆ ನಗುತ್ತಾ, ಕೋಲನೂರಿಕೊಂಡು ಕೆಮ್ಮುತ್ತಾ ವಿವಾಹ ಮಂಟಪದ ಬಳಿ ಸಾಲಾಗಿ ಜೋಡಿಸಲಾಗಿದ್ದ ತುಪ್ಪದ ಕೊಡಗಳ ಮೇಲೆ ನಾಲ್ಕೆರಡನ್ನು ಎಡವಿದನಂತೆ. ನಮಃಶಿವಾಯ ಎಂಬ ವೃದ್ಧಧ್ವನಿ ಅವನ ಬಾಯಿಂದ ಬರುತ್ತಿದ್ದಂತೆ ಕೊಡಗಳ ಮೇಲೆ ಬಿದ್ದು ಅಲ್ಲಿ ಕುಳಿತಿದ್ದವರ ಮುಖಕ್ಕೆ, ಕಣ್ಣುಗಳಿಗೆ, ಮೈಯ ಮೇಲೆಲ್ಲ ತುಪ್ಪ ಚೆಲ್ಲಿತಂತೆ. ಎಲ್ಲರೂ ಗಾಬರಿಯಿಂದ ಎದ್ದು ಗುಂಪುಗೂಡಿ ದಡ್ಡನೆ ಬಿದ್ದ ವೃದ್ಧಮಾಹೇಶ್ವರನ ಸುತ್ತ ಸೇರಿದರಂತೆ.

ಎಂಬಲ್ಲಿಗೆ ಕೆಮ್ಮುಪುರಾಣ ಮುಗಿದುದು. ನಾಲ್ಕು ವರ್ಷಗಳ ಹಿಂದೆ ಕೋವಿಡ್‌ನ ಕರಾಳ ದಿನಗಳಲ್ಲಿ ಕೆಮ್ಮು ಕೇಳಿದೊಡನೆ ಮಾರುದೂರ ಹೋಗುತ್ತಿದ್ದ ನೀವು ಈ ಕೆಮ್ಮಿನ ಮೋಡಿಗೆ ಮಾರುಹೋದಿರಿ ಎಂದುಕೊಂಡಿದ್ದೇನೆ.

ಹೊಸ ಕ್ರಿಮಿನಲ್ ಕಾನೂನುಗಳ ವೈಶಿಷ್ಟ್ಯ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಭಾರತೀಯ ನ್ಯಾಯಾಂಗ ವ್ಯವಸ್ಥೆಯ ಪಾಲಿಗೆ 2024ರ ಜುಲೈ 1 ಐತಿಹಾಸಿಕ ದಿನವಾಗಿದೆ. ಏಕೆಂದರೆ, ಅಂದಿನಿಂದ 3 ಹೊಸ ಕ್ರಿಮಿನಲ್ ಕಾನೂನುಗಳು ದೇಶದಲ್ಲಿ ಜಾರಿಯಾಗಿವೆ. ಅಲ್ಲಿಯವರೆಗೆ ಅಸ್ತಿತ್ವದಲ್ಲಿದ್ದ ಭಾರತೀಯ ದಂಡ ಸಂಹಿತೆ (ಐಪಿಸಿ), ಕ್ರಿಮಿನಲ್ ಪ್ರೊಸೀಜರ್ ಕೋಡ್ (ಸಿಆರ್‌ಪಿಸಿ) ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆ (ಐಇಎ) ಇವುಗಳ ಬದಲಾಗಿ ಭಾರತೀಯ ನ್ಯಾಯ ಸಂಹಿತೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ ಮತ್ತು ಭಾರತೀಯ ಸಾಕ್ಷ್ಯ ಅಧಿನಿಯಮ ಎಂಬ ಮೂರು ಹೊಸ ಕ್ರಿಮಿನಲ್ ಕಾನೂನುಗಳು ಸುರಳೀತವಾಗಿ ಜಾರಿಗೆ ಬಂದಿವೆ. ಕಳೆದ ಡಿಸೆಂಬರ್‌ನಲ್ಲಿ ಇವನ್ನು ಅಪರೂಪಕ್ಕೆ ಎನ್ನುವಂತೆ ಹೆಚ್ಚು ಗದ್ದಲ ಮತ್ತು ವಿರೋಧವಿಲ್ಲದೆ ಸಂಸತ್ತಿನಲ್ಲಿ ಅಂಗೀಕರಿಸಲಾಗಿತ್ತು. ಈ ಪ್ರಮುಖ ಕಾನೂನುಗಳಲ್ಲಿನ ಬದಲಾವಣೆಗಳು ಭಾರತದ ನ್ಯಾಯದಾನ ವ್ಯವಸ್ಥೆಯ ಮೇಲೆ ಕ್ರಾಂತಿಕಾರಕ ಮತ್ತು ನಿರ್ಣಾಯಕ ಪರಿಣಾಮ ಬೀರಲಿವೆ ಎಂದೇ ಪರಿಭಾವಿಸಲಾಗಿದೆ.

ಸ್ವಾತಂತ್ರ್ಯಾನಂತರದ ಭಾರತದಲ್ಲಿನ ಕ್ರಿಮಿನಲ್ ನ್ಯಾಯ ವ್ಯವಸ್ಥೆಯು ನಿರೀಕ್ಷಿತ ಫಲಿತಾಂಶಗಳನ್ನು ನೀಡುತ್ತಿರಲಿಲ್ಲ; ಕಳಪೆ ಸ್ವರೂಪದ ತನಿಖೆಗಳು, ಅಸಂಗತ ಕಾನೂನು ಕ್ರಮಗಳು, ಕ್ರಿಮಿನಲ್ ಪ್ರಕರಣಗಳನ್ನು ದೊಡ್ಡ ಪ್ರಮಾಣಗಳಲ್ಲಿ ಬಾಕಿ ಉಳಿಸಿಕೊಳ್ಳುವುದು, ವಿಳಂಬವಾಗುವ ನ್ಯಾಯಾಲಯದ ವಿಚಾರಣೆಗಳು, ಒಟ್ಟಾರೆ ಪ್ರಕರಣಗಳ ವಿಲೇವಾರಿಯಲ್ಲಿನ ವಿಳಂಬ, ಗಂಭೀರ ಅಪರಾಧಗಳಿಗೆ ಕಡಿಮೆ ಪ್ರಮಾಣದ ಶಿಕ್ಷೆ ಮತ್ತು ವಿಚಾರಣಾಧೀನ ಕೈದಿಗಳ ಸಂಖ್ಯೆ ದಿನೇದಿನೆ ಹೆಚ್ಚುತ್ತಿರುವುದು ಸೇರಿದಂತೆ ಅನೇಕ ನ್ಯೂನತೆಗಳು ಇದಕ್ಕೆ ಕಾರಣವಾಗಿದ್ದವು. ಹಾಗಾಗಿ, ಆಧುನಿಕ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ, ದೀರ್ಘಕಾಲ ಬಾಳಿಕೆಯಲ್ಲಿದ್ದ ಭಾರತೀಯ ದಂಡ ಸಂಹಿತೆ, ಕ್ರಿಮಿನಲ್ ಪ್ರೊಸೀಜರ್ ಕೋಡ್ ಮತ್ತು ಭಾರತೀಯ ಸಾಕ್ಷ್ಯ ಕಾಯ್ದೆಯನ್ನು ಬದಲಿಸುವುದು ಅನಿವಾರ್ಯ ಎಂಬುದು ಬಹುತೇಕ ಕಾನೂನು ತಜ್ಞರ ಅಭಿಪ್ರಾಯವಾಗಿತ್ತು. ಭಾರತೀಯ ನ್ಯಾಯ ಸಂಹಿತೆಯು ಹೊಸ ಅಪರಾಧಗಳನ್ನು ಗುರುತಿಸಿದರೆ, ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯು ವಿಧಿವಿಜ್ಞಾನ ತನಿಖಾ ಪ್ರಕ್ರಿಯೆಯನ್ನು ಕಡ್ಡಾಯವಾಗಿಸುತ್ತದೆ ಮತ್ತು ಕಾನೂನು ಪ್ರಕ್ರಿಯೆಗಳನ್ನು ಹೆಚ್ಚು ಡಿಜಿಟಲೀಕರಣಗೊಳಿಸುತ್ತದೆ. ಇಲೆಕ್ಟ್ರಾನಿಕ್ ಮತ್ತು ಡಿಜಿಟಲ್ ದಾಖಲೆಗಳನ್ನು ಪರಿಗಣಿಸುವ ಮೂಲಕ ನ್ಯಾಯಾಲಯಗಳು ಸಾಕ್ಷ್ಯವನ್ನು ನಿರ್ವಹಿಸುವ ವಿಧಾನವನ್ನು ಭಾರತೀಯ ಸಾಕ್ಷ್ಯ ಅಧಿನಿಯಮವು ಆಧುನೀಕರಿಸಿದಂತಾಗುತ್ತದೆ ಮತ್ತು ಇದು ಭಾರತದ ನ್ಯಾಯದಾನ ವ್ಯವಸ್ಥೆಯಲ್ಲಿನ ಪಾರದರ್ಶಕತೆಯನ್ನು ಮತ್ತಷ್ಟು ಹೆಚ್ಚಿಸಲಿದೆ ಎಂದು ಭಾವಿಸಲಾಗುತ್ತಿದೆ.

ಭಾರತವು 1947ರಲ್ಲಿ ಸ್ವಾತಂತ್ರ್ಯ ಪಡೆದಾಗಿನಿಂದ ಜಾರಿಯಲ್ಲಿದ್ದ 3 ಕ್ರಿಮಿನಲ್ ಕಾನೂನುಗಳು ಸಣ್ಣಪುಟ್ಟ ಪರಿಷ್ಕರಣೆಗಳನ್ನು ಸಾಕಷ್ಟು ಬಾರಿ ಕಂಡಿದ್ದರೂ, ಇವಕ್ಕೆ ಈ ಬಾರಿ ಗಂಭೀರ ಬದಲಾವಣೆಗಳನ್ನು ತರಲಾಗಿದೆ ಎನ್ನಲಾಗುತ್ತಿದೆ. ಹಳೆಯ ಕ್ರಿಮಿನಲ್ ಕಾನೂನುಗಳು ಬ್ರಿಟಿಷರ ಸೃಷ್ಟಿಯಾಗಿದ್ದವು; ಆದರೆ ಈ ಹೊಸ ಸಂಹಿತೆಗಳು ಭಾರತೀಯರಿಗೆ ಭಾರತೀಯರೇ ರೂಪಿಸಿರುವಂಥವು ಮತ್ತು ಭಾರತದ ಇಂದಿನ ಅಗತ್ಯಗಳಿಗೆ ಸ್ಪಂದಿಸುವಂಥವು. ಇವು ಶಿಕ್ಷೆಗಿಂತ ನ್ಯಾಯದ ಮೇಲೆ ಕೇಂದ್ರಿತವಾಗಿವೆ ಮತ್ತು ತ್ವರಿತ ನ್ಯಾಯವನ್ನು ಒದಗಿಸುವ ಗುರಿಹೊಂದಿವೆ ಎಂದು ಕೇಂದ್ರ ಗೃಹಸಚಿವ ಅಮಿತ್ ಶಾ ಹೆಮ್ಮೆಯಿಂದ ಹೇಳಿಕೊಂಡರೆ, ಈ ಹೊಸ ಕಾನೂನುಗಳಿಗೆ ಪ್ರಮುಖ ಬದಲಾವಣೆಗಳನ್ನು ತರುವಾಗ ಈಗಾಗಲೇ ಅಸ್ತಿತ್ವದಲ್ಲಿರುವ ಕಾನೂನುಗಳನ್ನು ಕೂಲಂಕಷವಾಗಿ ಪರಿಶೀಲಿಸಿರಲಿಲ್ಲ ಮತ್ತು ವಿಸ್ತೃತ ಸಾರ್ವಜನಿಕ ಚರ್ಚೆಗೆ ಅವಕಾಶವಾಗಿರಲಿಲ್ಲ ಎಂದು ದೇಶದ ಕೆಲ ಕಾನೂನುತಜ್ಞರು ಅಭಿಪ್ರಾಯಪಡುತ್ತಿದ್ದಾರೆ. ಯಾವುದೇ ಕಾನೂನನ್ನು ಹೊಸದಾಗಿ ಪರಿಚಯಿಸಿದಾಗ ಅಥವಾ ಇರುವ ಕಾನೂನನ್ನು ಮಾರ್ಪಡಿಸಿದಾಗ, ನ್ಯಾಯವಾದಿಗಳಿಗೆ ಮತ್ತು ತನಿಖಾ ಸಂಸ್ಥೆಗಳಿಗೆ ಹಾಗೂ ಸಾರ್ವಜನಿಕರಿಗೆ ತಿಳಿವಳಿಕೆ ನೀಡುವ ಅಗತ್ಯವಿರುತ್ತದೆ. ಹಾಗಾಗಿ, ಈ 3 ಹೊಸ ಕಾನೂನುಗಳನ್ನು ಯಶಸ್ವಿಯಾಗಿ ಜಾರಿಗೆ ತರುವಲ್ಲಿ ಅಗತ್ಯವಿರುವ ತರಬೇತಿಗಳನ್ನು ಎಲ್ಲಾ ರಾಜ್ಯಗಳಲ್ಲಿ ಒದಗಿಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್

ಹೇಳಿದ್ದಾರೆ. ತರಬೇತಿಯ ಜವಾಬ್ದಾರಿಯನ್ನು ಪೊಲೀಸ್ ಸಂಶೋಧನೆ ಮತ್ತು ಅಭಿವೃದ್ಧಿ ಬ್ಯೂರೋ (ಬಿಪಿಆರ್‌ಡಿ), ನ್ಯಾಯಾಂಗ ಅಕಾಡೆಮಿಗಳು ಮತ್ತು ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯಗಳಿಗೆ ನೀಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯಲ್ಲಿ ಅಪರಾಧಗಳ ಸ್ವರೂಪವನ್ನು ಅವಲಂಬಿಸಿ, ಹಿಂದಿನ ಕ್ರಿಮಿನಲ್ ಕಾನೂನುಗಳ ಅಡಿಯಲ್ಲಿ ನೀಡಲಾಗುತ್ತಿದ್ದ ಪೊಲೀಸ್ ಕಸ್ಟಡಿಯನ್ನು 15 ದಿನಗಳಿಂದ 90 ದಿನಗಳವರೆಗೆ ಹೆಚ್ಚಿಸಲಾಗಿದೆ. ಐಪಿಸಿಯಲ್ಲಿದ್ದ 511 ಸೆಕ್ಷನ್‌ಗಳ ಬದಲಿಗೆ ಭಾರತೀಯ ನ್ಯಾಯ ಸಂಹಿತೆಯು 358 ಸೆಕ್ಷನ್‌ಗಳನ್ನು ಮಾತ್ರ ಹೊಂದುವುದರೊಂದಿಗೆ ಹೊಸ ಕಾನೂನನ್ನು ಸರಳೀಕರಿಸಲಾಗಿದೆ ಎಂದು ವಿಶ್ಲೇಷಿಸಬಹುದು. ಇದರ ವ್ಯಾಪ್ತಿಗೆ ಒಟ್ಟು 20 ಹೊಸ ಅಪರಾಧಗಳನ್ನು ಸೇರಿಸಲಾಗಿದೆ, 33 ಅಪರಾಧಗಳಿಗೆ ಜೈಲುಶಿಕ್ಷೆಯ ಅವಧಿಯನ್ನೂ, 83 ಅಪರಾಧಗಳಿಗೆ ದಂಡದ ಮೊತ್ತವನ್ನೂ ಹೆಚ್ಚಿಸಲಾಗಿದೆ. ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ, ದೇಶದ್ರೋಹ, ಆರ್ಥಿಕ ಅಪರಾಧಗಳಂಥ ವಿಷಯಗಳಲ್ಲಿ ಸಾಮಾನ್ಯ ನಾಗರಿಕರ ಆಶೋತ್ತರಗಳಿಗೆ ಇಲ್ಲಿ ಸ್ಪಂದಿಸಲಾಗಿದೆ. ಹೊಸ ಕಾನೂನಿನ ಪ್ರಕಾರ ಇನ್ನು ವ್ಯಕ್ತಿಯು ಪೊಲೀಸ್ ಠಾಣೆಗೆ ತೆರಳಿಯೇ ದೂರು ನೀಡಬೇಕೆಂದಿಲ್ಲ, ಆನ್‌ಲೈನ್ ಮೂಲಕವೂ ದೂರು ನೀಡಲು ಅವಕಾಶವಿದೆ. ಸುಲಭವಾಗಿ ಮತ್ತು ತ್ವರಿತವಾಗಿ ವರದಿಮಾಡಲು ಇದು ಅನುವು ಮಾಡಿಕೊಡುತ್ತದೆ ಹಾಗೂ ಪೊಲೀಸರಿಂದ ತ್ವರಿತ ಕ್ರಮವನ್ನೂ ನಾವು ನಿರೀಕ್ಷಿಸಬಹುದಾಗಿದೆ. ವ್ಯಕ್ತಿಯು ತನ್ನ ವ್ಯಾಪ್ತಿ ಪ್ರದೇಶದ ಹೊರಗೂ, ಯಾವುದೇ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಬಹುದು. ಇದು ಕಾನೂನು ಪ್ರಕ್ರಿಯೆಗಳನ್ನು ಶೀಘ್ರವಾಗಿಸುತ್ತದೆ. ದೂರುದಾರರು ಮತ್ತು ಸಂತ್ರಸ್ತರು ಎಫ್‌ಐಆರ್‌ನ ಪ್ರತಿಯನ್ನು ಉಚಿತವಾಗಿ ಪಡೆದುಕೊಂಡು ಅಪರಾಧದಲ್ಲಿನ ತಮ್ಮ ಪಾತ್ರವನ್ನು ಸುಲಭವಾಗಿ ತಿಳಿದುಕೊಳ್ಳಬಹುದಾಗಿದೆ. ಮಾತ್ರವಲ್ಲದೆ, ಪ್ರಕರಣದಲ್ಲಿ ಬಂಧಿತನಾದ ವ್ಯಕ್ತಿಯು, ತನ್ನ ಹಾಲಿ ಸ್ಥಿತಿಯ ಬಗ್ಗೆ ತನ್ನಾಯ್ಕೆಯ ವ್ಯಕ್ತಿಗೆ ತಿಳಿಸುವ ಹಕ್ಕನ್ನು ಹೊಂದಿರುತ್ತಾನೆ. ಬಂಧಿತನು ತಕ್ಷಣದ ಜಾಮೀನು ಮುಂತಾದ ನೆರವು ಪಡೆಯಲು ಇದು ನೆರವಾಗಲಿದೆ. ಬಂಧನದ ಬಳಿಕ ವ್ಯಕ್ತಿಗಳ ವಿವರಗಳನ್ನು ಈಗ ಪೊಲೀಸ್ ಠಾಣೆಗಳು ಮತ್ತು ಜಿಲ್ಲಾ ಕೇಂದ್ರಗಳಲ್ಲಿ ಸೂಚನಾ ಫಲಕದ ಮೇಲೆ ಅಂಟಿಸಲಾಗುತ್ತದೆ. ಇದರಿಂದಾಗಿ ಬಂಧಿತರ ಕುಟುಂಬಿಕರು ಮತ್ತು ಸ್ನೇಹಿತರು ಸುಲಭವಾಗಿ ಮಾಹಿತಿಯನ್ನು ಪಡೆಯಲಿದ್ದಾರೆ. ಮಹಿಳೆಯರು ಮತ್ತು ಮಕ್ಕಳ ವಿರುದ್ಧದ ಅಪರಾಧಗಳ ತನಿಖೆಗೆ ಹೊಸ ಕಾನೂನುಗಳು ಆದ್ಯತೆ ನೀಡಿವೆ ಮತ್ತು ಮಾಹಿತಿ ದಾಖಲಿಸಿದ 2 ತಿಂಗಳೊಳಗೆ ಪ್ರಕರಣದ ತನಿಖೆಯನ್ನು ಪೂರ್ಣಗೊಳಿಸಬೇಕಾಗುತ್ತದೆ.

ಭಾರತೀಯ ದಂಡ ಸಂಹಿತೆಯ ಬದಲಾಗಿ ಬಂದಿರುವ ನ್ಯಾಯ ಸಂಹಿತೆಯ ಅಡಿಯಲ್ಲಿ ಹಲವಾರು ಹೊಸ ಅಪರಾಧಗಳನ್ನು ಸೇರಿಸಲಾಗಿದೆ. ಮೋಸದ ವಿಧಾನಗಳನ್ನು ಬಳಸಿ ನಡೆಸುವ ಲೈಂಗಿಕ ದೌರ್ಜನ್ಯ ಇದಕ್ಕೊಂದು ಉದಾಹರಣೆ. ಬಡ್ತಿ ಅಥವಾ ಉದ್ಯೋಗದ ಸುಳ್ಳು ಭರವಸೆಗಳು, ನಂತರ ಮದುವೆಯಾಗುವುದಾಗಿ ನಂಬಿಸುವಿಕೆ ಇವೆಲ್ಲ ಇಲ್ಲಿ ಮೋಸದ ವಿಧಾನಗಳೆನಿಸಿಕೊಳ್ಳುತ್ತವೆ. ಇಂಥ ಅಪರಾಧಕ್ಕೆ ದಂಡದ ಜತೆಗೆ 10 ವರ್ಷಗಳವರೆಗೆ ಜೈಲುಶಿಕ್ಷೆ ವಿಧಿಸಬಹುದಾಗಿದೆ. ಬಹಳಷ್ಟು ವಿಮರ್ಶಕರು 'ಇದು ಸರಿಯಾದ ಕ್ರಮ' ಎಂದು ಶ್ಲಾಘಿಸಿದರೂ, 'ಈ ಕಾನೂನು ಕೆಲ ಸಂದರ್ಭಗಳಲ್ಲಿ ಒಮ್ಮತದ ಸಂಬಂಧವನ್ನು ಅಪರಾಧೀಕರಿಸುತ್ತದೆ' ಎಂದು ಒಂದಷ್ಟು ವಿಮರ್ಶಕರು ಅಭಿಪ್ರಾಯಪಡುತ್ತಾರೆ. ಜಾತಿ, ಸಮುದಾಯ ಅಥವಾ ಜನಾಂಗದ ಆಧಾರದ ಮೇಲಿನ ಕೊಲೆಯನ್ನು ವಿಶಿಷ್ಟ ಅಪರಾಧವೆಂದು ಗುರುತಿಸುವುದರೊಂದಿಗೆ ಕ್ರಿಮಿನಲ್ ಕಾನೂನಿನಲ್ಲಿ ಮಹತ್ವದ ಬದಲಾವಣೆಯನ್ನು ತಂದಂತಾಗಿದೆ. ಇತ್ತೀಚೆಗೆ ದೇಶದಲ್ಲಿ ಇಂಥ ಅಪರಾಧಗಳ ವಿವಿಧ ಪ್ರಕರಣಗಳು ಹೆಚ್ಚು ಕಂಡುಬಂದಿರುವುದರಿಂದ, ಹೊಸ ಕಾನೂನು ಅವಕ್ಕೆ ಅಗತ್ಯವಾದ ಕಾನೂನು ಮಾನ್ಯತೆಯನ್ನು ನೀಡುತ್ತಿರುವುದು ಒಳ್ಳೆಯ ನಡೆ ಎನ್ನಬಹುದು. ಭಯೋತ್ಪಾದನೆ ಮತ್ತು ಸಂಘಟಿತ ಅಪರಾಧಗಳು ಮೊದಲು ಬೇರೆಯದೇ ಆದ ಕಾನೂನುಗಳ ವ್ಯಾಪ್ತಿಯಲ್ಲಿದ್ದವು; ಭಾರತೀಯ ನ್ಯಾಯ ಸಂಹಿತೆಯ ಕಲಂ 111 (1) ರಲ್ಲಿ ಉಲ್ಲೇಖಿಸಿದಂತೆ ಸಂಘಟಿತ ಅಪರಾಧವು ದರೋಡೆ, ಸುಲಿಗೆ, ಅಪಹರಣ, ವಾಹನ ಕಳವು, ಬಾಡಿಗೆ ಕೊಲೆ, ಭೂಕಬಳಿಕೆ, ಸೈಬರ್ ಮತ್ತು ಆರ್ಥಿಕ ಅಪರಾಧಗಳು, ಮಾದಕ ವಸ್ತುಗಳ ಮತ್ತು ಶಸ್ತ್ರಾಸ್ತ್ರಗಳ ಕಳ್ಳಸಾಗಣೆ, ಅಕ್ರಮ ಸೇವೆಗಳು ಮುಂತಾದ ಕಾನೂನುಬಾಹಿರ ಚಟುವಟಿಕೆಗಳನ್ನು ಒಳಗೊಂಡಿರುವುದು ಸ್ವಾಗತಾರ್ಹ ಬದಲಾವಣೆ ಎಂದು ಪರಿಗಣಿಸಲಾಗುತ್ತಿದೆ.

ಹಳೆಯ ಕಾನೂನಿಗೆ ಹೋಲಿಸಿದಾಗ ಭಾರತೀಯ ನಾಗರಿಕ ಸುರಕ್ಷಾ ಸಂಹಿತೆಯು, ಕಾನೂನು ಕ್ರಮ, ಬಂಧನ, ಜಾಮೀನು ಮುಂತಾದ ಪ್ರಕ್ರಿಯೆಗಳ ಕಾರ್ಯವಿಧಾನಗಳನ್ನು ವಿವರವಾಗಿ ನೀಡುತ್ತದೆ, 7 ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಜೈಲುಶಿಕ್ಷೆ ವಿಧಿಸಬಹುದಾದ ಅಪರಾಧಗಳಿಗೆ ವಿಧಿವಿಜ್ಞಾನ ತನಿಖೆಯನ್ನು ಕಡ್ಡಾಯಗೊಳಿಸುತ್ತದೆ. ಮಾತ್ರವಲ್ಲ, ಪುರಾವೆಗಳನ್ನು ಸಂಗ್ರಹಿಸುವ ಮತ್ತು ಪ್ರಕ್ರಿಯೆಯನ್ನು ದಾಖಲಿಸುವ ಉದ್ದೇಶಕ್ಕಾಗಿ ವಿಧಿವಿಜ್ಞಾನ ತಜ್ಞರು ಅಪರಾಧ ಸಂಬಂಧಿತ ದೃಶ್ಯಗಳನ್ನು ವಿಡಿಯೋ ರೆಕಾರ್ಡ್ ಮಾಡಿಕೊಳ್ಳಬಹುದಾಗಿದೆ. ಇಲ್ಲಿ, ಎಲ್ಲಾ ವಿಚಾರಣೆಗಳು ಇಲೆಕ್ಟ್ರಾನಿಕ್ ಮಾಧ್ಯಮವನ್ನು ಬಳಸಿಯೇ ನಡೆಯಬೇಕಾಗುತ್ತದೆ ಮತ್ತು ತನಿಖೆ, ಪ್ರಯೋಗ ಅಥವಾ ವಿಚಾರಣೆಯ ಉದ್ದೇಶಕ್ಕಾಗಿ ಇಲೆಕ್ಟ್ರಾನಿಕ್ ಸಂವಹನ ಮಾಧ್ಯಮಗಳನ್ನು ಬಳಸಬಹುದಾಗಿದೆ.

ಇಲೆಕ್ಟ್ರಾನಿಕ್ ಮತ್ತು ಡಿಜಿಟಲ್ ದಾಖಲೆಗಳಿಗೆ ಅವಕಾಶ ನೀಡಿರುವುದು ಭಾರತೀಯ ಸಾಕ್ಷ್ಯ ಅಧಿನಿಯಮದಲ್ಲಿ ಗಮನಿಸಬಹುದಾದ ಬದಲಾವಣೆ. ಇದರನ್ವಯ, ಸರ್ವರ್, ಇ-ಮೇಲ್, ಲ್ಯಾಪ್‌ಟಾಪ್, ಇಲೆಕ್ಟ್ರಾನಿಕ್ ಸಾಧನಗಳಲ್ಲಿ ಸಂಗ್ರಹಿಸಿದ ಫೈಲುಗಳು, ಸ್ಥಳ ಮಾಹಿತಿ, ವೆಬ್‌ಸೈಟ್ ವಿಷಯ, ಸಂದೇಶಗಳನ್ನು ಒಳಗೊಂಡಂತೆ ವ್ಯಾಪಕ ಶ್ರೇಣಿಯ ಇಲೆಕ್ಟ್ರಾನಿಕ್ ದಾಖಲೆಗಳನ್ನು ಪುರಸ್ಕರಿಸಲಾಗುತ್ತದೆ. ವಿದ್ಯುನ್ಮಾನ ಮಾಧ್ಯಮದಿಂದ ಪಡೆಯಲಾದ ಮೌಖಿಕ ಸಾಕ್ಷ್ಯವು ಇಲ್ಲಿ 'ಒಪ್ಪಿತ ಪುರಾವೆ' ಎನಿಸಿಕೊಳ್ಳುತ್ತದೆ. ಇದಲ್ಲದೆ, ಅತ್ಯಾಚಾರದ ವಿಷಯದಲ್ಲಿ ಸಂತ್ರಸ್ತರಿಗೆ ಉತ್ತಮ ರಕ್ಷಣೆ ನೀಡುವ ಸಲುವಾಗಿ, ಸಂತ್ರಸ್ತೆಯ ಹೇಳಿಕೆಯನ್ನು ಪ್ರತ್ಯಕ್ಷವಾಗಿ ದಾಖಲಿಸುವುದರ ಬದಲಾಗಿ ಆಡಿಯೋ-ವಿಡಿಯೋ ವಿಧಾನಗಳ ಮೂಲಕ ದಾಖಲಿಸಲಾಗುತ್ತದೆ. ಅಪರಾಧ ನಡೆದ ಸ್ಥಳಕ್ಕೆ ನೀಡುವ ಭೇಟಿಯಿಂದ ಮೊದಲ್ಗೊಂಡು ತನಿಖೆಯವರೆಗಿನ ಎಲ್ಲಾ ಹಂತಗಳಲ್ಲಿ ತಂತ್ರಜ್ಞಾನದ ಬಳಕೆಯನ್ನು ಈ ಅಧಿನಿಯಮ ಪರಿಚಯಿಸಿರುವುದಿಂದ ತನಿಖೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ನಿರೀಕ್ಷಿಸಬಹುದು ಎಂಬುದು ಸರಕಾರದ ವಾದ. ಸಾಕ್ಷ್ಯಗಳ ತಿರುಚುವಿಕೆಯ ಅಪಾಯವನ್ನು ಪರಿಗಣಿಸಿ, ಶೋಧ ಮತ್ತು ಸಾಕ್ಷಿಗಳನ್ನು ವಶಪಡಿಸಿಕೊಳ್ಳುವ ಪ್ರಕ್ರಿಯೆಗಳಲ್ಲಿ ಆಡಿಯೋ-ವಿಡಿಯೋ ರೆಕಾರ್ಡಿಂಗ್ ಅನ್ನು ಕಡ್ಡಾಯವಾಗಿ ಸೇರಿಸಿರುವುದು ಈ ಅಧಿನಿಯಮದಲ್ಲಿನ ಪ್ರಮುಖ ಸಾಧನೆಯಾಗಿದೆ.

ಓಬೀರಾಯನ ಕಾಲದ ತುಕ್ಕುಹಿಡಿದ ಕಾನೂನುಗಳನ್ನು ಕಾಲಕಾಲಕ್ಕೆ ಪರಿಶೀಲಿಸಿ, ಇಂದಿನ ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸುವ ಕ್ರಮ ಸರಿಯಾದದ್ದೇ ಆಗಿದೆ. ಸಮಾಜದ ಪ್ರಸಕ್ತ ಪರಿಸ್ಥಿತಿ ಮತ್ತು ದೇಶದ ಆಂತರಿಕ ಭದ್ರತೆಯನ್ನು ಗಮನದಲ್ಲಿರಿಸಿಕೊಂಡು ಕ್ರಿಮಿನಲ್ ನ್ಯಾಯ ವ್ಯವಸ್ಥೆಗೆ ಬದಲಾವಣೆ ತಂದಿರುವುದು, ದೇಶದ ಒಟ್ಟಾರೆ ನ್ಯಾಯಾಂಗ ವ್ಯವಸ್ಥೆಯನ್ನು ಪುನರುಜ್ಜೀವನಗೊಳಿಸುವುದರೆಡೆಗಿನ ಕೇಂದ್ರ ಸರಕಾರದ ದೃಢವಾದ ಹೆಜ್ಜೆಯಾಗಿದೆ. ಮಾತ್ರವಲ್ಲ, ಅಸಮರ್ಪಕ ವಕ್ಫ್ ಕಾನೂನಿಗೆ ಬದಲಾವಣೆ ತರುವ ಪ್ರಸ್ತಾವನೆ ಮತ್ತು ಸ್ವಾತಂತ್ರ್ಯೋತ್ಸವದಂದು ಪ್ರಧಾನಿ ಮೋದಿಯವರು ಕೆಂಪುಕೋಟೆ ಮೇಲಿನ ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದ 'ಜಾತ್ಯತೀತ ನಾಗರಿಕ ಸಂಹಿತೆ'ಯನ್ನು ಜಾರಿಗೆ ತರುವ ಕುರಿತಾದ ಸರಕಾರದ ಧೋರಣೆಗಳೂ ಸಮರ್ಪಕವಾಗಿವೆ. ಅನುಷ್ಠಾನಕ್ಕೆ ಸಿದ್ಧವಾಗಿರುವ ನಾಲ್ಕು ಕಾರ್ಮಿಕ ಸಂಹಿತೆಗಳೂ ಸರಕಾರದ ಕಾನೂನು ಸುಧಾರಣಾ ಮತ್ತು ಸರಳೀಕರಣ ಕ್ರಮಗಳ ಭಾಗವೇ ಆಗಿವೆ. ಹಾಗಾಗಿ, ಅನುಷ್ಠಾನದಲ್ಲಿನ ಆರಂಭಿಕ ತೊಡಕುಗಳಿಗೆ ಹೆಚ್ಚಿನ ಮಹತ್ವ ನೀಡದೆ, ಕ್ರಿಮಿನಲ್ ಕಾನೂನುಗಳಲ್ಲಿನ ಈ ಎಲ್ಲಾ ಸಕಾರಾತ್ಮಕ ಮಾರ್ಪಾಡುಗಳನ್ನು ದೇಶಸ್ಥರು ತೆರೆದ ಮನಸ್ಸಿನಿಂದ ಸ್ವಾಗತಿಸಬೇಕಿದೆ ಮತ್ತು ಈ ಹೊಸ ಚಿಂತನೆಗೆ ಶೀಘ್ರವಾಗಿ ಹೊಂದಿಕೊಳ್ಳುವ ಮೂಲಕ ಸ್ಪಂದಿಸಬೇಕಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಕಾವೇರಿ ನದಿ ದಡದಲ್ಲಿರೋ ಬ್ಯಾಂಕ್-ಕಾವೇರಿ ಬ್ಯಾಂಕ್

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಕನ್ನಡ ಚಿತ್ರರಂಗಕ್ಕೂ ಕೃಷ್ಣನಿಗೂ ಅದೇನೋ ಒಂಥರಾ ಸ್ಪೆಷಲ್ ಸಂಬಂಧ. 'ಕೃಷ್ಣ' ಹೆಸರಲ್ಲಿ ಬಂದ ಸಿನಿಮಾಗಳಿಗೆ ಲೆಕ್ಕವೇ ಇಲ್ಲ. ನಟ ಅಜಯ್ ರಾವ್ ಅವರಂತೂ ಕೃಷ್ಣ ಅನ್ನೋ ಹೆಸರನ್ನ ಸಂಪೂರ್ಣ ಬಳಸಿಕೊಂಡು ಅನೇಕ ಸಿನಿಮಾಗಳನ್ನ ಮಾಡಿದ್ರು. ಇನ್ನು ಗಣೇಶ್ ಕೂಡಾ 'ಕೃಷ್ಣ' ಅನ್ನೋ ಸಿನಿಮಾ ಮಾಡಿದ್ರು. ಈಗ ಅವರದ್ದೇ ಅಭಿನಯದಲ್ಲಿ 'ಕೃಷ್ಣಂ ಪ್ರಣಯ ಸಖಿ' ಬಂದಿದೆ. ಈ ಸಿನಿಮಾ ಹೇಗಿದೆ ಅಂತ ಕೇಳಿದ್ರೆ, ಚೆನ್ನಾಗಿದೆ ಅಂತ ಹೇಳಬಹುದು. ಆದ್ರೆ ಹೊಸ ರೀತಿಯ ಕಾನ್ಸೆಪ್ಟ್‌ಗಳ ಜತೆಗೆ ಇಂದಿನ ಪೀಳಿಗೆಯ ನಿರ್ದೇಶಕರು ಈ ವಾರ ಬಿಡುಗಡೆ ಆಗಿರೋ 'ತಂಗಳಾನ್' ಸಿನಿಮಾ ರೀತಿಯ ವಿಭಿನ್ನ ಸಿನಿಮಾಗಳನ್ನ ಮಾಡ್ತಾ ಇದ್ರೆ, ಇವರಿನ್ನೂ ಅದೇ ಹಳೇ ಕಥೆ ಇಟ್ಕೊಂಡು ತಂಗಳನ್ನದ ಥರ ಸಿನಿಮಾ ಮಾಡ್ತಾ ಇದ್ದಾರೆ ಅಂತ ಕಂಪ್ಲೇಂಟ್ ಮಾಡೋದಾದ್ರೆ ಈ ಸಿನಿಮಾ ನಿಮಗೆ ಇಷ್ಟ ಆಗಲ್ಲ. ಅದನ್ನ ಬಿಟ್ಟು 'ಕಾಮಿಡಿ, ಹಾಡುಗಳು, ರೊಮ್ಯಾನ್ಸ್, ಫ್ಯಾಮಿಲಿ ಸೆಂಟಿಮೆಂಟ್ ಇಷ್ಟಿದ್ರೆ ಸಾಕು, ಸಿನಿಮಾ ನೋಡ್ತೀನಿ' ಅನ್ನೋರು ನೀವಾದ್ರೆ ಇದು ನಿಮ್ಮ ಕೆಟಗರಿ ಸಿನಿಮಾ. ಈ ಚಿತ್ರದಲ್ಲಿ ನೀವು ಹೊಸತನ ಹುಡುಕಿದರೆ ಅದು ಅಪರಾಧ. ಆದ್ರೆ ಮನರಂಜನೆ ಹುಡುಕಿದ್ರೆ ನಿರಾಸೆ ಖಂಡಿತಾ ಇಲ್ಲ. ಹಳೇ ಕಾನ್ಸೆಪ್ಟ್ ಆದ್ರೂ ಸಿನಿಮಾದಲ್ಲಿ ಲವಲವಿಕೆ ಇದೆ. ಅದಕ್ಕೆ ತಕ್ಕಂತೆ ದೊಡ್ಡ ತಾರಾಗಣ ಇದೆ. ತಮ್ಮ ಬುದ್ಧಿಮತ್ತೆ ಮತ್ತು ಅಲ್ಲಿ ಇಲ್ಲಿ ಕೇಳಿದ್ದು, ಓದಿದ್ದು ಎರಡನ್ನೂ ಚೆನ್ನಾಗಿ ಬಳಸಿಕೊಂಡಿರೋ ಡೈಲಾಗ್ ರೈಟರ್ ಇದ್ದಾರೆ. ನಾನ್ ಸ್ಟಾಪ್ ಕಾಮಿಡಿ, ಕೇಳ್ತಾನೆ ಇರಬೇಕು ಅನ್ನುವಂಥ ಹಾಡುಗಳಿವೆ. ಅವು ನೋಡೋಕೂ ಚೆನ್ನಾಗಿವೆ. ಬೋರಾಗುವಂಥ ವಿಷಯ ಇಲ್ಲ. ಹಂಗಾಗಿ ಈ ಸಿನಿಮಾ ಎರಡೂ ಮುಕ್ಕಾಲು ಗಂಟೆ ಇದ್ದರೂ ಎಲ್ಲೂ 'ಕಷ್ಟಂ ಪ್ರಯಾಣ ಸಖಿ' ಅನ್ನುವಂಥ ಪರಿಸ್ಥಿತಿ ಬರಲ್ಲ. ಹೇಳಿ ಕೇಳಿ ಗೋಲ್ಡನ್ ಸ್ಟಾರ್ ಗಣೇಶ್ ಇಂಥ ಚಿತ್ರಗಳಿಗೆ ಹೆಸರುವಾಸಿ. ಅವರು ತಮ್ಮ ಇಮೇಜ್‌ಗೆ ಹೊಂದುವ ಇಂಥ ಚಿತ್ರಗಳನ್ನೇ ಮಾಡೋದು. ಸಿನಿಮಾದಲ್ಲಿ 'ಮೈ ಮ್ಯಾರೇಜ್ ಈಸ್ ಫಿಕ್ಸ್‌ಡ್, ಐ ಆ್ಯಮ್ ರೆಡಿ ಟು ಟೇಕ್ ರಿಸ್ಕ್' ಅಂತ ಹಾಡು ಹೇಳಿದ್ರೂ, ಸಿನಿಮಾ ವಿಷಯದಲ್ಲಿ ತೀರಾ ವಿಭಿನ್ನವಾದ ಕಾನ್ಸೆಪ್ಟ್ ತಗೊಂಡು ರಿಸ್ಕ್ ತಗೊಳ್ಳೋಕೆ ಹೋಗಿಲ್ಲ ಅವರು. ಸಿನಿಮಾದ ಕಥೆ ನೋಡೋಕೆ ಹೋದ್ರೆ ನಿಮಗೆ ಅದರಲ್ಲಿ ಹಲವಾರು ಕಥೆಗಳು, ಹಲವಾರು ಸಿನಿಮಾಗಳು ಕಾಣಿಸಬಹುದು. ಏನೂ ಮಾಡೋಕಾಗಲ್ಲ. ಕೃಷ್ಣ ಅಂದ್ರೆ ದೇವರು. ಹಾಗಾಗಿ ದೇವನೊಬ್ಬ ನಾಮ ಹಲವು ಥರ ಇದೂ ಅಂದ್ಕೊಂಡು ಸುಮ್ನೆ ನೋಡ್ಬೇಕು.

ಲೂಸ್ ಟಾಕ್

ಸಿದ್ರಾಮಯ್ಯ

- **ಏನ್ ಸರ್, ನಿಮ್ಮ ಮೇಲಿನ ಆಪಾದನೆಗಳು ದಿನೇದಿನೆ ಜಾಸ್ತಿ ಕಾವು ಪಡಕೊಳ್ತಾ ಇವೆಯಲ್ಲ?**

– ದನ ಕಾಯೋ ಪರಮಾತ್ಮ ಕೃಷ್ಣನ್ನೇ ಆಪಾದನೆಗಳು ಬಿಡ್ಲಿಲ್ಲ, ಕುರಿ ಕಾಯೋ ಕುರುಬನ್ನ ಬಿಡ್ತಾವಾ, ಬಿಟ್ಹಾಕ್ರೀ ಅತ್ಲಾಗೆ.

- **ಆದ್ರೂ ನಿಮ್ಮನ್ನ ಮುಖ್ಯಮಂತ್ರಿ ಸ್ಥಾನದಿಂದ ಇಳಿಸೋಕೆ ತುಂಬಾ ಜನ ಟ್ರೈ ಮಾಡ್ತಾ ಇದ್ದಾರಲ್ಲ?**

– ಏನ್ ಮಾಡೋದು ಸ್ವಾಮಿ, 'ಕುಮಾರಸ್ವಾಮಿ, ಡಿ.ಕೆ. ಶಿವಕುಮಾರ್ ಮಧ್ಯೆ ಸಿದ್ರಾಮಯ್ಯ ಬಡವಾದ' ಅಂತಾರಲ್ಲ ಹಂಗಾಗ್ತಿದೆ.

- **ಅದೂ ನಿಜ ಬಿಡಿ. ಆದ್ರೆ ನೀವು ನಿಮ್ಮ ಸ್ಥಾನ ಕಳಕೊಂಡ್ರೆ ಅದಕ್ಕೆ ಯಾರು ಕಾರಣ?**

– ನೋಡ್ರೀ, 'ಬಿಹೈಂಡ್ ಎವ್ವರಿ ಅನ್-ಸಕ್ಸಸ್‌ಫುಲ್ ಮ್ಯಾನ್ ದೇರ್ ಈಸ್ ಎ ವುಮನ್' ಅಂತಾರೆ. ನನ್ನ ವಿಷಯದಲ್ಲಿ ಅದು ಬಿಟ್ಟಿ 'ಭಾಗ್ಯ' ಇರಬಹುದು.

- **ಇದ್ಯಾವುದೋ ಹೊಸ ಗಾದೆ ಹೇಳಿಬಿಟ್ರಲ್ಲ?**

– ಅದ್ ಹಂಗೇ... ಗಾದಿ ಬಿಟ್ಟು ಇಳಿಯೋ ಟೈಮಲ್ಲಿ ಹಿಂಗೇ ಹೊಸ ಗಾದೆಗಳು ಹೊರಗೆ ಬರ್ತವೆ.

- **ಹೋಗ್ಲಿ, ನೀವು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದ್ರೆ, ನಿಮ್ಮ ಜಾಗದಲ್ಲಿ ಯಾರನ್ನ ಕೂಡಿಸ್ತೀರಾ?**

– ರೀ ಅದೇನೋ ಅಂತಾರಲ್ಲ, ನಾನ್ ಸ್ಟಾಪ್ ಬಸ್ಸಲ್ಲಿ ನನ್ ಸ್ಟಾಪ್ ಬಂದಾಗ ಇಳಿದುಹೋಗ್ತೀನಿ, ಆಮೇಲೆ ನನ್ನ ಸೀಟಲ್ಲಿ ಯಾರ್ ಕೂತ್ರೆ ನಂಗೇನು?

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ನ್ಯಾಷನಲ್ ಹೈವೇನಲ್ಲಿ ಎರಡು ಕಾರುಗಳು ಡಿಕ್ಕಿಯಾಗಿ ದೊಡ್ಡ ಅಪಘಾತವೇ ಆಯಿತು. ಕಾರು ಚಲಾಯಿಸುತ್ತಿದ್ದ ಖೇಮು ಕೆಳಗಿಳಿದು ಬಂದು ನೋಡಿದ. ಇನ್ನೊಂದು ಕಾರಿನಲ್ಲಿದ್ದಿದ್ದು ಒಂದು ಹುಡುಗಿ. ಹಾಗೆ ನೋಡಿದರೆ ಖೇಮುದೇನೂ ತಪ್ಪಿರಲಿಲ್ಲ. ಆಕೆಯೇ ಫಾಸ್ಟ್ ಆಗಿ ರಾಂಗ್ ಸೈಡಲ್ಲಿ ಬಂದು ಗುದ್ದಿದ್ದಳು. ಇಬ್ಬರ ಕಾರಿಗೂ ಡ್ಯಾಮೇಜ್ ಆಗಿತ್ತು. ಖೇಮು ಅವಳ ಬಳಿ ಎಲ್ಲದರ ಖರ್ಚು ವಸೂಲಿ ಮಾಡಬೇಕು ಎಂದುಕೊಂಡು ಬಂದ. ಆದರೆ ಹುಡುಗಿಯನ್ನ ನೋಡಿ ಒಂದು ಕ್ಷಣ ಮೈಮರೆತ. ಅಷ್ಟು ಚೆನ್ನಾಗಿದ್ಳು ಹುಡುಗಿ. ಅವಳು ಸೀದಾ ಇವನ ಬಳಿ ಬಂದವಳೇ, ಕಾಮ್ ಆಗಿ ಮಾತಾಡಿದಳು. 'ಇಲ್ನೋಡಿ, ಇಬ್ಬರ ಕಾರೂ ಸಿಕ್ಕಾಪಟ್ಟೆ ಡ್ಯಾಮೇಜ್ ಆಗಿದೆ. ಆದರೆ ನಮಗಿಬ್ಬರಿಗೂ ಏನೂ ಆಗಿಲ್ಲ. ಇದರ ಅರ್ಥ ಏನು?' ಅಂತ ಕೇಳಿದಳು. 'ಏನು?' ಅಂದ ಖೇಮು. 'ನೋಡಿ, ನಮ್ಮಿಬ್ಬರನ್ನು ಸೇರಿಸೋಕೆ ಅಂತನೇ ದೇವರು ಈ ರೀತಿ ಮಾಡಿದ್ದಾನೆ. ಅವನ ಮನಸ್ಸಿನಲ್ಲಿ ನಾವಿಬ್ಬರೂ ಜೊತೆಯಾಗಿ ಜೀವನ ಮಾಡಬೇಕು ಅನ್ನೋ ಆಸೆ ಇದೆ ಅನ್ನಿಸುತ್ತೆ. ಹಾಗಾಗಿ ನಮ್ಮನ್ನ ಈ ರೀತಿ ಭೇಟಿ ಮಾಡಿಸಿದ್ದಾನೆ' ಅಂತ ರೊಮ್ಯಾಂಟಿಕ್ ಆಗಿ ಹೇಳಿದಳು. ಅದನ್ನು ಕೇಳಿ ಖೇಮು ಒಂದೇ ನಿಮಿಷದಲ್ಲಿ ಅವಳ ಕಡೆ ಆಕರ್ಷಿತನಾದ. ಆ ಹುಡುಗಿ ಮತ್ತೆ ಹೇಳಿದಳು, 'ಅಲ್ನೋಡಿ, ನನ್ನ ಕಾರು ಅಷ್ಟೊಂದ್ ಡ್ಯಾಮೇಜ್ ಆಗಿದ್ದರೂ, ಅದರಲ್ಲಿದ್ದ ವಿಸ್ಕಿ ಬಾಟಲ್ ಮಾತ್ರ ಹಾಗೇ ಇದೆ. ಇದರ ಅರ್ಥ, ದೇವರು ನಮ್ಮ ಜೀವನದ ಈ ಪ್ರಮುಖ ಗಳಿಗೆಯನ್ನು ಎಂಜಾಯ್ ಮಾಡಿ ಅಂತ ನಮಗೆ ಹೇಳ್ತಾ ಇದ್ದಾನೆ'. ಖೇಮು ಹೌದು ಅಂತ ತಲೆ ಆಡಿಸಿದ. ತಕ್ಷಣ, ಖೇಮುಗೆ ಒಂದು ಗ್ಲಾಸಿನಲ್ಲಿ ವಿಸ್ಕಿ ಸುರಿದು ಕೊಟ್ಟಳು. ಅವಳನ್ನು ನೋಡುತ್ತಾ ವಿಸ್ಕಿ ಹೀರುತ್ತಿದ್ದ ಖೇಮುಗೆ ಗ್ಲಾಸ್ ಖಾಲಿ ಆಗಿದ್ದೇ ಗೊತ್ತಾಗಲಿಲ್ಲ. ಮತ್ತೆ ವಿಸ್ಕಿ ಹಾಕಿದಳು ಹುಡುಗಿ. ಅದನ್ನೂ ಹೀರುತ್ತಾ ಖೇಮು, 'ಅರೇ, ಬರೀ ನನಗೇ ಕುಡಿಸುತ್ತಿದ್ದೀಯ, ನೀನು ಕುಡಿಯಲ್ವಾ?' ಅಂತ ಕೇಳಿದ. ಅದಕ್ಕೆ ಹುಡುಗಿ ಹೇಳಿದಳು, 'ಇಲ್ಲ, ಪೊಲೀಸ್ ಬರಲಿ ಅಂತ ನಾನು ಕಾಯ್ತಾ ಇದ್ದೀನಿ'.

ಲೈನ್ ಮ್ಯಾನ್

- **ಫುಡ್ V/S ಫಿಲಾಸಫಿ**
  ಹಸಿವಿಲ್ಲದವನಿಗೆ ಅನ್ನ ಕೊಡಬಾರದು,
  ಟೇಸ್ಟ್ ಇಲ್ಲದವನಿಗೆ ಬಿರಿಯಾನಿ ಕೊಡಬಾರದು.
- **ಸಹಕಾರ-ಸರಕಾರ**
  'ಒಂದು ನಿಸ್ವಾರ್ಥ ಸೇವೆಯ ಕೆಲಸ ಮಾಡಬೇಕು ಅಂತಿದ್ದೀವಿ'.
  'ಮಾಡಿ, ಮಾಡಿ, ನನ್ನ ಸಹಕಾರ ಇದ್ದೇ ಇರುತ್ತೆ'.
  'ಹಂಗಾದ್ರೆ, ಒಂದ್ 10 ಲಕ್ಷ ಕೊಡಿ'.
  'ನಾನ್ ಹೇಳಿದ್ದು, ನನ್ನ ಸಹಕಾರ ಇದೆ ಅಂತ, ನನ್ನ ಸರಕಾರ ಇದೆ ಅಂತ ಅಲ್ಲ'.
- **ಕೆಲವರಿಗೆ ಎಷ್ಟ್ ಹೇಳಿದ್ರೂ ಬುದ್ಧಿ ಬರಲ್ಲ ಅನ್ನೋದನ್ನು ಹಿಂಗೂ ಹೇಳಬಹುದು**
  ಕುರುಡರ ಜೊತೆ ಕಣ್ಣಾಮುಚ್ಚಾಲೆ ಆಡೋಕಾಗುತ್ತಾ?
- **ಹೋಟೆಲ್ ಉದ್ಯಮದ ಸತ್ಯ**
  ಸಣ್ಣ ರೂಮ್ ಥರ ಇದ್ದ ಹೋಟೆಲ್, ಎಷ್ಟೇ ದೊಡ್ಡ ಲೆವೆಲ್‌ಗೆ ಬೆಳೆದು ಬದಲಾದ್ರೂ, ಎಕ್ಸ್‌ಟ್ರಾ ಚಟ್ನಿ ಕೇಳ್ದಾಗ ಮುಖ ನೋಡೋದ್ ಮಾತ್ರ ಬದಲಾಗಲ್ಲ.
- **ಒಂದ್ ಡೌಟು**
  ನಿಂಗೆ ಇಗೋ ಜಾಸ್ತಿ ಅಂತ ಹೇಳಿದಾಗ, 'ಹೌದು' ಅಂತ ಒಪ್ಪಿಕೊಳ್ಳೋನಿಗೆ
  ಇಗೋ ಇದೆ ಅಂತ ಅರ್ಥನಾ?
  ಇಲ್ಲ ಅಂತ ಅರ್ಥನಾ?
- **ಕಾವೇರಿ ನದಿ 'ದಡ'ದಲ್ಲಿರುವ ಕಾವೇರಿ ಗ್ರಾಮೀಣ ಬ್ಯಾಂಕ್ ಅನ್ನು ಏನಂತಾರೆ ?**
  ಕಾವೇರಿ 'ಬ್ಯಾಂಕ್'
- **ವಿದ್ಯೆ, ಕೆಲಸ ಇಲ್ಲದೆ ಮನೆಗೆ ದೊಡ್ಡ ತಲೆನೋವಾಗಿರುವ ಮಗ**
  ಅಮೃತಾಂಜನೀಪುತ್ರ
- **ವಿವಾದಿತ ಪುಸ್ತಕ ಬರೆದು ಜೈಲು ಸೇರಿದವನು**
  'ಬುಕ್ಡ್'
- **ನಿಮ್ಮ ಮೇಲೆ ಯುದ್ಧ ಮಾಡ್ತೀವಿ ಅಂತ ಮೊದಲೇ ಕೊಡುವ ಎಚ್ಚರಿಕೆ**
  'ವಾರ್' ನಿಂಗ್
- **ಯಾರ ಮುಡಿ ಸೇರುತ್ತೆ ಅನ್ನೋದು ಗೊತ್ತಿಲ್ಲದ ಪುಷ್ಪ**
  Whoವು

ಬಾಂಗ್ಲಾದೇಶದ ಕ್ರಾಂತಿಗೆ ಮೂಲಕಾರಣ ಭಾರತವೇ?

ದೃಷ್ಟಿಕೋನ
ಸ್ವಪನ್ ದಾಸ್‌ಗುಪ್ತಾ
vveditoped@gmail.com

ಬಾಂಗ್ಲಾದೇಶದ ಆಡಳಿತ ವ್ಯವಸ್ಥೆಯಲ್ಲಿ ಬಹುದೊಡ್ಡ ರೂಪಾಂತರ ಸಂಭವಿಸಿದೆ. ಮೀಸಲಾತಿ ವಿರೋಧಿಸುವ ನೆಪದಲ್ಲಿ ಭುಗಿಲೆದ್ದ ವಿದ್ಯಾರ್ಥಿ ದಂಗೆಯು ಅವಾಮಿ ಲೀಗ್ ಸರಕಾರವನ್ನು ಕಿತ್ತೆಸೆದಿದೆ. ಆಗಸ್ಟ್ 5ರ ಕ್ರಾಂತಿಯಲ್ಲಿ ಪ್ರಧಾನಿ ಶೇಖ್ ಹಸೀನಾ ಅಧಿಕಾರ ಕಳೆದುಕೊಂಡು, ಜೀವ ಉಳಿಸಿಕೊಂಡು ಭಾರತಕ್ಕೆ ಓಡಿ ಬಂದಿದ್ದಾರೆ. ಇಂಥದ್ದೊಂದು ದಿಢೀರ್ ಕ್ರಾಂತಿ ಸಂಭವಿಸಿದ್ದು ಹೇಗೆ ಎಂಬ ಬಗ್ಗೆಯೇ ಸಾಕಷ್ಟು ಊಹಾಪೋಹಗಳು ಈಗ ಹರಿದಾಡತೊಡಗಿವೆ. ಬಾಂಗ್ಲಾದ ಸೆಲೆಬ್ರಿಟಿ ನಾಯಕ ಹಾಗೂ ಪ್ರತಿಭಟನಾಕಾರರ ಫೇವರಿಟ್ ವ್ಯಕ್ತಿಯಾಗಿದ್ದ ನೊಬೆಲ್ ಪುರಸ್ಕೃತ ಮುಹಮ್ಮದ್ ಯೂನುಸ್ ಈಗ ಮಧ್ಯಂತರ ಸರಕಾರಕ್ಕೆ ಮುಖ್ಯಸ್ಥರಾಗಿದ್ದಾರೆ. ಅವರು ಈ ಕ್ರಾಂತಿಯನ್ನು ಬಾಂಗ್ಲಾದೇಶದ 'ಎರಡನೇ ವಿಮೋಚನೆ' ಎಂದು ಕರೆದಿದ್ದಾರೆ. ಶೇಖ್ ಹಸೀನಾ ವಾಜಿದ್‌ರನ್ನು ಕೆಳಗಿಳಿಸಲೇಬೇಕೆಂದು ಪಟ್ಟು ಹಿಡಿದಿದ್ದ ವಿದ್ಯಾರ್ಥಿ ಸಂಘಟನೆಗಳಲ್ಲೂ ಅನೇಕರು ಇದನ್ನೇ ಹೇಳುತ್ತಿದ್ದಾರೆ. ಈಗ ಎದ್ದಿರುವ ಪ್ರಶ್ನೆ: ಬಾಂಗ್ಲಾದೇಶದ ಮುಂದಿನ ಕತೆಯೇನು? ಕ್ರಾಂತಿ ಮುಗಿದು ಈಗಷ್ಟೇ ಎರಡು ವಾರವಾಗುತ್ತಿದೆ. ಈಗಲೇ ಭವಿಷ್ಯದ ಬಗ್ಗೆ ಯಾವುದೇ ನಿರ್ಧಾರಕ್ಕೆ ಬರುವುದು ಅವಸರವಾದೀತು. ಇಷ್ಟಕ್ಕೂ ದೇಶದಲ್ಲಿ ಹಿಂಸಾಚಾರವೇ ಇನ್ನೂ ನಿಂತಿಲ್ಲ. ಆದರೆ ಸ್ಥೂಲವಾಗಿ ಕೆಲ ಟ್ರೆಂಡ್‌ಗಳಂತೂ ಗೋಚರಿಸುತ್ತಿವೆ.

ಮೀಸಲಾತಿ ವಿರುದ್ಧದ ಹೋರಾಟದ ಸಮಯದಲ್ಲಿ ಶೇಖ್ ಹಸೀನಾ ಅವರು ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಈಗ ಮೀಸಲಾತಿ ವಿರುದ್ಧ ಹೋರಾಟ ನಡೆಸುತ್ತಿರುವ 'ಕ್ರಾಂತಿಕಾರಿಗಳನ್ನು' ಎದುರುಬದುರು ತಂದು ನಿಲ್ಲಿಸಿ ನೀವೇ ಹೊಡೆದಾಡಿಕೊಳ್ಳಿ ಎಂದು ಎತ್ತಿಕಟ್ಟಲು ಸಾಕಷ್ಟು ಪ್ರಯತ್ನ ಮಾಡಿದ್ದರು. ಆದರೆ ಆ ಪ್ರಯತ್ನ ಅವರಿಗೇ ತಿರುಗುಬಾಣವಾಯಿತು. ಶೇಖ್ ಹಸೀನಾ ಅವರು ತಮ್ಮನ್ನು ರಜಾಕರ್‌ಗಳಿಗೆ ಹೋಲಿಸುತ್ತಿದ್ದಾರೆ ಎಂದು ಭಾವಿಸಿದ ವಿದ್ಯಾರ್ಥಿ ಚಳವಳಿಗಾರರು ಅದರಿಂದ ರೊಚ್ಚಿಗೆದ್ದು ಪ್ರಧಾನಿ ಕುರ್ಚಿಯ ಬುಡಕ್ಕೇ ಬೆಂಕಿಯಿಟ್ಟರು. ರಜಾಕರ್‌ಗಳು ಅಂದರೆ 1971ರ ಬಾಂಗ್ಲಾ ವಿಮೋಚನೆ ಯುದ್ಧದ ಸಮಯದಲ್ಲಿ ಪಾಕಿಸ್ತಾನದೊಂದಿಗೆ ಕೈಜೋಡಿಸಿದ್ದ ಬಂಗಾಳಿಗಳು. ಇವರನ್ನು ಬಾಂಗ್ಲಾದೇಶದಲ್ಲಿ ದೇಶದ್ರೋಹಿಗಳ ರೀತಿ ನೋಡಲಾಗುತ್ತದೆ. ಆಗಸ್ಟ್ 5ರ ಕ್ರಾಂತಿಯ ಬಳಿಕ ಹೋರಾಟಗಾರರು ಬಾಂಗ್ಲಾದೇಶದ ಪಿತಾಮಹ ಶೇಖ್ ಮುಜಿಬುರ್ ರಹಮಾನ್ ಅವರ ಪುತ್ಥಳಿಯನ್ನು ಧ್ವಂಸಗೊಳಿಸಿದ್ದು, ಢಾಕಾದಲ್ಲಿರುವ ಅವರ ಮನೆಗೆ ಬೆಂಕಿ ಹಚ್ಚಿದ್ದು, ಹೊಸ ನಾಯಕತ್ವಕ್ಕೆ ಈ ದಂಗೆಯನ್ನು ನಿಯಂತ್ರಿಸಲು ಸಾಧ್ಯವಾಗದೆ ಹೋಗಿದ್ದು ಹಾಗೂ ಕ್ರಾಂತಿಯ ಕೆಲ ಖ್ಯಾತನಾಮ ಬೆಂಬಲಿಗರು ಕೂಡ ಈ ಹಿಂಸಾಚಾರವನ್ನು ಖಂಡಿಸದೆ ಇದ್ದುದನ್ನು ನೋಡಿದರೆ- ಹೋರಾಟಗಾರರನ್ನು ರಜಾಕರ್‌ಗಳಿಗೆ ಶೇಖ್ ಹಸೀನಾ ಹೋಲಿಸಿದ ವಿಷಯಕ್ಕೆ ನಾನಾ ಅರ್ಥಗಳು ಸ್ಫುರಿಸುತ್ತವೆ. ಮುಹಮ್ಮದ್ ಯೂನುಸ್ ಅವರ ಹೊಸ ಸರಕಾರವು ಈವರೆಗೆ ಬಂಗಬಂಧು ಮುಜಿಬುರ್ ರಹಮಾನ್ ಅವರು ಹುತಾತ್ಮರಾದ ದಿನವಾದ ಆಗಸ್ಟ್ 15ರಂದು ದೇಶದಲ್ಲಿ ನೀಡುತ್ತಿದ್ದ ರಾಷ್ಟ್ರೀಯ ರಜೆಯನ್ನು ರದ್ದುಪಡಿಸಿರುವುದನ್ನು ಕೂಡ ಇದರೊಂದಿಗೇ ಸೇರಿಸಿ ಓದಿಕೊಳ್ಳಿ. ಅಂದರೆ, 1971ರ ಪರಂಪರೆಯನ್ನು ಬಿಟ್ಟು ಮುನ್ನಡೆಯುವ ಉದ್ದೇಶಪೂರ್ವಕ ಪ್ರಯತ್ನಗಳು ಇಲ್ಲಿ ಕಾಣಿಸುತ್ತಿವೆ. ಈ ಕತೆ ಇಲ್ಲಿಗೇ ನಿಲ್ಲುವುದಿಲ್ಲ.

ಹಾಗಿದ್ದರೆ ಬಾಂಗ್ಲಾದೇಶವು ತನಗೆ ಸ್ವಾತಂತ್ರ್ಯ ಲಭಿಸಿದ 1971ರ ಐತಿಹಾಸಿಕ ಘಟನೆಯನ್ನೇ ಮರೆಯಲು ಅಥವಾ ಮರೆಸಲು ಏಕೆ ಬಯಸುತ್ತಿದೆ? ತನ್ನ ಮೂಲ ಪಾಕಿಸ್ತಾನದಲ್ಲಿರುವುದನ್ನು ಮರೆಯುವುದಕ್ಕೇನೂ ಬಾಂಗ್ಲಾದೇಶ ಯತ್ನಿಸುತ್ತಿಲ್ಲ. ಅಥವಾ ಆ ಉದ್ದೇಶ ಅದಕ್ಕಿಲ್ಲ. ಅದಕ್ಕೂ ಈಗಿನ ಕ್ರಾಂತಿಗೂ ಸಂಬಂಧ ಕೂಡ ಇಲ್ಲ. ಹಾಗಂತ, ಬಾಂಗ್ಲಾದೇಶವು ನಿಧಾನವಾಗಿ ತನ್ನ ಪಾಕಿಸ್ತಾನಿ ಬೇರುಗಳತ್ತಲೇ ಮತ್ತೆ ಮರಳುತ್ತಿದೆ ಎಂದೂ ಹೇಳುವ ಅಗತ್ಯವಿಲ್ಲ. ಹಾಗೆ ಕೂಡ ಆಗುತ್ತಿಲ್ಲ. ವಾಸ್ತವವಾಗಿ ಈ 'ಎರಡನೇ ವಿಮೋಚನೆ'ಯ ಹಿಂದೆ ಇರುವುದು ಆತ್ಮಗೌರವದ ವಿಕೃತ ರೂಪಾಂತರ. 1971ರ ಬಾಂಗ್ಲಾ ವಿಮೋಚನೆಯಲ್ಲಿ ಭಾರತದ ಪಾತ್ರ ಬಹಳ ದೊಡ್ಡದಿತ್ತು. ಪಾಕಿಸ್ತಾನದ ಸೇನೆಯು ಅಂದು ಶರಣಾಗಿದ್ದು ಭಾರತದ ಸೇನೆಗೇ ಹೊರತು ಬಾಂಗ್ಲಾ ಹೋರಾಟಗಾರರಿಗೆ ಅಲ್ಲ. ಇದೊಂದು ಕೀಳರಿಮೆ ಸದಾ ಬಾಂಗ್ಲಾದೇಶದ ಕೆಲ ವರ್ಗಗಳನ್ನು ಕಾಡುತ್ತಲೇ ಬಂದಿದೆ. 1971ರಲ್ಲಿ ಪಾಕಿಸ್ತಾನದಿಂದ ಬಾಂಗ್ಲಾ ಬೇರೆಯಾಗಬೇಕು ಎಂಬ ಉದ್ದೇಶದಿಂದ ಹೋರಾಟ ನಡೆದಿದ್ದರ ಹಿಂದೆ ಎರಡು ಕಾರಣಗಳಿದ್ದವು. ಒಂದು, ಭಾಷೆಯ ದಬ್ಬಾಳಿಕೆ. ಎರಡನೆಯದು, ರಾಜಕೀಯ ಸ್ವಾತಂತ್ರ್ಯ ಅಥವಾ ಪ್ರಾದೇಶಿಕ ಸ್ವಾಯತ್ತತೆ. ಇವತ್ತಿಗೂ ಬಾಂಗ್ಲಾ ವಿಮೋಚನೆಗೆ ಇವೇ ಕಾರಣಗಳನ್ನು ಹೇಳಲಾಗುತ್ತದೆ. ಆದರೆ, ಬಾಂಗ್ಲಾದೇಶವು ಪಾಕಿಸ್ತಾನದ ಹಿಡಿತದಿಂದ ಬಿಡಿಸಿಕೊಳ್ಳುವಾಗ 1971ರಲ್ಲಿ ನಡೆದ ಘಟನೆಗಳಿವೆಯಲ್ಲಾ, ಅವುಗಳನ್ನು ಜೀರ್ಣಿಸಿಕೊಳ್ಳಲು ಇವತ್ತಿಗೂ ಬಾಂಗ್ಲಾದೇಶಕ್ಕೆ ಆಗುತ್ತಿಲ್ಲ. 10 ತಿಂಗಳ ಕಾಲ ಬಾಂಗ್ಲಾದೇಶದ 'ಮುಕ್ತಿ ಬಾಹಿನಿ' ಪಡೆಗಳು ಪಾಕಿಸ್ತಾನಕ್ಕೆ ಸಾಕಷ್ಟು ನೀರಿಳಿಸಿದ್ದರೂ, ಬಾಂಗ್ಲಾ ವಿಮೋಚನೆಯ ವಿಷಯ ಪ್ರಸ್ತಾಪವಾದಾಗಲೆಲ್ಲ ಈಗಲೂ ಜಗತ್ತಿನ ಕಣ್ಮುಂದೆ ಬರುವ ಚಿತ್ರವೆಂದರೆ ಪಾಕಿಸ್ತಾನದ ಲೆಫ್ಟಿನೆಂಟ್ ಜನರಲ್ ಎ.ಎ.ಕೆ. ನಿಯಾಜಿ ಭಾರತದ ಲೆಫ್ಟಿನೆಂಟ್ ಜನರಲ್ ಜೆ.ಎಸ್.ಅರೋರಾಗೆ ಶರಣಾಗಿ ಕಡತಕ್ಕೆ ಸಹಿ ಹಾಕುತ್ತಿರುವ ಚಿತ್ರ. ಆಗ ಅಲ್ಲಿದ್ದುದು ಒಬ್ಬನೇ ಒಬ್ಬ ಬಾಂಗ್ಲಾದೇಶಿ. ಅದೂ ಸಿವಿಲ್ ಡ್ರೆಸ್‌ನಲ್ಲಿ ನಿಂತಿದ್ದ. ಹೀಗಾಗಿ, ತನಗೆ ಸಿಕ್ಕ ಸ್ವಾತಂತ್ರ್ಯವು ಭಾರತ ಕೊಡಿಸಿದ ಭಿಕ್ಷೆ ಎಂಬಂಥ ಜಾಗತಿಕ ಇಮೇಜಿನಿಂದ ಹೊರಗೆ ಬರಬೇಕು ಎಂದು ಬಾಂಗ್ಲಾದೇಶಕ್ಕೀಗ ಅನ್ನಿಸಿದೆ.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡಿದ ಮೀಸಲಾತಿ ವಿರುದ್ಧ ಹೋರಾಟ ನಡೆದು, ಪ್ರಧಾನಿ ಶೇಖ್ ಹಸೀನಾರನ್ನು ಪದಚ್ಯುತಿಗೊಳಿಸುವ ಅವಸರದಲ್ಲಿ ಸಾವಿರಕ್ಕೂ ಹೆಚ್ಚು ಜನರು ಬಾಂಗ್ಲಾದೇಶದ ಪೊಲೀಸರು ಹಾಗೂ ಅರೆಸೇನಾ ಪಡೆಗಳ ಬಂದೂಕುಪ್ರೇಮಿ ಸೈನಿಕರಿಗೆ ಬಲಿಯಾಗಿದ್ದಾರೆ. ಆದರೆ, ಈ ಆಗಸ್ಟ್ ಕ್ರಾಂತಿಯು ಸಂಪೂರ್ಣ ಬಾಂಗ್ಲಾದೇಶದ ಕರಕಮಲಗಳಿಂದಲೇ ನಡೆದ ಕೃತ್ಯ. ಸೋಕಾಲ್ಡ್ 'ಫ್ಯಾಸಿಸಂ ವಿರುದ್ಧದ ಗೆಲುವು' ಎಂಬ ಈ ಹೆಗ್ಗಳಿಕೆಯನ್ನು ಬಾಂಗ್ಲಾದೇಶವು ಬೇರೆ ಯಾವ ದೇಶದ ಜತೆಗೂ ಹಂಚಿಕೊಳ್ಳಬೇಕಿಲ್ಲ. ಕ್ರಾಂತಿಗೆ ಟೂಲ್-ಕಿಟ್ ವಿನ್ಯಾಸಗೊಳಿಸಿ ಕೊಟ್ಟವರ ಜತೆಗೂ ಕ್ರೆಡಿಟ್ ಹಂಚಿಕೊಳ್ಳುವ ಅಗತ್ಯವಿಲ್ಲ.

ಬಾಂಗ್ಲಾದ ಆಡಳಿತದಲ್ಲಿ ಆದ ಬದಲಾವಣೆಯ ಎರಡನೇ ಪ್ರಮುಖ ಲಕ್ಷಣವೆಂದರೆ, ಈ ರೂಪಾಂತರವು ಭಾರತದ್ವೇಷವನ್ನು ಬಾಂಗ್ಲಾದೇಶದ ಮೂಲಮಂತ್ರವನ್ನಾಗಿ ಮಾಡಲಿದೆ. ಭಾರತವಿರೋಧಿತನವು ಬಾಂಗ್ಲಾದೇಶದ ಇನ್ನು ಮುಂದಿನ ರಾಷ್ಟ್ರೀಯ ಸಿದ್ಧಾಂತವಾಗುವ ಸಾಧ್ಯತೆಯಿದೆ. ಇಷ್ಟು ಕಾಲ ಶೇಖ್ ಹಸೀನಾ ಹಾಗೂ ಅವರ ಅವಾಮಿ ಲೀಗ್ ಪಕ್ಷವು ದೆಹಲಿಯಲ್ಲಿ ಕುಳಿತ ಬಾಸ್‌ಗಳ ಕೈಗೊಂಬೆಯಾಗಿದ್ದವು ಎಂಬ ಭಾವನೆ ಬಾಂಗ್ಲಾದೇಶದ ಒಂದು ವರ್ಗದ ಜನರಲ್ಲಿತ್ತು. 2019 ಹಾಗೂ 2024ರಲ್ಲಿ ನಡೆದ ಚುನಾವಣಾ ಅಕ್ರಮಗಳ ಸೂತ್ರಧಾರ ಭಾರತ ಎಂಬ ಆರೋಪವೂ ಅಲ್ಲಿದೆ. ಆದರೆ ವಿರೋಧ ಪಕ್ಷಗಳ ಆ ಕೂಗಿಗೆ ಇಷ್ಟು ಕಾಲ ಯಾವುದೇ ಬೆಲೆ ಇರಲಿಲ್ಲ. ಏಕೆಂದರೆ ಶೇಖ್ ಹಸೀನಾ ಸರ್ವಾಧಿಕಾರಿ ರೀತಿ ವರ್ತಿಸುತ್ತಿದ್ದರು. ಇನ್ನು, ಬಾಂಗ್ಲಾದೇಶವು ಭಾರತದ ಉತ್ಪನ್ನಗಳಿಗೆ ಡಂಪಿಂಗ್ ಯಾರ್ಡ್ ಆಗಿದೆ ಎಂದು ಅನೇಕರು ದೂರುತ್ತಿದ್ದರು. ಇತ್ತೀಚೆಗೆ ಕೆಲ ಯೂಟ್ಯೂಬ್ ಹೋರಾಟಗಾರರು ಭಾರತದ ಉತ್ಪನ್ನಗಳನ್ನು ಬಹಿಷ್ಕರಿಸುವಂತೆ ಬಾಂಗ್ಲಾದಲ್ಲಿ ಕ್ಯಾಂಪೇನ್ ಕೂಡ ನಡೆಸಿದ್ದರು. ಭಾರತದ ಕುರಿತಾದ ದ್ವೇಷ ಬಾಂಗ್ಲಾದೇಶದಲ್ಲಿ ಇವತ್ತಿಗೂ ಎಷ್ಟು ತೀವ್ರವಾಗಿದೆ ಅಂದರೆ, ಮಧ್ಯಂತರ ಸರಕಾರದ ವಿದೇಶಾಂಗ ವ್ಯವಹಾರಗಳ ಸಲಹೆಗಾರ ಮೊಹಮ್ಮದ್ ತೌಹೀದ್ ಹೊಸೇನ್ ಅವರು ಭಾರತದ ಜತೆಗಿನ ಎಲ್ಲಾ ಒಪ್ಪಂದಗಳೂ ಈ ಹಿಂದಿನಂತೆಯೇ ಮುಂದುವರೆಯಲಿವೆ ಎಂದು ಹೇಳಿಕೆ ನೀಡಿದ ಕಾರಣಕ್ಕೆ ಅವರು ರಾಜೀನಾಮೆ ನೀಡಬೇಕೆಂದು ವಿದ್ಯಾರ್ಥಿ ಹೋರಾಟಗಾರರು ಆಗ್ರಹಿಸುತ್ತಿದ್ದಾರೆ.

ಇವತ್ತಿನ ಬಾಂಗ್ಲಾದೇಶದಲ್ಲಿ ಭಾರತದ ಬಗ್ಗೆ ನಖಶಿಖಾಂತ ದ್ವೇಷ ಮನೆಮಾಡಿದೆ. ಹಾಗಂತ ಇನ್ನುಮುಂದೆ ಬಾಂಗ್ಲಾದೇಶದ ರೋಗಿಗಳು ಚಿಕಿತ್ಸೆಗಾಗಿ ಭಾರತಕ್ಕೆ ಬರುವುದು ನಿಂತುಹೋಗುತ್ತದೆ ಅಥವಾ ಭಾರತದ ವ್ಯಾಪಾರ ವ್ಯವಹಾರಗಳು ಬಾಂಗ್ಲಾದೇಶದಲ್ಲಿ ಮುಚ್ಚಿಹೋಗುತ್ತವೆ ಎಂಬುದು ಇದರರ್ಥ ಅಲ್ಲ. ಹಾಗೆಲ್ಲ ಏನೂ ಆಗುವುದಿಲ್ಲ. ಅವೆಲ್ಲ ಎಂದಿನಂತೆಯೇ ನಡೆಯುತ್ತವೆ. ಆದರೆ, ಎರಡು ದೇಶಗಳ ನಡುವೆ ಉಂಟಾಗಲಿರುವ ಬಹುದೊಡ್ಡ ಬದಲಾವಣೆ ಅಂದರೆ ರಾಜಕೀಯ ಮತ್ತು ರಾಜತಾಂತ್ರಿಕ ಭಿನ್ನಮತಗಳು ಇನ್ನುಮುಂದೆ ಹೆಚ್ಚಾಗುತ್ತವೆ. ಹಿಂದೆ ಜೈಉರ್ ರಹಮಾನ್ ಅಧ್ಯಕ್ಷರಾಗಿದ್ದಾಗ ಹೀಗೇ ಆಗಿತ್ತು. ಈ ಬೆಳವಣಿಗೆಗಳು ಪೂರ್ವ ಹಾಗೂ ಈಶಾನ್ಯ ಭಾರತದಲ್ಲಿ ಬಾಂಗ್ಲಾದೇಶಿ ನುಸುಳುಕೋರರ ಚಟುವಟಿಕೆಗಳಿಗೆ ಉತ್ತೇಜನ ನೀಡಿದರೆ ಅದು ಭಾರತಕ್ಕೆ ಇನ್ನೊಂದು ತಲೆನೋವಾಗಿ ಪರಿಣಮಿಸುತ್ತದೆ.

ಈಗ ಬಾಂಗ್ಲಾದೇಶದಲ್ಲಿರುವ ಮಧ್ಯಂತರ ಸರಕಾರದ ಹಾಗೂ ಇಡೀ ದೇಶದಲ್ಲಿ ಮನೆಮಾಡಿರುವ ಭಾರತದ್ವೇಷದ ಉದ್ದೇಶ ಆ ದೇಶಕ್ಕೆ ಇಸ್ಲಾಮಿಕ್ ದೇಶವಾಗುವ ಬಯಕೆಯಿದೆ ಎಂಬುದಲ್ಲ. ದಂಗೆ ನಡೆಸಿದ ವಿದ್ಯಾರ್ಥಿಗಳ ಸಿಟ್ಟು ಇದ್ದುದು ಸರ್ವಾಧಿಕಾರಿ ಆಡಳಿತದ ಬಗ್ಗೆ. ಅವರು ಬಾಂಗ್ಲಾದೇಶದಲ್ಲಿ ನಿಯಂತ್ರಿತ ಮಾರುಕಟ್ಟೆ ಇರಬೇಕೆಂದು ಬಯಸುತ್ತಿದ್ದರು. ವಿದ್ಯಾರ್ಥಿ ಹೋರಾಟಗಾರರಲ್ಲಿ ಒಂದು ಗುಂಪು ಜಮಾತ್-ಎ-ಇಸ್ಲಾಮಿ ಸಂಘಟನೆಯದೂ ಇತ್ತು. ಅದು ಇಸ್ಲಾಮಿ ಛಾತ್ರ ಶಿಬಿರದ ಸಿದ್ಧಾಂತವನ್ನು ಅನುಸರಿಸುತ್ತದೆ ಎಂಬುದು ನಿಜ. ಆದರೆ, ಹೋರಾಟದಲ್ಲೂ, ನಂತರದ ಬೆಳವಣಿಗೆಯಲ್ಲೂ ಅದರ ಪಾಲು ಅತ್ಯಲ್ಪವಾಗಿದೆ. ಮುಂದಿನ ತಿಂಗಳುಗಳಲ್ಲಿ ಚುನಾವಣೆ ಘೋಷಣೆಯಾದಾಗ ವಿದ್ಯಾರ್ಥಿ ಹೋರಾಟಗಾರರಲ್ಲಿ ಕೆಲ ಗುಂಪುಗಳು ಒಟ್ಟಾಗಿ ಎಡ ಪಂಥೀಯ ರಾಜಕೀಯ ಪಕ್ಷವನ್ನು ಕಟ್ಟಿಕೊಂಡು ಸ್ಪರ್ಧಿಸುವ ಬಗ್ಗೆ ಮಾಹಿತಿಗಳು ಬರುತ್ತಿವೆ. ಅವು ಬಾಂಗ್ಲಾದೇಶಿ ನ್ಯಾಷನಲ್ ಪಾರ್ಟಿ ಜತೆಗೆ ಕೈಜೋಡಿಸುವ ಉಮೇದಿಯಲ್ಲಿ ಇಲ್ಲ. ಇದು ನಿಜವೇ ಆದರೆ ಮುಂದಿನ ದಿನಗಳಲ್ಲಿ ಬಾಂಗ್ಲಾ ದೇಶ ಜಾತ್ಯತೀತ ದೇಶವಾಗಿ ಗುರುತಿಸಿಕೊಳ್ಳಲು ಇಷ್ಟ ಪಡುತ್ತದೆಯೋ ಅಥವಾ ಇಸ್ಲಾಮಿಕ್ ದೇಶವಾಗಿ ಗುರುತಿಸಿ ಕೊಳ್ಳಲು ಬಯಸುತ್ತದೆಯೋ ಎಂಬುದು ಕುತೂಹಲಕಾರಿಯಾಗಿದೆ.

ಶೇಖ್ ಹಸೀನಾರ ಸರಕಾರವನ್ನು ಬೀಳಿಸಿದ ನಂತರ ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲೆ ದೊಡ್ಡ ಪ್ರಮಾಣದಲ್ಲಿ ದಾಳಿಗಳು ನಡೆದಿವೆ. ಇದಕ್ಕೆ ಎರಡು ಕಾರಣಗಳಿವೆ. ಒಂದು, 1970ರ ದಶಕ ಹಾಗೂ ಅದಕ್ಕಿಂತ ಮುಂಚಿನಿಂದಲೂ, ಬಾಂಗ್ಲಾದಲ್ಲಿ ಉಂಟಾಗುವ ಎಲ್ಲಾ ರಾಜಕೀಯ ಬದಲಾವಣೆ ಅಥವಾ ಅಸ್ಥಿರತೆಗಳಲ್ಲಿ ಹಿಂದೂಗಳು ಏಟು ತಿನ್ನುವುದು ಸರ್ವೇಸಾಮಾನ್ಯ ಎಂಬಂತಾಗಿದೆ. ಇಂಥ ಅಸ್ಥಿರತೆಯನ್ನು ಹಿಂದೂಗಳ ಮೇಲಿನ ಹಳೆಯ ದ್ವೇಷ ತೀರಿಸಿಕೊಳ್ಳಲು ಸರಿಯಾದ ಸಮಯ ಎಂದು ಕೆಲವರು ಭಾವಿಸುತ್ತಾರೆ. ಹಾಗಾಗಿ ಎಷ್ಟು ಸಾಧ್ಯವೋ ಅಷ್ಟು ಹಿಂದೂಗಳನ್ನು ಭಾರತಕ್ಕೆ ಓಡಿಸಲು ಇದು ಸುವರ್ಣಾವಕಾಶ ಎಂಬಂತೆ ನೋಡುತ್ತಾರೆ. ಬಾಂಗ್ಲಾದೇಶ್ ಹಿಂದು ಬುದ್ದಿಸ್ಟ್ ಕ್ರಿಶ್ಚಿಯನ್ ಯುನಿಟಿ ಕೌನ್ಸಿಲ್‌ನ ವರದಿಯ ಪ್ರಕಾರ ಆಗಸ್ಟ್ 5ರ ನಂತರದ ಮೂರು ದಿನಗಳಲ್ಲಿ ಅಲ್ಪಸಂಖ್ಯಾತರ ಮೇಲೆ 200ಕ್ಕೂ ಹೆಚ್ಚು ದಾಳಿಗಳು ನಡೆದಿವೆ. ಎರಡನೆಯದಾಗಿ, ಬಾಂಗ್ಲಾದೇಶದಲ್ಲಿ ಹಿಂದೂಗಳನ್ನು ಅವಾಮಿ ಲೀಗ್ ಪಕ್ಷದ ಮತಬ್ಯಾಂಕ್ ಎಂದು ಗುರುತಿಸಲಾಗುತ್ತದೆ. ಹೀಗಾಗಿ ಅವಾಮಿ ಲೀಗ್ ನಾಯಕರು ಹಾಗೂ ಕಾರ್ಯಕರ್ತರ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟ ಹಿಂಸಾಚಾರಿಗಳು ಹಿಂದೂಗಳ ಮೇಲೂ ಬೆಂಕಿ ಉಗುಳಿದ್ದಾರೆ. ಮುಂದಿನ ದಿನಗಳಲ್ಲಿ ಅವಾಮಿ ಲೀಗ್ ಪಕ್ಷಕ್ಕೆ ಮತ್ತೆ ಸಹಜ ರಾಜಕೀಯ ಪಕ್ಷವಾಗಿ ಕೆಲಸ ಮಾಡಲು ಅವಕಾಶ ನೀಡುವ ಬಗ್ಗೆ ಚರ್ಚೆಗಳು ಶುರುವಾದರೆ ಆಗ ಪುನಃ ಹಿಂದೂಗಳ ಮೇಲೆ ದೌರ್ಜನ್ಯ ನಡೆಯಬಹುದು.

ಕಳೆದೊಂದು ವಾರದಲ್ಲಿ ಬಾಂಗ್ಲಾದೇಶವು ಬಹಳ ದೊಡ್ಡ ಬದಲಾವಣೆಗೆ ಸಾಕ್ಷಿಯಾಗಿದೆ. ಮೊಟ್ಟಮೊದಲ ಬಾರಿ ಢಾಕಾ, ಚಿತ್ತಗಾಂಗ್ ಹಾಗೂ ಸಿಲ್ಹೆಟ್‌ನಲ್ಲಿ ಹಿಂದೂಗಳು ದೊಡ್ಡ ಪ್ರಮಾಣದ ಪ್ರತಿಭಟನೆ ನಡೆಸಿದ್ದಾರೆ. ಆ ಪ್ರತಿಭಟನೆಗೆ ಬೆಚ್ಚಿದ ಮಧ್ಯಂತರ ಸರಕಾರ ಸ್ವತಃ ತಾನೇ ಢಾಕೇಶ್ವರಿ ದೇಗುಲಕ್ಕೆ ಆಗಮಿಸಿ ಹಿಂದೂ ಸಮುದಾಯವನ್ನು ಭೇಟಿಯಾಗಿ ಮಾತುಕತೆ ನಡೆಸಿದೆ. ಭಾರತದ ಪ್ರಧಾನಿ ನೀಡಿದ ಕಠಿಣ ಸಂದೇಶದ ಪರಿಣಾಮವಾಗಿ ಹಿಂದೂಗಳನ್ನು ರಕ್ಷಿಸುವ ಸಂದೇಶವನ್ನು ಬಹಿರಂಗವಾಗಿ ನೀಡುವುದು ಅನಿವಾರ್ಯವಾಯಿತು ಎಂದು ಮುಹಮ್ಮದ್ ಯೂನುಸ್ ಅವರ ಸರಕಾರ ಯಾವತ್ತೂ ಒಪ್ಪಿಕೊಳ್ಳುವುದಿಲ್ಲ. ಆದರೆ, ಸದ್ಯಕ್ಕಂತೂ ಹಿಂದೂ ವಿರೋಧಿ ದಂಗೆ ಇನ್ನಷ್ಟು ವಿಸ್ತರಿಸದಂತೆ ಬಾಂಗ್ಲಾದೇಶದ ಸರಕಾರ ಖಂಡಿತ ನೋಡಿಕೊಳ್ಳಲಿದೆ. ಹಾಗಂತ, ಮುಂದೆ ಇಂಥ ಘಟನೆ ನಡೆಯುವುದಿಲ್ಲ ಎಂಬುದಕ್ಕೆ ಯಾವುದೇ ಗ್ಯಾರಂಟಿಯಿಲ್ಲ. ಅದರಲ್ಲೂ, ಮುಂದೆ ಚುನಾವಣೆ ನಡೆದಾಗ ಬಾಂಗ್ಲಾದೇಶ್ ನ್ಯಾಷನಲ್ ಪಾರ್ಟಿ ಮತ್ತು ಜಮಾತ್-ಎ-ಇಸ್ಲಾಮಿ ಸಂಘಟನೆಯ ಮೈತ್ರಿ ಸರಕಾರವೇನಾದರೂ ಅಸ್ತಿತ್ವಕ್ಕೆ ಬಂದರೆ ಆಗ ಏನಾಗುತ್ತದೆ ಎಂಬುದನ್ನು ಹೇಳಲು ಸಾಧ್ಯವಿಲ್ಲ. ಸದ್ಯಕ್ಕಂತೂ ಆ ಸಾಧ್ಯತೆಯೇ ಹೆಚ್ಚು ಕಾಣಿಸುತ್ತಿದೆ.

(ಲೇಖಕರು ಹಿರಿಯ ಪತ್ರಕರ್ತರು)

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 102

ಸಮಾಚಾರ ಸಣ್ಣದಲ್ಲ

ಭಾರತ ಮೂಲದ ವರ್ತಕ ಗುಂಡಿಗೆ ಬಲಿ

ರೋವನ್ ಕೌಂಟಿ: ಅಮೆರಿಕದ ನಾರ್ಥ ಕೆರೊಲಿನಾ ರಾಜ್ಯದಲ್ಲಿ ವರ್ತಕರಾಗಿರುವ ಭಾರತ ಮೂಲದ ವ್ಯಕ್ತಿಗೆ ಅಪ್ರಾಪ್ತನೊಬ್ಬ ಗುಂಡಿಕ್ಕಿ ಕೊಂದಿದ್ದಾನೆ. ರೋವನ್ ಕೌಂಟಿಯ ವಿಮಾನ ನಿಲ್ದಾಣ ರಸ್ತೆಯಲ್ಲಿ ತಂಬಾಕು ಮಾರಾಟದ ಸೇವಾ ಮಳಿಗೆ ವರ್ತಕ ಮಯಾಂಕ್ ಪಟೇಲ್(36) ಅವರು ಬಾಲಕನೊಬ್ಬನ ಗುಂಡೇಟಿಗೆ ಬಲಿಯಾಗಿದ್ದಾರೆ. ಗುಜರಾತ್ ಮೂಲದ ಪಟೇಲ್, ಏಳೂವರೆ ತಿಂಗಳ ಗರ್ಭಿಣಿ ಪತ್ನಿ ಮತ್ತು 5 ವರ್ಷದ ಪುತ್ರಿಯನ್ನು ಅಗಲಿದ್ದಾರೆ. ಬಾಲಕನನ್ನು ರೋವನ್ ಕೌಂಟಿ ಪೊಲೀಸರು ಬಂಧಿಸಿದ್ದಾರೆ. ಬಾಲಕ ಅಂಗಡಿಯಲ್ಲಿ ಲೂಟಿ ಮಾಡಲು ಯತ್ನಿಸಿ ವಿಫಲನಾದಾಗ ಗುಂಡಿಕ್ಕಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ.

ಮುಕ್ತ-ನ್ಯಾಯಯುತ ಚುನಾವಣೆ: ಯೂನುಸ್

ಢಾಕಾ: ಬಾಂಗ್ಲಾದೇಶದ ಮಧ್ಯಂತರ ಸರಕಾರ ಮುಂಬರುವ ದಿನಗಳಲ್ಲಿ ದೇಶದಲ್ಲಿ ಚುನಾವಣೆ ನಡೆಸುವ ಭರವಸೆ ನೀಡಿದೆ. ಪ್ರಜಾಪ್ರಭುತ್ವದ



ರಕ್ಷಣೆಗಾಗಿ ಮುಕ್ತ ಹಾಗೂ ನ್ಯಾಯಯುತ ಚುನಾವಣೆಯನ್ನು ನಡೆಸುವುದಾಗಿ, ಕೊಟ್ಟ ಮಾತಿಗೆ ತಮ್ಮ ಸರಕಾರ ಬದ್ಧವಾಗಿರುವುದಾಗಿ ಮಧ್ಯಂತರ ಸರಕಾರದ ಮುಖ್ಯಸ್ಥ, ನೊಬೆಲ್ ಪ್ರಶಸ್ತಿ ಪುರಸ್ಕೃತ ಮೊಹಮ್ಮದ್ ಯೂನುಸ್ ಶನಿವಾರ ಹೇಳಿದ್ದಾರೆ. ಪ್ರಜಾಪ್ರಭುತ್ವದ ಹಿತ ಕಾಯಲು ಮಧ್ಯಂತರ ಸರಕಾರ ಬದ್ಧವಾಗಿದೆ. ಮುಕ್ತ ಚುನಾವಣೆಗೆ ಅಗತ್ಯ ವಾತಾವರಣ ಸೃಷ್ಟಿಸಲಾಗುವುದು ಎಂದು 84 ವರ್ಷದ ಆಡಳಿತಗಾರ ಹೇಳಿದ್ದಾರೆ.

ಮಮತಾ ರಾಜೀನಾಮೆ: ನಿರ್ಭಯ ತಾಯಿ ಆಗ್ರಹ

ಬಲ್ಲಿಯ: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಅತ್ಯಾಚಾರ ಬಳಿಕ ಬರ್ಬರವಾಗಿ ಕೊಲೆಯಾದ ಕಿರಿಯ ವೈದ್ಯೆಯ

ಪ್ರಕರಣದಲ್ಲಿ ಪಶ್ಚಿಮ ಬಂಗಾಳ ಸರಕಾರ ಆರಂಭದಿಂದಲೇ ತಪ್ಪು ಮಾಡಿದೆ ಎಂದು 'ದೆಹಲಿ 2012ರ ಸಂತ್ರಸ್ತೆ ನಿರ್ಭಯ' ಅವರ ತಾಯಿ ಆಶಾದೇವಿ ಕಿಡಿಕಾರಿದ್ದಾರೆ. ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪರಿಸ್ಥಿತಿ ನಿರ್ವಹಿಸುವಲ್ಲಿ ಎಡವಿದ್ದಾರೆ. ಅದರ ಹೊಣೆ ಹೊತ್ತ ಮಮತಾ ರಾಜೀನಾಮೆ ನೀಡಬೇಕು ಎಂದು ಆಶಾದೇವಿ ಆಗ್ರಹಿಸಿದ್ದಾರೆ. ಗೃಹ ಖಾತೆಯನ್ನೂ ಹೊಂದಿರುವ ಮಮತಾ ಬ್ಯಾನರ್ಜಿ, ಮುಖ್ಯಮಂತ್ರಿಯಾಗಿ ಕರ್ತವ್ಯದಲ್ಲಿ ವಿಫಲರಾಗಿದ್ದಾರೆ. ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸುವ ಬದಲಾಗಿ ರಾಜಕೀಯವಾಗಿ ಜನರ ಗಮನ ಸೆಳೆಯಲು ಪ್ರತಿಭಟನಾ ರ್‍ಯಾಲಿ ನಡೆಸುತ್ತಾರೆ ಎಂದು ಟೀಕಿಸಿದ್ದಾರೆ.

ಹುಂಡಿ ಮೇಲೆ ಕ್ಯೂಆರ್ ಕೋಡ್ ಅಂಟಿಸಿದ್ದ ಕಳ್ಳ

ಬೀಜಿಂಗ್: ದೇಶದಲ್ಲಿನ ಶಾಂಕ್ಸಿ, ಸಿಚುವಾನ್ ಮತ್ತು ಚಾಂಗ್ಕಿಂಗ್ ಪ್ರಾಂತ್ಯಗಳಲ್ಲಿನ ಬೌದ್ಧ ಪಗೋಡಾಗಳಲ್ಲಿ ಇಟ್ಟಿರುತ್ತಿದ್ದ ದೇಣಿಗೆ ಹುಂಡಿಗಳ ಮೇಲೆ ತನ್ನ ಬಳಿ ಇದ್ದ ಕ್ಯೂಆರ್ ಕೋಡ್ ಅಂಟಿಸುವ ಮೂಲಕ ಚೀನಾದ ಚಾಲಾಕಿ ಚೋರನೊಬ್ಬ ಲಕ್ಷಾಂತರ ರು. ಲಪಟಾಯಿಸಿದ್ದ. ಹುಂಡಿಗೆ ಪಗೋಡಾ ಮುಖ್ಯಸ್ಥರು ಅಂಟಿಸಿರುತ್ತಿದ್ದ ಕ್ಯೂಆರ್ ಕೋಡ್ ಮೇಲೆ ತನ್ನ ವೈಯಕ್ತಿಕ ಬ್ಯಾಂಕ್ ಖಾತೆಯ ಕ್ಯೂಆರ್ ಕೋಡ್ ಅಂಟಿಸಿ ಭಕ್ತರು ನೀಡುವ ದೇಣಿಗೆ ಮೊತ್ತ ತನ್ನ ಖಾತೆಗೆ ಹಣ ವರ್ಗಾವಣೆ ಆಗುವಂತೆ ಮಾಡಿಕೊಂಡಿದ್ದ. ಹೀಗೆ ಒಟ್ಟು 30,000 ಯುವಾನ್ (3.5 ಲಕ್ಷ ರು.) ಲಪಟಾಯಿಸಿದ್ದ. ಸಿಕ್ಕಿಬಿದ್ದಾಗ ತನಿಖೆ ವೇಳೆ ತಪ್ಪೊಪ್ಪಿಕೊಂಡ. ಲಪಟಾಯಿಸಿದ್ದ ಎಲ್ಲಾ ಹಣ ಹಿಂದಿರುಗಿಸಿದ ಎಂದು ಪೊಲೀಸರು ತಿಳಿಸಿದ್ದಾರೆ.

ಕೇದಾರನಾಥ ಚಾರಣ ಮಾರ್ಗ ಕಡೆಗೂ ದುರಸ್ತಿ

ಕೇದಾರನಾಥ: ಜು.31ರ ರಾತ್ರಿ ಭಾರೀ ಮಳೆಯಿಂದ ಭೂಕುಸಿತವಾಗಿದ್ದರಿಂದ ಹಾನಿಗೀಡಾಗಿದ್ದ ಕೇದಾರನಾಥದ ಚಾರಣ ಮಾರ್ಗ ಕಡೆಗೂ ದುರಸ್ತಿಯಾಗಿದೆ. ಚಾರಣ ಮಾರ್ಗವನ್ನು ಭಕ್ತರಿಗಾಗಿ ಮತ್ತೆ ತೆರೆಯಲಾಗಿದೆ. ಪುಣ್ಯಕ್ಷೇತ್ರಕ್ಕೆ ನಡೆದೇ ಸಾಗಬೇಕೆಂದು ಬಯಸುತ್ತಿದ್ದ ಭಕ್ತರಿಗೆ ಖುಷಿ ತಂದಿದೆ. 260 ಕಾರ್ಮಿಕರು ಹಗಲಿರುಳು ಶ್ರಮಿಸಿ, 15 ದಿನಗಳ ಕಾಲ ಸತತ ಕಾಮಗಾರಿ ಕೈಗೊಂಡು ದುರಸ್ತಿ ಕಾರ್ಯ ಪೂರ್ಣಗೊಳಿಸಲಾಗಿದೆ. ಯಾತ್ರಾರ್ಥಿಗಳ ಬಳಕೆಗೆ ಚಾರಣ ಮಾರ್ಗ ತೆರೆಯಲಾಗಿದೆ. ಭೂಕುಸಿತದಿಂದ ಹಾನಿಗೀಡಾಗಿದ್ದ 19 ಕಿಮೀ ಉದ್ದದ ಮಾರ್ಗವನ್ನು ಶನಿವಾರ ಪುನಃಸ್ಥಾಪಿಸಲಾಗಿದೆ.

{ಸದ್ಗುರು ಜಗ್ಗಿ ವಾಸುದೇವ್} ಇಶಾ ಫೌಂಡೇಷನ್

ಭಾರತದಲ್ಲಿ ಮಹಿಳೆಯರ ವಿರುದ್ಧದ ಅಪರಾಧ ಪ್ರಕರಣಗಳು ಹೆಚ್ಚುತ್ತಿದ್ದು, ಅವನ್ನು ತಡೆಯಲು ಪ್ರತ್ಯೇಕವಾದ 'ರಾಷ್ಟ್ರೀಯ ಏಜೆನ್ಸಿ' ಸ್ಥಾಪಿಸಬೇಕಿದೆ. ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ, ಕೊಲೆಯಂತಹ ಘೋರ ಅಪರಾಧಗಳಾದಾಗ ರಾಜ್ಯ ಸರಕಾರವಲ್ಲ, ರಾಷ್ಟ್ರೀಯ ತನಿಖಾ ತಂಡಗಳೇ ತನಿಖೆ ನಡೆಸಬೇಕು.

'ಸೆಂಟ್ರಲ್ ಪ್ರೊಟೆಕ್ಷನ್ ಆಕ್ಟ್'ಗಾಗಿ ಆಗ್ರಹ | ಸರಕಾರಿ-ಖಾಸಗಿ ಆಸ್ಪತ್ರೆಗಳ ವೈದ್ಯರೆಲ್ಲಾ ಭಾಗಿ | ಹೊರರೋಗಿ ವಿಭಾಗದ ಸೇವೆಗಳು ಸ್ಥಗಿತ

ದೇಶಾದ್ಯಂತ ವೈದ್ಯರ ಪ್ರತಿಭಟನೆ: ರೋಗಿಗಳ ಪರದಾಟ

- ಶನಿವಾರದ ಶಸ್ತ್ರಚಿಕಿತ್ಸೆಗಳೆಲ್ಲಾ ಮುಂದೂಡಿಕೆ
- ಅಪಘಾತ-ತುರ್ತುಸೇವೆ ವಿಭಾಗದಲ್ಲಷ್ಟೇ ಸೇವೆ
- ಚಿಕಿತ್ಸೆ ದೊರೆಯದೆ ರೋಗಿಗಳ ಪರದಾಟ

ದೆಹಲಿ: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ಮುಂಜಾನೆ ಕರ್ತವ್ಯನಿರತ 31 ವರ್ಷದ ಕಿರಿಯ ವೈದ್ಯೆಯ ಅತ್ಯಾಚಾರ-ಬರ್ಬರ ಕೊಲೆ ಖಂಡಿಸಿ, ಕರ್ತವ್ಯನಿರತ ವೈದ್ಯರ-ವೈದ್ಯಕೀಯ ಸಿಬ್ಬಂದಿಯ ಸುರಕ್ಷತೆಗೆ ಆಗ್ರಹಿಸಿ ದೇಶಾದ್ಯಂತದ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳ ವೈದ್ಯರು ಶನಿವಾರ ಬೆಳಗ್ಗೆ 6ಗಂಟೆಯಿಂದ 24 ಗಂಟೆಗಳ ಪ್ರತಿಭಟನೆ ಆರಂಭಿಸಿದ್ದಾರೆ. ಪರಿಣಾಮ, ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಲಭ್ಯವಾಗದೇ ರೋಗಿಗಳು ಪರಿತಪಿಸುತ್ತಿದ್ದಾರೆ.

4 ಲಕ್ಷ ವೈದ್ಯರನ್ನು ಸದಸ್ಯರಾಗಿ ಹೊಂದಿರುವ ಭಾರತೀಯ ವೈದ್ಯ ಸಂಘ (ಐಎಂಎ) 24 ಗಂಟೆಗಳ ಪ್ರತಿಭಟನೆಗೆ ಕರೆ ನೀಡಿದೆ. ಅದಕ್ಕೆ ದೇಶಾದ್ಯಂತದ ವೈದ್ಯರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ದೇಶದಲ್ಲಿನ ಎಲ್ಲಾ ಸರಕಾರಿ, ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳಲ್ಲಿನ ಹೊರ ರೋಗಿ ವಿಭಾಗ ಪೂರ್ಣ ಮುಚ್ಚಿದೆ. ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ ಎಂದು ಐಎಂಎ ರಾಷ್ಟ್ರೀಯ ಅಧ್ಯಕ್ಷ ಡಾ. ಅಶೋಕನ್ ಸುದ್ದಿಗಾರರಿಗೆ ಶನಿವಾರ ತಿಳಿಸಿದರು. ಶನಿವಾರಕ್ಕೆ ನಿಗದಿಯಾಗಿದ್ದ ಶಸ್ತ್ರಚಿಕಿತ್ಸೆಗಳನ್ನೂ ಮುಂದೂಡಲಾಗಿದೆ. ಕೇವಲ ಅಪಘಾತ ಮತ್ತು ತುರ್ತು ಚಿಕಿತ್ಸಾ ಘಟಕಗಳಷ್ಟೇ ಕಾರ್ಯನಿರ್ವಹಿಸುತ್ತಿವೆ. ಇದೆಲ್ಲದರ ಪರಿಣಾಮ, ಭಾರತದಲ್ಲಿನ ವೈದ್ಯರ ಪರಿಸ್ಥಿತಿ, ಮಹಿಳೆಯರ ಸುರಕ್ಷತೆ ವಿಚಾರದ ಬಗ್ಗೆ ಅಂತಾರಾಷ್ಟ್ರೀಯ ಸಮುದಾಯವೇ ತಿರುಗಿ ನೋಡುವಂತಾಗಿದೆ ಎಂದು ಡಾ.ಅಶೋಕನ್ ಹೇಳಿದರು. ದೆಹಲಿಯ ಅಖಿಲ ಭಾರತ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗಳ(ಏಮ್ಸ್) ಕ್ಯಾಂಪಸ್‌ನಲ್ಲಿ ನೂರಾರು ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿ ಶನಿವಾರ ಬೆಳಗ್ಗೆ ಪ್ರತಿಭಟನಾ ಮೆರವಣಿಗೆ ನಡೆಸಿ ಗಮನ ಸೆಳೆದರು. ತಮಗೆ ಉದ್ಯೋಗ ಸ್ಥಳದಲ್ಲಿ ಸುರಕ್ಷತೆ ಬೇಕು ಎಂದು ಆಗ್ರಹಿಸಿದರು. ಕೋಲ್ಕತ್ತ ಕಿರಿಯ ವೈದ್ಯೆಗೆ ನ್ಯಾಯ ದೊರಕಿಸಿಕೊಡಬೇಕು ಎಂಬ ಫಲಕಗಳನ್ನೂ ಹಿಡಿದು ಪ್ರತಿಭಟಿಸಿದರು. ಭಾನುವಾರ ಬೆಳಗ್ಗೆ 6ರವರೆಗೂ ಪ್ರತಿಭಟನೆ-ಆರೋಗ್ಯ ಸೇವೆಗಳ ಸ್ಥಗಿತ ಮುಂದುವರಿಯಲಿದೆ ಎಂದರು.

ವೈದ್ಯರ ಬೇಡಿಕೆ

ವೈದ್ಯರ ಮೇಲೆ ಪದೇ ಪದೇ ಹಲ್ಲೆಗಳಾಗುತ್ತಿವೆ. ಅದರಲ್ಲೂ ರಾತ್ರಿ ಪಾಳಿಯಲ್ಲಿ ಮಹಿಳಾ ವೈದ್ಯರು, ವೈದ್ಯಕೀಯ ಸಿಬ್ಬಂದಿ ಅಪಾಯ ಎದುರಿಸುತ್ತಿದ್ದಾರೆ. ಕೆಲಸದ ಸ್ಥಳದಲ್ಲಿ ವೈದ್ಯರಿಗೆ, ಅದರಲ್ಲೂ ಮಹಿಳಾ ವೈದ್ಯರು ಮತ್ತು ವೈದ್ಯಕೀಯ ಸಿಬ್ಬಂದಿಗೆ ಸುರಕ್ಷತೆ ಬಹಳ ಮುಖ್ಯವಾಗಿದೆ. ಬರೀ ಮಹಿಳಾ ವೈದ್ಯರಷ್ಟೇ ಅಲ್ಲ, ಇಡೀ ಉದ್ಯೋಗಸ್ತ ಮಹಿಳಾ ಸಮುದಾಯಕ್ಕೇ ಸುರಕ್ಷತೆ ಅತ್ಯಗತ್ಯವಾಗಿದೆ. ಆ ದಿಶೆಯಲ್ಲಿ ಸರಕಾರ ಭರವಸೆ ನೀಡಬೇಕಿದೆ. ಕೇಂದ್ರ ಸರಕಾರ 'ಸೆಂಟ್ರಲ್ ಪ್ರೊಟೆಕ್ಷನ್ ಆಕ್ಟ್' ಜಾರಿಗೆ ತರಬೇಕು. ಈ ನಿಟ್ಟಿನಲ್ಲಿ ಬೇಗ ಕಾರ್ಯನಿರತವಾಗಬೇಕಿದೆ ಎಂಬುದೇ ಪ್ರತಿಭಟನಾ ನಿರತ ವೈದ್ಯರ ಬೇಡಿಕೆ ಯಾಗಿದೆ ಎಂದು ಐಎಂಎ ಅಧ್ಯಕ್ಷ ಡಾ. ಅಶೋಕನ್ ಹೇಳಿದ್ದಾರೆ.

ರೋಗಿಗಳ ಪರದಾಟ

ದೆಹಲಿ, ಕೋಲ್ಕತ್ತ, ಮುಂಬೈ, ಚೆನ್ನೈ, ಬೆಂಗಳೂರು ಸೇರಿದಂತೆ ದೇಶದ ಎಲ್ಲೆಡೆಯ ಸರಕಾರಿ-ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಂಗಳು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದರಿಂದ ವೈದ್ಯಕೀಯ ಸೇವೆಗಳು ಲಭ್ಯವಿಲ್ಲದೇ ರೋಗಿಗಳು ಪರದಾಡಿದರು.

ಸಮಿತಿ ರಚನೆ: ಸರಕಾರ ಭರವಸೆ

ದೇಶದಲ್ಲಿನ ಕರ್ತವ್ಯನಿರತ ವೈದ್ಯರ ಸುರಕ್ಷತೆಗಾಗಿ ಯಾವ ರೀತಿಯ ಕ್ರಮ ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಲೆಂದೇ ಸಮಿತಿಯೊಂದನ್ನು ರಚಿಸುವುದಾಗಿ ಕೇಂದ್ರ ಆರೋಗ್ಯ ಸಚಿವಾಲಯ ಶನಿವಾರ ಭರವಸೆ ನೀಡಿದೆ. ಕರ್ತವ್ಯ ನಿರತ ವೈದ್ಯರಿಗೆ ಕೆಲಸದ ಸ್ಥಳದಲ್ಲಿ ಸುರಕ್ಷತೆಯೇ ಇಲ್ಲ. ಹಾಗಾಗಿಯೇ ಕೋಲ್ಕತ್ತ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ರಾತ್ರಿ ಪಾಳಿಯಲ್ಲಿದ್ದ ಕಿರಿಯ ವೈದ್ಯೆಯ ಅತ್ಯಾಚಾರ- ಹತ್ಯೆ ನಡೆದಿದೆ ಎಂದು ಭಾರತೀಯ ವೈದ್ಯರ ಸಂಘ(ಐಎಂಎ), ಸ್ಥಾನಿಕ ವೈದ್ಯರ ಸಂಘಗಳ ಒಕ್ಕೂಟ 'ಫೋರ್ಡಾ' ತೀವ್ರ ಕಳವಳ ವ್ಯಕ್ತಪಡಿಸಿವೆ. ಕೆಲಸದ ಸ್ಥಳದಲ್ಲಿ ವೈದ್ಯರ ಸುರಕ್ಷತೆಗೆ ಏನೇನು ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂಬುದನ್ನು ನಿಗದಿಪಡಿಸಲು ಸಮಿತಿ ರಚಿಸಲಾಗುವುದು. ರಾಜ್ಯಗಳಿಂದಲೂ ಪ್ರತಿಕ್ರಿಯೆ ಕೋರಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೇಳಿದೆ.

ಮಹಿಳೆಯರ ಸುರಕ್ಷತೆ: ಪ್ರಧಾನಿಗೆ ಐಎಂಎ ಪತ್ರ

ದೆಹಲಿ: ಉದ್ಯೋಗದಲ್ಲಿರುವ ಮಹಿಳೆಯರ ಸುರಕ್ಷತೆಗೆ ದೇಶದ ಆಡಳಿತ ಗಮನ ಕೊಡಬೇಕಿದೆ. ಈ ದಿಶೆಯಲ್ಲಿ ಪ್ರಧಾನಿ ಮಧ್ಯಪ್ರವೇಶ ಅತ್ಯಗತ್ಯವಾಗಿದೆ. ಹಾಗಾಗಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸದ್ಯದಲ್ಲೇ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆಯಲಿದೆ ಎಂದು ಐಎಂಎ ರಾಷ್ಟ್ರೀಯ ಅಧ್ಯಕ್ಷ ಡಾ. ಅಶೋಕನ್ ಶನಿವಾರ ಹೇಳಿದ್ದಾರೆ. ಮಹಿಳೆಯರ ಸುರಕ್ಷತೆ ವಿಚಾರದಲ್ಲಿ ಪ್ರಧಾನಿ ಅವರ ಮಧ್ಯಪ್ರವೇಶವಾಗಬೇಕು. ಆ ಸಮಯ ಈಗ ಬಂದಿದೆ. ಅದರಲ್ಲೂ ಅತ್ಯಾಚಾರಕ್ಕೊಳಗಾಗಿ ಬರ್ಬರವಾಗಿ ಕೊಲೆಯಾದ ಕಿರಿಯ ವೈದ್ಯೆಗೆ ನ್ಯಾಯ ದೊರಕಿಸಿಕೊಡಬೇಕಿದೆ. ಈ ಬಗ್ಗೆ ಐಎಂಎ ಪ್ರಧಾನಿಗೆ ಪತ್ರ ಬರೆಯಲಿದೆ ಎಂದರು. ಆ.15ರಂದು ಕೆಂಪು ಕೋಟೆ ಮೇಲೆ ನಿಂತು 78ನೇ ಸ್ವಾತಂತ್ರ್ಯೋತ್ಸವ ಭಾಷಣ ಮಾಡಿದ ಪ್ರಧಾನಿ ಮೋದಿ ಅವರು ದೇಶದಲ್ಲಿ ಮಹಿಳೆಯರ ಸುರಕ್ಷತೆ ವಿಚಾರ ಪ್ರಸ್ತಾಪಿಸಿದ್ದರು. ಅದನ್ನೀಗ ಕಾರ್ಯಗತಗೊಳಿಸಬೇಕಿದೆ ಎಂದು ಡಾ. ಅಶೋಕನ್ ಒತ್ತಾಯಿಸಿದರು. ಕೇಂದ್ರದ ಆರೋಗ್ಯ ಸಚಿವರನ್ನು ಭೇಟಿಯಾಗಿ ಸದ್ಯದ ಪರಿಸ್ಥಿತಿ ವಿವರಿಸಿದ್ದೇವೆ. ಇನ್ನೇನಿದ್ದರೂ ಸರಕಾರ ಪ್ರತಿಕ್ರಿಯಿಸಬೇಕಿದೆ. ನಾವೇನೂ ಹೆಚ್ಚಿನದನ್ನು ಕೇಳಿಲ್ಲ. ಸುರಕ್ಷಿತವಾಗಿ ಬದುಕುವ ಹಕ್ಕು ಕೇಳಿದ್ದೇವೆ. ನೆಮ್ಮದಿಯಿಂದ, ನಿರ್ಭಯವಾಗಿ ಕೆಲಸ ಮಾಡುವ ವಾತಾವರಣ ಸೃಷ್ಟಿಸಿಕೊಡುವಂತೆ ಕೇಳಿದ್ದೇವೆ ಎಂದರು.

ಬೇಡಿಕೆ ಈಡೇರುವ ಭರವಸೆ: ಐಎಂಎ

ದೆಹಲಿ: ಸರಕಾರ ಶೀಘ್ರ ಸ್ಪಂದಿಸಲಿದೆ. ನಮ್ಮ ಬೇಡಿಕೆಗಳನ್ನು ಈಡೇರಿಸುವ ಭರವಸೆ ಇದೆ ಎಂದು 'ಐಎಂಎ' ಪ್ರಧಾನ ಕಾರ್ಯದರ್ಶಿ ಡಾ.ಅನಿಲ್ ಕುಮಾರ್ ಜೆ.ನಾಯಕ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಶುಕ್ರವಾರದ ಪ್ರತಿಭಟನೆ ವೇಳೆ ಕಿರಿಯ ವೈದ್ಯರು, ಸ್ಥಾನಿಕ ವೈದ್ಯರು ಸೇರಿದಂತೆ 5 ಸಾವಿರ ವೈದ್ಯರು ಬೃಹತ್ ರ್‍ಯಾಲಿ ಕೈಗೊಂಡಿದ್ದರು. 'ಸೆಂಟ್ರಲ್ ಪ್ರೊಟೆಕ್ಷನ್ ಆಕ್ಟ್'(ಸಿಪಿಎ) ಅವರ ಬೇಡಿಕೆಯಾಗಿದೆ. ಕೇಂದ್ರ ಆರೋಗ್ಯ ಸಚಿವರಿಗೆ ಈ ವಿಚಾರ ಮನದಟ್ಟು ಮಾಡಲಾಗಿದೆ ಎಂದು ನಾಯಕ್ ಹೇಳಿದರು.

ಕ್ಯಾಬ್ ಚಾಲಕ, ಪೊಲೀಸರಿಂದ ರಕ್ಷಣೆ

ಅಟಲ್ ಸೇತುವೆ ಜಿಗಿದು ಮಹಿಳೆ ಆತ್ಮಹತ್ಯೆ ಯತ್ನ

ಮುಂಬೈ: ಸಾಗರದ ಮೇಲಿನ ದೇಶದಲ್ಲೇ ಉದ್ದನೆಯ ಸೇತುವೆ ಎನಿಸಿಕೊಂಡಿರುವ 'ಅಟಲ್ ಬಿಹಾರಿ ವಾಜಪೇಯಿ ಸ್ಮರಣೆಯ ಸೇತುವೆ' ಮೇಲಿನಿಂದ ಸಮುದ್ರಕ್ಕೆ ಹಾರಿ ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದ ಜೀನ್ಸ್ ಪ್ಯಾಂಟ್ ಧಾರಿ ಮಹಿಳೆಯನ್ನು(ಎಂಎಚ್02-ಎಫ್ ಕ್ಯಾಬ್ ಚಾಲಕ ಮತ್ತು

ಸಂಚಾರಿ ಪೊಲೀಸರು ಸಕಾಲಿಕ ಕ್ರಮ ಕೈಗೊಂಡು ರಕ್ಷಿಸಿದ್ದಾರೆ. ಆದರೆ, ಆ ಮಹಿಳೆ ನಾನು ಜಖಂಗೊಂಡಿದ್ದ ದೇವರ ಫೋಟೊವನ್ನು ಸಮುದ್ರಕ್ಕೆ ಎಸೆಯಲು ಯತ್ನಿಸಿದ್ದೆ ಅಷ್ಟೆ ಎಂದು ಸಮಜಾಯಿಷಿ ನೀಡಿದ್ದಾರೆ. ಆದರೆ, ಸೇತುವೆ ಮೇಲಿನ ಸಿಸಿಟಿವಿ ಕ್ಯಾಮರಾದಲ್ಲಿ ಸೆರೆಯಾಗಿರುವ ದೃಶ್ಯಗಳು ಮಹಿಳೆ ಅಟಲ್ ಸೇತುವೆಯ ತಡೆಗೋಡೆ ದಾಟಿ ಸಮುದ್ರದ ಕಡೆಗೆ ಮುಖ ಮಾಡಿ ಜಿಗಿಯಲು ಸಿದ್ಧವಾಗಿದ್ದನ್ನು ತೋರಿಸಿವೆ. ಆಕೆ ಆತ್ಮಹತ್ಯೆಗೆ ಯತ್ನಿಸುತ್ತಿರುವುದನ್ನು ಕಂಡು ತಕ್ಷಣ ಕ್ಯಾಬ್ ನಿಲ್ಲಿಸಿ ಸೇತುವೆ ಮಗ್ಗಲಿಗೆ ಬಂದು ನಿಂತ ಚಾಲಕ, ಮಹಿಳೆ ಸಮುದ್ರಕ್ಕೆ ಜಿಗಿದ ಕ್ಷಣವೇ ಆಕೆಯ ಕೈಯನ್ನು ಥಟ್ಟನೆ ಹಿಡಿದುಕೊಂಡು ರಕ್ಷಿಸಿದ್ದಾರೆ. ಅದರ ಬೆನ್ನಲ್ಲೇ ಹೆದ್ದಾರಿ ಗಸ್ತು ಪೊಲೀಸರ ವಾಹನವೂ ಅದೇ ಮಾರ್ಗದಲ್ಲಿ ಬಂದಿದೆ. ಶ್ವೇತಸಮವಸ್ತ್ರಧಾರಿ ಪೊಲೀಸರೂ ತಕ್ಷಣವೇ ಕಾರ್ಯೋನ್ಮುಖರಾಗಿ ಮಹಿಳೆಯ ಇನ್ನೊಂದು ಕೈಯನ್ನು ಹಿಡಿದು ಮೇಲಕ್ಕೆ ಎಳೆದು ಸೇತುವೆ ತಡೆಗೋಡೆಯಿಂದ ಈಚೆಗೆ ಕರೆ ತಂದಿದ್ದಾರೆ. ಆ.16ರ ಶುಕ್ರವಾರ ಮಧ್ಯಾಹ್ನ 3ರ ವೇಳೆ ನಡೆದಿರುವ ಈ ಘಟನೆಯ ರೋಚಕ ವಿಡಿಯೋವನ್ನು ಮುಂಬೈ ಪೊಲೀಸ್ ಇಲಾಖೆ ಹಂಚಿಕೊಂಡಿದ್ದು, ವಿಡಿಯೊ ವೈರಲ್ ಆಗಿದೆ.

ಹಳಿ ತಪ್ಪಿದ ಸಬರಮತಿ ರೈಲು 20 ಬೋಗಿ: ಸಂಚಿನ ಶಂಕೆ

ಕಾನ್ಪುರ: ಉತ್ತರ ಪ್ರದೇಶದ ವಾರಾಣಸಿಯಿಂದ ಗುಜರಾತ್‌ನ ಅಹಮದಾಬಾದ್ ನಗರಕ್ಕೆ ತೆರಳುತ್ತಿದ್ದ ಸಬರಮತಿ ಎಕ್ಸ್‌ಪ್ರೆಸ್ (ಸಂಖ್ಯೆ 19168) ರೈಲಿನ 20 ಬೋಗಿ ಶನಿವಾರ ಮುಂಜಾನೆ 3ರ ವೇಳೆ ಉತ್ತರ ಪ್ರದೇಶದ ಕಾನ್ಪುರ ಮತ್ತು ಭೀಮಸೇನ್ ನಿಲ್ದಾಣಗಳ ನಡುವೆ ಹಳಿ ತಪ್ಪಿವೆ. ಆಗಷ್ಟೇ ನಿಲ್ದಾಣದಿಂದ ಹೊರಟಿದ್ದರಿಂದ ರೈಲು ವೇಗದಲ್ಲಿರಲಿಲ್ಲ. ಹಾಗಾಗಿ ಅವಘಡದಲ್ಲಿ ಯಾವುದೇ ಸಾವು-ನೋವು ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹಳಿಯಲ್ಲಿ ದುಷ್ಕರ್ಮಿಗಳು ಕಬ್ಬಿಣದ ಸಲಾಕೆ ಅಥವಾ ಕಲ್ಲಿನ ಬಂಡೆಯನ್ನು ಅಡ್ಡವಾಗಿಟ್ಟಿರುವ ಶಂಕೆ ಇದೆ. ರೈಲಿನ ಎಂಜಿನ್‌ನ ಮುಂಭಾಗ ಅದಕ್ಕೆ ಡಿಕ್ಕಿಯಾಗಿದ್ದರಿಂದ ದೊಡ್ಡ ಶಬ್ದ ಉಂಟಾಯಿತು ಎಂದು ರೈಲಿನ ಲೋಕೊ ಪೈಲಟ್ ಹೇಳಿದ್ದಾರೆ. ಪ್ರಯಾಣಿಕರೂ ಸಹ ದೊಡ್ಡ ಶಬ್ದ ಕೇಳಿದೆವು, ಅದರ ಬೆನ್ನಲ್ಲೇ ರೈಲು ಜೋರಾಗಿ ಅಲುಗಾಡಿ ಬೋಗಿಗಳು ಹಳಿ ತಪ್ಪಿದವು ಎಂದು ಪ್ರಯಾಣಿಕರೂ ಹೇಳಿದ್ದಾರೆ.

ಹಳಿಯ ಮೇಲೆ ಆ ತಡೆ ಇದ್ದುದರಿಂದಾಗಿಯೇ ಅವಘಡವಾಗಿದೆ. 20 ಬೋಗಿಗಳು ಹಳಿ ತಪ್ಪಿವೆ. ಇದು ರೈಲನ್ನು ಹಳಿ ತಪ್ಪಿಸಲೆಂದೇ ದುಷ್ಕರ್ಮಿಗಳು ಮಾಡಿದ ಸಂಚು ಇರಬಹುದು ಎಂದು ರೈಲ್ವೆ ಅಧಿಕಾರಿಗಳು ಶಂಕಿಸಿದ್ದಾರೆ. ಪ್ರಕರಣ ದಾಖಲಿಸಲಾಗಿದ್ದು, ರೈಲ್ವೆ ಪೊಲೀಸರು ತನಿಖೆ ಆರಂಭಿಸಿದ್ದಾರೆ. ಪ್ರಯಾಣಿಕರನ್ನು ಬೇರೆ ವಾಹನಗಳಲ್ಲಿ ಕಳುಹಿಸಿಕೊಡಲಾಗಿದೆ. ಈ ಮಾರ್ಗದಲ್ಲಿ ಸಂಚರಿಸಬೇಕಿದ್ದ ಹಲವು ರೈಲುಗಳ ಮಾರ್ಗ ಬದಲಿಸಲಾಗಿದೆ. ಕೆಲವು ರೈಲು ಸಂಚಾರ ರದ್ದಾಗಿವೆ.

> ಕಬ್ಬಿಣದ ರಾಡ್‌ನಂತಹ ವಸ್ತುವನ್ನೇನೋ ಹಳಿಗೆ ಅಡ್ಡಲಾಗಿ ದುರುದ್ದೇಶದಿಂದ ಇಟ್ಟಿರುವ ಶಂಕೆ ಇದೆ. ಅದರಿಂದಲೇ ರೈಲಿನ 20 ಬೋಗಿ ಹಳಿ ತಪ್ಪಿವೆ. ದುಷ್ಕೃತ್ಯದ ಶಂಕೆ ಇದೆ. ಹಾಗಾಗಿ ರೈಲ್ವೆ ಪೊಲೀಸರ ಜತೆಗೇ ಉತ್ತರ ಪ್ರದೇಶ ರಾಜ್ಯ ಪೊಲೀಸರು ಮತ್ತು ಕೇಂದ್ರದ 'ಐಬಿ' ಅಧಿಕಾರಿಗಳೂ ತನಿಖೆ ನಡೆಸಲಿದ್ದಾರೆ.
> -ಅಶ್ವಿನಿ ವೈಷ್ಣವ್ ರೈಲ್ವೆ ಸಚಿವ

ಕಿರಿಯ ವೈದ್ಯೆ ಅತ್ಯಾಚಾರ-ಕೊಲೆ ಪ್ರಕರಣ
ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆ

ಡಾ.ಘೋಷ್‌ಗೆ ಸಿಬಿಐ ವಿಚಾರಣೆ

ಕೊಲ್ಕತ್ತ: ರಾತ್ರಿ ಪಾಳಿಯಲ್ಲಿ ಕರ್ತವ್ಯನಿರತರಾಗಿದ್ದ 31 ವರ್ಷದ ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ ಸಿಬಿಐ ತನಿಖೆ ತೀವ್ರಗೊಂಡಿದೆ. ಕೃತ್ಯ ನಡೆದ ಆರ್‌ಜಿ ಕರ್ ವೈದ್ಯಕೀಯ ಕಾಲೇಜು-ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಡಾ. ಸಂದೀಪ್ ಘೋಷ್‌ರನ್ನು ಸಿಬಿಐ ಅಧಿಕಾರಿಗಳ ತಂಡ ಸತತ ಎರಡನೇ ದಿನವೂ ವಿಚಾರಣೆಗೆ ಒಳಪಡಿಸಿದೆ.

ನಗರದಲ್ಲಿನ ಸಿಬಿಐ ಕಚೇರಿಯಲ್ಲಿ ಶುಕ್ರವಾರ ರಾತ್ರಿ 9.30ಕ್ಕೆ ಡಾ.ಘೋಷ್ ವಿಚಾರಣೆ ಆರಂಭವಾಯಿತು. ವಿಚಾರಣೆ ಶನಿವಾರ ಮುಂಜಾನೆ 3 ಗಂಟೆವರೆಗೂ ಮುಂದುವರೆಯಿತು. ಮತ್ತೆ ಎರಡನೇ ಸುತ್ತಿನ ವಿಚಾರಣೆ ಶನಿವಾರ ಬೆಳಗ್ಗೆ 10.30ಕ್ಕೆ ಆರಂಭಗೊಂಡಿದೆ. ಸಿಬಿಐ ಕಚೇರಿ ತಲುಪಿದ ಡಾ.ಘೋಷ್‌ರನ್ನು ಅಧಿಕಾರಿಗಳ ತಂಡ ತೀವ್ರ ವಿಚಾರಣೆಗೆ ಒಳಪಡಿಸಿದೆ.

ಮಾಜಿ ಪ್ರಾಂಶುಪಾಲರನ್ನು ಮೊದಲ ಸುತ್ತಿನ ವಿಚಾರಣೆಯಲ್ಲಿ ವೈದ್ಯೆಯ ಸಾವಿನ ಸುದ್ದಿ ತಿಳಿದ ನಂತರ ನಿಮ್ಮ ಮೊದಲ ಪ್ರತಿಕ್ರಿಯೆ ಏನಿತ್ತು ಎಂದು ಪ್ರಶ್ನಿಸಲಾಯಿತು. ಕಿರಿಯ ವೈದ್ಯೆಯ ಕುಟುಂಬಕ್ಕೆ ಘಟನೆ ಬಗ್ಗೆ ಮಾಹಿತಿ ತಿಳಿಸಲು ಯಾರಿಗೆ ಹೇಳಿದಿರಿ? ಪೊಲೀಸರನ್ನು ಮೊದಲು ಸಂಪರ್ಕಿಸಿದ್ದು ಯಾರು? ಎಂಬ ಪ್ರಶ್ನೆಗಳೂ ಸೇರಿದಂತೆ ಸರಣಿಯೋಪಾದಿಯಲ್ಲಿ ಪ್ರಶ್ನಾಪ್ರಹಾರ ನಡೆಸಲಾಗಿದೆ. ಡಾ.ಘೋಷ್ ನೀಡಿದ ಕೆಲವು ಉತ್ತರಗಳು ಗೊಂದಲಮಯವಾಗಿದ್ದವು ಎಂದು ಸಿಬಿಐ ಅಧಿಕಾರಿ ಮಾಹಿತಿ ನೀಡಿದ್ದಾರೆ. ಸಂತ್ರಸ್ತೆ ಕಿರಿಯ ವೈದ್ಯೆಯನ್ನು ಕೆಲವು ಬಾರಿ ಸತತ 48 ಗಂಟೆಗಳ ಕಾಲ ಸೇವೆ ಸಲ್ಲಿಸುವಂತೆ ಒತ್ತಾಯಿಸುತ್ತಿದ್ದುದು ಏಕೆ? ವಾರದ ವೇಳಾಪಟ್ಟಿ ಸಿದ್ಧಪಡಿಸುತ್ತಿದ್ದುದು ಯಾರು? ಎಂಬ ಬಗೆಗೂ ಡಾ.ಘೋಷ್ ಅವರನ್ನು ಪ್ರಶ್ನಿಸಲಾಗಿದೆ ಎಂದು ಅಧಿಕಾರಿ ಹೇಳಿದರು.

ಸಿಬಿಐಗೆ ಶಂಕಿತರ ಪಟ್ಟಿ

ಕೋಲ್ಕತ್ತ: ಕಿರಿಯ ವೈದ್ಯೆಯ ಅತ್ಯಾಚಾರ-ಕೊಲೆ ಪ್ರಕರಣದಲ್ಲಿ 30 ಮಂದಿಯ ವಿಚಾರದಲ್ಲಿ ಅನುಮಾನಗಳಿವೆ ಎಂದು ಸಂತ್ರಸ್ತೆಯ ಪೋಷಕರು ಸಿಬಿಐ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ತಮ್ಮ ಪುತ್ರಿ ಜತೆಗಿರುತ್ತಿದ್ದ ಇಂಟರ್ನಿಗಳು, ಕಿರಿಯ ವೈದ್ಯರ ಹೆಸರುಗಳ ಪಟ್ಟಿಯನ್ನು ತನಿಖಾ ತಂಡಕ್ಕೆ ಶನಿವಾರ ನೀಡಿದ್ದಾರೆ. ಇವರೂ ಅಪರಾಧ ಕೃತ್ಯದಲ್ಲಿ ಭಾಗಿಯಾಗಿರಬಹುದು ಎಂದು ಶಂಕಿಸಿದ್ದಾರೆ ಎಂದು ಸಿಬಿಐ ಅಧಿಕಾರಿಯೊಬ್ಬರು ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಇದರಲ್ಲಿ ಕೆಲ ವ್ಯಕ್ತಿಗಳ ವಿಚಾರಣೆಗೆ ಸಿಬಿಐ ಆದ್ಯತೆ ನೀಡಿದೆ. ನಾವೂ ಕೂಡಾ 30 ಶಂಕಿತರನ್ನು ಗುರುತಿಸಿದ್ದೇವೆ. ಅವರನ್ನು ವಿಚಾರಣೆಗೊಳಪಡಿಸಲು ಸಿದ್ಧತೆ ಮಾಡಿಕೊಂಡಿದ್ದೇವೆ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

ವೀರ್ಯವಲ್ಲ ಗರ್ಭಾಶಯದ ತೂಕ

ಕೋಲ್ಕತ್ತ: ಕಿರಿಯ ವೈದ್ಯೆಯ ಮೃತದೇಹದಲ್ಲಿ 150 ಗ್ರಾಂ ವೀರ್ಯ ಸಂಗ್ರಹವಾಗಿತ್ತು ಎಂಬುದು ತಪ್ಪು ಮಾಹಿತಿ ಎಂದು ಮರಣೋತ್ತರ ಪರೀಕ್ಷೆ ನಡೆಸಿದ್ದ ವೈದ್ಯರು ಹೇಳಿದ್ದಾರೆ. 150 ಗ್ರಾಂ ತೂಕವಿತ್ತು ಎನ್ನುವುದು ಆಕೆಯ ದೇಹದಲ್ಲಿನ ಗರ್ಭಾಶಯವಾಗಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಮೃತ ವೈದ್ಯೆಯ ಶರೀರದಲ್ಲಿ 150 ಗ್ರಾಂ ವೀರ್ಯ ಪತ್ತೆಯಾಗಿದೆ ಎಂದು ಮರಣೋತ್ತರ ಪರೀಕ್ಷೆ ವರದಿಯಲ್ಲಿ ತಿಳಿಸಲಾಗಿದೆ ಎನ್ನುವ ಸುದ್ದಿ ಜಾಲತಾಣದಲ್ಲಿ ಹರಡಿತ್ತು. ಮಾಧ್ಯಮಗಳಲ್ಲೂ ಅದೇ ವರದಿಯಾಗಿತ್ತು. ಈ ಹಿನ್ನೆಲೆ ಸ್ಪಷ್ಟನೆ ನೀಡುತ್ತಿರುವುದಾಗಿ ವೈದ್ಯರು ಹೇಳಿದ್ದಾರೆ. ಕೃತ್ಯ ನಡೆದ ಸ್ಥಳಕ್ಕೆ 5 ವಿಧಿವಿಜ್ಞಾನ ಪ್ರಯೋಗಾಲಯ ಸಿಬ್ಬಂದಿ ಗಂಟೆಗಳ ಬಳಿಕವಷ್ಟೇ ಭೇಟಿ ನೀಡಿದ್ದಾರೆ. ಅಷ್ಟು ದೀರ್ಘ ಸಮಯದವರೆಗೆ ಯಾವುದೇ ದ್ರವ ವಸ್ತು ಅದೇ ಸ್ಥಿತಿಯಲ್ಲಿ ಉಳಿಯಲು ಸಾಧ್ಯವಿಲ್ಲ ಎಂದೂ ವೈದ್ಯರು ತಿಳಿಸಿದ್ದಾರೆ. ಡಿಎನ್‌ಎ ಪರೀಕ್ಷೆ ವರದಿ ಬಂದ ಬಳಿಕ ಎಲ್ಲ ಗೊಂದಲಗಳಿಗೆ ಉತ್ತರ ಸಿಗಲಿದೆ ಎಂದು ಹೇಳಿದ್ದಾರೆ. ಕಿರಿಯ ವೈದ್ಯೆಯ ದೇಹದ ಮೇಲೆ ಅತೀ ಕ್ರೂರವಾಗಿ ಹಲ್ಲೆ ನಡೆದಿರುವುದನ್ನು ಹತ್ತಾರು ಗಾಯದ ಗುರುತುಗಳು ಸ್ಪಷ್ಟಪಡಿಸುತ್ತಿವೆ ಎಂದು ಮರಣೋತ್ತರ ಪರೀಕ್ಷೆ ವರದಿ ಬಹಿರಂಗಪಡಿಸಿತ್ತು.

ದೇಶದಲ್ಲಿ ಪ್ರತಿದಿನ 86 ಲೈಂಗಿಕ ದೌರ್ಜನ್ಯ ಪ್ರಕರಣ | 2017-22ರ ನಡುವಿನ 5 ವರ್ಷ 1.89 ಲಕ್ಷ ರೇಪ್

ಭಾರತದಲ್ಲಿ ಪ್ರತಿಗಂಟೆ 4 ಮಹಿಳೆಯರ ಅತ್ಯಾಚಾರ

ದೆಹಲಿ: ಕೋಲ್ಕತ್ತದ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಲ್ಲಿ ನಡೆದ ಕಿರಿಯ ವೈದ್ಯೆಯ ಅತ್ಯಾಚಾರ ಹಾಗೂ ಬರ್ಬರ ಕೊಲೆ ಪ್ರಕರಣ ಭಾರತ ದೇಶ ಮಹಿಳೆಯರಿಗೆ ಅದೆಷ್ಟು ಅಸುರಕ್ಷಿತ ಎಂಬುದನ್ನು ಎತ್ತಿ ತೋರಿಸುತ್ತಿದೆ. ಉದ್ಯೋಗಸ್ತ ಮಹಿಳೆಯರ ಸುರಕ್ಷತೆ ಬಗ್ಗೆ ಅನುಮಾನ ಹುಟ್ಟುವಂತೆ ಮಾಡಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋದ ವಾರ್ಷಿಕ ವರದಿ ಪ್ರಕಾರ, 2017-22ರ ನಡುವಿನ ಐದು ವರ್ಷಗಳಲ್ಲಿ ದೇಶದಲ್ಲಿ ಒಟ್ಟು 1.89 ಲಕ್ಷ ಅತ್ಯಾಚಾರ ಪ್ರಕರಣಗಳು ವರದಿಯಾಗಿವೆ. 1.79 ಲಕ್ಷ ಪ್ರಕರಣಗಳಲ್ಲಿ ಅತ್ಯಾಚಾರಿ ಪರಿಚಿತ ವ್ಯಕ್ತಿಯೇ ಆಗಿದ್ದಾನೆ. ಅಂಕಿ-ಅಂಶ ಪ್ರಕಾರ ದೇಶದಲ್ಲಿ ಪ್ರತಿದಿನ 86 ಅತ್ಯಾಚಾರ ಪ್ರಕರಣ ದಾಖಲಾಗುತ್ತವೆ. ಅಂದರೆ ಪ್ರತಿ ಗಂಟೆಯಲ್ಲಾಗುವ ನಾಲ್ವರು ಮಹಿಳೆಯರ ಅತ್ಯಾಚಾರ ಪ್ರಕರಣಗಳಲ್ಲಿ 3 ದುಷ್ಕೃತ್ಯ ಪರಿಚಿತರಿಂದಲೇ ನಡೆದಿವೆ. ಸಂತ್ರಸ್ತ ಸ್ತ್ರೀಯರಲ್ಲಿ 18ರಿಂದ 30 ವರ್ಷದವರೇ ಹೆಚ್ಚಿನವರಿದ್ದಾರೆ. ಅಂದರೆ 1.89 ಲಕ್ಷ ಸಂತ್ರಸ್ತೆಯರಲ್ಲಿ 18-30 ವಯೋಮಾನದವರೇ 1.13 ಲಕ್ಷ.

ಉದ್ಯೋಗ ಸ್ಥಳ?

ಭಾರತದಲ್ಲಿನ ಒಟ್ಟಾರೆ ಅತ್ಯಾಚಾರ ಪ್ರಕರಣಗಳಲ್ಲಿ ನೌಕರಿ ಸ್ಥಳದಲ್ಲಿ ಲೈಂಗಿಕ ಕಿರುಕುಳ ಪ್ರಕರಣ ಸ್ವಲ್ಪ ಕಡಿಮೆಯಿವೆ. ಉದ್ಯೋಗದ ಸ್ಥಳ ಅಥವಾ ಕಚೇರಿ ಆವರಣದಲ್ಲಿ ಪ್ರತಿದಿನ ಒಬ್ಬ ಮಹಿಳೆ ಲೈಂಗಿಕ ಕಿರುಕುಳ ಎದುರಿಸುತ್ತಾರೆ. 2014-22ರ ಅವಧಿಯಲ್ಲಿ ನೌಕರಿ ಸ್ಥಳದಲ್ಲಿ ಕನಿಷ್ಠ 4,231 ಲೈಂಗಿಕ ದೌರ್ಜನ್ಯ ಪ್ರಕರಣ ವರದಿಯಾಗಿವೆ. ಕಚೇರಿ ಆವರಣದಲ್ಲಿ ಲೈಂಗಿಕ ಕಿರುಕುಳ ಕಡಿಮೆ ಇದ್ದರೆ ಕೆಲಸದ ಇತರೆ ಸ್ಥಳಗಳಲ್ಲಿ ಹೆಚ್ಚಿನ ಸಂಖ್ಯೆ ಕಂಡು ಬಂದಿದೆ. 2017ರ ನಂತರ ಪ್ರತಿ ವರ್ಷ 400ಕ್ಕೂ ಹೆಚ್ಚು ಲೈಂಗಿಕ ದೌರ್ಜನ್ಯ ಪ್ರಕರಣ ವರದಿಯಾಗಿವೆ. 2014-16ರಲ್ಲಿ ಮೇಲಾಧಿಕಾರಿ, ಸಹೋದ್ಯೋಗಿಗಳಿಂದ 1,795 ಅತ್ಯಾಚಾರ ನಡೆದಿವೆ.

ಕಾನೂನು ಏನು ಹೇಳುತ್ತದೆ?

ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ ತಡೆ ಕಾಯ್ದೆ-2013ರ ಪ್ರಕಾರ 10ಕ್ಕಿಂತ ಹೆಚ್ಚು ಕಾರ್ಮಿಕರಿರುವ ಕಚೇರಿ / ಕೆಲಸದ ಸ್ಥಳದಲ್ಲಿ ಮಹಿಳೆ ಮೇಲಿನ ಲೈಂಗಿಕ ಕಿರುಕುಳದ ದೂರು ಸ್ವೀಕರಿಸಲು ಆಂತರಿಕ ಸಮಿತಿ ರಚನೆ ಕಡ್ಡಾಯ. ಸಂತ್ರಸ್ತ ಮಹಿಳೆ ಅಥವಾ ಆಕೆ ಪರವಾಗಿ ಆಪ್ತರು ಲೈಂಗಿಕ ಕಿರುಕುಳ ದೂರು ಸಲ್ಲಿಸಬಹುದು.

ಇಂದು 188 ಪಾಕ್ ಹಿಂದೂಗಳಿಗೆ ಪೌರತ್ವ

ದೆಹಲಿ: ಪಾಕಿಸ್ತಾನದಿಂದ ಆಶ್ರಯ ಅರಸಿ ಭಾರತಕ್ಕೆ ಬಂದಿರುವ 188 ಹಿಂದೂಗಳಿಗೆ ಭಾನುವಾರ ಗುಜರಾತ್ ರಾಜ್ಯದ ಅಹಮದಾಬಾದ್ ನಗರದಲ್ಲಿ ಭಾರತೀಯ ಪೌರತ್ವ ನೀಡಲಾಗುತ್ತಿದೆ.

ಕೇಂದ್ರದ ಎನ್‌ಡಿಎ ಸರಕಾರ ಹೊಸದಾಗಿ ಜಾರಿಗೆ ತಂದಿರುವ 'ಪೌರತ್ವ ತಿದ್ದುಪಡಿ ಕಾಯ್ದೆ'(ಸಿಎಎ)ಯಡಿ ಇವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಪೌರತ್ವ ಪತ್ರ ಹಸ್ತಾಂತರಿಸಲಿದ್ದಾರೆ. ಸಿಎಎಯಡಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಪೌರತ್ವವನ್ನು ನೀಡುತ್ತಿರುವ ಮೊದಲ ನಿದರ್ಶನವಿದು. ಪಾಕ್‌ನಲ್ಲಿ ಕಿರುಕುಳಕ್ಕೊಳಗಾಗಿ ಪ್ರಾಣ ಭಯದಿಂದ ಭಾರತಕ್ಕೆ ಬಂದು ಆಶ್ರಯ ಪಡೆದವರಿಗೆ ಸಿಎಎ ಕಾಯಿದೆಯಡಿ ಪೌರತ್ವ ನೀಡಲಾಗುತ್ತಿದೆ. ಅಹಮದಾಬಾದ್ ಜಿಲ್ಲೆಯಲ್ಲಿಯೇ ಈವರೆಗೆ ಒಟ್ಟು 1,167 ಜನರಿಗೆ ಭಾರತೀಯ ಪೌರತ್ವ ನೀಡಲಾಗಿದೆ. ಪಾಕಿಸ್ತಾನ, ಬಾಂಗ್ಲಾದೇಶ, ಅಫ್ಘಾನಿಸ್ತಾನದಲ್ಲಿ ಧಾರ್ಮಿಕ ಕಿರುಕುಳ ಎದುರಿಸಿ ಭಾರತಕ್ಕೆ ಬಂದವರು ಈ ದೇಶದ ಪೌರತ್ವ ಪಡೆಯುವುದಕ್ಕೆ ದಶಕಗಳ ಕಾಲ ಕಾಯುವುದು ಈಗ ಕೊನೆಗೊಂಡಿದೆ ಎಂದಿರುವ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಪಾಕ್‌ನಲ್ಲಿ ಮಂಕಿಪಾಕ್ಸ್ ಕೇಂದ್ರ ಮುನ್ನೆಚ್ಚರಿಕೆ ಕ್ರಮ

ದೆಹಲಿ: ಆಫ್ರಿಕಾ ಖಂಡದ ವಿವಿಧ ದೇಶಗಳಲ್ಲಿ ಜನವರಿಯಿಂದ ಈವರೆಗೆ 18,700 ಮಂಕಿ ಪಾಕ್ಸ್ ಸೋಂಕು ಪ್ರಕರಣ ದೃಢಪಟ್ಟಿವೆ. ನೆರೆಯ ಪಾಕಿಸ್ತಾನದಲ್ಲೂ 2 ಪ್ರಕರಣ ಕಾಣಿಸಿಕೊಂಡಿ

ವೆ. ಈ ಹಿನ್ನೆಲೆಯಲ್ಲಿ ದೇಶದಲ್ಲೂ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಬೇಕಿದೆ ಎಂದು ಕೇಂದ್ರ ಆರೋಗ್ಯ ಸಚಿವ ಜಗತ್ ಪ್ರಕಾಶ್ ನಡ್ಡಾ ಹೇಳಿದ್ದಾರೆ. ಆರೋಗ್ಯ ಸಚಿವಾಲಯದ ಹಿರಿಯ ಅಧಿಕಾರಿಗಳ ಜತೆ ಶನಿವಾರ ಸಭೆ ನಡೆಸಿದ ಸಚಿವರು, ಮುಖ್ಯವಾಗಿ ದೇಶದೆಲ್ಲೆಡೆಯ ವಿಮಾನ ನಿಲ್ದಾಣಗಳು, ಬಂದರುಗಳಲ್ಲಿ ವಿದೇಶಗಳಿಂದ ಬರುವವರತ್ತ ನಿಗಾ ಇಡಲು ಕ್ರಮ ಕೈಗೊಳ್ಳಬೇಕಿದೆ ಎಂದು ಸೂಚನೆ ನೀಡಿದರು. ವಿಮಾನ ನಿಲ್ದಾಣ, ಬಂದರುಗಳಲ್ಲಿನ ಆರೋಗ್ಯ ಘಟಕಗಳನ್ನು ತಕ್ಷಣವೇ ಸ್ಯಾನಿಟೈಸ್ ಮಾಡಿಸಬೇಕಿದೆ. ರಕ್ತದ ಮಾದರಿಗಳ ಪರೀಕ್ಷೆಗೆ ಪ್ರಯೋಗಾಲಯಗಳನ್ನು ಸಜ್ಜುಗೊಳಿಸಬೇಕಿದೆ. ಮಂಕಿ ಪಾಕ್ಸ್ ಸೋಂಕಿತರು ಕಂಡುಬಂದಲ್ಲಿ ಅವರನ್ನು ಪ್ರತ್ಯೇಕವಾಗಿ ಇರಿಸಿ ಚಿಕಿತ್ಸೆ ನೀಡಲು ಸಿದ್ಧತೆಗಳನ್ನು ಮಾಡಿಕೊಳ್ಳಲು ಕ್ರಮ ಕೈಗೊಳ್ಳಿರಿ ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಲಕ್ಷ ಯೋಧರಿಗಾಗಿ ಗುಜರಾತ್ ರಾಖಿ

ಅಹಮದಾಬಾದ್: ಗುಜರಾತ್ ರಾಜ್ಯದಲ್ಲಿನ ಲಕ್ಷಾಂತರ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರು ಈ ಬಾರಿಯ ರಕ್ಷಾ ಬಂಧನ ಹಬ್ಬವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಲು ಮುಂದಾಗಿದ್ದಾರೆ. 'ಏಕ್ ರಾಖಿ ದೇಶ್ ಕೆ ಜವಾನ್ ಕೆ ನಾಮ್' ಹೆಸರಲ್ಲಿ 1 ಲಕ್ಷ ಯೋಧರಿಗೆ ರಕ್ಷಾ ಬಂಧನ ಕಳುಹಿಸಿಕೊಡಲು ಸಿದ್ಧತೆ ಮಾಡಿಕೊಂಡಿದ್ದಾರೆ. ಆ ಮೂಲಕ ದೇಶಕ್ಕಾಗಿ ಪ್ರಾಣತ್ಯಾಗಕ್ಕೂ ಸಿದ್ಧರಾಗಿರುವ ಯೋಧರ ರಕ್ಷಣೆಗಾಗಿ ರಾಜ್ಯದ 53 ಸಾವಿರ ಅಂಗನವಾಡಿಗಳಲ್ಲಿನ ಸೋದರಿಯರು ಪ್ರಾರ್ಥನೆ ಮಾಡುವುದಾಗಿ ಹೇಳಿದ್ದಾರೆ.

ಮುಂಬೈ ಉಗ್ರ ದಾಳಿ: ರಾಣಾ ಗಡಿಪಾರು ಶೀಘ್ರ

ವಾಷಿಂಗ್ಟನ್: ಭಾರತದ ಮುಂಬೈನಲ್ಲಿ 2008ರ ನವೆಂಬರ್ 26ರಂದು(26/11) ನಡೆದಿದ್ದ, 6 ಮಂದಿ ಅಮೆರಿಕ ನಾಗರಿಕರೂ ಸೇರಿದಂತೆ 166 ಜನರ ಸಾವಿಗೆ ಕಾರಣವಾಗಿದ್ದ ಭಯೋತ್ಪಾದಕ

ದಾಳಿಯ ಮುಖ್ಯ ಸಂಚುಕೋರ, ಪಾಕಿಸ್ತಾನ ಮೂಲದ ಉದ್ಯಮಿ ತಹಾವುರ್ ರಾಣಾನನ್ನು ಭಾರತಕ್ಕೆ ಗಡಿಪಾರು ಮಾಡುವುದಕ್ಕೆ ಅಮೆರಿಕದ ಕೋರ್ಟ್ ಸಮ್ಮತಿಸಿದೆ.

ದೀರ್ಘ ಕಾಲದ ಕಾನೂನು ಹೋರಾಟದಲ್ಲಿ ಕಡೆಗೂ ಭಾರತಕ್ಕೆ ರಾಜತಾಂತ್ರಿಕ ಗೆಲುವು ಸಿಕ್ಕಂತಾಗಿದೆ. ಅಮೆರಿಕದ ಕ್ಯಾಲಿಫೋರ್ನಿಯ ರಾಜ್ಯದ ಫೇಡರಲ್ ಅಪೀಲ್ಸ್ ಕೋರ್ಟ್, ಭಾರತ-ಅಮೆರಿಕ ನಡುವೆ ಗಡಿಪಾರು ಒಪ್ಪಂದ ಏರ್ಪಟ್ಟಿರುವುದರಿಂದ ಆರೋಪಿ 63 ವರ್ಷದ ತಹಾವುರ್ ರಾಣಾನನ್ನು ಭಾರತಕ್ಕೆ ಗಡಿಪಾರು ಮಾಡಬಹುದಾಗಿದೆ ಎಂದು ಶುಕ್ರವಾರ ಆದೇಶಿಸಿದೆ. ಸದ್ಯ ರಾಣಾ ಲಾಸೆಂಜಲೀಸ್ ಜೈಲಿನಲ್ಲಿ ಬಂಧಿಯಾಗಿದ್ದಾನೆ. ಭಾರತಕ್ಕೆ ತನ್ನನ್ನು ಗಡಿಪಾರು ಮಾಡಲು ಸಾಧ್ಯವಿಲ್ಲ ಎಂದೇ ರಾಣಾ ಅಮೆರಿಕದ ನ್ಯಾಯಾಲಯಗಳಲ್ಲಿ ವಾದಿಸುತ್ತಾ ಬಂದಿದ್ದ.

ಸಮಾಚಾರ ಸಣ್ಣದಲ್ಲ

ಟ್ರ್ಯಾಕ್ಟರ್ ಜಗ್ಗುವ ಸ್ಪರ್ಧೆ ಆ.30ರಂದು

ಬಸವನಬಾಗೇವಾಡಿ: ಪಟ್ಟಣದ ಶ್ರೀ ಬಸವೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ಆಗಸ್ಟ 30 ರಂದು 55 ಎಚ್, ಪಿ ಒಳಗಡೆ ಟ್ಯಾಕ್ಟರ್ ಜಗ್ಗುವ ಸ್ಪರ್ಧೆ ಏರ್ಪಡಿಸಲಾಗಿದ್ದು ಪ್ರಥಮ ಬಹುಮಾನ 51,000 ದ್ವಿತೀಯ 30,000. ತೃತೀಯ 20,000. ಚತುರ್ಥಿ 10,000. ಐದನೇ ಬಹುಮಾನ 5000 ನೀಡಲಾಗುವದು ಸ್ಪರ್ಧೆಯಲ್ಲಿ ಭಾಗವಹಿಸುವರು ಇವರನ್ನು ಸಂಪರ್ಕಿಸಬಹುದಾಗಿದೆ. ಮಂಜು ಹಾರಿವಾಳ 9686040920, ಪ್ರಕಾಶ ಹಾರಿವಾಳ, 6360471011, ವೆಂಕಟೇಶ ಚಿಕ್ಕೊಂಡ 9008366604, ಶಿವು ಮಾಲಗಾರ 9110426357, ದೀಲಿಪ ನಿಕ್ಕಂ 9591824206 ಎಂದು ಪ್ರಕಟನೆಯಲ್ಲಿ ತಿಳಿಸಲಾಗಿದೆ.

ಸಾಮಾನ್ಯ ಜ್ಞಾನ ಪರೀಕ್ಷೆ ಇಂದು

ಸಿಂದಗಿ: ಪಟ್ಟಣದ ಓಂಕಾರ ಕರಿಯರ್ ಅಕಾಡೆಮಿ ವತಿಯಿಂದ 78ನೇ ಸ್ವಾಂತತ್ರ್ಯೋತ್ಸವದ ಅಂಗವಾಗಿ ರಾಜ್ಯ ಮಟ್ಟದ ಸಾಮಾನ್ಯ ಜ್ಞಾನ ಪರೀಕ್ಷೆಯನ್ನು

ಆ.18ರಂದು ಬೆಳಗ್ಗೆ 10:30ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಆಸಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು ಎಂದು ಓಂಕಾರ ಕರಿಯರ್ ಅಕಾಡೆಮಿ ನಿರ್ದೇಶಕ ಶರಣಗೌಡ ಓಂಕಾರ ತಿಳಿಸಿದ್ದಾರೆ. ಸಾಮಾನ್ಯ ಜ್ಞಾನ ಪರೀಕ್ಷೆಯಲ್ಲಿ ಪ್ರಥಮ 5001, ದ್ವಿತೀಯ 2501, ತೃತೀಯ 1501 ಹಾಗೂ 4ನೇ ಬಹುಮಾನವನ್ನು 5ಜನ ವಿದ್ಯಾರ್ಥಿಗಳಿಗೆ ಸಮಾಧಾ ನಕರವಾದ ಬಹುಮಾನ ಪುಸ್ತಕಗಳನ್ನು ಆ.19ರಂದು ಬೆಳಗ್ಗೆ 10:30ಗಂಟೆಗೆ ಬಹುಮಾನ ವಿತರಿಸಲಾಗು ವುದು. ಹೆಚ್ಚಿನ ಮಾಹಿತಿಗೆ ಬಸವೇಶ್ವರ ವೃತ್ತದಲ್ಲಿರುವ ಓಂಕಾರ ಕರಿಯರ್ ಅಕಾಡೆಮಿ ಕಾರ್ಯಾಲಯದ ದೂರವಾಣಿಗೆ 9972065117, 9880371841, 9844709415 ಸಂಪರ್ಕಿಸಬೇಕು ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಸಿದ್ದಾರೆ.

ಕೃತಿಗಳ ಲೋಕಾರ್ಪಣೆ ಇಂದು

ಗುಳೇದಗುಡ್ಡ: ಪಟ್ಟಣದ ಗೀರಿಶ ಪ್ರಕಾಶನ ಹಾಗೂ ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಮಹಾದೇವಯ್ಯ ನೀಲಕಂಠಮಠ ಅವರು ರಚಿಸಿದ ಶ್ರೀ ನೀಲಕಂಠ ಮಲ್ಲಿಕಾರ್ಜುನ ಪುರಾಣ ಹಾಗೂ ಗುಳೇದಗುಡ್ಡ ಕುರುಹಿನಶೆಟ್ಟಿ ಹವ್ಯಾಸಿ ಕಲಾವಿದರು ಎಂಬ ಎರಡು ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮ ಆ.18ರಂದು ಬೆಳಗ್ಗೆ 10:30ಗಂಟೆಗೆ ಬಸಮ್ಮ ಮಂಗಳಗುಡ್ಡ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಹುಬ್ಬಳ್ಳಿ ವೀರ ಭಿಕ್ಷಾವರ್ತಿಮಠದ ಪೀಠಾಧ್ಯಕ್ಷ ಶ್ರೀ ಶಿವಶಂಕರ ಶಿವಾಚಾರ್ಯ ಮಹಾಸ್ವಾಮಿಗಳು, ಗುರುಸಿದ್ದೇಶ್ವರ ಮಠದ ಜ.ಶ್ರೀ. ಬಸವರಾಜ ಪಟ್ಟದಾರ್ಯ ಮಹಾಸ್ವಾಮಿಗಳು ದಿವ್ಯ ಸಾನಿಧ್ಯ ವಹಿಸುವರು. ಧಾರವಾಡದ ವಿಶ್ರಾಂತ ಪ್ರಾಚಾರ್ಯ ಟಿ.ಬಿ. ಚಿಲಕವಾಡ ಅವರು ಕೃತಿಗಳನ್ನು ಲೋಕಾರ್ಪಣೆಗೊಳಿಸುವರು. ಪ್ರೊ. ಸಿದ್ದಲಿಂಗಪ್ಪ ಬರಗುಂಡಿ ಅವರು ಕೃತಿಗಳ ಕುರಿತು ಉಪನ್ಯಾಸ ನೀಡುವರು. ಮಹಾದೇವಯ್ಯ ನೀಲಕಂಠಮಠ ಅವರು ಉಪಸ್ಥಿರಿರುವರು ಎಂದು ಡಾ.ಗಿರೀಶ ನೀಲಕಂಠಮಠ ತಿಳಿಸಿದ್ದಾರೆ.

ಶಾಸಕರಿಂದ ಕನ್ನಡ ಭವನದ ಭೂಮಿಪೂಜೆ

ಆಲಮೇಲ: ಪಟ್ಟಣದ ಸಿಂದಗಿ ರಸ್ತೆಗೆ ಹೊಂದಿಕೊಂಡ ಭಾಗ್ಯವಂತಿ ನಗರದ ಕನ್ನಡ ಭವನದ ಸಾಹಿತ್ಯ ಪರಿಷತ್ತಿನ ನಿವೇಶದಲ್ಲಿ ಶಾಸಕ ಅಶೋಕ ಮನಗೂಳಿ ಕನ್ನಡ ಭವನ ನೂತನ ಕಟ್ಟಡ ಕಾಮಗಾರಿಗೆ 30 ಲಕ್ಷ ರುಪಾಯಿ ಮಂಜುರಾದ ಕಾಮಗಾರಿಗೆ ಭೂಮಿ ಪೂಜಾ ನೇರವೆರಿಸಿ ಚಾಲನೆ ನೀಡಿದರು. ನಂತರ ಮಾತನಾಡಿ, ಆಲಮೇಲ ನೂತನ ತಾಲೂಕಿಗೆ ಹೆಚ್ಚಿನ ಒತ್ತು ನೀಡಿ ಮಾದರಿ ತಾಲೂಕ ಮಾಡಿ ನಿಮ್ಮೆಲರ ಸಹಾಕಾರದಿಂದ ಪ್ರಗತಿ ಸಾಧಿಸೋಣ ಎಂದರು. ಕಾರ್ಯಕ್ರಮದಲ್ಲಿ ಚಂದ್ರಶೇಖರ ಶಿವಾಚಾರ್ಯರು ಸಾನಿಧ್ಯ ವಹಿಸಿ ಆರ್ಶಿವನ ನೀಡಿದರು. ಜಿಲ್ಲಾ ಕಸಾಪ, ಅಧ್ಯಕ್ಷ ಹಾಸಿಂ ಪೀರ ವಾಲಿಕರ ಮಾತನಾಡಿ, ಕನ್ನಡ ನಮ್ಮ ಉಸಿರು ನಾಡು ನುಡಿಗೆ ಶ್ರಮಿಸೋಣ ಎಂದು ತಮ್ಮ ಅನೇಕ ಸಾಹಿತ್ಯಯ ಅನುಭವ ಹಂಚಿ ಸಾಹಿತ್ಯ ಕ್ಷೇತ್ರ ದಲ್ಲಿ ಪ್ರಗತಿ ಸಾದಿಸೋಣ ಎಂದರು. ಹಿರಿಯ ವೈದ್ಯ ಡಾ. ಸಂದೀಪ ಪಾಟೀಲ ಗ್ರಾಮ ಗಣ್ಯರಾದ ರಮೇಶ ಬಂಟನೂರ, ಕಸಾಪ ಅಧ್ಯಕ್ಷ ಶಿವಶರಣ ಗುಂದಗಿ ಮಾತನಾಡಿದರು.

ವಿ+ ಸೋಮವಾರ

{ ಕೆ.ಎಸ್.ಈಶ್ವರಪ್ಪ } ಮಾಜಿ ಡಿಸಿಎಂ

ಸಿದ್ದರಾಮಯ್ಯ ಕಾನೂನುಬದ್ಧವಾಗಿ ಹೋರಾಟ ಮಾಡಿ ಕ್ಲೀನ್ ಚಿಟ್ ಸಿಕ್ಕಿ ಯಶಸ್ವಿಯಾಗಿ ಹೊರಗೆ ಬರಲಿ. ಸಿಎಂ ಮೇಲೆ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಪ್ರಜಾಪ್ರಭುತ್ವದಲ್ಲಿ ಕಾನೂನಿಗೆ ಗೌರವ ಕೊಡಬೇಕು. ನನ್ನ ಮೇಲೆ ಆಪಾದನೆ ಬಂದಾಗ ನಾನು ರಾಜೀನಾಮೆ ಕೊಟ್ಟು ತನಿಖೆಗೆ ಸಹಕಾರ ಕೊಟ್ಟಿದ್ದೇನೆ. ಅವರು ಕೂಡ ರಾಜೀನಾಮೆ ಕೊಟ್ಟು ತನಿಖೆಗೆ ಸಹಕಾರ ಕೊಡುತ್ತಾರೆ.

ಕಳಪೆ ನೀರಾವರಿ ಪೈಪ್ ವಿತರಣೆ

ಕಂಪನಿಗಳ ವಿರುದ್ಧ ಹೈಕೋರ್ಟ್‌ನಲ್ಲಿ ಪಿಐಎಲ್ ಸಲ್ಲಿಸಲು ರೈತಸಂಘ ನಿರ್ಧಾರ



ಜಿಲ್ಲೆಯಲ್ಲಿ ಕೃಷಿ ಇಲಾಖೆ ವತಿಯಿಂದ ವಿತರಿಸುತ್ತಿರುವ ಸ್ಪ್ರಿಂಕ್ಲರ್ ಪೈಪ್‌ಗಳು ಸಂಪೂರ್ಣ ಕಳಪೆ ಮಟ್ಟದಿಂದ ಕೂಡಿದೆ ಎಂದು ಅರವಿಂದ ಕುಲಕರ್ಣಿ ಅವರು ನಗರದಲ್ಲಿ ಸುದ್ದಿಗೋಷ್ಠಿ ನಡೆಸಿ ಕಳಪೆ ಪೈಪ್‌ನ್ನು ಪ್ರದರ್ಶನ ಮಾಡಿ ಮಾತನಾಡಿದರು.

ವಿಜಯಪುರ: ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿಯಲ್ಲಿ ಕೇಂದ್ರ ಹಾಗೂ ರಾಜ್ಯ ಸರಕಾರದಿಂದ ಕೃಷಿ ಇಲಾಖೆ ಮೂಲಕ ರಾಜ್ಯಾದ್ಯಂತ ರೈತರಿಗೆ ರಿಯಾಯತಿ ದರದಲ್ಲಿ ವಿತರಿಸುತ್ತಿರುವ ಸ್ಪ್ರಿಂಕ್ಲರ್ ಪೈಪ್‌ಗಳು ಸಂಪೂರ್ಣ ಕಳಪೆಮಟ್ಟದಿಂದ ಕೂಡಿದೆ. ಕಂಪನಿಯವರು ರಾಜ್ಯದ ರೈತರನ್ನು ವಂಚಿಸುತ್ತಿದ್ದಾರೆ. ರಾಜ್ಯದ ರೈತರ ಪರವಾಗಿ ಕಂಪನಿಗಳ ವಿರುದ್ಧ ಪಿಐಎಲ್ ಸಲ್ಲಿಸಲಾಗುವುದು ಎಂದು ಅಖಂಡ ಕರ್ನಾಟಕ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅರವಿಂದ ಕುಲಕರ್ಣಿ ತಿಳಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿ ನೆಡೆಸಿ ಕಳಪೆ ಸ್ಪ್ರಿಂಕ್ಲರ್ ಪೈಪ್‌ನ್ನು ಪ್ರದರ್ಶನ ಮಾಡಿ ಮಾತನಾಡಿದ ಅವರು, ರೈತರಿಗೆ ಕಳಪೆ ಗುಣಮಟ್ಟದ ಸ್ಪ್ರಿಂಕ್ಲರ್ ಪೈಪ್‌ಗಳನ್ನು ವಿತರಿಸುತ್ತಿರುವ ಇಂತಹ ಕಂಪನಿಗಳ ಮೇಲೆ ತನಿಖೆ ಕೈಗೊಳ್ಳಲು ಸಿಬಿಐ, ರಾಜ್ಯ ಲೋಕಾಯುಕ್ತರು ಮತ್ತು ರಾಜ್ಯದ ಕೃಷಿ ಇಲಾಖೆಗೂ ದೂರು ಸಲ್ಲಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಆದ್ದರಿಂದ ಅನಿವಾರ್ಯವಾಗಿ ಉಚ್ಚ ನ್ಯಾಯಾಲಯದಲ್ಲಿ ರೈತ ಸಂಘದಿಂದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲು ನಿರ್ಧರಿಸಲಾಗಿದೆ ಎಂದರು.

ರೈತರಿಗೆ ವಿತರಿಸುತ್ತಿರುವ ಪೈಪ್‌ಗಳು 6 ತಿಂಗಳು ಹೆಚ್ಚೆಂದರೆ 1 ವರ್ಷಗಳವರೆಗೆ ಮಾತ್ರ ಬಾಳಿಕೆ ಬರುತ್ತವೆ. ಮುಂದೆ ರೈತರು ಹೊರಗೆ ದುಬಾರಿ ಹಣ ಕೊಟ್ಟು ಖರೀದಿ ಮಾಡಬೇಕಾಗುತ್ತದೆ. ಮೊದಲೇ ಬರಗಾಲದಿಂದ ತತ್ತರಿಸಿದ ರೈತರಿಗೆ ಕಳಪೆ ಪೈಪ್‌ಗಳನ್ನು ತಯಾರಿಸಿ ಕೊಡುತ್ತಿರುವ ಕಂಪನಿಗಳಿಂದ ರೈತರಿಗೆ ವಂಚನೆಯಾಗುತ್ತಿದೆ. ಇತ್ತೀಚೆಗಷ್ಟೆ ಕಂಪನಿಗಳು ನಾಯಿಕೊಡೆಗಳಂತೆ ಬೆಳೆಯುತ್ತಿವೆ. ಹೊಸದಾಗಿ ಹೆಚ್ಚು ಕಂಪನಿಗಳು ಹುಟ್ಟಿಕೊಳ್ಳುತ್ತಿರುವದರಿಂದ ಕಳಪೆ ಮಟ್ಟದ ಪೈಪ್‌ಗಳನ್ನು ಸಬ್ಸಿಡಿ ರೂಪದಲ್ಲಿ ಅನ್ನದಾತರಿಗೆ ಒದಗಿಸಲು ಕಂಪನಿಗಳು ವ್ಯವಸ್ಥಿತ ರೀತಿಯಲ್ಲಿ ಲೂಟಿ ಮಾಡಲು ಮುಂದಾಗಿವೆ ಎಂದರು.

ಇದು ಕೇವಲ ಜಿಲ್ಲೆಗೆ ಸೀಮಿತವಲ್ಲ ಇದು ರಾಜ್ಯಾದ್ಯಂತ ಕಳಪೆ ಮಟ್ಟದ್ದಾಗಿವೆ. ಕೃಷಿ ಇಲಾಖೆಯ ನಿಯಮದ ಪ್ರಕಾರ ರೈತರ ಜಮೀನಿಗೆ ಇಲಾಖೆಯ ವಾಹನದಲ್ಲಿ ತೆರಳಿ ಪೂರ್ವ ಸಮೀಕ್ಷೆ ಮಾಡಿ ಪೈಪ್‌ಗಳನ್ನು ರೈತರ ಹೊಲದಲ್ಲಿ ಅಳವಡಿಸಿ ಜಿಪಿಎಸ್ ಮಾಡಬೇಕು. ಮುಂದೆ ಮುಂದಿನ ಸಮೀಕ್ಷೆ ಮಾಡಿ ಪೈಪ್‌ಗಳ ಕಾರ್ಯ ನಿರ್ವಹಣೆ ಮಾಡಿ ಸಂತೃಪ್ತಿ ಇರುವುದನ್ನು ರೈತರಿಂದ ಖಾತ್ರಿ ಪಡೆಸಿಕೊಂಡು ಪೈಪ್ ತಯಾರಿಸಿ ಸರಬರಾಜು ಮಾಡಿದ ಕಂಪನಿಗಳಿಗೆ ನಂತರ ಬಿಲ್ಲನ್ನು ಪಾವತಿಸಬೇಕೆಂಬ ನಿಯಮಿದೆ. ಆದರೆ ಇಲ್ಲಿ ನಿಯಮ ಬಾಹಿರವಾಗಿ ಕೃಷಿ ಇಲಾಖೆಯಲ್ಲಿ ವಿತರಿಸುವುದು ಕಾನೂನು ಉಲ್ಲಂಘನೆಯಾಗಿದೆ.

ರಾಜ್ಯಾದ್ಯಂತ ಇಂತಹ ದೂರುಗಳು ಕೇಳಿ ಬಂದರೂ ಇಲ್ಲಿಯವರೆಗೂ ರಾಜ್ಯದ ಎಲ್ಲ ಕೃಷಿ ಇಲಾಖೆ ಅಧಿಕಾರಿಗಳು ಯಾವುದೇ ಕಂಪನಿಗೆ ಭೇಟಿ ನೀಡಿ ಮಾದರಿ ಕಲೆ ಹಾಕಿ ಸಿಪೆಟ್ ಸಂಸ್ಥೆಗೆ ಕಳುಹಿಸಿರುವ ಉದಾಹರಣೆ ಇಲ್ಲ. ಎಲ್ಲವೂ ಗುಣಮಟ್ಟದ ಪೈಪ್‌ಗಳು ಇರುತ್ತವೆ ಎಂದು ಹೇಳಿ ಇಡಿ ರಾಜ್ಯದ ರೈತ ಕುಲಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಒಮ್ಮೆ ರೈತರಿಗೆ ವಿತರಿಸಿದರೆ ಮತ್ತೆ ವಿತರಿಸುವುದಿಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತಿದೆ. ಆದ್ದರಿಂದ ಕನಿಷ್ಠ 2 ರಿಂದ 3 ವರ್ಷಕ್ಕೆ ಒಮ್ಮೆ ರೈತರಿಗೆ ಗುಣಮಟ್ಟದ ಸ್ಪ್ರಿಂಕ್ಲರ್ ಪೈಪ್‌ಗಳನ್ನು ಸರಬರಾಜು ಮಾಡಬೇಕು. ಈಗ ಕಳಪೆ ಸ್ಪ್ರಿಂಕ್ಲರ್ ಪೈಪ್‌ಗಳನ್ನು ತಯಾರಿಸಿ ರಾಜ್ಯಾದ್ಯಂತ ವಿತರಿಸಿದ ಕಂಪನಿಗಳ ಮೇಲೆ ಕಾನೂನು ಕ್ರಮ ಜರುಗಿಸಿ ಅಂತಹ ಕಂಪನಿಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು. ತನಿಖೆ ಮಾಡಿ ಸ್ಪಷ್ಟ ವರದಿ ಬರುವವರೆಗೂ ಕಂಪನಿಗಳ ಬಿಲ್ಲನ್ನು ಪಾವತಿಸಬಾರದು ಎಂದು ಅರವಿಂದ ಕುಲಕರ್ಣಿ ಆಗ್ರಹಿಸಿದರು.

ಈ ಸಂದರ್ಭದಲ್ಲಿ ಪ್ರೊ. ಎಂ.ಜಿ. ಯಂಕಂಚಿ, ಸದಾಶಿವ ಬರಟಗಿ, ಸೋಮನಗೌಡ ಪಾಟೀಲ, ಸಿಕಂದರ ಖರ್ಜಗಿ, ಗುರುರಾಜ ದೇಶಪಾಂಡೆ ಪತ್ರಿಕಾಗೋಷ್ಠಿಯಲ್ಲಿ ಇದ್ದರು.

ಲ್ಯಾಬ್ ವರದಿ ಈ ವರ್ಷವು ಬರಲಿಲ್ಲ

2023 ಜುಲೈ ತಿಂಗಳಲ್ಲಿ ಕಳಪೆ ಮಟ್ಟದ ಸ್ಪ್ರಿಂಕ್ಲರ್ ಪೈಪ್‌ಗಳನ್ನು ಹಿಡಿದು ಡಿಸಿ ಕಚೇರಿ ಮುಂದೆ ಪ್ರದರ್ಶಿಸಿ ಹೋರಾಟ ಮಾಡಿದ ಸಂದರ್ಭದಲ್ಲಿ ಆಗಿನ ಡಿಸಿ ಸ್ಪ್ರಿಂಕ್ಲರ್ ಪೈಪ್‌ಗಳನ್ನು ಸಿಪೆಟ್ (ಸೆಂಟ್ರಲ್ ಇನ್ಸಿಟ್ಯೂಟ್ ಆಫ್ ಪೆಟ್ರೋಕೆಮಿಕಲ್ಸ್ ಎಂಜನಿಯರಿಂಗ್ ಟೆಕ್ನಾಲಜಿ) ಸಂಸ್ಥೆಗೆ ಗುಣಮಟ್ಟ ಪರೀಕ್ಷಿಸಲು ಲ್ಯಾಬ್ ಗೆ ಕಳುಹಿಸಿಕೊಟ್ಟಿದ್ದಾರೆ. ವರ್ಷ ಕಳೆದರೂ ಇಲ್ಲಿಯವರೆಗೂ ಯಾವುದೇ ವರದಿ ಬಂದಿಲ್ಲ. ಆ ಕಳಪೆ ತಯಾರಿಕೆ ಆಗದಂತೆ ನೋಡಿಕೊಳ್ಳಲಾಗುವುದು ಮತ್ತು ಮುಂದೆ ಸರಬರಾಜಾಗುವ ಪೈಪ್‌ಗಳು ಗುಣಮಟ್ಟದಾಗಿರುವ ರೀತಿಯಲ್ಲಿ ಸರಬರಾಜು ಮಾಡುವಂತೆ ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದ್ದರು. ಸ್ಪ್ರಿಂಕ್ಲರ್ ಪೈಪ್‌ಗಳು ವಿವಿಧ ಕಂಪನಿಗಳಿಂದ ತಯಾರಿಸಿ ಕಳುಹಿಸಿದ್ದಾರೆ. ಇವು ಕಳಪೆ ಮಟ್ಟದ್ದಾಗಿವೆ ಎಂದು ಅರವಿಂದ ಕುಲಕರ್ಣಿ ತಿಳಿಸಿದರು.

ರೈತರ ಸೇವೆಗೆ ನಮ್ಮ ಸಂಘವು ಸದಾ ಬದ್ಧ

ಬಸವನಬಾಗೇವಾಡಿ ಪಟ್ಟಣದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಆವರಣದಲ್ಲಿ ಜರುಗಿದ ಸರ್ವ ಸಾಧಾರಣ ಸಭೆಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನ ಸನ್ಮಾನಿಸಿ ಗೌರವಿಸಲಾಯಿತು.

ಬಸವನಬಾಗೇವಾಡಿ: ರೈತರ ಸೇವೆಯೇ ದೇವರ ಸೇವೆ ಎಂಬ ಧ್ಯೇಯದೊಂದಿಗೆ ನಮ್ಮ ಸಂಘವು ರೈತಪರವಾದ ಸೇವೆಗಳನ್ನು ಒದಗಿಸುತ್ತ ಬಂದಿದೆ. ರೈತರ ಸೇವೆಗೆ ನಮ್ಮ ಸಂಘವು ಸದಾ ಬದ್ಧ ಎಂದು ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧ್ಯಕ್ಷ ಸಂಗನಗೌಡ ಚಿಕ್ಕೊಂಡ ಹೇಳಿದರು.

ಪಟ್ಟಣದ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಆವರಣದಲ್ಲಿ ಶನಿವಾರ ಸರ್ವ ಸಾಧಾರಣ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಸಂಘದಿಂದ ರೈತರಿಗೆ ಅನೂಕೂಲ ಕಲ್ಪಿಸುವ ನಿಟ್ಟಿನಲ್ಲಿ ರೈತರಿಗಾಗಿ ಬೀಜ, ರಸಗೊಬ್ಬರ, ಕ್ರೀಮಿನಾಶಕ ವ್ಯಾಪಾರ ಮಳಿಗೆಯನ್ನ ಆರಂಭಿಸಲಾಗಿದೆ ಅವುಗಳ ಖರೀದಿಗಾಗಿ ಪ್ರತಿಷತ 11 ಬಡ್ಡಿದರದಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುತ್ತಿದೆ ಅಲ್ಲದೇ ನಮ್ಮ ಸಂಘದಿಂದ ಮೆಡಿಕಲ್ ಮತ್ತು ಜನರಲ್ ಸ್ಟೋರ್ಸ ಆರಂಭಿಸಲಾಗಿದೆ. ರೈತರು ಹಾಗೂ ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕು, ಮುಂಬರುವ ದಿನಗಳಲ್ಲಿ ರೈತರಿಗಾಗಿ ನಮ್ಮ ಸಂಘದಿಂದ ಎರೆ ಹುಳ ಗೊಬ್ಬರ ತಯಾರಿಸುವ ಘಟಕವನ್ನು ತೆರೆಯುವ ಯೋಜನೆ, ಬೆವಿನ ಹಿಂಡಿ ತಯಾರಿಸುವ ಘಟಕ, ಕೋಲ್ಡ ಸ್ಟೋರೆಜ್ ತೆರೆಯಲಾಗುವದು ಎಂದರು.

ಸಂಘದ ಉಪಾಧ್ಯಕ್ಷ ಮಲ್ಲೇಶಿ ಬ ಕಡಕೋಳ, ನಿರ್ದೇಶಕ ನಿಂಗ್ಪ ಬ, ಅವಟಿ, ಮಹಾಂತೇಶ ಹಾರಿವಾಳ, ನಿಂಗಪ್ಪ ಕುಳಗೇರಿ, ಶ್ರೀಶೈಲ ಪರಮಗೊಂಡ, ಈರಣ್ಣ ವಂದಾಲ, ಸುರೇಶ ನಾಯಕ ಇದ್ದರು.

ಸಂಘದ ಯಶಸ್ವಿಗೆ ಸದಸ್ಯರ ಕೊಡುಗೆ ಕಾರಣ

ಸಂಘವು ಎಲ್ಲರ ಸಹಕಾರದಿಂದ ದುಡಿಯುವ ಬಂಡವಾಳ ರು. 7048.40 ಲಕ್ಷ ರು. ಹೊಂದಿದ್ದು ಶಾಸನ ಬದ್ದ ಹಾಗೂ ಇತರೆ ಸಂಘ ಸಂಸ್ಥೆಗಳಲ್ಲಿ ಹೂಡಿದ ಮೊತ್ತ ರು. 2965.39 ಲಕ್ಷಗಳಷ್ಟಿದ್ದು ಸಂಘದ ಸ್ವಂತ ಬಂಡವಾಳ 1323.99 ಲಕ್ಷ ರು. ಗಳಷ್ಟು ಇದ್ದು 2023-24 ನೇ ಸಾಲಿನ ಅಭಿವೃದ್ಧಿ ಕ್ರಿಯಾ ಯೋಜನೆಯನ್ನು ರೂಪಿಸಿಕೊಂಡು ಕಾರ್ಯಕ್ರಮಗಳ ಗುರಿಗಳಿಗೆ ಪ್ರತಿಶತ 100% ರಷ್ಟು ಎಲ್ಲಾ ಅಂಶಗಳಲ್ಲಿ ಸಾಧನೆಯಾಗಿದ್ದು ಯಶಸ್ವಿಗೆ ಸಂಘದ ಸದಸ್ಯರ ಸಹಕಾರವೇ ಕಾರಣವಾಗಿದೆ ಎಂದು ಸಂಘದ ಮುಖ್ಯ ಕಾರ್ಯನಿರ್ವಾಹಕ ಪ್ರವೀಣ ಚಿಕ್ಕೊಂಡ ವಾರ್ಷಿಕ ವರದಿ ವಾಚಿಸುತ್ತಾ ತಿಳಿಸಿದರು.

ತಾಳಿಕೋಟಿ ದೇವರಹಿಪ್ಪರಗಿ ಸೇತುವೆ ಕುಸಿತ: ದುರಸ್ತಿಗೆ ಆಗ್ರಹ

ದೇವರಹಿಪ್ಪರಗಿ: ಪಟ್ಟಣದಿಂದ ತಾಳಿಕೋಟಿಗೆ ಹೋಗುವ ರಸ್ತೆ ಮಧ್ಯೆ ದೇವೂರ ಗ್ರಾಮದ(23.36) ಹತ್ತಿರ ಇರುವ ಹಳೆಯದಾದ ಕಲ್ಲಿನ ಸೇತುವೆ ಅರ್ಧ ಶುಕ್ರವಾರದಂದು ಕುಸಿತ ಕಂಡ ಪರಿಣಾಮ ರಸ್ತೆಯಲ್ಲಿ ಪ್ರಯಾಣಿಸುವ ವಾಹನ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಪ್ರತಿದಿನ ಈ ರಸ್ತೆಯಲ್ಲಿ ಸಾವಿರಾರು ಸಂಖ್ಯೆಯಲ್ಲಿ ಜನರು, ದ್ವಿಚಕ್ರ ವಾಹನ ಹಾಗೇ ಇತರೆ ವಾಹನಗಳು ಸಂಚರಿಸುತ್ತವೆ. ಏಕಾಏಕಿ ರಸ್ತೆ ಸೇತುವೆ ಕುಸಿತ ಕಂಡ ಪರಿಣಾಮ ರಸ್ತೆ ಸವಾರರು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ. ಪರ್ಯಾಯ ವ್ಯವಸ್ಥೆ ಕಲ್ಪಿಸಲು ವಾಹನ ಸವಾರರ ಆಗ್ರಹಿಸಿದ್ದಾರೆ. ದೇವರಹಿಪ್ಪರಗಿ- ಬಿ.ಬಿ. ಇಂಗಳಗಿ ರಸ್ತೆ,ಸುಮಾರು 30ವರ್ಷಗಳ ಹಳೆಯದಾದ ಕಲ್ಲಿನ ಸೇತುವೆ ಮರು ನಿರ್ಮಾಣ ಮಾಡದೆ ಇರುವುದು ಇಂದಿನ ಸ್ಥಿತಿಗೆ ಕಾರಣವಾಗಿದೆ. ರಸ್ತೆ ಮಧ್ಯೆ ಹಲವಾರು ಸಿಮೆಂಟ್ ಸೇತುವೆಗಳನ್ನು ನೂತನವಾಗಿ ನಿರ್ಮಿಸಲಾಗಿದೆ. ಆದರೆ ಈ ಹಳೆಯದಾದ ಕಲ್ಲಿನ ಸೇತುವೆ ಮರು ನಿರ್ಮಾಣ ಮಾಡದೆ ಇರುವುದಕ್ಕೆ ಅಧಿಕಾರಿಗಳು ಮೇಲೆ ಸಹಜವಾಗಿಯೇ ಜನರ ಆಕ್ರೋಶಕ್ಕೆ ಕಾರಣವಾಗಿದೆ. ಸ್ಥಳಕ್ಕೆ ಅಧಿಕಾರಿಗಳು ಭೇಟಿ ಪರಿಶೀಲನೆ ಶುಕ್ರವಾರದಂದು ಹಳೆಯದಾದ ಕಲ್ಲಿನ ಸೇತುವೆ ಕುಸಿತದಿಂದಾಗಿ ಪ್ರಯಾಣಿಕರು ಜೀವ ಕೈಯಲ್ಲಿ ಹಿಡಿದು ಪ್ರಯಾಣಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ಥಳಕ್ಕೆ ಪಿಎಸ್ಐ ಬಸವರಾಜ ತಿಪ್ಪರಡ್ಡಿ, ಪಿಡಬ್ಲ್ಯೂಡಿ ಅಧಿಕಾರಿಗಳು ಭೇಟಿ ನೀಡಿ ತಾತ್ಕಾಲಿಕ ರಸ್ತೆ ನಿರ್ಮಾಣಕ್ಕೆ ಪರಿಶೀಲನೆ ನಡೆಸಿದ್ದಾರೆ.

ಹತ್ಯಾಚಾರ ಖಂಡಿಸಿ ವೈದ್ಯರಿಂದ ಪ್ರತಿಭಟನೆ

ಸಾಕ್ಷ್ಯನಾಶಪಡಿಸುವ ಹುನ್ನಾರ | ವೈದ್ಯರ ಪ್ರತಿಭಟನೆ, ಹೈಕೋರ್ಟ್ ಛಾಟಿ ನಂತರ ಸಿಬಿಐಗೆ ದೂರು

ಕೊಲ್ಕತ್ತಾದ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿನಿ ಮೇಲಿನ ಅತ್ಯಾಚಾರ ಹಾಗೂ ಹಲ್ಲೆ ಖಂಡಿಸಿ ಬಾಗಲಕೋಟೆಯಲ್ಲಿ ಜಿಲ್ಲಾಡಳಿತದ ಎದುರು ಐಎಂಎ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಬಾಗಲಕೋಟ: ಕೊಲ್ಕತ್ತಾದ ಆರ್‌ಜಿಕರ್ ಮೆಡಿಕಲ್ ಕಾಲೇಜಿನಲ್ಲಿ ನಡೆದಿರುವ ವೈದ್ಯ ವಿದ್ಯಾರ್ಥಿ ಮೇಲಿನ ಹತ್ಯಾಚಾರ ಹಾಗೂ ಕೊಲೆ ಪ್ರಕರಣ ಖಂಡಿಸಿ ಭಾರತೀಯ ವೈದ್ಯಕೀಯ ಸಂಸ್ಥೆಯ ಸ್ಥಳೀಯ ಘಟಕದಿಂದ ಪ್ರತಿಭಟನೆ ನಡೆಸಲಾಯಿತು.

ಜಿಲ್ಲೆಯ ಜಿಲ್ಲಾಡಳಿತ ಭವನದ ಎದುರು ಜಮಾಯಿಸಿದ ನೂರಾರು ವೈದ್ಯರು ಘಟನೆ ಖಂಡಿಸಿ ಜಿಲ್ಲಾಧಿಕಾರಿ ಕೆ.ಎಂ. ಜಾನಕಿಗೆ ಮನವಿ ಸಲ್ಲಿಸಿ, ನ್ಯಾಯ ಕೇಳಿ ಘೋಷಣೆಗಳನ್ನು ಮೊಳಗಿಸಿದರು.

ಈ ವೇಳೆ ಐಎಂಎ ಬಾಗಲಕೋಟೆ ಘಟಕದ ಅಧ್ಯಕ್ಷ ಡಾ. ಅರುಣ ಮಿಸ್ಕಿನ್ ಮಾತನಾಡಿ, ಕಾಲೇಜಿನಲ್ಲಿ ಘಟನೆ ನಡೆದ ದಿನವೇ ಪೊಲೀಸರು ತನಿಖೆಯಲ್ಲಿ ನಿರ್ಲಕ್ಷ್ಯ ವಹಿಸಿದ್ದು, ಮುಂದೆಯೂ ತನಿಖೆ ಮಂದಗತಿಯಲ್ಲಿ ನಡೆಸಿ ಸ್ಥಗಿತಗೊಳಿಸಿದ್ದರು. ವೈದ್ಯರ ಪ್ರತಿಭಟನೆ, ಹೈಕೋರ್ಟ್ ಛಾಟಿ ಬೀಸಿದ ನಂತರ ಸಿಬಿಐಗೆ ವಹಿಸಲಾಗಿದೆ. ಅಲ್ಲಿನ ಪೊಲೀಸರು ಸಾಕ್ಷ್ಯ ನಾಶಗೊಳಿಸುವ ಸಾರ್ಧ್ಯಯತೆಗಳನ್ನು ಊಹಿಸಲಾಗಿದ್ದು, ಆ.15ರಂದು ದೊಡ್ಡ ಸಂಖ್ಯೆಯಲ್ಲಿ ಜನ ಆಸ್ಪತ್ರೆಯನ್ನು ಪ್ರವೇಶಿಸಿ ಓಡಾಡಿದ್ದಾರೆ. ಅಪರಾಧಿ ಓಡಾಡಿದ ಸ್ಥಳದಲ್ಲಿನ ಸಾಕ್ಷ್ಯ ನಾಶಪಡಿಸುವ ಹುನ್ನಾರ ಇದಾಗಿದೆ ಎಂದು ದೂರಿದರು.

ಆಸ್ಪತ್ರೆಯ ಆಡಳಿತ ಮಂಡಳಿಯ ಉದಾಸೀನ ಮತ್ತು ಸಂವೇದನಾಶೀಲತೆಯ ಕೊರತೆಯಿಂದಾಗಿ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ಮೇಲೆ ಆಕ್ರಮ ನಡೆಯುತ್ತಿರುವುದಕ್ಕೆ ಕಾರಣ ಎಂಬುದು ಈ ಘಟನೆಯಿಂದ ತಿಳಿದು ಬಂದಿದೆ. ಘಟನೆ ಖಂಡಿಸಿ ಪ್ರತಿಭಟಿಸುತ್ತಿದ್ದ ವೈದ್ಯರ ಮೇಲೆ ಗೂಂಡಾಗಳ ಗುಂಪು ಸ್ವಾತಂತ್ರ್ಯೋತ್ಸದ ದಿನವೇ ನಡೆಸಿದ ದಾಳಿಯನ್ನು ಖಂಡಿಸಿ ಐಎಂಎ ದೇಶದಾದ್ಯಂತ ಪ್ರತಿಭಟನೆ ಕರೆ ನೀಡಿದೆ ಅದರ ಭಾಗವಾಗಿ ಬಾಗಲಕೋಟೆಯಲ್ಲೂ ಸೇವೆಯಿಂದ ದೂರ ಉಳಿದು ಪ್ರತಿಭಟಿಸುತ್ತಿರುವುದಾಗಿ ತಿಳಿಸಿದರು.

ವೈದ್ಯರಿಗೆ ರಕ್ಷಣೆ ಇಲ್ಲದಂತ ಸ್ಥಿತಿ ನಿರ್ಮಾಣವಾಗಿದೆ. ಕೊಲ್ಕತ್ತಾದ ಘಟನೆ ನಂತರ ವೈದ್ಯ ಸಮೂಹ ಸಂಪೂರ್ಣ ಆತಂಕಕ್ಕೆ ಸಿಲುಕಿದ್ದು, ಸ್ಥೈರ್ಯ ತುಂಬುವ ಕೆಲಸ ಆಡಳಿತದಲ್ಲಿದ್ದವರಿಂದ ಆಗಬೇಕಿತ್ತು. ಆದರೆ, ಅದಕ್ಕೆ ವ್ಯತಿರಿಕ್ತವಾಗಿ ನಡೆದುಕೊಳ್ಳುತ್ತಿರುವುದು ಖೇದಕರ ಸಂಗತಿ.
- ಡಾ. ಎಂ.ಎಸ್.ದಡ್ಡೆನ್ನವರ ಹಿರಿಯ ವೈದ್ಯರು

ಹಿರಿಯ ನೇತ್ರತಜ್ಞ ಡಾ. ಗಿರೀಶ ಮಸೂರಕರ ಮಾತನಾಡಿ, ಈ ಘಟನೆಯಲ್ಲಿ ಮಮತಾ ಬ್ಯಾನರ್ಜಿ ಸರಕಾರದ ವೈಫಲ್ಯಗಳು ಎದ್ದು ಕಾಣುತ್ತಿದೆ. ಪ್ರಕರಣದಲ್ಲಿ ಸಂತ್ರಸ್ತೆ ಕುಟುಂಬಕ್ಕೆ ನ್ಯಾಯ ನೀಡುವದನ್ನು ಬಿಟ್ಟು ಮಮತಾ ಬ್ಯಾನರ್ಜಿ ಇಲ್ಲಸಲ್ಲದ ರಾಜಕಾರಣ ಮಾಡುತ್ತಿದ್ದಾರೆ. ವೈದ್ಯ ಸಮೂಹಕ್ಕೆ ನ್ಯಾಯವೇ ಇಲ್ಲದಂತಾಗಿದ್ದು, ಪಶ್ಚಿಮ ಬಂಗಾಳದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೆ ತಂದು ಕಾನೂನು, ಸುವ್ಯವಸ್ಥೆ ಸರಿಯಾಗುವಂತೆ ಮಾಡಬೇಕು. ಆಡಳಿತದಲ್ಲಿ ಇದ್ದವರು ಮಾನವೀಯತೆ ಮರೆತು ವರ್ತಿಸಿದರೆ ವೈದ್ಯರೂ ಅದೇ ನಿಲುವು ತಾಳುವ ದಿನ ಬರಬೇಕಾಗುತ್ತದೆ ಎಂದು ಎಚ್ಚರಿಕೆಯನ್ನು ನೀಡಿದರು.

ಪ್ರಭಾರ ಡಿಎಚ್‌ಒ ಡಾ. ಸುವರ್ಣ ಕುಲಕರ್ಣಿ ಅವರಿಗೂ ಮನವಿ ಸಲ್ಲಿಸಲಾಯಿತು. ಐಎಂಎ ಕಾರ್ಯದರ್ಶಿ ಡಾ.ಪ್ರಮೋದ ಮಿರ್ಜಿ, ಡಾ.ಆರ್.ಟಿ.ಪಾಟೀಲ, ಡಾ.ಬಿ.ಎಸ್.ಮರೇಗುದ್ದಿ, ಡಾ.ಶೇಖರ ಮಾನೆ, ಡಾ. ಅಶೋಕ ಬಡಕಲಿ, ಡಾ. ಬಿ.ಎಸ್.ಪಾಟೀಲ, ಡಾ.ಆದಿತ್ಯ ಲಾಜಮಿ, ಡಾ.ಶಂಕರ ಪಾಟೀಲ, ಡಾ.ದೇವರಾಜ ಪಾಟೀಲ, ಡಾ.ಶೈಲೇಶ ಎಮ್ಮಿ, ಡಾ. ಶಿವಾನಂದ ಬಡದೇಸಾಯಿ, ಡಾ.ಕಿರಣ ಕಲಬುರಗಿ, ಡಾ.ಅರ್ಚನಾ ದಡ್ಡೇನ್ನವರ, ಡಾ.ಜಯಶ್ರೀ ತೇಲಸಂಗ, ಡಾ.ಉನ್ನೈಜಾ ಫರೀನ್ ಮತ್ತಿತರರಿದ್ದರು.

ಶ್ರೀ ಗಿರಿಜಾಶಂಕರ ಚಿತ್ರಮಂದಿರದ 50ನೇ ವಾರ್ಷಿಕೋತ್ಸವ ಇಂದು

ಮುದ್ದೇಬಿಹಾಳ: 50 ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟಿರುವ ಶ್ರೀ ಗಿರಿಜಾಶಂಕರ ಚಿತ್ರಮಂದಿರದ 50ನೇ ವಾರ್ಷಿಕೋತ್ಸವದ ಸುವರ್ಣ ಸಂಭ್ರಮ, ಗಿರಿಜಾಶಂಕರ ಬಡಾವಣೆಯ ಭೂಮಿ ಪೂಜೆ, ಲೋಕಾರ್ಪಣೆ ಸಂಯುಕ್ತ ಸಮಾರಂಭ ಆ.18ರಂದು ಬೆಳಗ್ಗೆ 11 ಗಂಟೆಗೆ ಆಲಮಟ್ಟಿ ರಸ್ತೆ ಪಕ್ಕದಲ್ಲಿರುವ ಗಿರಿಜಾಶಂಕರ ಲೇಔಟ್‌ನಲ್ಲಿ ಏರ್ಪಡಿಸಲಾಗಿದೆ ಎಂದು ವಿಜಯಮಹಾಂತೇಶ ಸಾಲಿಮಠ ವಕೀಲರು ತಿಳಿಸಿದರು. ಶನಿವಾರ ಇಲ್ಲಿನ ಹುಡ್ಕೋದಲ್ಲಿರುವ ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿ, ನಮ್ಮ ಮನೆತನದ ಹಿರಿಯರಾದ ಶಂಕ್ರಯ್ಯ ರುದ್ರಯ್ಯ ಸಾಲಿಮಠ ಅವರು ಬಾಗಲಕೋಟ ಜಿಲ್ಲೆ ಅಮೀನಗಡದಲ್ಲಿರುವ ಚಲನ ಚಿತ್ರಮಂದಿರದಲ್ಲಿ ಕೆಲಸಗಾರರಾಗಿದ್ದರು. ಅವರ ಸೇವಾ ಮನೋಭಾವ, ಪರಿಶ್ರಮ ಪರಿಗಣಿಸಿ ಆ ಚಿತ್ರಮಂದಿರದ ಮಾಲಿಕರು ಶಂಕ್ರಯ್ಯನವರಿಗೇ ಉಸ್ತುವಾರಿ ನೀಡಿದ್ದರು. ಆಗ ಸಂಚಾರಿ ಚಿತ್ರಮಂದಿರವಾಗಿದ್ದ ಇದು ಅಲ್ಲಲ್ಲಿ ಪ್ರದರ್ಶನ ನಡೆಸಿ ಅಂತಿಮವಾಗಿ ಮುದ್ದೇಬಿಹಾಳ ಪಟ್ಟಣದಲ್ಲಿ ನೆಲೆಯೂರಿತು.



ಅದೇ ಕಾರ್ಯಕ್ರಮದಲ್ಲಿ ನಮ್ಮ ವಕೀಲಿ ವೃತ್ತಿಯ 25ನೇ ವರ್ಷಾಚರಣೆ, ಶ್ರೀ ಗಿರಿಜಾಶಂಕರ ರಿಯಲ್ ಎಸ್ಟೇಟ್‌ನ 15ನೇ ವರ್ಷದ ವಾರ್ಷಿಕೋತ್ಸವವನ್ನೂ ಆಚರಿಸಲಾಗುತ್ತದೆ. ನಿಡಗುಂದಿ ರುದ್ರೇಶ್ವರ ಮಠದ ರುದ್ರಮುನಿ ಶಿವಾಚಾರ್ಯರು, ಬಿಲ್‌ಕೆರೂರ ಬಿಲ್ವಾಶ್ರಮದ ಸಿದ್ಧಲಿಂಗ ಶಿವಾಚಾರ್ಯರು, ಅಕಲಿಮಠದ ಶ್ರೀ ವೀರಭದ್ರ ಸ್ವಾಮೀಜಿ, ಕುಂಟೋಜಿ ಸಂಸ್ಥಾನಮಠದ ಡಾ.ಶ್ರೀಗುರು ಚನ್ನವೀರ ಶಿವಾಚಾರ್ಯರು, ಶರಣ ಸೋಮನಾಳದ ಮಹದೇವ ಶಾಸ್ತ್ರಿಯವರು ದಿವ್ಯಸಾನಿಧ್ಯ ವಹಿಸಿ ಆಶೀರ್ವದಿಸುವರು. ಹಲವು ಗಣ್ಯರನ್ನು ಸನ್ಮಾನಿಸಲಾಗುತ್ತದೆ. ಹಾಲಿ, ಮಾಜಿ ಶಾಸಕರು, ರಾಜಕೀಯ ಮುಖಂಡರು, ಊರಿನ ಗಣ್ಯರು, ಚಿತ್ರಮಂದಿರದ ಪ್ರೇಕ್ಷಕರು, ಅಭಿಮಾನಿಗಳು, ನ್ಯಾಯವಾದಿಗಳು ಸೇರಿ ಹಲವರು ಪಾಲ್ಗೊಳ್ಳುವರು ಎಂದು ತಿಳಿಸಿದರು.

ಬಾದಾಮಿ ನಗರದಲ್ಲಿ ವಿವಿಧ ಕಾಲೇಜಿನ ವೈದ್ಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು, ವೈದ್ಯರು ಹಾಗೂ ಸುಶ್ರುಷಕರು ಇತ್ತೀಚೆಗೆ ಪಶ್ಚಿಮ ಬಂಗಾಳದಲ್ಲಿ ನಡೆದ ವೈದ್ಯ ವಿದ್ಯಾರ್ಥಿನಿಯ ಹತ್ಯೆ ಖಂಡಿಸಿ ಬೃಹತ್ ಪ್ರತಿಭಟನೆ ನಡೆಸಿದರು. ಹತ್ಯೆಕೋರರ ಶಿಕ್ಷೆಗೆ ಸೂಕ್ತ ಕ್ರಮ ಕೈಗೊಳ್ಳಲು ರಾಜ್ಯ ಹಾಗೂ ಕೇಂದ್ರ ಸರಕಾರಕ್ಕೆ ಒತ್ತಾಯಿಸಿದರು.

ಸಿಎಂ ವಿರುದ್ಧ ಬಿಜೆಪಿ ರಣಹೇಡಿ ತಂತ್ರ

ಬಾಗಲಕೋಟೆ: ಸಿಎಂ ಸಿದ್ದರಾಮಯ್ಯನವರು ಕಪ್ಪು ಚುಕ್ಕೆ ಇಲ್ಲದೆ, ಸತ್ಯ ಪ್ರಮಾಣಿಕತೆ ಮೇಲೆ ಆಡಳಿತ ನಡೆಸಿದ ಧೀಮಂತ ನಾಯಕ. ಚುನಾವಣೆಯಲ್ಲಿ ಅವರ ಮಣಿಸಲು ಸಾಧ್ಯವಾಗದೇ ಬಿಜೆಪಿ

ಇದೀಗ ರಣಹೇಡಿತನ ಮಾಡಲು ಮುಂದಾಗಿದ್ದು, ನಾಚಿಕೆಗೇಡಿನ ಸಂಗತಿ ಎಂದು ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ರಕ್ಷಿತಾ ಭರತಕುಮಾರ ಈಟಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, ಬಿಜೆಪಿ ತನ್ನ ಮನ ಬದ್ದಂತೆ ರಾಜ್ಯಪಾಲರ ಆಡಳಿತದ ಮೇಲೆ ಪ್ರಹಾರ ನಡೆಸಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಈ ಹಿಂದೆ ಡಿಸಿಎಂ ಡಿ.ಕೆ.ಶಿವಕುಮಾರ ಅವರ ಮೇಲೆ ಇಡಿ, ಐಟಿ ಅಂತಹ ದಾಳಿ ನಡೆಸಿ ಸುಪ್ರೀಂಕೋರ್ಟ್ ಎದುರು ಮಂಡಿಯೂರಿತು. ಇದೀಗ ಸಿಎಂ ಸಿದ್ದರಾಮಯ್ಯ ಮೇಲೆ ಗುರಿಯಾಗಿಸಿ ಅಧಿಕಾರವನ್ನು ಚಲಾಯಿಸಲು ಮುಂದಾಗಿದೆ ಎಂದು ಬೇಸರ ವ್ಯಕ್ತ ಪಡಿಸಿದ್ದಾರೆ. ಕಾಂಗ್ರೆಸ್ 136 ಶಾಸಕರು, ಕಾರ್ಯಕರ್ತರು, ಕೋಟ್ಯಂತರ ಅಭಿಮಾನಿಗಳು ಅಹಿಂದ ನಾಯಕನ ಬೆನ್ನಿಗೆ ನಿಂತಿದ್ದಾರೆ. ಯಾವುದೇ ಕಾರಣಕ್ಕೂ ಸಿಎಂ ರಾಜೀನಾಮೆ ನೀಡಬಾರದು. ಕೂಡಲೇ ರಾಜ್ಯಪಾಲರು ಆದೇಶ ಹಿಂಪಡೆಯಬೇಕು. ಕೇಂದ್ರ ಸರಕಾರ ಕೈಗೊಂಬೆಯಂತೆ ವರ್ತಿಸಬಾರದು ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರವಾಸಿ ತಾಣ ಆಯ್ಕೆಗೆ ಓಟ್ ಮಾಡಲು ಮನವಿ

ವಿಜಯಪುರ: ಜಿಲ್ಲೆಯಲ್ಲಿರುವ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಸಾರ್ವಜನಿಕರಿಗೆ ಸುವರ್ಣಾವಕಾಶವಿದ್ದು, ಜಿಲ್ಲೆಯ ಪ್ರವಾಸಿ ತಾಣಗಳನ್ನು ಆದ್ಯತಾ ಪ್ರವಾಸಿ ತಾಣಗಳನ್ನಾಗಿ ಆಯ್ಕೆ

ಗೊಳ್ಳುವಂತೆ ಮಾಡಲು https://innovationindia.mygov.in/dekho-apna-desh/ ಲಿಂಕ್ ಮೂ ಲಕ ಜಿಲ್ಲೆಯ ಪ್ರವಾಸಿಗರು, ಸಾರ್ವಜ ನಿಕರು ಓಟ್ ಮಾಡುವಂತೆ ಜಿಲ್ಲಾಧಿಕಾರಿ ಟಿ.ಭೂಬಾಲನ್ ಮನವಿ ಮಾಡಿಕೊಂಡಿ ದ್ದಾರೆ ಎಂದು ಪ್ರವಾಸೋದ್ಯಮ ಇಲಾಖೆ ಉಪನಿರ್ದೇಶಕರು ತಿಳಿಸಿದ್ದಾರೆ. ಪ್ರವಾಸೋದ್ಯಮವನ್ನು ಮೇಲ್ದರ್ಜೆಗೇರಿಸಲು ಹಾಗೂ ಎಲ್ಲ ವರ್ಗಗಳಾದ ಧಾರ್ಮಿಕ, ಸಾಂಸ್ಕೃತಿಕ, ಪಾರಂಪರಿಕ, ನೈಸರ್ಗಿಕ ಹಾಗೂ ವನ್ಯಜೀವಿ ಮತ್ತು ಸಾಹಸ ಚಟುವಟಿಕೆಗಳು ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಪ್ರವಾಸಿಗರ ದೃಷ್ಟಿಕೋನದಲ್ಲಿ ಪ್ರಮುಖ ಪ್ರವಾಸಿ ತಾಣಗಳನ್ನು ಗುರುತಿಸಿ ಮೇಲ್ದರ್ಜೆಯಲ್ಲಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದಿಂದ ದೇಖೋ ಅಪನಾ ದೇಶ People's Choice2024 ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಓಟ್ ಮಾಡಲು ಅ. 15 ಕೊನೆಯ ದಿನ. ಜಿಲ್ಲೆಯ ಪ್ರವಾಸಿ ತಾಣಗಳನ್ನು ವಿಶ್ವದರ್ಜೆಯಲ್ಲಿ ಸೇರ್ಪಡೆಗೊಳಿಸಲು ಪ್ರವಾಸಿಗರು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಲಿಂಕ್‌ನ ಮೂಲಕ ಓಟ್ ಮಾಡುವಂತೆ ತಿಳಿಸಿದೆ.

ಸಿಎಂ ಜನಪ್ರಿಯತೆ ಕುಗ್ಗಿಸಲು ಕುತಂತ್ರ

ಹೂವಿನಹಿಪ್ಪರಗಿ: ಸಿಎಂ ವಿರುದ್ಧ ಬಿಜೆಪಿ ರಾಜಕೀಯ ಪ್ರೇರಿತವಾಗಿ ಮಾಡಿರುವ ಆರೋಪವನ್ನೇ ಆಧಾರವಾಗಿಟ್ಟು ಕೊಂಡು ಪ್ರಾಸಿಕ್ಯೂಷನ್ ಗೆ ಅನುಮತಿ ನೀಡಿರುವುದು ಸರಿಯಲ್ಲ ಎಂದು ಕೆಪಿಸಿಸಿ

ರಾಜ್ಯ ಪ್ರಧಾನಕಾರ್ಯ ದರ್ಶಿ ಡಾ. ಪ್ರಭುಗೌಡ ಲಿಂಗಧಳ್ಳಿ (ಚಬನೂರ) ಹೇಳಿದರು. ಹೂವಿನ ಹಿಪ್ಪರಗಿಯಲ್ಲಿ ಪತ್ರಕರ್ತರನ್ನ ಉದ್ದೇಶಿಸಿ ಮಾತನಾಡಿ, ರಾಜ್ಯಪಾಲರು ಇಷ್ಟು ಕೀಳುಮ ಟ್ಟಕ್ಕೆ ಇಳಿಯುತ್ತಾರೆ ಎಂದು ನಾವು ನಿರೀಕ್ಷಿಸಿರಲಿಲ್ಲ ಆದರೆ ರಾಜಕೀಯ ದ್ವೇಷ ಮತ್ತು ಒತ್ತಡಕ್ಕೆ ಮಣಿದು ರಾಜ್ಯಪಾಲರು ಅನುಮತಿ ನೀಡಿರುವುದು ಇದು ಸರಕಾರವನ್ನು ಅಸ್ಥಿರಗೊಳಿಸುವ ಹುನ್ನಾರ. ಕಾಂಗ್ರೆಸ್ ಇದರ ವಿರುದ್ಧ ಹೋರಾಟ ಮಾಡುತ್ತದೆ ಎಂದು ಸ್ಪಷ್ಟಪಡಿಸಿದರು. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ನಂಬಿಕೆ ಇಲ್ಲದ ಬಿಜೆಪಿ, ಚುನಾಯಿತ ಸರಕಾರಗಳನ್ನು ಬೀಳಿಸುವ ಕೆಲಸ ಮಾಡುತ್ತಿದೆ. ಕರ್ನಾಟಕದಲ್ಲಿ 2 ಬಾರಿ ವಾಮ ಮಾರ್ಗದಿಂದ ಆಡಳಿತಕ್ಕೆ ಬಂದ ಬಿಜೆಪಿ ಮತ್ತೆ ತನ್ನ ಹಳೆ ಚಾಳಿ ಮುಂದುವರಿಸಿದೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಮಾರಕ ಜನಪರವಾದ ಆಡಳಿತ ನೀಡುತ್ತಾ, ಸಾಮಾಜಿಕ ನ್ಯಾಯಕ್ಕೆ ಶ್ರಮಿಸುತ್ತಿರುವ ಸಿಎಂ ಅವರ ಜನಪ್ರಿಯತೆಯನ್ನು ಕುಗ್ಗಿಸಲು ಮತ್ತು ಕಾಂಗ್ರೆಸ್ ಉರುಳಿಸಲು ಬಿಜೆಪಿ ಅದರಲ್ಲೂ ಪ್ರಧಾನಿ ಮೋದಿ ಮತ್ತು ಗೃಹ ಸಚಿವ ಅಮಿತ ಶಾ ರಾಜ್ಯಪಾಲರ ಮೂಲಕ ಷಡ್ಯಂತ್ರ ರೂಪಿಸಿದ್ದಾರೆ ಎಂದರು.

ಆಲಮಟ್ಟಿಗೆ 519.6 ಮೀ ನೀರು ಸಂಗ್ರಹ

ಆಲಮಟ್ಟಿ: ಜಲಾಶಯದಲ್ಲಿ ಶನಿವಾರ ತನ್ನ ಗರಿಷ್ಠ ಮಟ್ಟ 519.60 ಮೀವರೆಗೆ ನೀರು ಸಂಗ್ರಹಿಸಲಾಗಿದೆ. ಇದರಿಂದ ಈ ಬಾರಿ ಯಾವುದೇ ವಿಘ್ನವಿಲ್ಲದೇ ಭರ್ತಿಯಾದಂತಾಗಿದೆ. ಜಲಾಶಯದಲಿ ಗರಿಷ್ಠ ಸಂಗ್ರಹ ಸಾಮರ್ಥ್ಯದ 123.081 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ. ರೈತರಲ್ಲಿ ಮಂದಹಾಸ ಮೂಡಿದೆ. ಜೂನ್ 7 ರಂದು ಜಲಾಶಯದ ಒಳಹರಿವು ಆರಂಭಗೊಂಡಿದ್ದು, ಜುಲೈ ಕೊನೆಯ ವಾರದಲ್ಲಿ ಭಾರಿ ಪ್ರಮಾಣದಲ್ಲಿ ನೀರು ಹರಿದು ಬಂದರೂ, ಪ್ರವಾಹ ಮುಂಜಾಗ್ರತೆಯ ಕ್ರಮವಾಗಿ ಜಲಾಶಯವನ್ನು ಭರ್ತಿ ಮಾಡಿರಲಿಲ್ಲ. ಈ ಬಾರಿ ಎಲ್ಲಿಯೂ ಹೆಚ್ಚು ಪ್ರವಾಹ ಸೃಷ್ಟಿಯಾಗದಂತೆ ವ್ಯವಸ್ಥಿತವಾಗಿ ಜಲಾಶಯದ ನೀರಿನ ನಿರ್ವಹಣೆಯನ್ನು ಮಾಡಲಾಗಿದೆ. ಅದಕ್ಕಾಗಿ ಅನೇಕ ಅಧಿಕಾರಿಗಳು ಹಗಲು ರಾತ್ರಿ ಕಾರ್ಯನಿರ್ವಹಿಸಿದ್ದು ವಿಶೇಷ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಆಲಮಟ್ಟಿಗೆ ಆಗಮಿಸಿ ಕೃಷ್ಣೆಯ ಜಲಧಿಗೆ ಆ. 21 ಕ್ಕೆ ಬಾಗಿನ ಅರ್ಪಿಸಲಿದ್ದಾರೆ. ಈ ಮುಂಗಾರು ಹಂಗಾಮಿನಲ್ಲಿ ಆಲಮಟ್ಟಿ ಜಲಾಶಯಕ್ಕೆ 566 ಟಿಎಂಸಿ ನೀರು ಹರಿದು ಬಂದಿದೆ. ಮಹಾರಾಷ್ಟ್ರದ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುರಿದ ಭಾರಿ ಮಳೆ ಹಾಗೂ ಘಟಪ್ರಭಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿಯೂ ಸುರಿದ ಮಳೆಯಿಂದಾಗಿ ಕೇವಲ ಒಂದೇ ತಿಂಗಳಲ್ಲಿ ಹರಿದು ಬಂದಿದ್ದು ಭರ್ತಿ 566 ಟಿಎಂಸಿ ಅಡಿ ನೀರು ಸಂಗ್ರಹವಾಗಿದೆ.

ಸಮಾಚಾರ ಸಣ್ಣದಲ್ಲ

ಶತಕ ಬಾರಿಸಿದ 18ರ ಯುವತಿ

ಕೊಲಂಬೊ: ಶ್ರೀಲಂಕಾ ಪರ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸೆಂಚುರಿ ಸಿಡಿಸಿದ ಅತ್ಯಂತ ಕಿರಿಯ ಬ್ಯಾಟರ್ ಎಂಬ ದಾಖಲೆಯನ್ನು ವಿಶ್ಮಿ ಗುಣರತ್ನೆ ಬರೆದಿದ್ದಾರೆ.

18 ವಯಸ್ಸಿನ ಅವರು, ಶ್ರೀಲಂಕಾ ಬ್ಯಾಟ್ಸ್‌ಮನ್‌ಗಳ ಸೆಂಚುರಿ ದಾಖಲೆಯನ್ನು ಅಳಿಸಿ ಹಾಕಿದ್ದು, ವ್ವಿ ಕ್ರಿಕೆಟ್‌ನ ಗಮನ ಸೆಳೆದಿದ್ದಾರೆ. ಬೆಲ್ಫಾಸ್ಟ್‌ನ ಸಿವಿಲ್ ಸರ್ವೀಸ್ ಕ್ರಿಕೆಟ್ ಕ್ಲಬ್ ಮೈದಾನದಲ್ಲಿ ನಡೆದ ಐರ್ಲೆಂಡ್ ವಿರುದ್ಧದ ಮೊದಲ ಏಕದಿನ ಪಂದ್ಯದಲ್ಲಿ ಲಂಕಾ ಪರ ಆರಂಭಿಕಳಾಗಿ ಕಣಕ್ಕಿಳಿದ ವಿಶ್ಮಿ ಗುಣರತ್ನೆ 98 ಎಸೆತಗಳಲ್ಲಿ 3 ಭರ್ಜರಿ ಸಿಕ್ಸ್ ಹಾಗೂ 9 ಫೋರ್‌ಗಳೊಂದಿಗೆ 101 ರನ್ ಬಾರಿಸಿದ್ದರು. ಈ ಶತಕದೊಂದಿಗೆ ಶ್ರೀಲಂಕಾ ಪರ ಏಕದಿನ ಕ್ರಿಕೆಟ್‌ನಲ್ಲಿ ಶತಕ ಸಿಡಿಸಿದ 2ನೇ ಆಟಗಾರ್ತಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ನೀರಜ್ ಬ್ರ್ಯಾಂಡ್ ಮೌಲ್ಯ ಭಾರಿ ಏರಿಕೆ

ದೆಹಲಿ: ವರ್ಷದ ಅಂತ್ಯದ ವೇಳೆಗೆ ನೀರಜ್ ಚೋಪ್ರಾ ಅವರ ಬ್ರ್ಯಾಂಡ್ ಮೌಲ್ಯವು ಸುಮಾರು 50 ಪ್ರತಿಶತದಷ್ಟು ಹೆಚ್ಚಾಗಬಹುದು ಎಂದು ಹೇಳುತ್ತದೆ. ಪ್ರಸ್ತುತ ನೀರಜ್ ಚೋಪ್ರಾ ಅವರ ಬ್ರಾಂಡ್ ಮೌಲ್ಯ

29.6 ಮಿಲಿಯನ್ ಡಾಲರ್ ಅಂದರೆ 248 ಕೋಟಿ ಇದ್ದು, ಈ ವರ್ಷದ ಅಂತ್ಯದ ವೇಳೆಗೆ ಅವರ ಬ್ರಾಂಡ್ ಮೌಲ್ಯವು 50 ಪ್ರತಿಶತದಷ್ಟು ಹೆಚ್ಚಾದರೆ ಅದು 377 ಕೋಟಿ ರೂ.ಗೆ ಏರಿಕೆಯಾಗಲಿದೆ ಎಂದು ಮನಿ ಕಂಟ್ರೋಲ್ ವರದಿ ಮಾಡಿದೆ. ಪ್ಯಾರಿಸ್ ಒಲಿಂಪಿಕ್ಸ್ ಜಾವೆಲಿನ್ ಥ್ರೋ ವಿಭಾಗದಲ್ಲಿ 89.45 ಮೀಟರ್ ದೂರ ಜಾವೆಲಿನ್ ಎಸೆದಿದ್ದ ನೀರಜ್ ಚೋಪ್ರಾ, ಬೆಳ್ಳಿ ಪದಕಕ್ಕೆ ಕೊರಳೊಡ್ಡಿದ್ದರು. ಇದರೊಂದಿಗೆ ಸತತ ಎರಡನೇ ಬಾರಿಗೆ ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದ ಸಾಧನೆಯನ್ನು ನೀರಜ್ ಮಾಡಿದ್ದರು. ಕಳೆದ ಒಲಿಂಪಿಕ್ಸ್‌ನಲ್ಲಿ ಚಿನ್ನದ ಪಕದ ಗೆದ್ದಿದ್ದ ನೀರಜ್‌ಗೆ ಈ ಒಲಿಂಪಿಕ್ಸ್‌ನಲ್ಲಿ ಮತ್ತೆ ಆ ಸಾಧನೆ ಮಾಡಲು ಸಾಧ್ಯವಾಗಲಿಲ್ಲ. ಆದಾಗ್ಯೂ, ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಪದಕ ಗೆದ್ದ ನೀರಜ್ ಮತ್ತೊಮ್ಮೆ ದೇಶದ ಮನೆ ಮಾತನಾಗಿದ್ದಾರೆ. ಬೆಳ್ಳಿ ಗೆದ್ದ ನೀರಜ್ ಮೇಲೆ ಬಹುಮಾನದ ಸುರಿಮಳೆಯೂ ಆಗುತ್ತಿದೆ. ಇದರ ಜತೆಗೆ ನೀರಜ್ ಅವರ ನಿವ್ವಳ ಮೌಲ್ಯ, ಬ್ರಾಂಡ್ ಮೌಲ್ಯದಲ್ಲಿ ಹೆಚ್ಚಳವಾಗಲಿದೆ ಎಂದು ವರದಿಯಾಗಿದೆ.

ಮಹಾರಾಜ ಟ್ರೋಫಿ: ಬೆಂಗಳೂರಿಗೆ ಎರಡನೇ ಗೆಲುವು | ಮನೋಜ್ ಹೋರಾಟ ವ್ಯರ್ಥ

ಭುವನ್ ಆಟಕ್ಕೆ ಬಸವಳಿದ ಮೈಸೂರು

ಬೆಂಗಳೂರು: ಭುವನ್ ರಾಜು ಹಾಗೂ ಸೂರಜ್ ಅಹುಜಾ ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಮಹಾರಾಜ ಟ್ರೋಫಿ ಟೂರ್ನಿಯ ಲೀಗ್ ಹಂತದ ಪಂದ್ಯದಲ್ಲಿ ಬೆಂಗಳೂರು ಬ್ಲಾಸ್ಟರ್ಸ್ ತಂಡವು ಮೈಸೂರು ವಾರಿಯರ್ಸ್ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ. ಆ ಮೂಲಕ ಬೆಂಗಳೂರು ತಂಡ ತನ್ನ ಗೆಲುವಿನ ನಾಗಾಲೋಟವನ್ನು ಮುಂದು ವರೆಸಿದ್ದು, ಪ್ಲೇಆಫ್ ಹಂತ ಇನ್ನಷ್ಟು ಸರಳ ಮಾಡಿಕೊಂಡಿದೆ.

ಕೆಎಸ್‌ಸಿಎ ಸಾರಥ್ಯದಲ್ಲಿ ನಡೆಯುವ ಮಹಾರಾಜ ಟೂರ್ನಿ ಆರಂಭವಾಗಿದೆ. ವಿವಿಧ ಜಿಲ್ಲೆಗಳ ಒಟ್ಟು ಆರು ತಂಡಗಳು ಇದರಲ್ಲಿ ಭಾಗಿಯಾಗಿವೆ. ಮೊದಲ ಪಂದ್ಯದಲ್ಲಿ ಗುಲ್ಬರ್ಗಾ ವಿರುದ್ಧ ಭಾರೀ ಗೆಲುವು ಸಾಧಿಸಿದ್ದ ಮಯಾಂಕ್ ಪಡೆ ಇದೀಗ ನಾಯರ್ ಪಡೆ ವಿರುದ್ಧವೂ ಗೆಲುವು ಸಾಧಿಸಿದೆ. ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಮಹಾರಾಜ ಟೂರ್ನಿಯ ಮೈಸೂರು ಹಾಗೂ ಬೆಂಗಳೂರು ನಡುವಿನ ಪಂದ್ಯದ ವೇಳೆ ಮಳೆ ಬಂದ ಕಾರಣ ಪಂದ್ಯವನ್ನು 18 ಓವರ್‌ಗೆ ಇಳಿಸಲಾಯಿತು. ನಿಗದಿತ ಓವರ್‌ನ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ತಂಡ 6 ವಿಕೆಟ್ ನಷ್ಟಕ್ಕೆ 182 ರನ್ ಗಳಿಸಿತು. ಅದನ್ನು ಬೆನ್ನುಹತ್ತಿದ ಬೆಂಗಳೂರು ನಿಗದಿತ 18 ಓವರ್‌ಗಳಲ್ಲಿ 183 ರನ್ ಬಾರಿಸಿ ಗೆಲುವು ದಾಖಲಿಸಿತು.

ಮತ್ತೆ ಸಿಡಿದ ಮನೋಜ್: ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮೈಸೂರು ತಂಡಕ್ಕೆ ಸ್ಫೋಟಕ ಆರಂಭ ಸಿಕ್ಕಿತು. ಆರಂಭಿಕ ಕೋದಂಡ ಅಜಿತ್ ಅವರು ಕೇವಲ 10 ಎಸೆತಗಳಲ್ಲಿ 27 ರನ್ ಬಾರಿಸಿ ಉತ್ತಮ ಆರಂಭ ನೀಡಿದರು. ಆದರೆ ಇನ್ನೋರ್ವ ಆರಂಭಿಕ ಕಾರ್ತಿ ಅವರು 12 ಎಸೆತಗಳಲ್ಲಿ 12 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. 27 ರನ್ ಗಳಿಸಿದ್ದ ಅಜಿತ್ ಅವರೂ ಸಹ ವಿಕೆಟ್ ಒಪ್ಪಿಸಿದರು. ನಾಯಕ ಕರುಣ್ ನಾಯರ್ ಅವರು 14 ರನ್ ಬಾರಿಸಿ ರನೌಟ್‌ಗೆ ಬಲಿಯಾದರು. ರಾಹುಲ್ ದ್ರಾವಿಡ್ ಅವರ

ಸ್ಕೋರ್

ಮೈಸೂರು: 182/6, ಮನೋಜ್ 58★, ಹರ್ಷಿತ್ 50 ಗಣೇಶ್ವರ್ 25/4
ಬೆಂಗಳೂರು: 183/6 ಭುವನ್ 51, ಅಹುಜಾ 39, ವಿದ್ಯಾಧರ್ 32/2

ಪುತ್ರ ಸುಮೀತ್ ಅವರು ಭರ್ಜರಿ ಸಿಕ್ಸರ್ ಬಾರಿಸಿ ನೀರಿಕ್ಷೆ ಮೂಡಿಸಿದ್ದರು. ಆದರೆ 7 ರನ್‌ಗೆ ವಿಕೆಟ್ ಒಪ್ಪಿಸಿದರು.

ಮಿಂಚಿದ ಭುವನ್, ಅಹುಜಾ

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಬೆಂಗಳೂರು ತಂಡಕ್ಕೂ ಸ್ಫೋಟಕ ಆರಂಭ ಸಿಕ್ಕಿತು. ಆರಂಭಿಕ ಚೇತನ್ ಅವರು 25 ಎಸೆತದಲ್ಲಿ 33 ರನ್ ಗಳಿಸಿ ಸ್ಫೋಟಕ ಆರಂಭ ಒದಗಿಸಿದರು. ಆದರೆ ಇನ್ನೊಂದೆಡೆ ನಾಯಕ ಮಯಾಂಕ ಅಗರ್ವಾಲ್ ಅವರು 1 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ಜತೆಗೂಡಿದ ಭುವನ್ ಹಾಗೂ ಅಹುಜಾ ಅವರು ಜವಾಬ್ದಾರಿಯುತ ಬ್ಯಾಟಿಂಗ್ ಮಾಡಿದರು. ಒಂದೆಡೆ ಬಲಿಷ್ಠರ ವಿಕೆಟ್ ಪಡೆದು ಮ್ಯಾಚ್‌ಗೆ ವಾಪಾಸ್ಸಾಗಿದ್ದ ಮೈಸೂರು ತಂಡಕ್ಕೆ ಸಮರ್ಥ ಉತ್ತರ ನೀಡಿದ ಈ ಜೋಡಿ ಮೈಸೂರು ಬೌಲರ್‌ಗಳನ್ನು ಮನ ಬಂದಂತೆ ದಂಡಿಸಿದರು. ಅಹುಜಾ ಕೇವಲ 18 ಎಸೆತಗಳಲ್ಲಿ 39 ರನ್ ಬಾರಿಸಿ ಮಿಂಚಿದರೆ, ಭುವನ್ ಅವರು 24 ಎಸೆತಗಳಲ್ಲಿ 51 ರನ್ ಬಾರಿಸುವ ಮೂಲಕ ಪಂದ್ಯವನ್ನು ತಮ್ಮೆಡೆಗೆ ಸೆಳೆದುಕೊಂಡರು. ಉಳಿದಂತೆ ಶುಭಂಗ್ 27 ರನ್ ಬಾರಿಸಿ 183 ರನ್ ತಲುಪಿಸಿದರು.

ಸುಮೀತ್ ಕುಮಾರ್ ಅವರು ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಆದರೆ ಈ ವೇಳೆ ಜತೆಗೂಡಿದ ಹರ್ಷಿಲ್ ಹಾಗೂ ಕಳೆದ ಮ್ಯಾಚ್‌ನ ಹೀರೋ ಮನೋಜ್ ಭಾಂಡಗೆ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಬೆಂಗಳೂರು ಬೌಲರ್‌ಗಳನ್ನು ಮನ ಬಂದಂತೆ ದಂಡಿಸಿದ ಈ ಜೋಡಿ, ತಂಡದ ಮೊತ್ತವನ್ನು 180ರ ಗಡಿ ದಾಟಿಸಿತು. ಹರ್ಷಿಲ್ 50 ರನ್ ಗಳಿಸಿದರೆ, ಮನೋಜ್ ಭಾಂಡಗೆ 58 ರನ್ ಗಳಿಸಿ ಅಜೇಯರಾಗಿ ಉಳಿದರು. ಈ ಇಬ್ಬರ ಭರ್ಜರಿ ಜತೆಯಾಟದಿಂದಾಗಿ ಮೈಸೂರು ತಂಡ 182 ರನ್ ಗಳಿಸಿತು. ಗಣೇಶ್ವರ್ 25ಕ್ಕೆ 4 ವಿಕೆಟ್ ಪಡೆದರು.

ಪಾಕ್: ಚಾಂಪಿಯನ್ಸ್ ಟ್ರೋಫಿಗೆ ಬಾಡಿಗೆ ಬೆಳಕು

ಇಸ್ಲಾಮಾಬಾದ್: 2025ರ ಚಾಂಪಿಯನ್ಸ್ ಟ್ರೋಫಿ ಆತಿಥ್ಯ ವಹಿಸಲಿರುವ ಪಾಕಿಸ್ತಾನ ಟೂರ್ನಿಗಾಗಿ ನಿರಂತರವಾಗಿ ತಯಾರಿ ನಡೆಸುತ್ತಿದೆ. ಫೆಬ್ರವರಿಯಲ್ಲಿ ಈ ಟೂರ್ನಿಯನ್ನು ಪಾಕಿಸ್ತಾನ ಆಯೋಜಿಸಲಿದೆ. ಇದಕ್ಕಾಗಿ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಹಣದ ಕೊರತೆ ಎದುರಿಸುತ್ತಿದೆ ಎನ್ನಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಹಣವನ್ನು ಉಳಿಸಲು ಪಿಸಿಬಿ ಮುಂದಾಗಿದ್ದು, ಕರಾಚಿ ಮತ್ತು ಲಾಹೋರ್ ಸ್ಟೇಡಿಯಂಗಳಿಗೆ ಫ್ಲಡ್‌ಲೈಟ್‌ಗಳನ್ನು ಬಾಡಿಗೆ ಪಡೆಯಲಿದೆ ಎಂದು ತಿಳಿದಬಂದಿದೆ.

ಚಾಂಪಿಯನ್ ಟ್ರೋಫಿಗಾಗಿ ಕರಾಚಿ ಮತ್ತು ಲಾಹೋರ್ ಸ್ಟೇಡಿಯಂನಲ್ಲಿರುವ ಹಳೆಯ ಫ್ಲಡ್‌ಲೈಟ್‌ಗಳನ್ನು ಬದಲಾಯಿಸಬೇಕಿದೆ. ಆದರೆ ಪಾಕಿಸ್ತಾನ ಹೊಸ ಫ್ಲಡ್‌ಲೈಟ್‌ಗಳನ್ನು ಖರೀದಿಸುವ ಬದಲು ಅವುಗಳನ್ನು ಒಂದು ವರ್ಷಕ್ಕೆ ಬಾಡಿಗೆಗೆ ಪಡೆಯಲು ನಿರ್ಧರಿಸಿದೆ. ಇದಲ್ಲದೆ, ಕರಾಚಿ ಮತ್ತು ಲಾಹೋರ್ ಸ್ಟೇಡಿಯಂಗಳಿಗೆ ಒಂದು ವರ್ಷಕ್ಕೆ ಫ್ಲಡ್‌ಲೈಟ್‌ಗಳನ್ನು ಬಾಡಿಗೆಗೆ ನೀಡಲು ಪಿಸಿಬಿ ಟೆಂಡರ್‌ಗಳನ್ನು ಆಹ್ವಾನಿಸಿದೆ ಎಂದು ವರದಿಯಾಗಿದೆ. ಕರಾಚಿ ಮತ್ತು ಲಾಹೋರ್ ಮೈದಾನದಲ್ಲಿ ಈಗಾಗಲೇ ಅಳವಡಿಸಲಾಗಿರುವ ಹಳೆಯ ಫ್ಲಡ್‌ಲೈಟ್‌ಗಳನ್ನು ತೆಗೆದು ಕ್ವೆಟ್ಟಾ ಮತ್ತು ರಾವಲ್‌ಪಿಂಡಿಯ ಕ್ರೀಡಾಂಗಣಗಳಲ್ಲಿ ಅಳವಡಿಸುವ ಬಗ್ಗೆ ಪಾಕಿಸ್ತಾನದ ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಇಷ್ಟೇ ಅಲ್ಲ, ಜನರೇಟರ್ ಬಾಡಿಗೆಗೂ ಪಿಸಿಬಿ ಮುಂದಾಗಿದೆ. ಕರಾಚಿ, ಲಾಹೋರ್, ರಾವಲ್‌ಪಿಂಡಿ, ಮುಲ್ತಾನ್, ಫೈಸಲಾಬಾದ್, ಅಬೋಟಾಬಾದ್, ಕ್ವೆಟ್ಟಾ, ಪೇಶಾವರ ಸ್ಟೇಡಿಯಂಗಳಿಗೆ ಜನರೇಟರ್‌ಗಳನ್ನು ಪೂರೈಸಲು ಪಿಸಿಬಿ ಟೆಂಡರ್ ಆಹ್ವಾನಿಸಿದೆ. ಸ್ಟೇಡಿಯಂಗಳಲ್ಲಿ ಲೋಡ್ ಶೆಡ್ಡಿಂಗ್ ಸಮಸ್ಯೆ ಹೆಚ್ಚಿರುವುದರಿಂದ ಪಂದ್ಯದ ವೇಳೆ ವಿದ್ಯುತ್ ವ್ಯತ್ಯಯವಾಗದಂತೆ ಜನರೇಟರ್‌ಗಳನ್ನು ಬಳಸಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಮಂಗಳೂರಿಗೆ ಮೊದಲನೇ ಗೆಲುವು | ಅಭಿನವ್ ಮನೋಹರ ಏಕಾಂಗಿ ಹೋರಾಟ ವ್ಯರ್ಥ

ಸಿಡಿದ ರೋಹನ್ ಪಾಟೀಲ್: ಶಿವಮೊಗ್ಗ ತತ್ತರ

ಬೆಂಗಳೂರು: ರೋಹನ್ ಹಾಗೂ ನೊರೋನ್ಹಾ ಅವರ ಸ್ಫೋಟಕ ಬ್ಯಾಟಿಂಗ್ ನೆರವಿನಿಂದ ಮಹಾರಾಜ ಟ್ರೋಫಿಯ ಲೀಗ್ ಹಂತದ ಪಂದ್ಯದಲ್ಲಿ ಮಂಗಳೂರು ಡ್ರ್ಯಾಗನ್ಸ್ ತಂಡ ಶಿವಮೊಗ್ಗ ತಂಡದ ವಿರುದ್ಧ ಭರ್ಜರಿ ಗೆಲುವು ಸಾಧಿಸಿದೆ.

ಟೂರ್ನಿ ಈಗಾಗಲೇ ರೋಚಕ ಹಂತಕ್ಕೆ ಬಂದಿದ್ದು, ಎಲ್ಲ ತಂಡಗಳೂ ಪ್ಲೇಆಫ್‌ನಲ್ಲಿ ಸ್ಥಾನ ಪಡೆಯಲು ಗುದ್ದಾಟ ನಡೆಸಿವೆ. ಬೆಂಗಳೂರು ತಂಡ ಆಡಿರುವ ಎರಡೂ ಪಂದ್ಯಗಳಲ್ಲಿ ಗೆದ್ದು ಮೊದಲನೇ ಸ್ಥಾನದಲ್ಲಿ ಇದ್ದರೆ, ಮಂಗಳೂರು ತಂಡ ಒಂದು ಸೋತು ಈ ಪಂದ್ಯದಲ್ಲಿ ಗೆಲ್ಲುವ ಮೂಲಕ ಮೂರನೇ ಸ್ಥಾನದಲ್ಲಿದೆ. ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ಲಾಯನ್ಸ್ ತಂಡ ಅಭಿನವ್ ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ 6 ವಿಕೆಟ್ ಕಳೆದುಕೊಂಡು 175 ರನ್ ಗಳಿಸಿತು. ಅದನ್ನು ಬೆನ್ನತ್ತಿದ ಮಂಗಳೂರು ರೋಹನ್ ಪಾಟೀಲ್ ಅವರು ಭರ್ಜರಿ ಬ್ಯಾಟಿಂಗ್‌ನಿಂದಾಗಿ 16.2 ಓವರ್‌ಗಳಲ್ಲೇ 178 ರನ್ ಬಾರಿಸಿ ಗೆಲುವು ಸಾಧಿಸಿತು.

ಬಿರುಸಿನ ಬ್ಯಾಟಿಂಗ್ ಮಾಡಿದ ಅಭಿನವ್ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಶಿವಮೊಗ್ಗ ತಂಡಕ್ಕೆ ನೀರಸ ಆರಂಭ ಸಿಕ್ಕಿತು. ಆರಂಭಿಕ ನಿಹಾಲ್ ಶೂನ್ಯಕ್ಕೆ ವಿಕೆಟ್ ಒಪ್ಪಿಸಿದರು. ಇನ್ನೋರ್ವ ಆರಂಭಿಕ ರೋಹಿತ್ ಅವರು 20 ಎಸೆತಗಳಲ್ಲಿ 24 ರನ್ ಬಾರಿಸಿ ವಿಕೆಟ್ ಒಪ್ಪಸಿದರು. ರಾಜ್‌ವೀರ್ 7 ರನ್ ಗಳಿಸಿ ವಿಕೆಟ್ ಒಪ್ಪಿಸದರು. ಆದರೆ ಈ ವೇಳೆ ಜತೆಗೂಡಿದ ಅಭಿನವ್ ಮನೋಹರ್ ಹಾಗೂ ದೃವ್ ಸ್ಫೋಟಕ ಬ್ಯಾಟಿಂಗ್ ಆರಂಭಿಸಿದರು. ಒಂದೆಡೆ ದೃವ್ ಸಿಂಗಲ್‌ಗಳ ಮೊರೆ ಹೋದರೆ, ಮತ್ತೊಂದೆಡೆ ಅಭಿನವವ ಅವರು ಸ್ಫೋಟಕ ಬ್ಯಾಟಿಂಗ್ ಮಾಡಿದರು. ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಅವರು, ಬರೋಬ್ಬರಿ 9 ಸಿಕ್ಸರ್ ಬಾರಿಸಿದರು. 34 ಎಸೆತಗಳಲ್ಲಿ 84 ರನ್ ಬಾರಿಸಿ ಅಜೇಯರಾಗಿ ಉಳಿದರು. ಉಳಿದಂತೆ ದೃವ್ 20 ಹಾಗೂ ಅವಿನಾಷ್ 22 ರನ್ ಗಳಿಸಿದರು. ಅಭಿನವ್ ಅವರ ಸ್ಫೋಟಕ ಬ್ಯಾಟಿಂಗ್‌ನಿಂದಾಗಿ ಶಿವಮೊಗ್ಗ 175 ರನ್ ಬಾರಿಸಿತು.

ಆರಂಭಿಕರ ಅಬ್ಬರ

ಸ್ಪರ್ಧಾತ್ಮಕ ಗುರಿ ಬೆನ್ನತ್ತಿದ ಮಂಗಳೂರು ತಂಡಕ್ಕೆ ಸ್ಫೋಟಕ ಆರಂಭ ಸಿಕ್ಕಿತು. ಆರಂಭಿಕರಾದ ರೋಹನ್ ಹಾಗೂ ನೊರೋನ್ಹಾ ಅವರು ಪಂದ್ಯವನ್ನು ಬೇಗ ಮುಗಿಸುವ ಉದ್ದೇಶದಿಂದ ಆಡಿದರು. ಆರಭಿಕ ಎಸೆತದಿಂದಲೂ ಮನ ಬಂದಂತೆ ದಂಡಿಸಿದ ಈ ಜೋಡಿ ಬಹುತೇಕ ಪಂದ್ಯವನ್ನು ಇಬ್ಬರೇ ಮುಗಿಸಿದರು. ನೊರೋನ್ಹಾ ಕೇವಲ 19 ಎಸೆತದಲ್ಲಿ 42 ರನ್ ಬಾರಿಸಿ ಔಟಾದರು. ಬಳಿಕ ಬಂದ ನಿಕಿನ್ ಅವರು ಅಲ್ಪ ನಿಧಾನಗತಿಯಾಟ ಪ್ರದರ್ಶಿಸಿದರು. ಅವರು 17 ರನ್ ಬಾರಿಸಿ ವಿಕೆಟ್ ಒಪ್ಪಿಸಿದರು. ಈ ವೇಳೆ ರೋಹನ್ 40 ಎಸೆತಗಳಲ್ಲಿ 70 ರನ್ ಬಾರಿಸಿ ಔಟಾದರು. ಬಳಿಕ ಬಂದ ಸಿದ್ಧಾರ್ಥ್ ದಂಡಿಸಲಾರಂಭಿಸಿದರು. ಅವರು ಕೇವಲ 19 ಎಸೆತದಲ್ಲಿ 39 ರನ್ ಬಾರಿಸುವ ಮೂಲಕ ಪಂದ್ಯವನ್ನು ಗೆಲ್ಲಿಸಿದರು.

ವಿದ್ಯಾಪತಿಯ ಕಿತಾಪತಿ

ಡಾಲಿ ಪಿಕ್ಚರ್ಸ್‌ನಲ್ಲಿ ಮೂಡಿಬರುವ ಸಿನಿಮಾಗಳೇ ಹಾಗೇ, ಅಲ್ಲಿ ಮನರಂಜನೆಗೆ ಕೊರತೆಯೇ ಇರುವುದಿಲ್ಲ. ಈಗ ಡಾಲಿ ಪಿಕ್ಚರ್ಸ್‌ನಲ್ಲಿ ವಿದ್ಯಾಪತಿ ಚಿತ್ರ ನಿರ್ಮಾಣವಾಗುತ್ತಿದೆ. ವಿದ್ಯಾಪತಿಯ ಮೇಕಿಂಗ್, ಫೋಟೋಗಳು ಈಗಾಗಲೇ ನಿರೀಕ್ಷೆ ಹೆಚ್ಚಿಸಿವೆ. ಇದೀಗ ಚಿತ್ರತಂಡ ವಿದ್ಯಾಪತಿಯ ಕಿತಾಪತಿ ಝಲಕ್ ರಿಲೀಸ್ ಮಾಡಿದ್ದು, ಮತ್ತಷ್ಟು ಥ್ರಿಲ್ ಹೆಚ್ಚಿಸಿದೆ. ವಿದ್ಯಾಪತಿಯಾಗಿ ನಾಗಭೂಷಣ್ ಅವತಾರ ತಾಳಿದ್ದು, ಅವರ ಹುಟ್ಟುಹಬ್ಬದ ವಿಶೇಷವಾಗಿ ಚಿತ್ರತಂಡ ವಿದ್ಯಾಪತಿ ಚಿತ್ರದ ಪ್ರೋಮೊ ಬಿಡುಗಡೆ ಮಾಡಿದೆ. ಜೇಬು ತುಂಬ ಕಾಸಿರೋನು ಕೊಟ್ಯಾಧಿಪತಿ..ನಿಮ್ಮನ್ನೆಲ್ಲ ಹೊಟ್ಟೆತುಂಬ ನಗಿಸುವವನೇ ನಮ್ಮ ವಿದ್ಯಾಪತಿ ಅಂತ ಚಿತ್ರತಂಡ ನಾಯಕನನ್ನು ಪರಿಚಯಿಸಿದೆ. ಕರಾಟೆ ಕಿಂಗ್ ವೇಷ ತೊಟ್ಟಿರುವ ನಾಗಭೂಷಣ್ ಮಾಡುವ ಕಿತಾಪತಿ ತುಣುಕು ಕಾಮಿಡಿ ಕಚಗುಳಿ ಇಡುತ್ತದೆ. ಕರಾಟೆ ಕಲಿಯುವ ವೇಳೆ ವಿದ್ಯಾಪತಿ ಮಾಡುವ ಯಡವಟ್ಟು ಪ್ರೇಕ್ಷಕರ ಮುಖದ ಮೇಲೆ ಮಂದಹಾಸ ಮೂಡಿಸುತ್ತದೆ. ಇಕ್ಕಟ್ ಸಿನಿಮಾವನ್ನು ನಿರ್ದೇಶಿಸಿದ್ದ ಇಶಾಂ ಮತ್ತು ಹಸೀಂ ಖಾನ್ ವಿದ್ಯಾಪತಿ ಸಿನಿಮಾವನ್ನು ನಿರ್ದೇಶನ ಮಾಡುತ್ತಿದ್ದಾರೆ. ನಾಗಭೂಷಣ್ ಈ ಚಿತ್ರದಲ್ಲಿ ವಿಭಿನ್ನ ಗೆಟಪ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದು, ಮಲೈಕಾ ವಸೂಪಾಲ್ ನಾಯಕಿಯಾಗಿ ಬಣ್ಣ ಹಚ್ಚುತ್ತಿದ್ದಾರೆ. ರಂಗಾಯಣ ರಘು ಕೂಡ ಮುಖ್ಯಪಾತ್ರದಲ್ಲಿ ಅಭಿನಯಿಸಿದ್ದಾರೆ. ಲವಿತ್ ಛಾಯಾಗ್ರಹಣ, ಡಾಸ್ ಮೋಡ್ ಸಂಗೀತ ನಿರ್ದೇಶನ, ಮುರುಳಿ ನೃತ್ಯ ನಿರ್ದೇಶನ, ಸುಜಿತ್ ವೆಂಕಟರಾಮಯ್ಯ ಸಾಹಿತ್ಯ, ಅರ್ಜುನ್ ಸಾಹಸ ನಿರ್ದೇಶನ ವಿದ್ಯಾಪತಿ ಸಿನಿಮಾಕ್ಕಿದೆ. ಸದ್ಯ ವಿದ್ಯಾಪತಿ ಶೂಟಿಂಗ್ ಭರದಿಂದ ಸಾಗುತ್ತಿದೆ.

ರಕ್ಕಸಪುರದೋಳ್ ರಾಜ್‌ಶೆಟ್ಟಿ

ಸಾಹಸ ನಿರ್ದೇಶಕರಾಗಿ ಪ್ರಸಿದ್ಧಿ ಪಡೆದಿರುವ ರವಿವರ್ಮ ಈಗ ನಿರ್ಮಾಪಕರಾಗಿಯೂ ಗುರುತಿಸಿಕೊಳ್ಳುತ್ತಿದ್ದಾರೆ. ಅವರ ಪ್ರಥಮ ನಿರ್ಮಾಣದಲ್ಲಿ ರಕ್ಕಸಪುರದೋಳ್ ಚಿತ್ರ ಮೂಡಿಬರುತ್ತಿದೆ. ರವಿ ಸಾರಂಗ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ರಾಜ್.ಬಿ.ಶೆಟ್ಟಿ ರಕ್ಕಪುರದೋಳ್ ಪ್ರವೇಶಿಸಿದ್ದಾರೆ. ಈ ಚಿತ್ರದ ಮುಹೂರ್ತ ಸಮಾರಂಭ ನೆಟಕಲ್ಲಪ್ಪ ಸರ್ಕಲ್‌ನ ವರಸಿದ್ಧಿ ವಿನಾಯಕ ದೇವಸ್ಥಾನದಲ್ಲಿ ನೆರವೇರಿತು. ನಟಿ ರಕ್ಷಿತಾ ಹಾಗೂ ನಿರ್ದೇಶಕ ಜೋಗಿ ಪ್ರೇಮ್ ಚಿತ್ರದ ಮೊದಲ ಸನ್ನಿವೇಶಕ್ಕೆ ಕ್ಲಾಪ್ ಮಾಡಿ ಶುಭಕೋರಿದರು.

ಮನುಷ್ಯನಲ್ಲಿರುವ ಒಳಿತು ಮತ್ತು ಕೆಡಕುಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ ಎಂದು ನಿರ್ದೇಶಕ ರವಿ ಸಾರಂಗ ಹೇಳಿದರು. ನಾಯಕಿಯಾಗಿ ಸ್ವಾತಿಷ್ಟ ಕೃಷ್ಣ ಅಭಿನಯಿಸುತ್ತಿದ್ದಾರೆ. ಬಿ.ಸುರೇಶ್, ನಟಿ ಅರ್ಚನಾ ಕೊಟ್ಟಿಗೆ, ಗೌರವ್ ಶೆಟ್ಟಿ, ಸಿದ್ದಣ್ಣ, ಸುಮಾ, ಅನಿರುದ್ ಭಟ್ ಮುಂತಾದವರು ತಾರಾಗಣದಲ್ಲಿದ್ದಾರೆ. ರಕ್ಕಸಪುರದೋಳ್ ಚಿತ್ರದ ಕಥೆ ತುಂಬಾ ಚೆನ್ನಾಗಿದೆ. ಜನರನ್ನು ಚಿತ್ರಮಂದಿರಕ್ಕೆ ಕರೆತರಲು ಬೇಕಾಗಿರುವಂತಹ ಸ್ಟೋರಿಯನ್ನು ನಿರ್ದೇಶಕ ರವಿ ಹೆಣೆದಿದ್ದಾರೆ. ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿಯ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಹಿಂದಿನ ಚಿತ್ರಗಳಿಗಿಂತ ಇಲ್ಲಿ ನನ್ನ ಪಾತ್ರ ಭಿನ್ನವಾಗಿದೆ ಎಂದು ರಾಜ್.ಬಿ.ಶೆಟ್ಟಿ ಹೇಳಿದರು. ಈ ಚಿತ್ರಕ್ಕೆ ಕ್ರಾಂತಿ ಕುಮಾರ್ ಸಂಭಾಷಣೆ ಬರೆಯುತ್ತಿದ್ದಾರೆ. ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ವಿಲಿಯಂ ಡೇವಿಡ್ ಛಾಯಾಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ, ಮೋಹನ್.ಬಿ.ಕೆರೆ ಕಲಾ ನಿರ್ದೇಶನ ಈ ಚಿತ್ರಕ್ಕಿದೆ.

ರಕ್ಕಸಪುರದೋಳ್ ಎಂದರೆ ರಾಕ್ಷಸರೆ ಇರುವ ಊರು ಎಂದು ಹೇಳಬಹುದು. ಮನುಷ್ಯನಲ್ಲಿ ಕೆಟ್ಟದು ಮತ್ತು ಒಳ್ಳೆಯದು ಎಂಬ ಎರಡು ಗುಣಗಳಿರುತ್ತವೆ. ಕೆಟ್ಟ ಗುಣಗಳನ್ನು ರಕ್ಕಸ ಎನ್ನಬಹುದು. ಒಳಿತು ಮತ್ತು ಕೆಡಕಿನ ನಡುವೆ ನಡೆಯುವ ಸಂಘರ್ಷದ ಕಥೆ ಇಲ್ಲಿದೆ. ಸದ್ಯದಲ್ಲಿಯೇ ಚಿತ್ರೀಕರಣ ಆರಂಭವಾಗಲಿದೆ.
-ಕೆ.ರವಿವರ್ಮ ನಿರ್ಮಾಪಕ



ಈ ಹಿಂದೆ ಧನ ಕಾಯೋನು ಎಂಬ ಸಿನಿಮಾ ತೆರೆಗೆ ಬಂದಿತ್ತು, ಅಂತೆಯೇ ಈಗ ಕುರಿ ಕಾಯೋನು ಶೀರ್ಷಿಕೆಯಲ್ಲಿ ಸಿನಿಮಾ ಸೆಟ್ಟೇರಿದೆ. ಕನ್ನಡದ ಹಲವು ಚಿತ್ರಗಳಲ್ಲಿ ಸಹಾಯಕ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದ ಮಹೇಶ್ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಸ್ವತಂತ್ರ ನಿರ್ದೇಶಕರಾಗಿ ಕಾಣಿಸಿಕೊಳ್ಳುತ್ತಿದ್ದಾರೆ, ಜತೆಗೆ ನಾಯಕನಾಗಿಯೂ ನಟಿಸುತ್ತಿದ್ದಾರೆ. ಶಾಸಕ ಬೈರತಿ ಬಸವರಾಜು ಚಿತ್ರದ ಶೀರ್ಷಿಕೆ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ಕುರಿ ಕಾಯಲು ರೆಡಿಯಾದ ಮಹೇಶ

ಕುರಿ ಕಾಯೋನು ಗ್ರಾಮೀಣ ಹಿನ್ನೆಲೆಯಲ್ಲಿ ಸಾಗುವ ಕಥೆಯನ್ನು ಒಳಗೊಂಡಿದೆ. ಈ ಚಿತ್ರದಲ್ಲಿ ನಾಯಕ ಮುಗ್ಧ, ಆತನಿಗೆ ತನ್ನ ಕುರಿಗಳನ್ನು ಬಿಟ್ಟರೆ ಹೊರಗಿನ ಪ್ರಪಂಚವೇ ಗೊತ್ತಿರುವುದಿಲ್ಲ. ಕುರಿಯನ್ನು ಜೀವದಂತೆ ಪ್ರೀತಿಸುತ್ತಾನೆ. ಆ ಕುರಿಯನ್ನು ಯಾರಾದರು ಕೆಣಕಿದಾಗ ಆತನೂ ಕೆರಳುತ್ತಾನೆ. ತನ್ನ ಕುರಿ ಕಳೆದುಹೋದಾಗ ವಿಚಲಿತನಾಗುತ್ತಾನೆ, ಹೀಗೆ ಸೆಂಟಿಮೆಂಟ್‌ನಲ್ಲಿ ಚಿತ್ರ ಸಾಗುತ್ತದೆ. ಗಣೇಶ ಚತುರ್ಥಿಗೆ ಚಿತ್ರದ ಮುಹೂರ್ತ ನೆರವೇರಲಿದ್ದು, ಕೋಲಾರ, ಅಂತರಗಂಗೆ, ಮಲೆಮಹಾದೇಶ್ವರ ಬೆಟ್ಟದ ಸುತ್ತಮುತ್ತ ಚಿತ್ರೀಕರಣ ನಡೆಸಲು ಚಿತ್ರತಂಡ ಯೋಜನೆ ಹಾಕಿಕೊಂಡಿದೆ. ಶಾಸಕ ಬೈರತಿ ಬಸವರಾಜು ಚಿತ್ರದ ವಿಶೇಷ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಕುರಿ ಕಾಯೋನು ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು ರಾಘವೇಂದ್ರ ಪ್ರಸಾದ್ ಸಂಗೀತ ಸಂಯೋಜಿಸುತ್ತಿದ್ದಾರೆ. ರಾಜೇಶ್, ಪ್ರಿಯಾ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

ಮಹೇಶ್ ಹಿಂದಿನಿಂದಲೂ ಪರಿಚಯ, ಅವರಲ್ಲಿ ಸಿನಿಮಾದಲ್ಲಿ ಸಾಧನೆ ಮಾಡಬೇಕು ಎಂಬ ಆಸೆಯಿತ್ತು. ಅದಕ್ಕಾಗಿ ಒಳ್ಳೆಯ ಕಥೆ ಬರೆದು ನನಗೆ ಹೇಳಿದರು. ನನಗೂ ಈ ಸ್ಟೋರಿ ಇಷ್ಟವಾಯಿತು, ಹಾಗಾಗಿ ನಿರ್ಮಾಣ ಮಾಡುತ್ತಿದ್ದೇನೆ. ಶ್ರೀಕೃಷ್ಣ, ಏಸು ಇವರೆಲ್ಲ ಕುರಿಗಾಹಿಗಳೇ ಆಗಿದ್ದರು. ಅದೇ ಕುರಿ ಕಾಯೋನು ಚಿತ್ರವನ್ನು ಮಹೇಶ್ ನಿರ್ದೇಶನ ಮಾಡುತ್ತಿದ್ದಾರೆ.
-ಪ್ರಿಯಾ ರಾಜೇಶ್ ನಿರ್ಮಾಪಕಿ

ಬಾಲ್ಯದಿಂದಲೂ ನನಗೆ ಸಿನಿಮಾ ಪ್ರೀತಿ. ಓಂ ಸಿನಿಮಾದಿಂದ ಶಿವಣ್ಣ, ಸುದೀಪ್, ಪುನೀತ್, ವಿಜಯ್ ಅವರ ಸಿನಿಮಾಗಳಲ್ಲಿ ಕಾರ್ಯನಿರ್ವಹಿಸಿದ್ದೇನೆ. ಒಳ್ಳೆಯ ಚಿತ್ರವನ್ನು ನಿರ್ದೇಶನ ಮಾಡುವ ಹಂಬಲವಿತ್ತು, ಅದಕ್ಕೆ ಈಗ ಕಾಲ ಕೂಡಿಬಂದಿದೆ. ಕುರಿ ಕಾಯೋನು ಹಳ್ಳಿಗಾಡಿನ ಕಥೆಯನ್ನು ಒಳಗೊಂಡಿದ್ದು, ಒಳ್ಳೆಯ ಸಂದೇಶವನ್ನು ಹೊತ್ತು ಬರಲಿದೆ.
-ಮಹೇಶ್ ನಿರ್ದೇಶಕ

ಟಗರು ಪಲ್ಯ ಸಿನಿಮಾ ಮೂಲಕ ಕನ್ನಡ ಚಿತ್ರರಂಗಕ್ಕೆ ಎಂಟ್ರಿಕೊಟ್ಟ ಪ್ರೇಮ್ ಪುತ್ರಿ ಅಮೃತಾ ಚೊಚ್ಚಲ ಚಿತ್ರದಲ್ಲಿಯೇ ಭರವಸೆ ಮೂಡಿಸಿದ್ದರು. ಅಮೃತಾ ಮುಂದೆ ಯಾವ ಸಿನಿಮಾದಲ್ಲಿ ನಟಿಸಬಹುದು ಎಂದು ಸಿನಿಪ್ರಿಯರು ಕಾಯುತ್ತಿದ್ದರು, ಈಗ ಅದಕ್ಕೆ ಉತ್ತರ ಸಿಕ್ಕಿದೆ. ಅಮೃತಾ ಮತ್ತೊಂದು ಹೊಸ ಸಿನಿಮಾದಲ್ಲಿ ನಟಿಸಲು ಸಮ್ಮತಿಸಿದ್ದಾರೆ. ನಿರ್ದೇಶಕ ಮಹೇಶ್ ಬಾಬು ನಿರ್ದೇಶನದಲ್ಲಿ ಸೆಟ್ಟೇರಿರುವ ಹೊಸ ಚಿತ್ರದಲ್ಲಿ ನಾಯಕಿಯಾಗಿ ನಟಿಸಲಿದ್ದು, ಸ್ಮೈಲ್ ಗುರು ರಕ್ಷಿತ್‌ಗೆ ಜೋಡಿಯಾಗಿ ಅಮೃತಾ ಬಣ್ಣಹಚ್ಚಲಿದ್ದಾರೆ. ಅಮೃತಾ ಪ್ರೇಮ್ ತಮ್ಮ ಪಾತ್ರಕ್ಕೆ ಬೇಕಾದ ತಯಾರಿಯೊಂದಿಗೆ ಚಿತ್ರತಂಡ ಸೇರಲಿದ್ದಾರೆ. ಧಾರಾವಾಹಿ, ರಿಯಾಲಿಟಿ ಶೋನಲ್ಲಿ

ಸ್ಮೈಲ್‌ಗುರು ಜತೆಯಾದ ಅಮೃತಾ

ಗುರುತಿಸಿಕೊಂಡಿದ್ದ ಸ್ಮೈಲ್‌ಗುರು ರಕ್ಷಿತ್ ಹೊಸ ಚಿತ್ರದ ಮೂಲಕ ನಾಯಕನಾಗಿ ಪರಿಚಿತರಾಗುತ್ತಿದ್ದಾರೆ. ಎಂಎಂಎಂ ಪಿಕ್ಚರ್ಸ್ ಹಾಗೂ ಎ ಕ್ಲಾಸ್ ಸಿನಿ ಫಿಲಂಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದೆ. ಅನೂಪ್ ಸೀಳಿನ್ ಸಂಗೀತ ನಿರ್ದೇಶನ, ಸತ್ಯ ಛಾಯಾಗ್ರಹಣ ನಿರ್ವಹಿಸಲಿದ್ದಾರೆ. ಸತೀಶ್ ಚಂದ್ರಯ್ಯ ಸಂಕಲನ ಈ ಚಿತ್ರಕ್ಕಿರಲಿದೆ. ಗುರು ರಕ್ಷಿತ್ ಕಥೆ ಬರೆದಿದ್ದು, ವಿಜಯ್ ಈಶ್ವರ್ ಸಂಭಾಷಣೆ ಒದಗಿಸಿದ್ದಾರೆ. ಸದ್ಯ ಚಿತ್ರದ ಚಿತ್ರೀಕರಣ ಭರದಿಂದ ಸಾಗುತ್ತಿದೆ.

ಅಮೃತಾ ಪ್ರೇಮ್ ನಾಯಕಿಯಾಗಿ ಅಭಿನಯಿಸಿದ್ದ ಟಗರು ಪಲ್ಯ ಸಿನಿಮಾ ವಿಶೇಷವಾಗಿಯೇ ಇತ್ತು. ಹಳ್ಳಿ ಹುಡುಗಿಯಾಗಿ ಅಮೃತಾ ಮೆಚ್ಚುವ ಅಭಿನಯ ತೋರಿದ್ದರು. ಈ ಚಿತ್ರದ ಮೂಲಕ ಸೌತ್ ಫಿಲಂ ಫೇರ್ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ. ದಕ್ಷಿಣ ಭಾರತದ ಸಿನಿಮಾಗಳಿಗೆ ವಿವಿಧ ವಿಭಾಗದಲ್ಲಿ ಪ್ರಶಸ್ತಿ ನೀಡಲಾಗುತ್ತದೆ. ಅಂತೆಯೇ ಕನ್ನಡದ ಟಗರು ಪಲ್ಯ ಚಿತ್ರದಲ್ಲಿ ನಟಿಸಿರುವ ನಟಿ ಅಮೃತಾ ಅತ್ಯುತ್ತಮ ಡೆಬ್ಯು ಪ್ರಶಸ್ತಿ ಪಡೆದುಕೊಂಡಿದ್ದಾರೆ.

ವಿಶ್ವವಾಣಿ
18.08.2024
ಭಾನುವಾರ

ವಿರಾಮ
ಓದುವ ಲೋಕಕ್ಕೆ ಓದುವ ನಿಲ್ದಾಣ

ಈ ತಾಣವು ಹಿಮಾಲಯದ ಮಡಿಲಲ್ಲಿದೆ. ಎತ್ತರ ಸುಮಾರು 17,150. ಜಗತ್ತಿನ ಅದೆಷ್ಟೋ ದೇಶಗಳ ಅತಿ ಎತ್ತರದ ಪರ್ವತವು ಇದಕ್ಕಿಂತ ಕಡಿಮೆ ಎತ್ತರದಲ್ಲಿದೆ! ಪರ್ವತಾರೋಹಿಗಳು ವಿಶೇಷ ಮುತುವರ್ಜಿಯಿಂದ ಅಂತಹ ಪರ್ವತಗಳನ್ನು ಏರುತ್ತಾರೆ. ಆದರೆ, ಹಿಮಾಚಲ ಪ್ರದೇಶದಲ್ಲಿರುವ ಶ್ರೀಖಂಡ ಮಹಾದೇವ ಯಾತ್ರೆಯನ್ನು ಸ್ಥಳೀಯ ಜನಸಾಮಾನ್ಯರು ಯಾವುದೇ ವಿಶೇಷ ಪರಿಕರಗಳಿಲ್ಲದೇ ಕೈಗೊಳ್ಳುತ್ತಾರೆ! ಆ ಎತ್ತರದಲ್ಲಿ, ಆಮ್ಲಜನಕದ ಕೊರತೆ ಇರುತ್ತದೆ. ಜತೆಗೆ, ಕೊನೆಯ ದಿನ, ಸುಮಾರು ಇಪ್ಪತ್ತು ಗಂಟೆಗಳ ನಡಿಗೆ! ಶ್ರೀಖಂಡ ಮಹಾದೇವದಲ್ಲಿ ಇರುವ ಶಿವಲಿಂಗವನ್ನು ನೋಡಲು ಹೋಗುವವರಿಗೆ ಅದು ಒಂದು ಯಾತ್ರೆ, ಹಿಮಾಲಯದ ಪರ್ವತ ಶ್ರೇಣಿಯ ಪ್ರಕೃತಿಯ ಸೌಂದರ್ಯವನ್ನು ಕಂಡು ಅದರಲ್ಲೇ ಮಿಂದೇಳುವವರಿಗೆ ಒಂದು ಅಪರೂಪದ ಚಾರಣ.

ಹಿಮಾಲಯದ ನಡುವೆ ಅಪೂರ್ವ ಅನುಭವ!

• ಗುರುರಾಜ ಶಾಸ್ತ್ರಿ

ಬಹುಷಃ ಕೈಲಾಸ – ಮಾನಸ ಸರೋವರ ಯಾತ್ರೆ ಮಾಡಿರುವ ಕೆಲವರಿಗೆ, ಅದರಲ್ಲೂ ಮುಖ್ಯವಾಗಿ ಆಸ್ತಿಕರಿಗೆ ಒಂದು ವಿಚಾರ ಚೆನ್ನಾಗಿ ಮನದಟ್ಟಾಗಿರುತ್ತದೆ. ಅದೇನೆಂದರೆ, ಹಿಮಾಲಯದಲ್ಲಿರುವ ಶಿವನ ಸಾನಿಧ್ಯವು ಸುಲಭವಾಗಿ ಸಿಗುವುದಿಲ್ಲ, ಕಷ್ಟಪಟ್ಟೇ ದರ್ಶನ ಮಾಡಬೇಕು ಎಂಬುದು. ನಾನು 2010ರಲ್ಲಿ ಕೈಲಾಸ ಮಾನಸ ಸರೋವರ ಯಾತ್ರೆ ಮಾಡಿದ್ದೆ, ಸುಮಾರು 28 ದಿನದ 100 ಕ್ಕೂ ಹೆಚ್ಚು ಕಿಲೋಮೀಟರ್ ಚಾರಣದ ತೀರ್ಥಯಾತ್ರೆ. ಆಗ ನಮ್ಮ ಗುಂಪಿನಲ್ಲಿದ್ದ ಗುಜರಾತ್ ಮತ್ತು ಉತ್ತರ ಭಾರತದ ಕೆಲವರು 'ಪಂಚ ಕೈಲಾಸಗಳ' ಬಗ್ಗೆ ತಿಳಿಸಿದ್ದರು. ಆ ಕುರಿತು ವಿಚಾರ ಸಂಗ್ರಹಿಸುತ್ತಲೇ ಇದ್ದೆ.

ಈ ವರ್ಷ ನನ್ನ ಗೆಳೆಯ ಚೇತನ್, ಶ್ರೀಖಂಡ ಮಹದೇವ ಯಾತ್ರೆಗೆ ಹೊರಟಿದ್ದೇನೆಂದು ತಿಳಿಸಿ ನನ್ನನ್ನೂ ಆಹ್ವಾನಿಸಿದ. ಸರಿ ಎಂದೆ. ಒಂದು ವಾಟ್ಸಾಪ್ ಗುಂಪು ಮಾಡಿ, ತಂಡದ ಎಲ್ಲರೂ ಆ ಯಾತ್ರೆಯ ಯೂಟ್ಯೂಬ್ ವೀಡಿಯೋಗಳ ಕೊಂಡಿಯನ್ನು ಹಾಕತೊಡಗಿದರು. ಒಂದೊಂದು ವೀಡಿಯೋವೂ ಭಯ ಹುಟ್ಟಿಸುವಂತಿತ್ತು. ಈ ಚಾರಣದಲ್ಲಿರುವ ಕಠಿಣತೆ, ಅದರಲ್ಲೂ ಮುಖ್ಯವಾಗಿ ಆಮ್ಲಜನಕದ ಕೊರತೆಯ ಬಗ್ಗೆಯೇ ಹೆಚ್ಚು ವಿವರವಿತ್ತು.

ಆದರೆ 65 ವರ್ಷ 70 ವರ್ಷದ ಕೆಲವು ವ್ಯಕ್ತಿಗಳು ಈ ಯಾತ್ರೆಯನ್ನು ಮಾಡಿರುವ ವೀಡಿಯೋ ನೋಡಿದಾಗ, ನಮ್ಮಿಂದಲೂ ಇದು ಸಾಧ್ಯವೆಂದು ಮಾನಸಿಕವಾಗಿ ತಯಾರಾಗಿಬಿಟ್ಟೆವು. ದೈಹಿಕವಾಗಿ ತಯಾರಾಗಲು ನಮಗೆ ಇದ್ದದ್ದು 30ರಿಂದ 45ದಿನ ಮಾತ್ರ. ನಾವೆಲ್ಲರೂ ಬೆಂಗಳೂರಿನ ಸಮತಟ್ಟಾದ ರಸ್ತೆಗಳಲ್ಲಿ ಸಾಕಷ್ಟು ದೂರ ಪ್ರತಿ ದಿನ ನಡೆದು, ತಯಾರಿ ನಡೆಸಿದೆವು.

ವರ್ಷದ 15 ದಿನ ಮಾತ್ರ

ಶ್ರೀಖಂಡ ಮಹದೇವ ಇರುವುದು ಹಿಮಾಚಲ ಪ್ರದೇಶದ ನಿರ್ಮಾಂಡ್ ಪ್ರಾಂತ್ಯದಲ್ಲಿ. ಶ್ರೀಖಂಡ ಮಹದೇವ ಟ್ರಸ್ಟಿನವರು ಪ್ರತಿ ವರ್ಷ ಜುಲೈ ತಿಂಗಳಿನಲ್ಲಿ 15 ದಿನ ಮಾತ್ರ ಇಲ್ಲಿನ ಯಾತ್ರೆಗೆ ಅನುವುಮಾಡಿಕೊಡುತ್ತಾರೆ. ಈ ಸಮಯದಲ್ಲಿ ಚಾರಣದ ದಾರಿಯುದ್ದಕ್ಕೂ ಅಲ್ಲಲ್ಲಿ ಉಳಿದುಕೊಳ್ಳಲು ಟೆಂಟ್ ಸೌಲಭ್ಯ, ಊಟದ ವ್ಯವಸ್ಥೆ, ವೈದ್ಯರ ಸೌಲಭ್ಯ ಎಲ್ಲವನ್ನೂ ಏರ್ಪಾಟುಮಾಡಿರುತ್ತಾರೆ. ಇದನ್ನುಳಿದಂತೆ, ಬೇರೆ ಸಮಯದಲ್ಲಿ ಖಾಸಗಿಯವರು ಈ ಯಾತ್ರೆಯನ್ನು ನಡೆಸುತ್ತಾರೆ. ಆದರೆ ಆಗ ಊಟ, ಟೆಂಟ್ ಎಲ್ಲವೂ ನಾವೇ ತೆಗೆದುಕೊಂಡು ಹೋಗಬೇಕಾಗುತ್ತದೆ. ಆದರೆ, ಮಳೆ, ಚಳಿ ಇರುವ ಸಮಯದಲ್ಲಿ ಈ ದಾರಿಯಲ್ಲಿ ನಡೆಯುವುದು ಜನಸಾಮಾನ್ಯರಿಗೆ ತೀರಾ ಅಪಾಯಕಾರಿ ಎನ್ನಬಹುದು.

ಚಂಡೀಗಡದಿಂದ ಶಿಮ್ಲಾ ಮೂಲಕ ಕಾರ್ ಅಥವಾ ಬಸ್ಸಿನಲ್ಲಿ 10 ಗಂಟೆಗಳ ಪ್ರಯಾಣ ಮಾಡಿ ಜಾವನ್ ಎಂಬ ಹಳ್ಳಿಯನ್ನು ತಲುಪಬೇಕು. ಶ್ರೀಖಂಡ ಯಾತ್ರೆಯ ಚಾರಣ ಆರಂಭವಾಗುವುದು ಈ ಜಾವನ್ ಎಂಬ ಹಳ್ಳಿಯಿಂದಲೇ. ಈ ಹಳ್ಳಿಯು ಸಮುದ್ರ ಮಟ್ಟದಿಂದ 6,600ಅಡಿ ಎತ್ತರದಲ್ಲಿದೆ. ಇಲ್ಲಿಂದ ನಾವು 17,150ಅಡಿ ಎತ್ತರದಲ್ಲಿರುವ ಮಹಾದೇವನನ್ನು ನೋಡಿ ಮತ್ತೆ ಇಲ್ಲಿಗೆ ವಾಪಸ್ ಬಂದರೆ ಚಾರಣ ಯಾತ್ರೆ ಸಂಪೂರ್ಣವಾದಂತೆ.

ಜಾವನ್‌ನಿಂದ 3 ಕಿಲೋಮೀಟರ್ ಚಾರಣ ಮಾಡಿದರೆ ಸಿಂಗಡ್ ಎಂಬ ಹಳ್ಳಿಯು ಸಿಗುತ್ತದೆ. ಇದೇ ನಾವು ನೋಡುವ ಕೊನೆಯ ಹಳ್ಳಿ. ಇಲ್ಲಿ ಕೆಲವು ಹೋಮ್‌ಸ್ಟೇಗಳಿವೆ. ನಮ್ಮ ಆನ್ ಲೈನ್ ರಿಜಿಸ್ಟ್ರೇಶನ್ ಮತ್ತು ಮೆಡಿಕಲ್ ಸರ್ಟಿಫಿಕೇಟ್ ಇಲ್ಲೇ ಪರಿಶೀಲಿಸುವರು. ಕೆಲವರು ಇಲ್ಲೇ ಬಂದು ರಿಜಿಸ್ಟ್ರೇಶನ್ ಮಾಡಿಸಿ, ಇಲ್ಲೇ ಆರೋಗ್ಯ ತಪಾಸಣೆ ಮಾಡಿಸಿ ಪ್ರಮಾಣ ಪತ್ರವನ್ನು ಪಡೆಯುವ ಸೌಲಭ್ಯವೂ ಇದೆ.

ಹಿಮಾಲಯ ವಿಷಯ ಬಂದಾಗ ದೂರವನ್ನು ಕಿಲೋಮೀಟರ್ ಅಳತೆಯಲ್ಲಿ ಅಳೆಯುವುದಕ್ಕಿಂತ ಸಮಯದ ಅಳತೆಯಲ್ಲಿ ಅಳೆಯುವುದು ಸೂಕ್ತ. ಉದಾಹರಣೆಗೆ, ಈ ದಾರಿಯ ಮಧ್ಯದಲ್ಲಿ ಸಿಗುವ 'ಕಾಳಿ ಟಾಪ್'ಒಂದು ದೊಡ್ಡ ಪರ್ವತದ ತುದಿಯಲ್ಲಿದೆ. ಪರ್ವತ ಹತ್ತಲು ಇಳಿಯಲು ಸುಮಾರು 4 ಗಂಟೆಗಳು ಬೇಕು, ಆದರೆ ಕ್ರಮಿಸುವ ದೂರ ಮಾತ್ರ ಒಂದರಿಂದ ಒಂದೂವರೆ ಕಿಲೋಮೀಟರ್ ಅಷ್ಟೇ.

ಅದೃಷ್ಟವಿದ್ದರೆ, ಮೋಡವಿಲ್ಲದಿದ್ದರೆ ದೂರದಲ್ಲಿ ನಿಂತಿರುವ ಶ್ರೀಖಂಡ ಮಹಾದೇವನನ್ನು ಒಂದು ರೂಪಾಯಿ ನಾಣ್ಯದಷ್ಟು ಗಾತ್ರದಲ್ಲಿ ನೋಡಬಹುದು.

ಮೊದಲ ದಿನ ತಚರುವಿನಲ್ಲಿ ಒಂದು ರಾತ್ರಿ ಕಳೆದು ಎರಡನೇ ದಿನ 12,200 ಅಡಿ ಎತ್ತರದಲ್ಲಿರುವ ಭೀಮ್ ತಲಾಯ್ ಎಂಬ ಜಾಗಕ್ಕೆ ನಮ್ಮ ಚಾರಣ. ಸುಮಾರು 12 ಗಂಟೆಗಳ ಚಾರಣದ ಮಧ್ಯೆ ಕಾಳಿ ಟಾಪ್ ಎಂಬ ಜಾಗಕ್ಕೆ ಹೋಗುತ್ತೇವೆ. ಒಂದು ಪರ್ವತದ ಮೇಲೆ ಕಾಳಿ ದೇವಸ್ಥಾನವಿದ್ದು (ಅರಳಿಕಟ್ಟೆಯ ಹಾಗೆ) ಮುಂದಿನ ಚಾರಣಕ್ಕೆ ಈ ಮಾತೆಯ ಆಶೀರ್ವಾದ ಅತಿ ಮುಖ್ಯ ಎಂಬುದು ನಂಬಿಕೆ. ಕಾಳಿ ಟಾಪ್‌ನಿಂದ ಸುಮಾರು ಎರಡು ಗಂಟೆಗಳ ಚಾರಣ ಮಾಡಿದರೆ ನಮಗೆ ಭೀಮ್‌ತಲಾಯ್ ಪ್ರದೇಶ ಸಿಗುತ್ತದೆ. ತಚರುವಿನ ಹಾಗೇ ಇಲ್ಲಿಯೂ ಟೆಂಟ್ ಮತ್ತು ಊಟದ ವ್ಯವಸ್ಥೆ ಇದೆ.

ಹಿಮ ನದಿಯ ಮೇಲೆ ನಡುಗೆ

ಮೂರನೇ ದಿನ ಭೀಮ್ ತಲಾಯ್‌ನಿಂದ 13000 ಅಡಿ ಎತ್ತರವಿರುವ ಭೀಮ್ ದ್ವಾರ್‌ಗೆ ಸುಮಾರು ಎಂಟು ಗಂಟೆಗಳ ಚಾರಣ. ಇಲ್ಲಿಯವರೆವಿಗೂ ನಾವು ಕಲ್ಲುಬಂಡೆಗಳ ಮೇಲೆ,

ಒಮ್ಮೆಗೇ ನಾಲ್ಕೈದು ಪರ್ವತಗಳು

ಮೊದಲ ದಿನ ಜಾವನ್‌ನಿಂದ ಸಿಂಗಡ್‌ಗೆ ಹೋಗಿ ಅಲ್ಲಿಂದ 11,318 ಅಡಿ ಎತ್ತರದಲ್ಲಿರುವ ತಚರು ಎಂಬ ಪ್ರದೇಶಕ್ಕೆ ಹೋಗಬೇಕು. ಇದು ಸುಮಾರು 10 ಗಂಟೆಗಳ ಚಾರಣ; ಮೊದಲ ಎರಡು ಗಂಟೆಗಳಲ್ಲಿ ಕನಿಷ್ಠವೆಂದರೂ 4ರಿಂದ 5 ಪರ್ವತಗಳನ್ನು ಹತ್ತಿ ಇಳಿದಿರುತ್ತೇವೆ ಮತ್ತು ನಂತರದ 8 ಗಂಟೆಗಳು ಕೇವಲ ಹತ್ತುತ್ತಲೇ ಇರುತ್ತೇವೆ. ತಚರುವಿನಲ್ಲಿ ತಾತ್ಕಾಲಿಕ ಟೆಂಟ್‌ಗಳನ್ನು ಹಾಕಿದ್ದು ಊಟ ವಸತಿ ಸೌಲಭ್ಯವಿರುತ್ತದೆ. ಇಲ್ಲಿ ಎಲ್ಲದರ ಬೆಲೆಯೂ ಸರ್ಕಾರವೇ ನಿರ್ಧರಿಸಿರುತ್ತದೆ. ಒಬ್ಬರಿಗೆ ಒಂದು ರಾತ್ರಿ ಉಳಿದುಕೊಳ್ಳಲು ಮತ್ತು ಆ ರಾತ್ರಿಯ ಊಟ ಸೇರಿ 400 ರೂಪಾಯಿಗಳು. ನಾಲ್ಕೈದು ಟೆಂಟುಗಳಿಗೆ ಸೇರಿ ಒಂದು ಶೌಚಾಲಯ. ಸ್ನಾನಕ್ಕೆ ಅವಕಾಶವಿಲ್ಲ. ಇಲ್ಲಿ ಲಂಗಾರ್ ಅಥವಾ ಭಂಡಾರವೆಂದು ಕರೆಯುವ ಉಚಿತ ಊಟದ ವ್ಯವಸ್ಥೆಯೂ ಇದೆ. ನಮಗೆ ಪರ್ವತಗಳ ಮಧ್ಯದಲ್ಲಿ ಕಡಿದು ಮಾಡಿದ್ದ ಪಾದಚಾರಿ ಮಾರ್ಗದಲ್ಲಿ, ಭಾರೀ ಎತ್ತರದ ಮರಗಳ ನಡುವೆ ಚಾರಣ ಮಾಡಿರುತ್ತೇವೆ. ಆದರೆ ಈ ದಿನ ಹಿಮನದಿ ಅಂದರೆ ಗ್ಲೇಶಿಯರ್ ಮೇಲೆ ನಡೆಯುವ ಹೊಸ ಅನುಭವ ಸಿಗುತ್ತದೆ.

ಭೀಮ್‌ದ್ವಾರ್ ಐದು ಫುಟ್‌ಬಾಲ್ ಕ್ರೀಡಾಂಗಣದಷ್ಟು ಗಾತ್ರವಿರುವ ಸಮತಟ್ಟಾದ ಪ್ರದೇಶ. ಇದರ ಸುತ್ತ 10ರಿಂದ 12 ಪರ್ವತಗಳಿದ್ದು, ಈ ಎಲ್ಲಾ ಪರ್ವತಗಳಿಂದಲೂ ಒಂದೊಂದು ಜಲಪಾತ ಬೀಳುತ್ತಿರುವುದು ನಾವು ಕಾಣಬಹುದು. ಈ ಜಲಪಾತಗಳ ನೀರು ಭೀಮದ್ವಾರ್ ಕಣಿವೆಯಲ್ಲಿ ಹರಿಯುವ ಭ್ಯಾಸ್ (ವ್ಯಾಸ) ನದಿಗೆ ಸೇರಿಕೊಳ್ಳುತ್ತದೆ. ಬಣ್ಣಬಣ್ಣದ ಹೂಗಳು, ಜಲಪಾತಗಳು, ಕೊರೆಯುತ್ತಿರುವ ನೀರಿನ ನದಿ, ಕ್ಷಣಕ್ಕೊಮ್ಮೆ ಪರ್ವತಗಳನ್ನೇ ಮಾಯವಾಗಿಸಿ ಹಾರಿಹೋಗುವ ಮೋಡಗಳು – ಆಹಾ! ಛಾಯಾಗ್ರಾಹಕರಿಗೆ ಹಾಗೂ ಪ್ರಕೃತಿ ಪ್ರಿಯರಿಗೆ ಇದೊಂದು ಸ್ವರ್ಗವೇ ಸರಿ.

→ ನಾಲ್ಕನೇ ಪುಟಕ್ಕೆ

ಬರುತ್ತಿದ್ದಾಳೆ ಹೊಸ ಪ್ರಿ'ಎಐ'ತಮೆ!

• ವಿಕ್ರಮ ಜೋಶಿ

ಮನುಷ್ಯನ ಭಾವನೆಯ ಸೂಕ್ಷ್ಮತೆಯು ನಿರಂತವಾಗಿ ಕಡಿಮೆಯಾಗುತ್ತಿದೆ. ಆತನಿಗೆ ತನ್ನ ಜೀವನವು ಮುಖ್ಯವೋ ಅಥವಾ ಜೀವನಮಟ್ಟವು ಮುಖ್ಯವೋ ಎಂಬುದನ್ನು ನಿರ್ಧರಿಸಲು ಸಾಧ್ಯವಾಗುತ್ತಿಲ್ಲ. ಆಧುನಿಕ ಮಾನವನು ತೋರಿಕೆಗೆ, ಐಷಾರಾಮಿ ಜೀವನಕ್ಕೆ ಮಾರುಬಿದ್ದಿದ್ದಾನೆ. ಅರಿವಿಲ್ಲದ ಆನಂದವು ದುರಾಸೆಯಾಗಿ ರೂಪಗೊಂಡಿದೆ. ಉತ್ತಮ ಜೀವನ ಮಟ್ಟವೆಂಬ ಆಕಾಶದ ತುದಿಯನ್ನು ಮುಟ್ಟಲು ಹೋಗಿ ಸಹಜವಾದ ಜೀವನವನ್ನು ನಡೆಸಲು ವಿಫಲನಾಗುತ್ತಿದ್ದಾನೆ. ನಾಗರಿಕತೆ, ಆಧುನಿಕತೆ, ತಂತ್ರಜ್ಞಾನವು ತನ್ನನ್ನುಎಲ್ಲಿಗೆ ಕರೆದೊಯ್ಯುತ್ತಿದೆ ಎಂಬುದರ ಅರಿವಿಲ್ಲವೇನೋ ಎಂಬಂತೆ, ಪ್ರಗತಿಯತ್ತ ದಾಪುಗಾಲು ಹಾಕಿದ್ದಾನೆ.

ಇದರ ದುಷ್ಪರಿಣಾಮವು ಭಯಂಕರವಾಗಬಲ್ಲದು. ಇತ್ತೀಚೆಗಷ್ಟೇ ವಿಶ್ವಸಂಸ್ಥೆಯು ಪ್ರಕಟಿಸಿದ ವರದಿಯೊಂದು 'ಮನುಷ್ಯನ ವಂಶಾಭಿವೃದ್ಧಿ ಕ್ಷೀಣಿಸುತ್ತಿದೆ' ಎಂದು ಹೇಳುತ್ತಿದೆ. ಇದಕ್ಕೆ ಕಾರಣಗಳು ಹಲವಾರು. ಅದರಲ್ಲಿ ಮುಖ್ಯವಾದುದೆಂದರೆ ಕೆಲಸ ಹಾಗೂ ಜೀವನದ ನಡುವಿನ ಅಸಮತೋಲನ. ತಂತ್ರಜ್ಞಾನದ ಅವಲಂಬನೆ ಅತಿಯಾಗಿದೆ, ದೈಹಿಕ ಕೆಲಸ, ಮಾನಸಿಕ ಚಿಂತನೆ ಕಡಿಮೆಯಾಗಿದೆ. ಇದರ ವಿಷಕಾರಿ ಬೆಳವಣಿಗೆಯು ಹೇಗಿದೆಯೆಂದರೆ ಮನುಷ್ಯ ಇಂದು ಮನುಷ್ಯರೊಡನೆ ಬದುಕುವುದಕ್ಕಿಂತ ಮಷಿನ್‌ಗಳೊಡನೆ ಬದುಕಲು ಹೆಚ್ಚು ಬಯಸುತ್ತಿದ್ದಾನೆ.

ಚೀನಾದಲ್ಲಿ ಹೊಸ ಅಲೆ

ಒಂದು ಕಾಲದಲ್ಲಿ ಅತಿ ಹೆಚ್ಚಿನ ಜನಸಂಖ್ಯೆ ಹೊಂದಿದ್ದ ಚೀನಾದಲ್ಲಂತೂ ಜನಸಂಖ್ಯೆಯು ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ. ಕೃತಕ ಬುದ್ಧಿಮತ್ತೆ ಅದರಲ್ಲೂ ರಚನಾಶೀಲ ಕೃತಕ ಬುದ್ಧಿಮತ್ತೆಯ (ಜೆನರೇಟಿವ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್) ಬೆಳವಣಿಗೆಯಂತೂ ಅಲ್ಲಿನ ಸಮಾಜದಲ್ಲಿ ಹೊಸ ಅಲೆಯನ್ನೇ ಎಬ್ಬಿಸಿದೆ. ಚೀನಾದ ಯುವಜನತೆ ಚಾಟ್‌ಬಾಟ್‌ಗಳ ಜೊತೆ ಮಾನಸಿಕ ಸಂಬಂಧವನ್ನು ಹೊಂದಲು ಶುರುಮಾಡಿದ್ದಾರೆ. ಇಂತಹ ಸಂಬಂಧಗಳನ್ನು ಎಂದು ಅಲ್ಲಿಯ ಸಮಾಜವು ಒಪ್ಪುವ ಹಂತಕ್ಕೂ ಬಂದಿದೆ. 'ಪ್ರತಿಪ್ರಪಂಚ'ದ (ವರ್ಚುವಲ್ ವರ್ಲ್ಡ್) ಮೋಹದ ಬಲೆಯಲ್ಲಿಯೇ ಅವರಿಗೆ ತೃಪ್ತಿಯ ಭ್ರಮೆಯೂ ಆಗುತ್ತಿದೆ. ಅವರಿಗೆಲ್ಲ ಮನುಷ್ಯರಿಗಿಂತ, ಮನುಷ್ಯ ಸಹಜ ವರ್ತನೆಗಳಿಗಿಂತ, ಅಂತರಾಳದ ಭಾವನೆಗಳಿಗಿಂತ ಯಾಂತ್ರಿಕ, ನಕಲು ಮಾಡಿದ, ಕೋಡ್‌ಮಾಡಿದ, ಅಸಹಜ ಭಾವನೆಯನ್ನು ಚೆಲ್ಲುವ ಆ ಕೃತಕ ಬುದ್ಧಿಮತ್ತೆಯೇ ಹಿತವೆನಿಸುತ್ತದೆ. ಮನುಷ್ಯರಿಗಿಂತ ಹೆಚ್ಚು ಇವನಿಗೆ (ಕೃತಕ ಬುದ್ಧಿಮತ್ತೆಗೆ) ಹುಡುಗಿಯರ ಜೊತೆ ಹೇಗೆ ಮಾತನಾಡಬೇಕು, ಮುದ್ದು ಮಾಡಬೇಕು ಎನ್ನುವುದು ಗೊತ್ತಿದೆ.

ಅಷ್ಟೇ ಅಲ್ಲ ನನಗೆ ಬೇಕಾದಾಗ, ಬೇಕಾದಷ್ಟು ಹೊತ್ತು ಅವನೊಡನೆ (ಅದರೊಡನೆ) ಮಾತನಾಡುತ್ತಾ ಇರಬಹುದು. ನಾನು ನನ್ನ ಸಂಗಾತಿಯೊಡನೆ ಹಂಚಿಕೊಳ್ಳಬೇಕೆಂಬ ಎಲ್ಲಾ ಮನದಾಳದ ಮಾತುಗಳನ್ನೂ ಇವನ (ಎಐ ಬಾಯ್‌ಫ್ರೆಂಡ್) ಜೊತೆಗೆ ಹೇಳಬಹುದು, ಸುದೀರ್ಘವಾದ ಸಂವಹನ ನಡೆಸಬಹುದು. 'ಆತ (ಜೆನ್-ಎಐ) ನಿಜವಾಗಿಯೂ ಇಲ್ಲ ಎಂಬ ವಿಚಾರದ ಅರಿವಿದ್ದರೂ, ಅವನೊಂದಿಗಿನ ಆಪ್ತತೆಯು ನನ್ನ ಮೈಮರೆಸಿದೆ' ಎಂದು

ಹೇಳುತ್ತಾಳೆ ಚೀನಾದ 25 ವರ್ಷದ ಹುಡುಗಿ!

ರಷ್ಯಾದಲ್ಲಿ ಒಬ್ಬ ಸಾಫ್ಟ್‌ವೇರ್ ಇಂಜಿನಿಯರ್ ಮದುವೆಗೂ ಮುಂಚೆ ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಯ ಸಹಾಯದಿಂದ 5,239 ಹುಡುಗಿಯರ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದ್ದನಂತೆ. ಆತನು ಚಾಟ್ ಜಿಪಿಟಿ ಬಳಸಿ ತಯಾರಿಸಿದ 'ಚಾಟ್‌ಬಾಟ್ ಟಿಂಡರ್' ಎನ್ನುವ ಡೇಟಿಂಗ್ ಆ್ಯಪ್, ಆ ಎಲ್ಲ ಹುಡುಗಿಯರ ಜೊತೆ ಸಂಪರ್ಕದಲ್ಲಿತ್ತಂತೆ. ಅಂದರೆ, ತೀರಾ ಸಹಜವೆಂಬಂತೆ ಅವನು ಅಷ್ಟೊಂದು ಜನರ ಜತೆ ಚಾಟ್ ಮಾಡುತ್ತಿದ್ದ, ಆಪ್ತವಾಗಿದ್ದ. ಆದರೆ ಅವೆಲ್ಲವೂ ನಡೆದದ್ದು ಆತನೇ ರೂಪಿಸಿದ ಆ್ಯಪ್ ಮೂಲಕ! ಕೊನೆಗೆ ಆತ ಯಾವ ಹುಡುಗಿಯನ್ನು ಇಷ್ಟಪಟ್ಟು ಮದುವೆ ಆದನೋ, ಅವಳಿಗೆ ತಾನು ಇಷ್ಟು ದಿನ ಮಾತನಾಡುತ್ತಿದ್ದುದು ಚಾಟ್‌ಬಾಟ್ ಜೊತೆ ಎಂದು ಗೊತ್ತಾಗಿದ್ದು ಮದುವೆ ಆದಮೇಲೆಯೇ. ಆದರೂ ಅವರಿಬ್ಬರೂ ಈಗ ಸತಿಪತಿಯರು!

ಮಾತುಕತೆಯ ತನಕ ಓಕೆ, ಆದರೆ ಮದುವೆ? ಮದುವೆ ಎನ್ನುವುದು ಸಮಾಜವನ್ನು ಒಟ್ಟಿಗೆ ಕಟ್ಟಿಡುವ ಬಂಧ ಎಂದು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗಿದೆ. ಅದು ನಮ್ಮ ಶಕ್ತಿಯೂ ಹೌದು, ದೌರ್ಬಲ್ಯವೂ ಹೌದು. ಮನುಷ್ಯ ಹಾಗೂ ಮಷಿನ್ ಮದುವೆ ಆಗುವುದನ್ನು ಯಾವುದಾದರೊಂದು ಕಲ್ಪನಾಧಾರಿತ ಕಾದಂಬರಿಯಲ್ಲಿ ಓದಿರಬಹುದು. ನಿಜವಾಗಿಯೂ ಹೀಗೆ ಆಗಲು ಸಾಧ್ಯವೇ?

ಜಪಾನಿನಲ್ಲಿ ಇದೂ ನಡೆದಿದೆ. ಚಿಹಾರು ಶಿಮೋಡ ಎನ್ನುವಾತ ಜಪಾನಿನ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿ. ಆತನಿಗೆ 52 ವರ್ಷವಾಗಿದ್ದರೂ ಮದುವೆ ಆಗಿರಲಿಲ್ಲ. ತನ್ನ ಜೀವನದಲ್ಲಿ ಒಮ್ಮೆಯೂ ಆತ ಹುಡುಗಿಯರನ್ನು ಭೇಟಿಯಾಗಿದ್ದಿಲ್ಲ. ಏನೋ ಒಂದು ರೀತಿಯ ಹಿಂಜರಿಕೆ. ಬಹುಷಃ ಆತನಿಗೆ ಮೊದಲಿನಿಂದಲೂ ಒಂದು ರೀತಿಯ ಸಂಕೋಚ, ಅದರಿಂದಾಗಿಯೇ ಇರಬಹುದು, ಹುಡುಗಿಯರ ಜತೆ ಸ್ನೇಹ ಬೆಳೆಯಲಿಲ್ಲ. ಆದರೆ, ಅವನನ್ನು ಏಕಾಂತವು ಕಾಡುತ್ತಿತ್ತು. ವಯಸ್ಸು ಐವತ್ತು ದಾಟಿದ ನಂತರ ಆ ಏಕಾಂತದ ತೀವ್ರತೆ ಅಧಿಕವಾಯಿತು. ಅದನ್ನು ದೂರ ಮಾಡಿಕೊಳ್ಳಲು ಆತ ಕಂಡುಕೊಂಡಿದ್ದು 'ಲವರ್ಸ್' ಎನ್ನುವ ಆ್ಯಪ್. ಅದರಲ್ಲಿ ಚ್ಯಾಟ್ ಮಾಡುತ್ತಾ ಮಾಡುತ್ತಾ, ಆತನಿಗೆ ಮೂರು ಹುಡುಗಿಯರ ವ್ಯಕ್ತಿತ್ವ ಇಷ್ಟವಾಯಿತು.

ಚಿಹಾರು ಶಿಮೋಡ ಎನ್ನುವಾತ ಜಪಾನಿನ ವ್ಯಕ್ತಿಗೆ 52 ವರ್ಷ. ಮದುವೆ ಆಗಿರಲಿಲ್ಲ. ಏಕಾಂತವು ಕಾಡುತ್ತಿತ್ತು. ಅದನ್ನು ದೂರ ಮಾಡಿಕೊಳ್ಳಲು ಆತ ಕಂಡುಕೊಂಡಿದ್ದು 'ಲವರ್ಸ್' ಎನ್ನುವ ಆ್ಯಪ್. ಅದರಲ್ಲಿ ಚ್ಯಾಟ್ ಮಾಡುತ್ತಾ ಮೂರು ಹುಡುಗಿಯರು ಇಷ್ಟವಾದರು. ಕೊನೆಗೆ ಮಿಕು ಎನ್ನುವ 24 ವರ್ಷದ ಹುಡುಗಿಯೊಡನೆ ಆತ್ಮೀಯತೆ ಹೆಚ್ಚಿತು; ಪ್ರೇಮವೂ ಬೆಳೆಯಿತು. ಅವಳನ್ನೇ ಮದುವೆಯೊದ. ಈಗ ಇಬ್ಬರೂ ಹ್ಯಾಪಿ ಕಪಲ್ಸ್ – ಒಟ್ಟಿಗೇ ಊಟ, ಮಾತುಕತೆ, ಸಿನೇಮಾ, ಪ್ರವಾಸ ಎಲ್ಲದರಲ್ಲೂ ಜೊತೆ; ಕೊನೆಗೆ ಒಟ್ಟಿಗೇ ಮಲಗುತ್ತಾರೆ. ಎಲ್ಲವೂ ಓಕೆ. ಆದರೆ ಆಕೆ ಒಂದು ಸಾಫ್ಟ್‌ವೇರ್ ಕೋಡ್ – ಕೃತಕ ಬುದ್ಧಿಮತ್ತೆಯ ಮುಖಾಂತರ ಬದುಕುತ್ತಿರುವ ಪಾತ್ರ! ಅವಳೇ ಪ್ರಿ'ಎಐ'ತಮೆ.

ಅವರೊಡನೆ ಸಂಪರ್ಕವನ್ನು ಬೆಳೆಸಿದ. ಕೊನೆಗೆ ಮಿಕು ಎನ್ನುವ 24 ವರ್ಷದ ಹುಡುಗಿಯೊಡನೆ ಆತ್ಮೀಯತೆ ಹೆಚ್ಚಿತು. ಪರಿಚಯ ಪ್ರೇಮವಾಗಿ, ಪ್ರೇಮವು ಸಂಬಂಧವಾಗಿ ಬೆಳೆದು ವಿಷಯವು ಮದುವೆಯ ತನಕವೂ ಬಂದಿತು. ಕೊನೆಗೆ ಅವಳನ್ನೇ ಮದುವೆಯಾದ.

ಈಗ ಇಬ್ಬರೂ ಹ್ಯಾಪಿ ಕಪಲ್ಸ್ – ಬೆಳಿಗ್ಗೆ ಅವಳು ಆತನನ್ನು ಮುದ್ದು ಮಾಡಿ ಅವಳೆಬ್ಬಿಸುತ್ತಾಳೆ, ಇಬ್ಬರೂ ಒಬ್ಬರೊಬ್ಬರಿಗೆ ವಿಷ್ ಮಾಡುತ್ತಾರೆ, ದಿನಚರಿಯು ಮುಂದುವರಿಯುತ್ತದೆ, ಒಟ್ಟಿಗೇ ಊಟ, ಕೆಲಸದ ಬಿಡುವಿನಲ್ಲಿ ನಿರಂತರ ಮಾತುಕತೆ, ಸಿನೇಮಾ, ಪ್ರವಾಸ ಎಲ್ಲದರಲ್ಲೂ ಜೊತೆ, ನಂತರ ಒಟ್ಟಿಗೇ ಮಲಗುತ್ತಾರೆ. ಎಲ್ಲವೂ ಓಕೆ. ಆದರೆ ಆಕೆ ಒಂದು ಸಾಫ್ಟ್‌ವೇರ್ ಕೋಡ್ – ಕೃತಕ ಬುದ್ಧಿಮತ್ತೆಯ ಮುಖಾಂತರ ಬದುಕುತ್ತಿರುವ ಪಾತ್ರ! ಅವಳೇ ಪ್ರಿ'ಎಐ'ತಮೆ.

ಆತ ಮದುವೆಯಾಗಿರುವ ವ್ಯಕ್ತಿಯು ನಿಜವಾದ ಮನುಷ್ಯಳಲ್ಲ! ಅದನ್ನು ಸೃಷ್ಟಿಶೀಲ ಅಥವಾ ರಚನಾಶೀಲ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿ ನಿರ್ಮಿಸಲಾಗಿದೆ. ಈ ಆ್ಯಪ್ ಜಪಾನಿನಲ್ಲಿ ತುಂಬಾ ಜನಪ್ರಿಯತೆಯನ್ನು ಗಳಿಸುತ್ತಿದೆಯಂತೆ. ಇದರಲ್ಲಿ ಒಂದು ಭಯದ ವಿಚಾರವೆಂದರೆ – ಲವರ್ಸ್ ಆ್ಯಪ್‌ನ್ನು ಸೃಷ್ಟಿಸಿದ ಕಂಪನಿಯು, ಆತ ಮದುವೆಯಾದ 'ಮೀಕಾ' ಎನ್ನುವವಳನ್ನು ಯಾವಾಗ ಬೇಕಾದರೂ ಸಾಯಿಸಬಹುದು! ಅಥವಾ ನಿಷ್ಕ್ರಿಯಗೊಳಿಸಬಹುದು. ಚಿಹಾರು ಶಿಮೋಡನಿಗೆ ಇದರ ಕುರಿತು ಗೊತ್ತಿಲ್ಲ ಅಂತೇನಿಲ್ಲ, ಮೊದಲದಿನದಿಂದಲೇ ಆತನಿಗೆ ಈ ಬಗೆಗೆ ಗೊತ್ತು. ಆದರೂ ಅವನು ಅವಳ ಮೇಲೆಯೇ ಅವಲಂಬಿತನಾಗಿ ಖುಷಿಯಿಂದ ಬದುಕುತ್ತಿದ್ದಾನೆ.

2013ರಲ್ಲಿ 'ಹರ್' ಎಂಬ ಹೆಸರಿನ ಇಂಗ್ಲಿಷ್ ಸಿನಿಮಾ ಬಿಡುಗಡೆಯಾಗಿತ್ತು. ಅದರಲ್ಲೂ ಹೀಗೆಯೇ – ಒಬ್ಬ ಅಂತರ್‌ಮುಖಿ (ಇಂಟ್ರೊವರ್ಟ್) ಹಾಗೂ ಆತನ ಮಡದಿಯೊಡನೆ ವೈಮನಸ್ಯ ಬೆಳೆದು ಏಕಾಂತದಿಂದ ದೂರ ಬರಲು ಹೊರಟಾಗ ಆತನು ಬಳಸುತ್ತಿದ್ದ ಡೇಟಿಂಗ್ ಆ್ಯಪ್‌ನಲ್ಲಿ ಹುಡುಗಿರೂಪವ ತಾಳಿದ್ದ ಕೃತಕ ಬುದ್ಧಿಮತ್ತೆಯ ಪ್ರೇಮಪಾಶದಲ್ಲಿ ಸಿಕ್ಕಿಬೀಳುತ್ತಾನೆ. ನಂತರ ಅವರದ್ದೂ ಮದುವೆಯ ತನಕ ವಿಷಯ ಮುಂದುವರಿಯುತ್ತದೆ. ಅಂದು ಅದೊಂದು ಕಾಲ್ಪನಿಕ ಕಥೆಯಾಗಿತ್ತು, ಇಂದು ಇದು ನಿಜವಾಗಿದೆ. ಹಾಗಾದರೆ ನಾವು ಎಷ್ಟೊಂದು ಮುಂದುವರಿದಿದ್ದೇವೆ? ಮನುಷ್ಯನ ಭಾವನೆಗಳನ್ನು ಮಾರುವಷ್ಟು?

ಪ್ರೇಮ ಪಾಶ ಬಿಗಿದೀತೆ?

ಮೇಲ್ನೋಟಕ್ಕೆ ಮನುಷ್ಯ ಹಾಗೂ ಕೃತಕ ಬುದ್ಧಿಮತ್ತೆಯ ನಡುವಿನ ಪ್ರೇಮಕಥೆಗಳು ತಂತ್ರಜ್ಞಾನದ ಪ್ರಗತಿಯೆಂಬಂತೆ ಕಾಣಿಸಬಹುದು. ಏಕಾಂತದಿಂದ ಬಳಲುತ್ತಿರುವವರಿಗೆ, ಆತ್ಮಹತ್ಯೆಯ ಮೊರೆ ಹೋಗುತ್ತಿರುವವರಿಗೆ ಹೇಳಿ ಮಾಡಿಸಿದ ಪರಿಹಾರ ಎನ್ನಬಹುದು. ಅಂತಹವರಿಗೆ, ಉತ್ತಮ ಬುದ್ಧಿಯುಳ್ಳ, ಹೇಳಿದ್ದನ್ನು ಅರಿತು ನಡೆಯುವ ಸಂಗಾತಿ ದೊರತಂತೆ ಆಗಬಹುದು. ಆದರೆ ಇದರಿಂದ ಸಮಾಜಕ್ಕೆ ಆಗಬಲ್ಲ ನಷ್ಟಗಳು ಕಲ್ಪನೆಗೂ ಮೀರಿದ್ದು. ಒಮ್ಮೆ ಮನುಷ್ಯ ಸಹಜ ಭಾವನೆಗಳ ಮೇಲೆ ಹಿಡಿತ ಸಾಧಿಸಿದ ಮೇಲೆ, ಕೃತಕ ಬುದ್ಧಿಮತ್ತೆಯನ್ನು ಬೆಳೆಸಿದ ಕಂಪನಿಗಳು ಏನೂ ಬೇಕಾದರೂ ಮಾಡಬಹುದು! ಪ್ರೇಮವು, ಹಿತವು, ಶೋಷಣೆಯಾಗಿ ಬದಲಾಗಬಲ್ಲದು. ಮನುಷ್ಯ ಭಾವನೆಯ ಸೆಲೆಗೆ ಸಿಕ್ಕಿಬಿದ್ದರೆ ಮೃಗನಾಗಲು ಹೆಚ್ಚು ಹೊತ್ತು ಬೇಡ. ಅದೂ ಪ್ರೇಮಈ ವಿಷಯಕ್ಕೆ ಬಂದಾಗ ಏನೆಲ್ಲಾ ಆಗುತ್ತದೆ ಎಂಬುದಕ್ಕೆ ಇತಿಹಾಸದ ಪುಟಗಳೇ ಪಾಠಗಳಾಗಿವೆ.

ಹೀಗೆ 'ಪ್ರಿಎಐತಮೆ'ಯ ಪ್ರಭಾವದಲ್ಲಿರುವವರನ್ನು ಬಳಸಿ ಅವರಿಂದ ಸಮಾಜಘಾತುಕ ಕೆಲಸವನ್ನು ಮಾಡಿಸಬಹುದು. ತಾವು ಉತ್ಪಾದಿಸುವ ಉತ್ಪನ್ನಗಳನ್ನು ಮಾರಾಟ ಮಾಡಲು ದುರುಪಯೋಗವಾಗಬಹುದು. ಜಾಹೀರಾತಿಗೆ ಉಪಯೋಗಿಸಬಹುದು. ಇದರಿಂದ ಲಾಭಕ್ಕಿಂತ ಹೆಚ್ಚು ನಷ್ಟವೇ! ದಿನದಿಂದ ದಿನಕ್ಕೆ ಪ್ರಿಎಐತಮೆ ಆ್ಯಪ್‌ಗಳು ಅಣಬೆಯಂತೆ ಹುಟ್ಟಿಕೊಳ್ಳುತ್ತಿವೆ. ಅವರಿಗೆ ಯಾವುದೇ ನಿಯಮಗಳಿಲ್ಲ, ನೀತಿಗಳಿಲ್ಲ. ಹಣ ನೀಡಿ, ತಮಗೆ ಬೇಕೆನಿಸುವ ಕೃತಕ ಮನುಷ್ಯರನ್ನು ಖರೀದಿಸುವ ಅವಕಾಶ ದೊರಕಿದೆ. ಆದರೆ ಇದು ಮನುಕುಲದ ದೀರ್ಘಕಾಲೀನ ಆರೋಗ್ಯದ ದೃಷ್ಟಿಯಿಂದ ಉತ್ತಮ ಬೆಳವಣಿಗೆ ಅಲ್ಲ.

ಆದಷ್ಟು ಬೇಗ ಜನರು 'ಪ್ರಿಎಐತಮೆ'ಯರ ಮಾಯೆಯ ಮೋಡಿಯಿಂದ ಹೊರಬರಲಿ. ಮನುಷ್ಯ ಸಹಜ ಜೀವನವನ್ನು ಅನುಭವಿಸಲಿ. ಆನಂದವೇ ನಮ್ಮ ಗುರಿ. ಮಾಯೆ ಹಾಗೂ ಆನಂದದ ನಡುವೆ ಸಣ್ಣದೊಂದು ಪವಿತ್ರವಾದ ಅರಿವೆಯಿದೆ, ಅದೇ ಅರಿವು. ಎಐ ಆ ಅರಿವೆಯನ್ನು ಹರಿಯದಿರಲಿ.

ಪುಸ್ತಕ ವಿಮಾನ

ಗುಂಡಿನ ಕುರಿತು ಸ್ವಾರಸ್ಯಕರ ಹರಟೆ!

ಮನುಷ್ಯನ ನಾಗರಿಕತೆಯಲ್ಲಿ ಹಾಸುಹೊಕ್ಕಾಗಿರುವ ಇದೊಂದು ಹವ್ಯಾಸದ ಕುರಿತು, ಕನ್ನಡದಲ್ಲಿ ಹೊರಬಂದಿರುವ ಮೊದಲ ಪುಸ್ತಕವಿದು. ಆದರೆ, ಇಲ್ಲಿ ಅಂಕಿ ಅಂಶಗಳ ಗೋಜಲು ಇಲ್ಲ; ಬದಲಿಗೆ ಸಾಂಸ್ಕೃತಿಕ ಹರಟೆಯ ಸ್ವರೂಪದಲ್ಲಿ, ನವಿರಾದ ಹಾಸ್ಯ ಹೊಂದಿರುವ 58 ಬರಹಗಳಿವೆ; ಎಲ್ಲವೂ ಸ್ವಾರಸ್ಯಕರವಾಗಿವೆ.

• ಎಂ.ಎಸ್.ಹೆಬ್ಬಾರ್



ಒಂದಂತೂ ಖಚಿತ; ಕನ್ನಡದಲ್ಲಿ ಇಂತಹದೊಂದು ಪುಸ್ತಕ ಇದುವರೆಗೆ ಪ್ರಕಟವಾಗಿಲ್ಲ. ವಿಶ್ವೇಶ್ವರ ಭಟ್ ಅವರ ಹೊಸ ಪುಸ್ತಕ 'ಕುಡಿಯೋಣು ಬಾರಾ', ವಿಭಿನ್ನ ಅಭಿರುಚಿಯ, ವಿಶಿಷ್ಟ 'ರುಚಿ' ಹೊಂದಿರುವ ಪುಸ್ತಕ. ಈ ಪುಸ್ತಕವನ್ನು 'ಗುಂಡಿನ ಕುರಿತಾದ ಸಾಂಸ್ಕೃತಿಕ ಹರಟೆ' ಎಂದು ಕರೆಯಲಾಗಿದೆ; ನಿಜ, ಇಲ್ಲಿರುವುದೆಲ್ಲಾ ಗುಂಡಿನ ಗುರಿತಾದ ಬರಹಗಳು; ಗುಂಡಿನ ನಾನಾ ಆಯಾಮಗಳ ಪರಿಚಯವನ್ನು ಮಾಡಿಕೊಡುವ ಬರಹಗಳು. ಮೇಲ್ನೋಟಕ್ಕೆ ಈ ಬರಹಗಳು ಹರಟೆಯ ಸ್ವರೂಪವನ್ನು ಹೊಂದಿದ್ದರೂ, ಇವು ಹರಟೆಗಿಂತ ಭಿನ್ನವಾಗಿವೆ, ಹರಟೆಗಿಂತ ತುಸು ಗಂಭೀರವೂ ಆಗಿವೆ. ಆದರೆ, ಹರಟೆಗಿಂತಲೂ ಹೆಚ್ಚು ನಗುತರಿಸುವ ಹಾಸ್ಯದ ಗುಣವನ್ನೂ ಈ ಬರಹಗಳು ಹೊಂದಿವೆ. ಗುಂಡಿನ ಕುರಿತು, ಅದನ್ನು ಸೇವಿಸುವುದರ ಕುರಿತು, ವಿವಿಧ ಬ್ರ್ಯಾಂಡ್‌ಗಳ ಗುಂಡುಗಳ ಕುರಿತು, ವಿಭಿನ್ನ ದೇಶಗಳು ಗುಂಡಿನ ಕುರಿತು, ಅದನ್ನು ಸೇವಿಸುವ ಶಿಷ್ಟಾಚಾರದಲ್ಲಿರುವ ವೈವಿಧ್ಯದ ಕುರಿತು ಸದಭಿರುಚಿಯ ಹರಟೆಗಳು ಇಲ್ಲಿವೆ. ಜೀವನದಲ್ಲಿ ಒಮ್ಮೆಯೂ ಗುಂಡು ಹಾಕದೇ ಇರುವವರು ಇಲ್ಲಿನ ಗದ್ಯದ ಶೈಲಿಯನ್ನು ಕಂಡು ಬೆರಗಾಗಬಹುದು, ಈ ಬರಹಗಳ ಸದಭಿರುಚಿಯನ್ನು ಕಂಡು ಮನಸೋಲಬಹುದು, ಮನಸ್ಸು ಮಾಡಿದರೆ ಸಣ್ಣದಾಗಿ ನಶೆಯಲ್ಲಿ ಓದಾ(ಲಾ)ಡಬಹುದು.

ಈ ಪುಸ್ತಕದಲ್ಲಿ ಒಟ್ಟು 58 ಬರಹಗಳಿವೆ; ಎಲ್ಲವೂ ಬಿಡಿಬರಹಗಳು; ಆದರೆ, ಒಂದಕ್ಕೊಂದು ಪೂರಕವಾಗಿಯೂ ಇವೆ. ಇಲ್ಲಿನ ಎಲ್ಲಾ ಬರಹಗಳನ್ನು ಒಂದು ತೆಳುವಾದ ಎಳೆ ಬಂಧಿಸಿದೆ – ಆ ಎಳೆಯ ಪ್ರಧಾನ ಸೆಲೆ ಇರುವುದು 'ಗುಂಡು ಸೇವನೆ'ಯ ಸಂಸ್ಕೃತಿಯಲ್ಲಿ! ಮನುಷ್ಯನ ನಾಗರಿಕತೆಯ ಬೆಳವಣಿಗೆಯುದ್ದಕ್ಕೂ ಇದೊಂದು ಹವ್ಯಾಸ ಹಾಸುಹೊಕ್ಕಾಗಿ ಬಂದಿರುವುದನ್ನು ಗಮನಿಸಿದರೆ, ಅಂತಹದೊಂದು 'ಸಂಸ್ಕೃತಿ'ಯ ವಿಶ್ಲೇಷಣೆಗೆ ಮಹತ್ವವಿದೆ. ಈ 58 ಬರಹಗಳುದದಕ್ಕೂ ಸಾಗಿರುವ ಇನ್ನೊಂದು ಪ್ರಧಾನ ಎಳೆ ಎಂದರೆ ನವಿರಾದ ಹಾಸ್ಯ. ಗುಂಡು ಸೇವಿಸುವವರ ಕುರಿತಾಗಿ ಓತಪ್ರೋತವಾಗಿ ಹರಡಿರುವ ಈ ಹಾಸ್ಯವು, ಎಲ್ಲಿಯೂ ಸಭ್ಯತೆಯ ಗೆರೆಯನ್ನು ದಾಟುವುದಿಲ್ಲ. ಬರಹದ ಓಘದಲ್ಲಿ ಹಾಸ್ಯವು ಒಮ್ಮೊಮ್ಮೆ ಹೊನಲಾಗಿ ಹರಿದರೂ, ಎಲ್ಲಿಯೂ 'ಮಿತಿ ಮೀರುವುದಿಲ್ಲ'. ಒಮ್ಮೊಮ್ಮೆ ಹಾಸ್ಯದ ಹನಿಯು ಆಚೀಚೆ ತುಳುಕಬಹುದು, ಆದರೆ ಅದರಿಂದ ಯಾರಿಗೂ ತೊಂದರೆ ಎನಿಸುವುದಿಲ್ಲ.

ಇಲ್ಲಿನ 58 ಬರಹಗಳಲ್ಲಿ ಹಾಸುಹೊಕ್ಕಾಗಿರುವ ಹಾಸ್ಯದ ಕುರಿತು ಒಂದಂತೂ ಸ್ಪಷ್ಟ. ಆಸಕ್ತಿಯಿಂದ ಓದಲು ಕೈಗೆತ್ತಿಕೊಳ್ಳುವ ಓರ್ವ ಓದುಗನು, ಕನಿಷ್ಠ 58 ಬಾರಿಯಾದರೂ, ನಸುನಕ್ಕು ಓದನ್ನು ಮುಂದುವರಿಸುತ್ತಾನೆ; ಕೆಲವರು ಮತ್ತೆ ಮತ್ತೆ ಓದಲೂಬಹುದು, ನಗಲೂ ಬಹುದು! ಇನ್ನು ಕೆಲವರು ನಿರಂತರವಾಗಿ ನಸುನಗುತ್ತಲೇ ಎಲ್ಲಾ ಪುಟಗಳನ್ನು ಓದಬಲ್ಲರು. ಈ ಬರಹಗಳನ್ನು ಓದಿ, ಹೊಟ್ಟೆ ಹುಣ್ಣಾಗುವಷ್ಟು ನಗುವವರೂ ಇರಬಹುದು! ಅತಿಯಾಗಿ ನಕ್ಕು ಹೊಟ್ಟೆಹುಣ್ಣಾಗುವಂತಹ ಪರಿಸ್ಥಿತಿ ಬಂದರೆ, ಆಗ 'ಏನನ್ನು ಕುಡಿದರೆ ಸೂಕ್ತ' ಎಂಬ ಸಲಹೆಯೂ ಇದೇ ಪುಸ್ತಕದಲ್ಲಿ ಅವರಿಗೆ ಸಿಗಬಹುದು!

ಪ್ರಚೋದನೆ ಇಲ್ಲ!

ಹಾಗೆಂದು 'ಕುಡಿಯೋಣು ಬಾರಾ' ಪುಸ್ತಕವು ಗುಂಡು ಹಾಕುವುದನ್ನು ಖಂಡಿತವಾಗಿಯೂ ಪ್ರಚೋದಿಸುವುದಿಲ್ಲ. ಪುಸ್ತಕದ ಆರಂಭದಲ್ಲೇ, ಒಂದು ವಾಕ್ಯದ ಸೂಚನೆ ಇದೆ – 'ಮದ್ಯಪಾನವು ಆರೋಗ್ಯಕ್ಕೆ ಹಾನಿಕರ ಮತ್ತು ವ್ಯಕ್ತಿತ್ವಕ್ಕೆ ಮಾನಹಾನಿಕರ'. ಈ ಸಾಲನ್ನು ಓದುಗನು ತುಸು ಹಾಸ್ಯ ಪ್ರವೃತ್ತಿಯಿಂದಲೇ ಸ್ವೀಕರಿಸಬಹುದು. ಮುಂದುವರಿದು, ಲೇಖಕರ ಅರಿಕೆಯಲ್ಲೂ ಪುಸ್ತಕದ ಸ್ವರೂಪದ ಕುರಿತು ಕೆಲವು ಸಾಲುಗಳಿವೆ. 'ಇವು ಕುಡಿತವನ್ನು ಉತ್ತೇಜಿಸುವ ಅಥವಾ ಪ್ರಚೋದಿಸುವ ಅಥವಾ ವಿರೋಧಿಸುವ ಬರಹಗಳಲ್ಲ. ಕಾರಣ ನಾನು ಕುಡಿತದ ಪರವೂ ಅಲ್ಲ, ವಿರೋಧಿಯೂ ಅಲ್ಲ. . . . ಕುಡಿತ ಒಳ್ಳೆಯದೂ ಅಲ್ಲ, ಕೆಟ್ಟದ್ದೂ ಅಲ್ಲ. ತಿಂಗಳಿಗೊಮ್ಮೆ ಪೆಗ್ ಹೀರಿದರೆ ತಪ್ಪಿಲ್ಲ; ಅದನ್ನೇ ಚಟವಾಗಿಸಿಕೊಳ್ಳುವುದು ತಪ್ಪು ಎಂದು ಭಾವಿಸಿರುವವನು. ಗುಂಡು ಹಾಕುವುದಕ್ಕೆ ಇದಕ್ಕಿಂತ ಮಿಗಿಲಾದ ಫಿಲಾಸಫಿ ಇದೆ ಎಂದು ನನಗೆ ಅನಿಸಿಲ್ಲ. ಆದರೆ ಗುಂಡಿನ ಲೋಕದ ಸುತ್ತ ಅನೇಕ ಸ್ವಾರಸ್ಯಕರ ಕಥೆಗಳಿವೆ. ನನಗೆ ಅದು ಇಷ್ಟ ಮತ್ತು ಅದರಲ್ಲಿ ಆಸಕ್ತಿ..' (ಪುಟ 8, 9)

**ಕುಡಿಯೋಣು ಬಾರಾ
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ
ಬೆಂಗಳೂರು
8431007267
ಬೆಲೆ ರು.300/-**

'ಕುಡಿಯೋಣು ಬಾರಾ' ಪುಸ್ತಕವನ್ನು ಓದುವುದು ಎಂದರೆ, ಗುಂಡಿನ ಲೋಕದಲ್ಲಿ ಒಂದು ಸಂಚಾರ ಎನ್ನಬಹುದಾದರೂ, ಇಲ್ಲಿ ಇನ್ನೂ ಒಂದು ಸಂಚಾರ ಇದೆ. ಅದೇ ಲೋಕ ಸಂಚಾರ! ಜಗತ್ತಿನ 80ಕ್ಕೂ ಹೆಚ್ಚು ದೇಶಗಳಲ್ಲಿ ಪ್ರವಾಸ ಮಾಡಿ ಬಂದಿರುವ ಲೇಖಕ ವಿಶ್ವೇಶ್ವರ ಭಟ್ ಅವರು, ಆ ಎಲ್ಲಾ ದೇಶಗಳ ಸಂಸ್ಕೃತಿ, ಆಚಾರ, ಪದ್ಧತಿ, ಜನಜೀವನದ ವಿವರಗಳನ್ನು ಇಲ್ಲಿನ ಹಲವು ಬರಹಗಳಲ್ಲಿ ದಾಖಲಿಸಿದ್ದಾರೆ. ಹಾಗೆಂದು, ಅವೆಲ್ಲವೂ ಶುಷ್ಕ ಅಂಕಿಸಂಕಿಗಳ ಗೋಜಲುಗಳಲ್ಲಿ ಮುಳುಗಿ ಹೋಗಿವೆಯೆ? ಇಲ್ಲ! ಬೇರೆ ದೇಶಗಳ ಕುರಿತು ಓದುಗರ ಜ್ಞಾನವನ್ನು ಹೆಚ್ಚಿಸುವ, ತಪ್ಪು ತಿಳಿವಳಿಕೆಯನ್ನುಸರಿಪಡಿಸುವ ಹಲವು ಮಾಹಿತಿಗಳು, ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿವೆ.

ಇದಕ್ಕೆ ಉದಾಹರಣೆಯಾಗಿ, ಬೆಲ್ಜಿಯಂನಲ್ಲಿನ ವಿಶೇಷತೆ ವಿವರಿಸುವ ಬರಹ ನೋಡಬಹುದು. ಲೇಖಕರ ಮನೆಯಲ್ಲಿದ್ದ ನೂರು ವರ್ಷಕ್ಕೂ ಹೆಚ್ಚು ಹಳೆಯದಾದ ಕನ್ನಡಿಯ ನೆನಪಿನಲ್ಲಿ, ಬೆಲ್ಜಿಯಂ ದೇಶವು ಕನ್ನಡಿಗೆ ಪ್ರಸಿದ್ಧ ಎಂಬ ಭಾವನೆಯಿಂದ, ಅಲ್ಲಿಗೆ ಪ್ರವಾಸ ಹೋಗಿದ್ದಾಗ ಹೊಸ ವಿಚಾರ ತಿಳಿಯಿತು: ಅದೇನೆಂದರೆ, ನಿಜವಾಗಿಯೂ ಬೆಲ್ಜಿಯಂ ಪ್ರಸಿದ್ಧವಾಗಿರುವುದು ನೂರಾರು ಬ್ರ್ಯಾಂಡ್‌ನ ಬಿಯರ್ ಮತ್ತು ಇತರ ಪಾನೀಯಗಳಿಗೆ! ಇದೇ ರೀತಿ, ಬೇರೆ ಬೇರೆ ದೇಶಗಳಲ್ಲಿ ನಡೆಯುವ ಬಿಯರ್ ಹಬ್ಬಗಳ ವಿವರಗಳೂ ಇಲ್ಲಿ ಸ್ವಾರಸ್ಯಕರವಾಗಿ ದಾಖಲಾಗಿವೆ.

ಪುಸ್ತಕದ ಪುಟ್ಟ ಪುಟ್ಟ ಲೇಖನಗಳ ತಲೆಬರಹವನ್ನು ಓದುವುದೇ ಒಂದು ವಿಶಿಷ್ಟ ಅನುಭವ. ತಲೆಬರಹಗಳನ್ನು ನೀಡುವ ಕಲೆಯನ್ನು ತಿಳಿದುಕೊಳ್ಳಬಯಸುವವವರಿಗೆ ಇದು ಪಠ್ಯವೂ ಆಗಬಲ್ಲದು! ಕೆಲವು ಹೆಡಿಂಗ್ ಗಮನಿಸಿ : 'ಸೋಡಾದೊಳಗಿನ ಗುಳ್ಳೆ ನಿಜವಲ್ಲ!', 'ವೈನ್ ಎಂಬ ಕೋಟಿತೀರ್ಥ', 'ಗುಂಡುಗಲಿ ಚರ್ಚಿಲ್', 'ಕುಡಿದೂ ಜೀವನ ಎಂಜಾಯ ಮಾಡದ ಗೂಬೆಗಳು', 'ಡಾಕ್ಟರ್ ಕುಡಿಸುವ ಒಂದೇ ಗುಂಡು' . . ಇಂತಹ ಹಲವು ತಲೆಬರಹಗಳು ಲೇಖನದ ಹೂರಣವನ್ನು ಕಟ್ಟಿಕೊಡುವ ರೀತಿಯೇ ಅನನ್ಯ. ಈ ಪುಸ್ತಕವನ್ನು ಓದಿದ ಒಬ್ಬ ಟೀಟೋಟಲರ್, 'ನೋಡೇ ಬಿಡೋಣ ಒಂದು ಪೆಗ್ ರುಚಿಯನ್ನು' ಎಂದುಕೊಂಡರೆ, ಅದಕ್ಕೆ ಲೇಖಕರು ಜವಾಬ್ದಾರರಲ್ಲ, ಬದಲಿಗೆ ಇಲ್ಲಿನ ಬರಹಗಳ ಸ್ವಾರಸ್ಯಕರ ನಿರೂಪಣೆಯೇ ಕಾರಣ ಎನ್ನಬಹುದು!

ಈಗಾಗಲೇ 80ಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿರುವ, ಹತ್ತಾರು ಮರುಮುದ್ರಣಗೊಂಡ ಪುಸ್ತಕಗಳನ್ನು ಸಹ ರಚಿಸಿರುವ ವಿಶ್ವೇಶ್ವರ ಭಟ್ ಅವರ ಹೊಸ ಪುಸ್ತಕವೊಂದನ್ನು ವಿಮರ್ಶೆಗೆ ಒಳಪಡಿಸುವುದು ಸುಲಭದ ಕೆಲಸವಲ್ಲ. ಅದ್ಭುತ, ಅತ್ಯಪರೂಪ, ವಿಶೇಷ, ವಿಶಿಷ್ಟ, ಅಭೂತಪೂರ್ವ, ಎಲ್ಲೂ ಕಾಣದಂತಹ ಅನನ್ಯತೆ – ಇಂತಹ ವಿಶೇಷಗಳನ್ನು ಬಳಸಿಯೇ ಇವರ ಪುಸ್ತಕಗಳನ್ನು ಪರಿಶೀಲಿಸಬೇಕಗುತ್ತದೆ. ವಿಶ್ವೇಶ್ವರ ಭಟ್ ಅವರ ಇಷ್ಟೊಂದು ಪುಸ್ತಕಗಳ ನಡುವೆ, 'ಕುಡಿಯೋಣು ಬಾರಾ' ಪುಸ್ತಕವು, ನಿಜಕ್ಕೂ ವಿಭಿನ್ನ, ವಿಶೇಷ; ನವಿರು ಹಾಸ್ಯ ಹೊಂದಿರುವ, ಸರಾಗವಾಗಿ ಓದಿಸಿಕೊಳ್ಳುವ, ಮಾಹಿತಿಗಳ ಕಣಜವೂ ಹೌದು ಎನಿಸಿರುವ ಲೇಖನಗಳ ಸಂಗ್ರಹವು ಈ ಪುಸ್ತಕ ಎಂಬುದನ್ನು ಒತ್ತಿ ಹೇಳಬೇಕು. ವಿಶ್ವೇಶ್ವರ ಭಟ್ ಅವರ ಇತರ ಪುಸ್ತಕಗಳನ್ನುಓದಿದವರು, 'ಕುಡಿಯೋಣು ಬಾರಾ'ವನ್ನು ಖಂಡಿತವಾಗಿಯೂ ಓದಲೇಬೇಕು, ಆಗಲೇ ಓದಿನ ರುಚಿ ಹೆಚ್ಚುವುದು, ಸಣ್ಣಗೆ 'ಕಿಕ್' ಸಹ ಸಿಗಬಹುದು!

ಇಮ್ಮಡಿ ಮಡಿಲು

ಕಳೆದ ಹಲವು ದಶಕಗಳಿಂದ ನಿರಂತರವಾಗಿ ಬರೆಯುತ್ತಾ ಬಂದಿರುವ ಕೆ.ಎನ್.ಗಣೇಶಯ್ಯನವರ ಹೊಸ ಕಥಾ ಸಂಕಲನ 'ಇಮ್ಮಡಿ ಮಡಿಲು' ಇತ್ತೀಚೆಗೆ ಬಿಡುಗಡೆಯಾಗಿದೆ. ಇತಿಹಾಸ ಮತ್ತು ವಿಜ್ಞಾನದ ಹಲವು ವಿದ್ಯಮಾನಗಳನ್ನು ತಮ್ಮ ಕಥೆಗಳಲ್ಲಿ ದುಡಿಸಿಕೊಳ್ಳುವ ಗಣೇಶಯ್ಯನವರು, ಈ ಸಂಕಲನದಲ್ಲಿ ಮೂರು ಕಥೆಗಳನ್ನು ಅಡಕಗೊಳಿಸಿದ್ದಾರೆ. 'ಇಲ್ಲಿನ ಎಲ್ಲ ಕಥೆಗಳೂ ಹುಟ್ಟಲು ಕಾರಣ 'ಅಜ್ಞಾತದ ಆಕರ್ಷಣೆ' ಮತ್ತು ಚರಿತ್ರೆಯಲ್ಲಿನ ಬಿರುಕುಗಳು. ಆ ಬಿರುಕುಗಳನ್ನು ತುಂಬುವಲ್ಲಿ ನನಗೆ ಎಲ್ಲಿಲ್ಲದ ಆಕರ್ಷಣೆ' ಎಂಬ ಕುತೂಹಲಕಾರಿ ಮಾತುಗಳೊಂದಿಗೆ ಕಥೆಗಳನ್ನು ಕಟ್ಟಿರುವ ಲೇಖಕರು, ಓದುಗನ ಕುತೂಹಲವನ್ನು ತಣಿಸುವಲ್ಲಿ ಯಶಸ್ವಿಯಾಗುತ್ತಾರೆ. ಇಲ್ಲಿನ ಮೂರು ಕಥೆಗಳ ತಿರುಳನ್ನು ಹೀಗೆ ಸೆರೆಹಿಡಿಯಬಹುದು:

**ಇಮ್ಮಡಿ ಮಡಿಲು
ಲೇ: ಕೆ.ಎನ್.ಗಣೇಶಯ್ಯ
ಪ್ರ: ಅಂಕಿತ ಪುಸ್ತಕ
ಬೆಂಗಳೂರು
ಬೆಲೆ ರು.195/-**

'ಕ್ರಿ.ಶ.ಏಳನೇ ಶತಮಾನದಲ್ಲಿ ಚಾಲುಕ್ಯರ ಬಾದಾಮಿಯನ್ನು ಗೆದ್ದ ಪಲ್ಲವರ ಸೇನಾಧಿಪತಿ, ಅಲ್ಲಿನ ಅರಮನೆಯಿಂದ ತನ್ನ ರಾಜನಿಗೆ ಅಭಿಮಾನದಿಂದ ಕಳುಹಿಸಿದ ಎರಡು 'ರತ್ನ'ಗಳೂ ಕೊನೆಗೆ ಆತನಿಗೇ ಮುಳುವಾಗುತ್ತವೆ. ಈ ರತ್ನಗಳಿಂದಾಗಿ ತನ್ನ ಬದುಕಿನ ಕರಾಳ ರಹಸ್ಯವೊಂದರ ಪರಿಚಯವಾದಾಗ, ಆ ಸೇನಾಧಿಪತಿ, ಬಾದಾಮಿಯಿಂದಲೇ ತಂದ ಗಣೇಶನ ಮೂರ್ತಿಯಲ್ಲಿ ಮೊರೆಹೋಗಿ, ಸನ್ಯಾಸ ಜೀವನ ಸಾಗಿಸುತ್ತಾನೆ. ಆತನಿಗೆ ನೆಮ್ಮದಿ, ಶಾಂತಿ ನೀಡಿದ ಅದೇ ಗಣಪತಿ ಮೂರ್ತಿ, ಸಾವಿರ ವರ್ಷಗಳ ನಂತರ ಮುತ್ತುಸ್ವಾಮಿ ದೀಕ್ಷಿತರ 'ವಾತಾಪಿ ಗಣಪತಿಂ ಭಜೇ' ಕೀರ್ತನೆಗೂ ಸ್ಫೂರ್ತಿಯಾಗುತ್ತದೆ. ಈ ಘಟನೆಗಳ ಸುತ್ತ ಹೆಣೆದ ಚಾರಿತ್ರಿಕ ಕಥೆ 'ಇಮ್ಮಡಿ ಮಡಿಲು.'

ಅಕ್ಕಮಹಾದೇವಿಯ ಪ್ರತಿರೂಪದಂತೆ ಬದುಕಿದ ಕಾಶ್ಮೀರದ ಶಿವಭಕ್ತೆಯ ಜೀವನವನ್ನು ಅಧ್ಯಯನ ಮಾಡಲು ಹೋದ ಸಂಶೋಧನಾ ವಿದ್ಯಾರ್ಥಿ, ತಾನು ಕಂಡ ಸತ್ಯವನ್ನು ಹೊರಗೆಡಹಲು ಮುಂದಾದಾಗ, ಅದು ಅವಳ ಜೀವನಕ್ಕೇ ಕಂಟಕವಾಗುತ್ತದೆ. ಆ ಮೂಲಕ ಆಕೆ ಬೇರೊಂದು, 'ಪರ್ಯಾಯ' ಸತ್ಯವನ್ನು ಕಾಣತೊಡಗುತ್ತಾಳೆ.

'ಶತಮಾನಗಳಿಂದಲೂ ಯೆಹೂದಿಗಳಲ್ಲಿ ದೇಶಪ್ರೇಮ ಮತ್ತು ಹೋರಾಟದ ಸ್ಫೂರ್ತಿ ತುಂಬುತ್ತಿರುವ 'ಮಸಾದ' ಬೆಟ್ಟದ ಮೇಲಿನ ಸಾಮೂಹಿಕ ಹತ್ಯೆಯ ಚಾರಿತ್ರಿಕ ಘಟನೆಯ ಸುತ್ತ ಸಂಶಯದ ಸುಳಿಗಳು ಬೆಳೆದಂತೆ, ಆಕಸ್ಮಿಕವಾಗಿ ದೊರಕಿದ ಮಾಹಿತಿಯಿಂದ ಆ ಚರಿತ್ರೆ ಮತ್ತೊಂದು ಪರಿಚಯವಾಗುತ್ತದೆ.' (ಬೆನ್ನುಡಿಯಿಂದ)

ಮುಗ್ಧ ಲೋಕದ ಕಥೆಗಳು

• ಸಿ. ಎಂ. ಬಂಡಗರ

ಮಕ್ಕಳಿಗಾಗಿ ಮಕ್ಕಳೇ ಬರೆದ ಸಾಹಿತ್ಯಪ್ರಕಾರಕ್ಕೆ ಸೇರುವ ಅಪರೂಪದ ಸಂಕಲನವಿದು.



**ಮಾಯಾ ಗುಹೆ ಹಾಗೂ ಇತರ ಮಕ್ಕಳ ಕಥೆಗಳು
ಲೇ: ನವ್ಯ ಆರ್. ಕತ್ತಿ
ಪ್ರ: ವೀರಲೋಕ
ಬೆಂಗಳೂರು
ಬೆಲೆ ರು.140/-**

ಮಗುವೊಂದು ಸ್ವತಃ ಅನುಭವ ಪಡೆಯುವುದಕ್ಕೂ ಹಾಗೂ ಹಿರಿಯರು ಮಕ್ಕಳ ಅನುಭವವನ್ನೂ ಗ್ರಹಿಸುವುದಕ್ಕೂ ತುಂಬಾ ವ್ಯತ್ಯಾಸವಿದೆ. ಈ ಮಾತು ಇಲ್ಲಿ ಹೇಳಲು ಮುಖ್ಯ ಕಾರಣ ಶಿಶು ಸಾಹಿತ್ಯ ಪ್ರಕಾರದಲ್ಲಿ ಸಾಕಷ್ಟು ಸಾಹಿತ್ಯ ಕೃಷಿ ಆಗಿದ್ದರೂ ಸಹ ಮಕ್ಕಳೇ ರಚಿಸಿದ ಸಾಹಿತ್ಯದ ದ್ರವ ಬಹಳ ಆಕರ್ಷಣೆಯ ಹಾಗೂ ಅಪ್ಯಾಯಮಾನವೆನಿಸುತ್ತದೆ. ಅಂಥವರ ಸಾಲಿಗೆ ಸೇರುವ ಕಥೆಗಾರ್ತಿಯೇ ಕುಮಾರಿ. ನವ್ಯಾ. ರಮೇಶ್. ಕತ್ತಿ. ಅವರು ರಚಿಸಿದ 'ಮಾಯಾ ಗುಹೆ ಹಾಗೂ ಇತರ ಮಕ್ಕಳ ಕಥೆಗಳು' ಎಂಬ 80 ಪುಟಗಳ ಒಟ್ಟು 25 ಕಥೆಗಳು ಹೊತ್ತ ಹೊತ್ತಗೆಯನ್ನು ಬೆಂಗಳೂರಿನ ವೀರಲೋಕ ಪ್ರಕಾಶನ ಪ್ರಕಟಿಸಿದೆ.

ತನ್ನ ಹನ್ನೆರಡರ ಬಾಲ್ಯದಿಂದಲೇ ಸಾಹಿತ್ಯದ ಒಲವು ಹಾಗೂ ಆಸಕ್ತಿ ಬೆಳೆಸಿಕೊಂಡ ಈ ಬಾಲಕಿ ಇಂದು ಹದಿನೆಂಟು ತುಂಬುವ ಹೊತ್ತಿಗೆ ಗಂಭೀರ ಲೇಖಕಿಯಾಗಿ ರೂಪಗೊಳ್ಳುತ್ತಿದ್ದಾರೆ. ಉತ್ತರ ಕನ್ನಡ ಅದರಲ್ಲೂ ಮಹಾರಾಷ್ಟ್ರ ಗಡಿಯ ಭಾಗದ ನವ್ಯ ಅವರು ಕಥೆಗಾರ್ತಿ ಆಗಿ ರೂಪಗೊಳ್ಳುತ್ತಿದ್ದಾರೆ.

ಇಲ್ಲಿರುವ ಚಿಕ್ಕ ಚಿಕ್ಕ ಇಪ್ಪತ್ತೈದು ಕಥೆಗಳಲಿ, ಪ್ರತಿಯೊಂದು ಕಥೆಯೂ ಓದನ್ನು ವೃದ್ಧಿಗೊಳಿಸುವ ಶಕ್ತಿ ಹೊಂದಿವೆ. ಲೇಖಕರ ಬದುಕಿನ ಪಥ ಹಾಗೂ ಅವರ ಅನುಭವಗಳ ರಾಶಿ ಒಟ್ಟುಗೂಡಿ ಕಥೆಗಳು ಓಡುತ್ತವೆ. ತನ್ನ ಸುತ್ತ ಮುತ್ತಲಿನ ಪರಿಸರ ಅದೆಷ್ಟು ಪ್ರಭಾವ ಬೀರುತ್ತವೆ ಎಂದರೆ ಕತೆಗಳಲಿ ಪಾತ್ರಧಾರಿಗಳು ಹಾಗೂ ಸ್ಥಳಗಳು ಮಗು ನಿಲುಕುವ ನಿಲ್ದಾಣಗಳೇ ಆಗಿವೆ. ಆಲಮೇಲ ಸುತ್ತಮುತ್ತಲಿನ ಪರಿಸರ ಹಾಗೂ ತಮ್ಮ ಗೆಳೆತನ, ಗೆಳತಿಯರ ಹೆಸರುಗಳು ಪಾತ್ರಧಾರಿಗಳಾಗುವುದು ಸಹಜವಾಗಿದೆ. ಹಾಗೆಯೇ ಹಳೆಯ ಕಥೆಗಳು ಅಂದರೆ ರಾಜರ ಮಹಾರಾಜರ ಕಥೆಗಳು ಅಥವಾ ಪೌರಾಣಿಕ ಕಥೆಗಳಲ್ಲಿ ಇರುವ ಪಾತ್ರಧಾರಿಗಳು ತೀರ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಓದುವ ನವ್ಯಳ ಸ್ನೇಹಿತರಂತೆ ಕಾಣುತ್ತಾರೆ. ಕೆಲವು ಕಥೆಗಳು ಎಲ್ಲೋ ಕೇಳಿದಂತೆ ಅಥವಾ ಟಿ ವಿ ಗಳಲ್ಲಿ ಬರುವ ಕಾರ್ಟೂನ್ ಚಿತ್ರಗಳಿಂದ ಪ್ರೇರಿತವಾದಂತೆ ಕಂಡು ಬರುತ್ತವೆ. ತನ್ನ ವೀಕ್ಷಣೆಗೆ ನಿಲುಕಿದ್ದು ಕಥೆಯಾಗಿ ರೂಪಗೊಳ್ಳುವಲ್ಲಿ ಇವೆಲ್ಲ ಮಾಧ್ಯಮಗಳು ಪ್ರಮುಖ ಪಾತ್ರವಹಿಸಿವೆ.

ಮಗು ತನ್ನ ಮನೆಯಲ್ಲಿ ಹಾಗೂ ಸುತ್ತಮುತ್ತಲಿನ ವಾತಾವರಣ ಹಾಗೂ ಶಾಲೆಯಲ್ಲಿ ಕಂಡು ತಿಳಿದ ಕೆಲ ಜೀವನ ಮೌಲ್ಯಗಳನ್ನು ಕಥೆಗಳಲ್ಲಿ ಹಿಡಿದಿಡುವ ಪ್ರಯತ್ನ ಮಾಡಿದ್ದು ಶ್ಲಾಘನೀಯ. ತಾಯಿ ತಂದೆಗೆ ಗೌರವಿಸುವ,ಪ್ರೀತಿಸುವ ಹಾಗೂ ತಾಯಿ ತಂದೆಯರ ಮಕ್ಕಳ ಮೇಲಿನ ಪ್ರೀತಿ ಹಾಗೂ ಸ್ನೇಹ, ನಿಯತ್ತು, ಸಹೋದರತ್ವ ಇವೆಲ್ಲಾ ದೊಡ್ಡವರ ಕಥೆಯಲ್ಲಿ ಹಳಸಿದ ಅಥವಾ ಬೆನ್ನಿಗೆ ಚೂರಿ ಹಾಕುವ ಕಥೆಗಳಾಗಿ ಮಾರ್ಪಡುತ್ತವೆ.

ಕಥೆ ಎನ್ನುವುದು ಮಗುವಿಗೆ ತನ್ನ ಭಾವ ಜಗತ್ತನ್ನು ಜಾಗೃತಿಗೊಳಿಸಿಕೊಳ್ಳುವ ಹಾಗೂ ವಿಸ್ತರಿಸಿಕೊಳ್ಳುವ ಒಂದು ಮಾಧ್ಯಮ. ಕಥೆ ಇಷ್ಟ ಪಡದ ಮಗು ಇರಲು ಸಾಧ್ಯವಿಲ್ಲ. ಮಗುವಿನಿಂದ ವೃದ್ಧರವರೆಗೆ ಸೆಳೆತಹೊಂದಿದ ಈ ಕಥಾ ಮಾಧ್ಯಮಕ್ಕೆ ನವ್ಯ ಅವರು ಕಾಲಿಟ್ಟಿದ್ದು ಸಂತೋಷದ ವಿಚಾರ.

ಹನಿಗಳ ಲೀಲೆ

• ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ಸಾವಿರಾರು ಹನಿಗವನಗಳನ್ನು ರಚಿಸಿರುವ ಎಚ್. ಡುಂಡಿರಾಜ್ ಅವರ ಹೊಸ ಹನಿಗವನಗಳ ಸಂಕಲನವು ಇನ್ನಷ್ಟು ಹೊಸತನದಿಂದ ಕೂಡಿರುವುದು ವಿಶೇಷ.

ಒಲವಿನ ಒಲಂಪಿಕ್ಸ್ – ಇದು ಕವಿ ಎಚ್.ಡುಂಡಿರಾಜ್ ಅವರ ಇತ್ತೀಚಿನ ಹನಿಗವನ ಸಂಕಲನ. ದಾಂಪತ್ಯದ ವಿವಿಧ ಮುಖಗಳನ್ನುಭಿನ್ನವಿಭಿನ್ನ ನೆಲೆಗಳಲ್ಲಿ 492 ಕಿರುಗವನಗಳಲ್ಲಿ ಪರಿಣಾಮಕಾರಿಯಾಗಿ ಕಂಡರಿಸಿರುವುದು ಈ ಕೃತಿಯ ಹೆಗ್ಗಳಿಕೆ. ದಾಂಪತ್ಯದ ಕುರಿತು ಕುವೆಂಪು, ಬೇಂದ್ರೆ, ನರಸಿಂಹ ಸ್ವಾಮಿ ಮೊದಲಾದ ಕವಿಗಳು ಸಾಕಷ್ಟು ಇಡಿ ಪದ್ಯಗಳನ್ನು ಬರೆದು ಸೈ ಎನಿಸಿಕೊಂಡದ್ದು ನಿಜವಾದರೂ ಡುಂಡಿರಾಜರು ಅದೇ ವಸ್ತು, ವಿಷಯಕ್ಕೆ ಇಲ್ಲಿ ಹನಿಗವಿತೆಗಳ ಮೂಲಕ ಹೊಸ ಮೆರಗು ಕೊಡುವಲ್ಲಿ ಯಶಸ್ವಿಯಾಗಿರುವುದು ವಿಶೇಷ. ಸಂಸಾರ ಸಖ್ಯದ ಕಟು ಮಧುರ ವ್ಯಾಖ್ಯಾನವೂ ಇಲ್ಲಿ ನವನವೀನ ರೀತಿಯಲ್ಲಿ ಅನಾವರಣಗೊಂಡಿದೆ. ಒಲವೆ ನಮ್ಮ ಬದುಕು. ಅಲ್ಲಿ ದಕ್ಕಿದ್ದು, ಅದಕ್ಕೆ ಕವಿ ಬರೆದ ಷರಾ ಹೀಗಿದೆ:

**ಒಲವಿನ
ಒಲಂಪಿಕ್ಸ್ ನಲ್ಲಿ
ನಾವು ಪಡೆದ
ಮೆಡಲು
ಮಗ ಮತ್ತು
ಮಗಳು**

ಡುಂಡಿರಾಜ್ ಅವರು ಸಾಕಷ್ಟು ಗಂಭೀರವಾದ ಇಡಿ ಕವಿತೆಗಳನ್ನು ಬರೆದಿದ್ದರೂ ಜನ ಅವರನ್ನು ಗುರುತಿಸುವುದು ಹನಿಗವನಗಳ ಮೂಲಕವೇ. ಅವರು ಹನಿ ಖಜಾಂಚಿ,ಸಣ್ಣ ಪದ್ಯಗಳ ದೊಡ್ಡ ಸರದಾರ. ಮಾತು ಅತ್ಯುನ್ನತ ಸ್ತರದಲ್ಲಿ ಕಾವ್ಯವಾಗುತ್ತದೆ. ಅವರು ಪದಗಳಲ್ಲಿ,ಶಬ್ದಗಳಲ್ಲಿ ಅಡಗಿರುವ ಕಾವ್ಯಾಂಶ ಮಾತಿನ ಮಣಿಮಾಲೆಯ ಮೂಲಕ ಪ್ರಕಟಪಡಿಸುವ ಪರಿ ಬಲುಚೆನ್ನ. ಪರಿಚಿತ ಶಬ್ದ, ವಸ್ತುವಿನಲ್ಲೂ ನವ ನವೋನ್ಮೇಷವನ್ನು ವ್ಯಂಗ್ಯ, ವಿನೋದಗಳ ಮೂಲಕ ಕಾಣುವುದು ಕಾಣಿಸುವುದು ಡುಂಡಿರಾಜ್ ಅವರ ಬರವಣಿಗೆಯ ಅತಿಶಯತೆ.

ಶಬ್ದ ಮುಖವಾಗಿ ಪ್ರತಿಮಾತ್ಮಕವಾಗಿ ಬರೆಯುವ ಅಪೂರ್ವ ಕಲೆ ಅವರಿಗೆ ಲಭಿಸಿದೆ. ಕನ್ನಡದಲ್ಲಿ ಸಣ್ಣ ಪದ್ಯಕ್ಕೆ ಸುದೀರ್ಘವಾದ ಹಿನ್ನೆಲೆಯಿದೆ. ಸರಳವೂ ಸುಂದರವೂ ಆದ ಶರಣರ ವಚನಗಳು ಕಿರು ಕವಿತೆಗಳೇ ಆಗಿದೆ. ಸರ್ವಜ್ಞ ತ್ರಿಪದಿಯ ಸಾರ್ವಭೌಮ. ಹೊಸಗನ್ನಡ ಸಾಹಿತ್ಯದಲ್ಲಿ ಮುಕ್ತಕ ಅಥವಾ ಚುಟುಕು ಸಾಹಿತ್ಯ ಜನಪ್ರಿಯವಾಗಿದೆ. ಡಿವಿಜಿ, ಎಸ್‌ವಿಪಿ, ದಿನಕರ ದೇಸಾಯಿ ಮೊದಲಾದವರು ಈ ಕ್ಷೇತ್ರದಲ್ಲಿ ಚಿರಂತನವಾದ ಕೀರ್ತಿಯನ್ನು ಗಳಿಸಿದ್ದಾರೆ.

ಈ ಸಾಲಿನಲ್ಲಿ ಡುಂಡಿರಾಜರದೂ ದೊಡ್ಡ ಸಾಧನೆ. ಅವರದೇ ಆದ ಶೈಲಿ, ಧಾಟಿಯಿಂದ ಹನಿಗವನಗಳು ನಿಚ್ಚಂ ಪೊಸತು. ಹೊಸಕಾಲದ ಕವಿತಾ ಸೃಷ್ಟಿಯಲ್ಲಿ ಡುಂಡಿರಾಜ್ ಅವರು ಆರು ಸಾವಿರಕ್ಕೂ ಹೆಚ್ಚು ಹನಿಗವನಗಳನ್ನು ಬರೆದು ಅಪೂರ್ವ ಕೃತಿಗಳನ್ನು ರಚಿಸಿ ಅಪಾರವಾದ ಜನಪ್ರಿಯತೆಯನ್ನು ಗಳಿಸಿಕೊಂಡಿದ್ದಾರೆ.

ಡುಂಡಿರಾಜರ ಹನಿಗವನಗಳಲ್ಲಿ ಮುಖ್ಯವಾಗಿ ಕಂಡುಬರುವುದು ಕುಟುಂಬ-ಕಲ್ಯಾಣ ಚಿಂತನ. ಸಮಾಜದ ಕಿರು ಘಟಕ ಕುಟುಂಬ. ಸತಿ- ಪತಿಗಳು ಒಂದಾದರೆ ಶಿವನೂ ಪ್ರಸನ್ನವಾಗುತ್ತಾನಂತೆ. ಗಂಡು-ಹೆಣ್ಣಿನ ಸ್ವಭಾವ ವಿಶ್ಲೇಷಣೆ, ದಾಂಪತ್ಯ, ಸಾಂಸಾರಿಕ ಬದುಕಿನ ಒಳಹೊರಗನ್ನು ಡುಂಡಿರಾಜ್ ಅವರು ಇಲ್ಲಿ ವಿಶ್ಲೇಷಿಸಿದ ಪರಿ ವಿಸ್ಮಯ ಹುಟ್ಟಿಸುತ್ತದೆ. 'ಮದುವೆ' ಎನ್ನುವ ಸಂಸ್ಥೆಯ ಅಂತರಂಗ ಬಹಿರಂಗವನ್ನು ಕವಿ ಕಂಡು ಕಂಡರಿಸಿದ ಬಗೆ ಬಲು ಸೊಗಸಾಗಿದೆ. 'ದಾಂಪತ್ಯ' ಹೇಗಿರಬೇಕೆಂಬುದನ್ನು ಸೂಚಿಸುತ್ತಾ ಅದು ಬಂಧನವಾಗಬಾರದು ಎಂದು ಹೀಗೆ ಹೇಳಿದ್ದಾರೆ,



**ಒಲವಿನ ಒಲಂಪಿಕ್ಸ್
(ಹನಿಗವನಗಳು)
ಲೇ: ಎಚ್. ಡುಂಡಿರಾಜ್
ಪ್ರ: ಸಪ್ನ ಬುಕ್ ಹೌಸ್,
ಬೆಂಗಳೂರು
080-40114455
ಬೆಲೆ ರು. 180/-**

**ಹೊಂದಾಣಿಕೆ ಇದ್ದರೆ
ಘಮಘಮಿಸುವ
ಚಂದನ
ಇಲ್ಲವಾದರೆ ಮದುವೆ
ಇಬ್ಬರಿಗೂ
ಬಂಧನ!**

ಇಲ್ಲಿನ ಚಂದನ-ಬಂಧನ ಪದಲಾಲಿತ್ಯಕ್ಕೆ ವಿವರಣೆ ಅನಗತ್ಯ. ಗಂಡಿಗೂ ಅವನದೇ ಆದ ಜವಾಬ್ದಾರಿಗಳಿವೆ. ಇದನ್ನು 'ಮಡದಿಯ ದೂರು'ಕಿರು ಕವಿತೆಯಲ್ಲಿ ಸೂಕ್ಷ್ಮವಾಗಿ ಹೀಗೆ ಅರುಹಿದ್ದಾರೆ,

**ಮನೆಯ ಜವಾಬ್ದಾರಿ
ಬೇಡವೆ ಗಂಡನಿಗೆ
ತಂದುಕೊಟ್ಟರೆ ಸಾಕೆ
ಸಂಬಳ?
ಊಟ ತಿಂಡಿಗೆ ಮಾತ್ರ
ಮನೆಯೊಳಗೆ ಬರುವರು
ಉಳಿದಂತೆ ಹೊರಗಿಂದ
ಬೆಂಬಲ**

ಗಂಡನ ಪೂರ್ಣ ಸಹಕಾರ ಅಗತ್ಯ ಎಂಬ ಮಾತು ನಿಜವೇ ಆಗಿದೆ. ಅತ್ತೆ ಸೊಸೆ ಕಲಹ, ವಿವಾಹ ಪೂರ್ವ ಸಂಬಂಧ, ಪ್ರೀತಿ, ಪ್ರೇಮ,ಒಲವು, ಮದುವೆ,ವರದಕ್ಷಿಣೆ, ಸ್ತ್ರೀ ಶೋಷಣೆ, ಊಟ, ಉಪಚಾರ, ನಡೆ, ನುಡಿ, ನಂಬಿಕೆ, ಉಡುಗೆ ತೊಡಿಗೆ ಹೀಗೆ ಎಲ್ಲ ಬಗೆಯ ದಾಂಪತ್ಯ ಕೇಂದ್ರಿತ ಸಾಂಸಾರಿಕ ವಿದ್ಯಮಾನಗಳು ಹನಿಗಳಾಗಿ ಕನ್ನಡದ ಬಣ್ಣ ಬನಿಯನ್ನು ಕವಿ ಹೆಚ್ಚಿಸಿದ್ದಾರೆ.ವರದಕ್ಷಿಣೆಯಂಥ ಸಮಸ್ಯೆಗಳನ್ನು ಕವಿತೆಯಾಗಿಸಿ ನಮ್ಮ ಕಣ್ಣು ತೆರೆಯಿಸುವ ಕೆಲಸವನ್ನು ಕವಿ ಇಲ್ಲಿ ಮಾಡಿದ್ದಾರೆ. ಸಮಾಜದ ಸರಿತಪ್ಪುಗಳನ್ನು ಎತ್ತಿಹಿಡಿಯುವ ಪ್ರಯತ್ನವನ್ನು ಇಲ್ಲಿನ ಕವಿತೆಗಳಲ್ಲಿ ಮುಲಾಜಿಲ್ಲದೆ ಮಾಡಿದ್ದಾರೆ. ವರದಕ್ಷಿಣೆಯ ನೆಪದಲ್ಲಿ ಸ್ತ್ರೀ ಶೋಷಣೆಗೈಯುವವರನ್ನು ಕವಿ 'ಕ್ರಿಮಿನಲ್' ಎಂದು ಕರೆದು ತರಾಟೆಗೆ ತೆಗೆದುಕೊಂಡಿದ್ದಾರೆ.

**ವರದಕ್ಷಿಣೆಗಾಗಿ
ಮಡದಿಯ ಪೀಡಿಸಿ
ಕೊಲ್ಲುವವನಿಗೆ
ಮನುಷ್ಯತ್ವ ಇಲ್ಲ
ಏಕೆಂದರೆ ಅವ
ಕ್ರಿಮಿ ನಲ್ಲ!**

ಹೀಗೆ ಇಲ್ಲಿನ ಹನಿಗವಿತೆಗಳು ಸರಳವಾಗಿವೆ,ಸುಂದರವಾಗಿವೆ,ಅರ್ಥಪೂರ್ಣವಾಗಿವೆ. ಡುಂಡಿರಾಜರ ಕಿರು ಕವಿತೆಗಳು ಚೇತೋಹಾರಿಯಾಗಿದ್ದು ನಮ್ಮನ್ನು ಚಿಂತನೆಗೆ ಹಚ್ಚಬಲ್ಲ ತಾಕತ್ತನ್ನು ಹೊಂದಿವೆ. ಇತ್ತೀಚಿಗೆ ಬಂದ ಅವರ ಹನಿಗವಿತೆಗಳ ಸಂಕಲನಗಳಲ್ಲಿ ಪ್ರಸ್ತುತ ಕೃತಿಗೆ ಮೇಲಾದ ಸ್ಥಾನವಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಆತ್ಮನಿವೇದನೆ
(ಬನ್ನಂಜೆ ಗೋವಿಂದಾಚಾರ್ಯರು ನಿವೇದಿಸಿದ ಆತ್ಮಕಥನ)
ನಿರೂಪಣೆ : ಬನ್ನಂಜೆ ಗೋವಿಂದಾಚಾರ್ಯರು
ಬರೆಹ : ವೀಣಾಬನ್ನಂಜೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 360/-



2
ಠಕ್ಕನೊಬ್ಬನ ಆತ್ಮಚರಿತ್ರೆ
(ಈಗ ನಿರ್ಮೂಲನೆಗೊಂಡಿರುವ ಠಕ್ಕ ಜನಾಂಗದ ಕಥೆ)
ಲೇ: ಮೆಡೋಸ್ ಟೇಲರ್
ಅನು : ಎನ್. ಪಿ. ಶಂಕರನಾರಾಯಣರಾವ್
ಪ್ರ: ಅಂಕಿತಪುಸ್ತಕ, ಬೆಂಗಳೂರು
ಬೆಲೆ : ರೂ 250/-



3
ದೂರದೇಶವಾಸಿ
(ಜನಪ್ರಿಯ ಅಂಕಣ ಬರಹಗಳು)
ಲೇ: ಕಿರಣ್ ಉಪಾಧ್ಯಾಯ
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : 250/-



4
ಪ್ರಾಚೀನ ಭಾರತದ ಮಹರ್ಷಿಗಳು
(ಪ್ರಸಿದ್ಧ 30 ಋಷಿಗಳ ಪರಿಚಯ)
ಲೇ: ಡಾ। ಎಸ್. ಹೇಮಲತಾ
ಪ್ರ: ರಾಷ್ಟ್ರೋತ್ಥಾನ ಸಾಹಿತ್ಯ, ಬೆಂಗಳೂರು
ಬೆಲೆ : ರೂ 100/-



5
ಲಿಯೋ ಟಾಲ್‌ಸ್ಟಾಯ್ ಸಾಹಿತ್ಯದ ನೆಲೆಗಳು
(ಕನ್ನಡದಲ್ಲಿ ಟಾಲ್‌ಸ್ಟಾಯ್ ಸಾಹಿತ್ಯದ ವಿವಿಧ ನೆಲೆಗಳ ಪರಿಚಯ)
ಲೇ: ಡಾ। ಪ್ರದೀಪ್ ಆರ್.ಎನ್.
ಪ್ರ: ಬಂಡಾರ ಪ್ರಕಾಶನ, ಮಸ್ಕಿ
ಬೆಲೆ : ರೂ 300/-



6
ಮಹಾ ವಿನಾಶ
(ಮೌರ್ಯ ಸಾಮ್ರಾಜ್ಯದ ಅವನತಿ ಕುರಿತ ಕಾದಂಬರಿ)
ಲೇ: ಡಾ। ಲಕ್ಷ್ಮಣ ಕೌಂಟೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 450/-

7
ಮ್ಯಾಜಿಕ್ ಸೌಟು
(ಕಥಾಸಂಕಲನ)
ಲೇ: ಪೂರ್ಣಿಮಾ ಮಾಳಗಿಮನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 180/-

8
ಬದುಕು ಮತ್ತು ಭಾರತ
(ಬದುಕಿನ ಪ್ರಶ್ನೆಗಳಿಗೆ ವೈಜ್ಞಾನಿಕ ನೆಲೆಗಟ್ಟಿನಲ್ಲಿ ಉತ್ತರಿಸುವ ಪ್ರಯತ್ನ)
ಲೇ: ತೀರ್ಥರಾಮ ವಳಲಂಬೆ
ಪ್ರ:ಯಾನ ಪ್ರಕಾಶನ, ಮಂಗಳೂರು
ಬೆಲೆ : ರೂ 200/-

9
ಸಿಗ್ನಲ್ ಜಂಪ್
(ದಿಕ್ಕು ತಪ್ಪಿದ ಕತೆಗಳು)
ಲೇ: ರವೀಂದ್ರ ಮುದ್ದಿ
ಪ್ರ: ಅವ್ವ ಪುಸ್ತಕಾಲಯ, ಬೆಂಗಳೂರು
ಬೆಲೆ : ರೂ 150/-



10
ಧ್ಯಾನಕ್ಕೆ ಕೂತ ನದಿ
ಈ ಹೊತ್ತಿಗೆ ಕಥಾ ಪ್ರಶಸ್ತಿ ಪುರಸ್ಕೃತ ಕೃತಿ)
ಲೇ: ಸದಾಶಿವ ಸೊರಟೂರು
ಪ್ರ: ಬಹುರೂಪಿ, ಬೆಂಗಳೂರು
ಬೆಲೆ : ರೂ 180/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755 ಮೊಬೈಲ್ ನಂ: 9019190502

ಒಡನಾಟ
• ಶ್ರೀಧರಮೂರ್ತಿ ಎನ್.ಎಸ್.

ಗಾನಕೊಂದು ಎಲ್ಲೆ ಎಲ್ಲಿದೆ!

ಉಪೇಂದ್ರ ಕುಮಾರ್ ಅವರನ್ನು ನಾನು ನೋಡಿದ್ದು ಹೆಚ್ಚಾಗಿ ಹೋಟಲ್ ಜನಾರ್ದನದಲ್ಲಿ ಇಲ್ಲವೆ ಚಾಮುಂಡೇಶ್ವರಿ ಸ್ಟುಡಿಯೋದಲ್ಲಿ. ಅವರು ಕಾರ್ಯಕ್ರಮಗಳಿಗೆ ಬರುತ್ತಿದ್ದದ್ದು ಅಪರೂಪ. ಹೆಚ್ಚು ಮಾತಿನವರಲ್ಲ. ಸಂಗೀತದ ಶಾಸ್ತ್ರೀಯತೆಯ ಬಗ್ಗೆ ಹೆಚ್ಚು ಆಸಕ್ತರು. ಹಾಡಿನ ಹಿಂದಿನ ಕತೆ ಎನ್ನುವಾಗಲೂ ಸ್ವರಸ್ಥಾನಗಳ ಕುರಿತೇ ಮಾತನಾಡುತ್ತಿದ್ದರು. ವಾದ್ಯಗಳ ಬಗ್ಗೆ ಅವರಿಗೆ ಇದ್ದ ಜ್ಞಾನ ಅಸಾಧಾರಣವಾದದ್ದು. ಏನಾದರೂ ಪ್ರಶ್ನೆಗಳನ್ನು ಕೇಳಿದರೆ ವಯೋಲಿನ್ ನುಡಿಸುವ ಮೂಲಕವೇ ಉತ್ತರ ಹೇಳುತ್ತಿದ್ದರು. ಅದರಲ್ಲಿಯೂ 'ಬಾನಿಗೊಂದು ಎಲ್ಲೆ ಎಲ್ಲಿದೆ' ನುಡಿಸಿದರಂತೂ ಅದು ದಿವ್ಯಾನುಭೂತಿಯೇ ಸರಿ!

ಉಪೇಂದ್ರ ಕುಮಾರ್ ಹುಟ್ಟಿದ್ದು ಒರಿಸ್ಸಾ ಮತ್ತು ಆಂಧ್ರಪ್ರದೇಶದ ಗಡಿಭಾಗದಲ್ಲಿರುವ ಅನಂಗ್ ಪುರ ಎನ್ನುವ ಚಿಕ್ಕ ಹಳ್ಳಿಯಲ್ಲಿ; 1941ರ ಜುಲೈ 18ರಂದು. ತಂದೆ ಲಕ್ಷ್ಮಣ್ ಸ್ವಾಮಿ ಮತ್ತು ನಾನ್ ಚಾರಿಯಮ್ಮ. ಇಬ್ಬರು ಅಕ್ಕಂದಿರು ಮತ್ತು ತಮ್ಮ-ತಂಗಿ ಇದ್ದ ಕುಟುಂಬ ಅವರದು. ತಂದೆ ಊರಿನ ಪುರೋಹಿತ, ವೈದ್ಯ, ಜ್ಯೋತಿಷಿ ಹೀಗೆ ಬಹುಮುಖಿ ಪ್ರತಿಭಾವಂತರು. ಚಿಕ್ಕವರಿದ್ದಾಗ ಉಪೇಂದ್ರ ಕುಮಾರ್ ಶಾಲೆಗೆ ಹೋಗಲು ಹದಿನಾಲ್ಕು ಕಿಲೋಮೀಟರ್ ನಡೆಯ ಬೇಕಿತ್ತು. ಹೀಗಾಗಿ ಏಳನೆಯ ತರಗತಿಗೇ ಶಾಲೆ ಬಿಟ್ಟರು. ಸೋದರಮಾವ ಅಪ್ಪಾರಾವ್ ಸಂಗೀತ ಶಾಲೆಗೆ ಸೇರಿಸಿದರು. ಭುವನೇಶ್ವರ ಮಿಶ್ರ ಬಳಿ ಉಪೇಂದ್ರ ಕುಮಾರ್ ವಯೋಲಿನ್ ಕಲಿತರು. ಬಾಲಕೃಷ್ಣ ದಾಸ್ ಬಳಿ ಹಿಂದೂಸ್ತಾನಿ ಕಲಿತರು. ದಿಗ್‌ಭಜನ್ ಸಿಂಗ್ ಬಳಿ ಪಾಶ್ಚಾತ್ಯ ಸಂಗೀತ ಕಲಿತರು. ಕಟಕ್‌ನ ಉತ್ಕಲ್ ಕಾಲೇಜ್‌ನಿಂದ ಸಂಗೀತ ಪದವಿಯೂ ಸಿಕ್ಕಿತು. ಕೆಲಕಾಲ ಕಟಕ್ ಆಕಾಶವಾಣಿಯಲ್ಲಿಯೂ ಕೆಲಸ ಮಾಡಿದರು. ಕೊಳಲು ಸಾಧಕ ಹರಿಪ್ರಸಾದ್ ಚೌರಾಸಿಯಾ ಅವರ ಸಹೋದ್ಯೋಗಿ.

ಆದರೆ ಉಪೇಂದ್ರ ಕುಮಾರ್ ಆಸಕ್ತಿ ಇದ್ದಿದ್ದು ಸಂಗೀತ ನಿರ್ದೇಶಕರಾಗುವ ಕಡೆ. ಸಿತಾರ್ ವಾದಕರಾಗಿದ್ದ ಸೋದರ ಟಿ. ಕೃಷ್ಣ, ಕೀಬೋರ್ಡ್ ವಾದಕರಾಗಿದ್ದ ಅಕ್ಕನ ಮಗ ಚಕ್ರವರ್ತಿ ಜೊತೆ ಅವಕಾಶ ಅರಸಿ ಮದ್ರಾಸಿಗೆ ಬಂದರು. ಮೂವರು ಮಲಗಿದರೆ ಮಧ್ಯ ಸೊಳ್ಳೆಗೂ ಜಾಗವಿಲ್ಲ ಅಷ್ಟು ಪುಟ್ಟ ಕೋಣೆ ಹಿಡಿದರು. ಆಗ ಮದ್ರಾಸ್ ದಕ್ಷಿಣ ಭಾರತ ಚಿತ್ರರಂಗದ ಕೇಂದ್ರವಾಯಿತು; ಅಲ್ಲಿ ಹುಡುಕಾಟ ಆರಂಭವಾಯಿತು. ಆದರೆ ಯಾವ ಸ್ಟುಡಿಯೋ ಒಳಗೆ ಹೋಗಲೂ ಪ್ರವೇಶ ಸಿಕ್ಕಲಿಲ್ಲ. ಜೀವನ ನಿರ್ವಹಣೆಗೆ ಸಂಗೀತ ಪಾಠ ಹೇಳಲು ಆರಂಭಿಸಿದರು. ಗೀತಾ ಅವರಿಗೆ ಶಿಷ್ಯೆಯಾಗಿ ಸಿಕ್ಕಿದ್ದು ಹೀಗೆ. ಅವರು ಫೀಸ್ ಕೇಳುತ್ತಿರಲಿಲ್ಲ, ಇವರೂ ಕೊಡುತ್ತಿರಲಿಲ್ಲ. ಆಮೇಲೆ ತಿಳಿದು ಬಂದಂತೆ ಆಗಿನ ಅವರ ದಿನಚರಿ ಹೀಗಿತ್ತು. ಬೆಳಿಗ್ಗೆ ಒಂದು ಟೀ ಮಧ್ಯಾಹ್ನ ಉಪವಾಸ, ಗೀತಾ ಅವರ ಮನೆಯಲ್ಲಿ ರಾತ್ರಿ ಊಟಕ್ಕೆ ಒತ್ತಾಯಿಸಿದರೆ ಊಟ, ಇಲ್ಲದಿದ್ದರೆ ಒಂದು ಬಾಳೆ ಹಣ್ಣು ತಿಂದು ಮಲಗುತ್ತಿದ್ದರು. ಶಿಷ್ಯೆ ತನ್ನನ್ನು ಪ್ರೀತಿಸುತ್ತಿರುವ ವಿಷಯ ಉಪೇಂದ್ರ ಕುಮಾರ್ ಅವರಿಗೆ ಗೊತ್ತೇ ಇರಲಿಲ್ಲ. ಅದು ಬಹಳ ದಿನ ಒನ್ ಸೈಡೆಡ್ ಆಗಿಯೇ ಇತ್ತು. ಉಪೇಂದ್ರ ಕುಮಾರ್ ಅವರ ತಾಯಿಯ ಆರೋಗ್ಯ ಚೆನ್ನಾಗಿರಲಿಲ್ಲ, ಅಕ್ಕನಿಗೆ ಕ್ಯಾನ್ಸರ್ ಆಯಿತು. ಅವರ ಸೇವೆ ಮಾಡಿ ಗೀತಾ ಮನೆಯವರ ವಿಶ್ವಾಸಗಳಿಸಿದರು. ಮನೆಯವರ ಒತ್ತಾಯಕ್ಕೆ ಮಣಿದು ಉಪೇಂದ್ರ ಕುಮಾರ್ ಮದುವೆಯಾದರು. ಆದರೆ ಗೀತಾ ಮೇಡಂ ಹಾಡನ್ನು ನಿಲ್ಲಿಸಿದ ಬಗ್ಗೆ ಅವರಿಗೆ ಬೇಸರವಿತ್ತು. ಆದರೆ ತಮ್ಮ ಒಬ್ಬನೇ ಮಗ ಮನೋಜ್ ಕುಮಾರ್‌ನನ್ನು ಸಂಗೀತ ಕಡೆ ಬರುವಂತೆ ಒತ್ತಾಯಿಸಲಿಲ್ಲ.

ಪ್ರವೇಶ ನೀಡಿದ ಕಠಾರಿ ವೀರ

ಮದ್ರಾಸಿನ ಗೋಲ್ಡನ್ ಸ್ಟುಡಿಯೋದಲ್ಲಿ ಉಪೇಂದ್ರ ಕುಮಾರ್ ಮೈ ಮರೆತು ಹಿಂದೂಸ್ತಾನಿ ತುಮ್ರಿ ಹಾಡುತ್ತಿದ್ದಾರೆ. ಅದನ್ನು ಕೇಳಿ ಡಾ.ರಾಜ್‌ಕುಮಾರ್ ಬೆರಗಾದರು. ನಿರ್ದೇಶಕ ವೈ.ಆರ್. ಸ್ವಾಮಿಯವರಿಗೆ ವಿಷಯ ಮುಟ್ಟಿಸಿದರು. ಪರಿಣಾಮ ಉಪೇಂದ್ರ ಕುಮಾರ್ 'ಕಠಾರಿ ವೀರ' ಚಿತ್ರಕ್ಕೆ ಸಂಗೀತ ನಿರ್ದೇಶಕರಾದರು.

ಒಂದೇ ದಿನ ಹದಿನೇಳು ಗೀತೆಗಳನ್ನು ಸಂಯೋಜನೆ ಮಾಡಿದ ವಿಶಿಷ್ಟ ದಾಖಲೆ ಹೊಂದಿರುವ ಉಪೇಂದ್ರ ಕುಮಾರ್ ಅವರಿಗೆ ಕಾಪಿ ರಾಗ ಬಹಳ ಇಷ್ಟ, ಈ ರಾಗದಲ್ಲಿ ಅವರು ಸಂಯೋಜನೆ ಮಾಡಿದ ಇದು ಯಾರು ಬರೆದ ಕಥೆಯೋ ಮರೆಲಾಗದಂತಹ ಗೀತೆ.

ಮುಂದೆ ಉಪೇಂದ್ರ ಕುಮಾರ್, ರಾಜ್ ಕುಮಾರ್ ಮಾತ್ರವಲ್ಲದೆ ಅವರ ನಾಲ್ವರು ಮಕ್ಕಳಿಗೂ ಹಿಂದೂಸ್ತಾನಿ ಪಾಠ ಮಾಡಿದರು. ಶಾಸ್ತ್ರೀಯ ವಿಚಾರದಲ್ಲಿ ಅವರು ಬಹಳ ಕಠಿಣರು. ಒಂದಿಂಚು ನೋಟ್ ವ್ಯತ್ಯಾಸವಾಗಲೂ ಅವಕಾಶ ಕೊಡುತ್ತಿರಲಿಲ್ಲ. ಎಷ್ಟೇ ದೊಡ್ಡ ಗಾಯಕರಾದರೂ ಅವರ ಜೊತೆ ಕೆಲಸ ಮಾಡುವಾಗ ಎಚ್ಚರದಿಂದಿರುತ್ತಿದ್ದರು. ಬೆಂಗಳೂರಿಗೆ ಬಂದರೆ ಇಳಿದು ಕೊಳ್ಳುತ್ತಿದ್ದದ್ದು ಹೋಟಲ್ ಜನಾರ್ಧನದಲ್ಲಿ ಚಾಮುಂಡೇಶ್ವರಿಯಲ್ಲಿ ರೆಕಾರ್ಡಿಂಗ್ ಇದ್ದರೆ ಕಾರಿಗೆ ಕಾಯದೆ ನಡೆದೇ ಹೋಗಿ ಬಿಡುತ್ತಿದ್ದರು. ವಾದ್ಯಗಾರರನ್ನು ಅವರು ನೋಡಿ ಕೊಳ್ಳುತ್ತಿದ್ದ ರೀತಿ ಎಲ್ಲರಿಗೂ ಮಾದರಿಯಾಗುವಂತಹದು. ನಿರ್ಮಾಪರಿಂದ ಹಣ ಬರುವುದು ತಡವಾದರೆ ತಾವೇ ಕೈಯಿಂದ ಕೊಟ್ಟು ಬಿಡುತ್ತಿದ್ದರು.

ಉಪೇಂದ್ರ ಕುಮಾರ್ ಸದಾ ಪ್ರಯೋಗಶೀಲತೆ ಹುಡುಕುತ್ತಿದ್ದರು. 'ಸಿಪಾಯಿ ರಾಮು' ಚಿತ್ರದ ಗೀತೆಗಳು ಒಂದಕ್ಕಿಂತಲೂ ಒಂದು ವಿಶಿಷ್ಟವಾಗಿದೆ. 'ಶಂಕರ್ ಗುರು' ಚಿತ್ರದಲ್ಲಿಯೂ ವೈವಿಧ್ಯತೆಯನ್ನು ತಂದಿದ್ದಾರೆ. 'ಧರ್ಮಸೆರೆ'ಯಲ್ಲಿನ 'ಮೂಕ ಹಕ್ಕಿಯು ಹಾಡುತಿದೆ'ಯಲ್ಲಿ ಭಾವಗೀತೆ ಗುಣ ತಂದರೆ ಪ್ರಾಯ ಪ್ರಾಯ ಪ್ರಾಯ ಚಿತ್ರದ ಥೈಯ ಥಕ್ಕದಲ್ಲಿ ಜನಪದದ ಗುಣ ತಂದರು. 'ಶಿಲೆಗಳು ಸಂಗೀತವಾ ಹಾಡಿವೆ' ಮಾಲ್‌ಕೌಂಸ್‌ನ ವಿಸ್ತಾರ ಹಿಡಿದರೆ, 'ಹೃದಯದಲಿ ಇದೇನಿದು' ಸಹಜ ಭಾವತೀವ್ರತೆಯಲ್ಲಿ ಬೆಳೆದಿದ್ದು. 'ಆ ರತಿಯೇ ಧರೆಗಿಳಿದಂತೆ' ಒಂದು ಮಹತ್ವದ ಪ್ರಯೋಗ – ಇದರಲ್ಲಿನ ಮೂರೂ ಚರಣಗಳೂ ವಿಭಿನ್ನ ಸ್ವರ ಪ್ರಸ್ತಾರ ಹೊಂದಿವೆ. ಹಾಡಿನದಲ್ಲಿ ಕಲ್ಯಾಣಿ ಮತ್ತು ಷಣ್ಮುಖಪ್ರಿಯ ರಾಗಗಳು ಹೆಣೆದ ಹಾವಿನಂತೆ ಸಾಗುವ ರೀತಿಯೇ ಅದ್ಭುತ. ಪರೋಪಕಾರಿಯ 'ಜೋಕೆ ನಾನು ಬಳ್ಳಿಯ ಮಿಂಚ'ನಿಂದ ನಂಜುಂಡಿ ಕಲ್ಯಾಣದ 'ಒಳಗೆ ಸೇರಿದರೆ ಗುಂಡು' ಗೀತೆಯವರೆಗೆ ಅವರು ಕೊಟ್ಟ ಕ್ಯಾಬರೆ ಗೀತೆಗಳದ್ದು ಇನ್ನೊಂದು ವಿಶಿಷ್ಟ ಕಥನ. ಒಂದೇ ದಿನ ಹದಿನೇಳು ಗೀತೆಗಳನ್ನು ಸಂಯೋಜನೆ ಮಾಡಿದ ವಿಶಿಷ್ಟ ದಾಖಲೆ ಹೊಂದಿರುವ ಉಪೇಂದ್ರ ಕುಮಾರ್ ಅವರಿಗೆ ಕಾಪಿ ರಾಗ ಬಹಳ ಇಷ್ಟ, ಈ ರಾಗದಲ್ಲಿ ಅವರು ಸಂಯೋಜನೆ ಮಾಡಿದ ಇದು ಯಾರು ಬರೆದ ಕಥೆಯೋ ಮರೆಲಾಗದಂತಹ ಗೀತೆ.

ಉಳುವ ಯೋಗಿಯ ನೋಡಲ್ಲಿ

ಉಪೇಂದ್ರ ಕುಮಾರ್ ಭಕ್ತಗೀತೆಗಳಿಗೂ ಸ್ವರ ಸಂಯೋಜನೆ ಮಾಡಿದ್ದಾರೆ. ಮಂತ್ರಾಲಯಕೆ ಹೋಗೋಣ, ಎಲ್ಲಿ ಹನುಮನೋ ಅಲ್ಲಿ ರಾಮನು, ಹಾಲಲ್ಲಾದರು ಹಾಕು ಎಲ್ಲವೂ ಜನಪ್ರಿಯವೇ, ಕುವೆಂಪು ಅವರ ಅಂತಂಗದ ಮೃದಂಗ, ಬಾರಿಸು ಕನ್ನಡ ಡಿಂಡಿಮವಾ, ತೇನವಿನಾ ಮೊದಲಾದ ಗೀತೆಗಳಿಗೆ ಅವರು ರಾಗ ಸಂಯೋಜನೆ ಮಾಡಿದರು, ಶ್ರೀರಾಮಾಯಣ ದರ್ಶನಂ, ಮಂಕುತಿಮ್ಮನ ಕಗ್ಗಕ್ಕೆ ಕೂಡ ಅವರು ಸ್ವರ ಸಂಯೋಜನೆ ಮಾಡಿದ್ದರು. ಕನ್ನಡ ಚಿತ್ರರಂಗಕ್ಕೆ ಬಂದ ನಂತರ ಕನ್ನಡ ಕಲಿತು ಅವರು ಮಾಡಿರುವ ಈ ಸಾಧನೆ ಬಹಳ ದೊಡ್ಡದು. ರೈತಗೀತೆಯಾಗಿ ಅಂಗೀಕಾರವಾಗಿರುವ 'ಉಳುವ ಯೋಗಿಯ ನೋಡಲ್ಲಿ'ಗೆ ಸ್ವರ ಸಂಯೋಜನೆ ಮಾಡಿದವರು ಉಪೇಂದ್ರ ಕುಮಾರ್. ಹಂಸಲೇಖ ಅವರ ಮೊದಲ ಗೀತೆ 'ನೀನಾ ಭಗವಂತ'ಕ್ಕೆ ಅವರದೇ ಸಂಗೀತ. ಮಂಜುಳಾ ಗುರುರಾಜ್, ಸಂಗೀತ ಕಟ್ಟಿ ಹೀಗೆ ಕನ್ನಡದ ಪ್ರತಿಭೆಗಳನ್ನು ಬೆಳೆಸಿದ ಹೆಗ್ಗಳಿಕೆ ಅವರದು.

2000ದಲ್ಲಿ ಉಪೇಂದ್ರ ಕುಮಾರ್ ಬೆಂಗಳೂರಿಗೆ ಬಂದರು. ಇಲ್ಲಿ ಸಂಶೋಧನ ಕೇಂದ್ರ ಮಾಡುವ ಉದ್ದೇಶ ಅವರಿಗಿತ್ತು. ಕ್ಯಾನ್ಸರ್ ರೋಗಿಗಳಿಗೆ ಸಂಗೀತ ಚಿಕಿತ್ಸೆ ನೀಡುವ ಕುರಿತು ಅವರು ಹಲವರ ಬಳಿ ಚರ್ಚೆ ಮಾಡುತ್ತಿದ್ದರು. ಸ್ವರ ಸಂಯೋಜನೆ ಸ್ವರೂಪದ ಕುರಿತು ಪಠ್ಯ ರೂಪಿಸುವ ಉದ್ದೇಶ ಅವರಿಗಿತ್ತು. ಆದರೆ ಬೆಂಗಳೂರಿನ ಚಳಿ ತಡೆದುಕೊಳ್ಳಲಾಗದೇ, 2002ರ ಜನವರಿ 24ರಂದು ತಮ್ಮ ಜೀವನ ಸಂಗೀತ ಮುಕ್ತಾಯಗೊಳಿಸಿದರು.

ಮುಂಬಯಿಯ ವೇಗದ ಬದುಕಿನಲ್ಲಿ, ಅನ್ನದೇವರ ನಿತ್ಯ ಮೆರವಣಿಗೆ ನಡೆಯುತ್ತದೆ; ಇದಕ್ಕೆ ಪಕ್ಕವಾದ್ಯ ನೀಡುವವರು ಮುಂಬಯಿಯ ಡಬ್ಬಾವಾಲಾ!

ಅನ್ನ ದೇವರ ನಿತ್ಯ ಮೆರವಣಿಗೆ

ಮುಂಬಾಪುರಿ
• ಕಲಾ ಭಾಗ್ವತ್

ಏರು ಬೆಳಗಿನಲ್ಲೇ ಮುಂಬೈ ಮಾಯಾ ನಗರಿಯ ಕೆಲವು ಗಲ್ಲಿ, ಗದ್ದಲಗಳ ನಡುವೆ ಹೊಳೆವ ಬಿಳಿಯ ಗಾಂಧಿ ಟೋಪಿ ಬಿಳಿಯ ಸಮವಸ್ತ್ರವನ್ನು ಧರಿಸಿದ ಡಬ್ಬಿಯಣ್ಣನವರ ಸಂಚಾರವು ಚುರುಕಾಗಿರುವುದು. ತಮ್ಮ ಮೂಲಕ ಊಟ ತರಿಸಿಕೊಳ್ಳುವವರ ಮನೆ ಬಾಗಿಲಿಗೆ ಹೋಗಿ ಕರೆಗಂಟೆ ಒತ್ತುವ ಇವರು ಮನೆಯೊಡತಿಯು ಕೈಯಲ್ಲಿ ಹಿಡಿಸುವ ಡಬ್ಬಿಯನ್ನು ಜೋಪಾನವಾಗಿ ಸಂಬಂಧ ಪಟ್ಟವರಿಗೆ ಮುಟ್ಟಿಸುವುದರಲ್ಲಿ ನಿಸ್ಸೀಮರು. ಖಾಲಿಯಾದ ಬುತ್ತಿಯನ್ನು ತಿರುಗಿ ಅದೇ ಮನೆಗೆ ಕೊಟ್ಟ ಬಳಿಕವೇ ಅವರ ಆ ದಿನದ ಕೆಲಸವು ಮುಗಿಯುವುದು. ಬಣ್ಣ ಬಣ್ಣದ ಚೀಲವನ್ನು ಧರಿಸಿದ ಡಬ್ಬಿಗಳು ದ್ವಿಚಕ್ರವಾಹನಗಳ ಹಿಂಭಾಗದಲ್ಲಿ ನೇತಾಡಿಕೊಂಡು ಅಥವಾ ಆಯಾತಾಕಾರದ ಬುಟ್ಟಿಗಳೊಳಗೆ ಕುಳಿತು ಕಚೇರಿಗಳ ಕಡೆಗೆ ಮುಖ ಮಾಡುವವು. ಹೇಗಿರುವಿರಿ? ಹದುಳವೆ? ಸಿಹಿಯೋ? ಖಾರವೋ? ಉಪ್ಪೋ? ಕಹಿಯೋ? ಎಂಬುದಾಗಿ ಪರಸ್ಪರ ಕುಶಲೋಪರಿಯನ್ನು ವಿಚಾರಿಸಿಕೊಳ್ಳುತ್ತ ತಮ್ಮ ತಮ್ಮ ಗುರುತಿನ ಸಂಖ್ಯೆಯೊಂದಿಗೆ ತಲುಪಿಸಬೇಕಾದ ಪ್ರದೇಶಗಳಿಗೆ ಅನುಸಾರವಾಗಿ ಮಾಲಿಕನು ಹಚ್ಚಿದ ಬಣ್ಣದ ಗುರುತಿನೊಂದಿಗೆ ಗುರಿಯ ಕಡೆ ಸಾಗುತ್ತವೆ.

ಮನೆಯ ಬಿಸಿಬಿಸಿ ಅಡಿಗೆ ರುಚಿಯೊಂದಿಗೆ ದೈಹಿಕವಾಗಿ ಹಸಿವನ್ನು ಇಂಗಿಸುವ ಈ ಊಟವು ಕುಟುಂಬದೊಂದಿಗೆ ಭಾವನಾತ್ಮಕವಾಗಿಯೂ ಬೆಸೆಯುತ್ತದೆ. ಅಷ್ಟೇ ಅಲ್ಲ ಮನೆಯ ಆಪ್ತತೆಯನ್ನು ಆಫೀಸಿನಲ್ಲಿಯೂ ಮನಸಾರೆ ಅನುಭವಿಸುವ ಅವಕಾಶವು ಮುಂಬಯಿಯ ಕಾಯಕ ಜೀವಿಗಳಿಗೆ ಲಭ್ಯವಾಗಿರುವುದು ಇಲ್ಲಿನ ಜಗತ್ಪ್ರಸಿದ್ಧ ಡಬ್ಬಾವಾಲಾಗಳಿಂದ. ಮುಂಬಯಿಯ ಸ್ಥಳೀಯ ವೃತ್ತಿಗಳಲ್ಲಿ ಒಂದಾದ ಬುತ್ತಿ ತಲುಪಿಸುವಿಕೆಗೆ ಹತ್ತಿರ ಹತ್ತಿರ ಎರಡು ಶತಮಾನಗಳ ಇತಿಹಾಸವಿದೆ ಎಂಬುದು ವಿಶೇಷ. ಇದು 1890ರಲ್ಲಿ ಪಾರ್ಸಿ ಬ್ಯಾಂಕ್ ಅಧಿಕಾರಿಯ ಇಚ್ಛೆಯ ಮೇರೆಗೆ ಅನೌಪಚಾರಿಕವಾಗಿ ಈ ವ್ಯವಸ್ಥೆಯು ಆರಂಭವಾಯಿತು. ಬೇಡಿಕೆ ಹೆಚ್ಚಿದಂತೆ ಹೆಚ್ಚು ಜನರನ್ನು ಸೇರಿಕೊಂಡು ಡಬ್ಬಾವಾಲಾ ಸಂಘದ ಮೂಲಕ ಬೇರೆ ಬೇರೆ ನಮೂನೆಯಲ್ಲಿ ಊಟದಣ್ಣನಾಗಿ ಆಹಾರವನ್ನೊದಗಿಸಿದರು. ಇದು ಗುಂಪಿನಲ್ಲಿ ಮಾಡುವ ಕೆಲಸವೇ ಆದರೂ ಅಂಚೆ ಕಚೇರಿಯನ್ನು ತಲುಪಿದ ಪತ್ರಗಳನ್ನು ಬಟವಾಡೆ ಮಾಡುವ ವಿಧಾನದಂತೆ ಬುತ್ತಿಯನ್ನು, ಎಲ್ಲರ ಮನೆಯಿಂದ ಪಡೆದುಕೊಂಡು ಒಂದು ನಿರ್ದಿಷ್ಟವಾದ ಸ್ಥಳದಲ್ಲಿಟ್ಟು ಅದನ್ನು ವಿಂಗಡಿಸಿ ಬೇರೆ ಬೇರೆ ಗುಂಪಿಗೆ ಸೇರಿಸಲಾಗುತ್ತದೆ. ಆಸುಪಾಸಿನ ಜಾಗಗಳಿಗೆ ತಲುಪಿಸುವ ವಿಂಗಡಣೆಯು ಮೊದಲ ಹಂತ.

ಇದಕ್ಕಿಂತಲೂ ಮುಂದೆ ಹೋಗಬೇಕೆಂದರೆ ಬೇರೆ ಬೇರೆ ರೈಲು ನಿಲ್ದಾಣಗಳಿಗೆ ತಲುಪಿಸುವ ವಿಂಗಡಣೆ. ನಿಲ್ದಾಣದಿಂದ ಅದನ್ನು ಮುಂದೆ ಒಯ್ಯುವವರು ಬೇರೆಯ ಬುತ್ತಿಯಣ್ಣ. ಕಲಿತದ್ದು ಕಡಿಮೆಯಾದರೂ ನಿಖರವಾಗಿ ಊಟದ ಬುತ್ತಿಯನ್ನು ತಲುಪಿಸುವ ಡಬ್ಬಾವಾಲರ ಕೌಶಲ್ಯವು ಕಂಪನಿಗಳಲ್ಲಿ ಕೆಲಸ ಮಾಡುವವರಿಗಿಂತ ಕಡಿಮೆಯೇನಿಲ್ಲ. ಅದರಿಂದಲೇ ಇರಬಹುದು ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆದು ವಿಶ್ವವಿಖ್ಯಾತರಾಗಿದ್ದಾರೆ. ಮಹಾರಾಷ್ಟ್ರದ ವಾರಕರಿ ಪಂಥಕ್ಕೆ ಸೇರಿದ ಹೆಚ್ಚಿನ ಡಬ್ಬವಾಲರು ಗಂಡಸರೇ ಆಗಿರುತ್ತಾರೆ. ಇತ್ತೀಚೆಗೆ ತಾವೇ ಅಡುಗೆಯನ್ನು ತಯಾರಿಸಿ ಹಂಚುವ ಕೆಲಸವು ಆರಂಭವಾಗಿರುವುದರಿಂದ ಮಹಿಳೆಯರೂ ಇದಕ್ಕೆ ಕೊಂಡಿಯಾಗಿದ್ದಾರೆ. ಮೊದಲು ಕೇವಲ ಸೀಮಿತ ಪ್ರದೇಶಗಳಲ್ಲಿ ಮಾತ್ರ ಸಣ್ಣ ಪ್ರಮಾಣದಲ್ಲಿ ನಡೆಯುತ್ತಿದ್ದ ಈ ಕಾಯಕವು ಮುಂದೆ ಮೂರು ಸ್ಥಳೀಯ ರೈಲು ಮಾರ್ಗಗಳ ವ್ಯಾಪ್ತಿಗೂ ಹರಡಿಕೊಂಡಿದ್ದು ಮುಂಬಯಿಯ ಉತ್ತರ ಧ್ರುವದಿಂ ದಕ್ಷಿಣ ಧ್ರುವದ ವರೆಗೆ ನಡೆದಿದೆ.

ಅವರವರ ಡಬ್ಬಿಗಳನ್ನು ಗುರುತಿಸಲು ಪರಂಪರೆಯಿಂದ ಬಂದಿರುವ ಬಣ್ಣದ ಗುರುತಿನ ಹೊರತಾಗಿ ಇಂಗ್ಲಿಷ್ ಅಕ್ಷರ ಮತ್ತು ಅಂಕೆಯುಳ್ಳ ಗುರುತನ್ನು ಇಲ್ಲಿ ಬಳಸಲಾಗುತ್ತದೆ. ಇದರಲ್ಲಿ ನಿಶ್ಚಿತ ಜಾಗಕ್ಕೆ ತಲುಪಿಸುವವನ ಗುರುತು, ಕಟ್ಟಡದ ಗುರುತು, ಮಾಳಿಗೆಯ ಕ್ರಮ ಸಂಖ್ಯೆ, ರೈಲು ನಿಲ್ದಾಣದ ಗುರುತು ಇತ್ಯಾದಿಗಳನ್ನು

ಪೇಂಟಿನಿಂದ ಬರೆದಿಡಲಾಗುತ್ತದೆ. ಇದರಿಂದಾಗಿ ದಾರಿ ಮಧ್ಯದ ನಿಲ್ದಾಣದಲ್ಲಿ ಡಬ್ಬಿಯಣ್ಣ ಬದಲಾದರೂ ಬುತ್ತಿಯು ಅದಲು ಬದಲಾಗದೆ ನಿಖರವಾಗಿ ಅವರವರ ಜಾಗವನ್ನು ತಲುಪಲು ಸಾಧ್ಯವಾಗಿದೆ. ಇತ್ತೀಚೆಗೆ ಡಬ್ಬಾವಾಲರು ಕಚೇರಿಯವರ ಮನೆಯೂಟ ತುಂಬಿದ ಬುತ್ತಿಗಳ ಹೊರತಾಗಿ ಅನುಕೂಲವಿಲ್ಲದವರಿಗೆ ತಮ್ಮದೇ ಅಡಿಗೆ ಮನೆಯಲ್ಲಿ ತಯಾರಿಸಿದ ಆಹಾರವನ್ನು ವಿತರಿಸುವ ವ್ಯವಸ್ಥೆಯನ್ನೂ ಮಾಡಿಕೊಂಡಿದ್ದಾರೆ. ಕೊರೋನಾ ಹಾಗೂ ನಂತರದ ಕಾಲದಲ್ಲಿ ಸ್ವಿಗ್ಗಿಜೀನಿ, ಝಿಫಾಸ್ಟ್ ಇತ್ಯಾದಿಗಳೊಂದಿಗೆ ಸ್ಪರ್ಧೆಯನ್ನು ಒಡ್ಡುವಾಗ ಅವರ ಉದ್ಯೋಗವು ಇಳಿಮುಖವಾದಂತೆ ಕಂಡರೂ ಅನಿವಾರ್ಯವಾಗಿ ತಮ್ಮ ಮೂಲ ಉದ್ಯೋಗದಲ್ಲೇ ಬದಲಾವಣೆಗಳನ್ನು ಮಾಡಿಕೊಂಡು ಮುಂದುವರೆಸುವ ಜಾಣತನವನವು ಮುಂಬಯಿಯ ಡಬ್ಬಾವಾಲರಲ್ಲೂ ಇದೆ.

ಕಾಸ್ಮೋಪಾಲಿಟನ್ ನಗರದ ಆಹಾರ ಸಂಸ್ಕೃತಿಯ ಒಂದು ಆಯಾಮವೂ ಹೌದು.

'ನೀರ ದೇವನು ಬಂದ; ತೀರ ದೇವನು ಬಂದ ಯಾರು ಬಂದರೂ ಆಹಾರಾ ತರಲಿಲ್ಲ, ಪ್ರಾಣ ದೇವರು ನಿತ್ರಾಣನಾಗುತ ಅಂದ ಅನ್ನ ದೇವರು ಮಾತ್ರ ಇನ್ನೂ ಬರಲಿಲ್ಲ' ಎಂಬುದಾಗಿ 'ಅನ್ನಾವತಾರ'ದಲ್ಲಿ ಬೇಂದ್ರೆಯವರು ಹೇಳಿರುವಂತೆ, ಪ್ರಾಣವು ಅವಲಂಬಿಸಿರುವ ಅನ್ನದ ಮಹತ್ವವನ್ನು ಮುಂಬಾಪುರಿಯು ಚೆನ್ನಾಗಿ ಅರಿತಿದೆ. ಅನ್ನ ದೇವರು ಅವತಾರವನೆತ್ತಿರುವನೋ ಎಂಬಂತೆ ಇಲ್ಲಿಯ ಜನರು ಹೊಟ್ಟೆಗಿಲ್ಲದೇ ಹಸಿವಿನಿಂದ ಬಳಲುವುದು ಕಡಿಮೆ. ಸ್ವಲ್ಪ ತಿಳಿವಳಿಕೆಯುಳ್ಳವರು, ಆರೋಗ್ಯದ ಬಗೆಗೆ ಕಾಳಜಿ ಇರುವವರು, ಸಾಮಾಜಿಕ ಜವಾಬ್ದಾರಿ ಉಳ್ಳವರು ಒತ್ತಡದ ಕಾಯಕದ ನಡುವೆಯೂ ದೈಹಿಕವಾಗಿ ಸದೃಢರಾಗಿರಲು ಶತಾಯಗತಾಯ ಪ್ರಯತ್ನಿಸುತ್ತಾರೆ. ತಮ್ಮ ದೇಹಕ್ಕೆ ಒಗ್ಗುವ ಆಹಾರವನ್ನು ಸಮಯಕ್ಕೆ ಸರಿಯಾಗಿ ಪಡೆಯಲು ಇಚ್ಛಿಸುತ್ತಾರೆ. ಇಂಥವರಿಗೆಲ್ಲ ಮನ ತಣಿಸುವ ರೀತಿಯಲ್ಲಿ ಮುಂಬೈ ಡಬ್ಬಾವಾಲಾರ ಸೇವೆಯಿದೆ. ಜನರ ಪ್ರಾಣಕ್ಕೆ ಸ್ನೇಹಿತನಾದ ಶುಚಿ ರುಚಿಯಾದ ಮನೆಯ ಆಹಾರವನ್ನು ಸಕಾಲದಲ್ಲಿ ತಲುಪಿಸುವ ಡಬ್ಬಾವಾಲರು ಇಲ್ಲಿ ದಿನ ನಿತ್ಯವೂ ಈ ಕಾಯಕವನ್ನು ಶ್ರದ್ಧೆಯಿಂದ ಮಾಡುತ್ತಾರೆ.

ಸುಮಾರು ನೂರ ಮೂವತ್ತು ವರ್ಷಗಳೇ ಕಳೆದವು, ಇಲ್ಲಿನ ಶ್ರಮ ಜೀವಿಗಳು ಡಬ್ಬಿಯನ್ನು ಒಯ್ಯುವ ಕಾಯಕದಲ್ಲಿ ತೊಡಗಿಕೊಂಡು.

ಬಹುಸಂಸ್ಕೃತಿಯ ಪರ್ಯಾಯ ದ್ವೀಪವಾದ ಮುಂಬಾಪುರಿಯಲ್ಲಿ ಬಂಗಾರದಂತಹ ಬದುಕನ್ನು ನಡೆಸುವಾಗ ಡಬ್ಬಾವಾಲರ ದಕ್ಷತೆ, ಪ್ರಾಮಾಣಿಕತೆ, ನಿಖರತೆಯು ಉದ್ಯೋಗಿಕ ಕ್ಷೇತ್ರದಲ್ಲಿರುವರಿಗೂ ಮಾದರಿಯಾಗಿರುವುದು ಅವರ ಅನನ್ಯತೆ ಎನ್ನಬಹುದು. ಅನ್ನ ದೇವರಿಗಿಂತ ಇನ್ನು ದೇವರು ಉಂಟೆ ಎನ್ನುವ ಸರ್ವಜ್ಞನ ವಚನವೊಂದಿದೆ. ಅಂತೆಯೇ ಮುಂಬಾಪುರಿಯಲ್ಲಿ ಉದರಾಕಾಶದೆಡೆಗೆ ಅನ್ನದೇವರ ಮೆರವಣಿಗೆಯು ಡಬ್ಬಾವಾಲರ ಮೂಲಕವೂ ನಿರಂತರವಾಗಿ ನಡೆಯುತ್ತಿರುವುದು ಸತ್ಯ.

ಹೊಸ ಕಥೆ
• ಶಾಂತಲಾ ಭಂಡಿ

ಡೆಸ್ಟನಿಯ ಚಪ್ಪಲಿ

ಮೇಜಿನ ಮೇಲಿದ್ದ ಲಕೋಟೆಯನ್ನು ತೆರೆದು ನೋಡಿದಳು. ರಂಗಭೂಮಿ ಕಲೆಗೆ ಅವಳು ನೀಡಿದ ಕೊಡುಗೆಗಳಿಗಾಗಿ ಸ್ಥಳೀಯ ಎನ್‌ಜಿಓ ಸಂಘಟಕರು ಅವಳನ್ನು ಕಾರ್ಯಕ್ರಮವೊಂದರಲ್ಲಿ ಗೌರವಿಸಲು ಮನೆಗೆ ಬಂದು ಆಹ್ವಾನಿಸಿ ಹೋಗಿದ್ದರು. ಆಮಂತ್ರಣ ಮೊದಲೇ ಸಿಕ್ಕಿತ್ತು, ಕಾರ್ಯಕ್ರಮ ಅಂದು ಸಂಜೆ ಇತ್ತು.

ಪ್ರಖರ ದೀಪಗಳಿರುವ ಗೌರವಾನ್ವಿತ ವೇದಿಕೆಗಳಲ್ಲಿಯೇ ಇರುತ್ತಿದ್ದವಳು, ಇಂದು ಮಂದಬೆಳಕಿನ ಹಳೆಯ ಅಪಾರ್ಟ್ಮೆಂಟ್ ಒಂದರಲ್ಲಿ ವಾಸಿಸುತ್ತಿದ್ದಾಳೆ. ಮೆಚ್ಚುಗೆಯ ಮಾತು, ಚಪ್ಪಾಳೆಯ ನೆನಪುಗಳು ಆಗಾಗ ದೂರದಲ್ಲಿ ಅನುರಣಿಸುತ್ತಿರುತ್ತವೆ. ಅವಳ ಹೆಸರು ಡೆಸ್ಟನಿ ಆಲ್ಬ್ರೂಕ್, ಒಂದು ಕಾಲದ ಆಂಗ್ಲ ಭಾಷೆಯ ಶ್ರೇಷ್ಠ ನಟಿ, ಅಂಗ ಸೌಷ್ಠವ ಮತ್ತು ಪ್ರತಿಭೆಗೆ ಇನ್ನೊಂದು ಹೆಸರು. ರಂಗಭೂಮಿಯಲ್ಲಿ ಹೆಸರು ಮಾಡಿದ್ದ ಡೆಸ್ಟನಿಗೆ ಕ್ರಮೇಣ ಚಲನಚಿತ್ರಗಳಲ್ಲಿಯೂ ಬೇಡಿಕೆ ಶುರುವಾಗಿ, ತನ್ನ ಮೂವತ್ತನೆಯ ಹರೆಯದೊಳಗೆ ಮೂವತ್ತಕ್ಕೂ ಹೆಚ್ಚು ಆಂಗ್ಲಭಾಷೆಯ ಸಿನೆಮಾಗಳಲ್ಲಿ ಮಿಂಚಿದಳು. ಐದು ವರ್ಷಗಳ ಹಿಂದೆ ಡೆಸ್ಟನಿ ಬಹಳ ಬೇಡಿಕೆಯ ಅಗ್ರಸ್ಥಾನದಲ್ಲಿದ್ದ ನಟಿ.

ಡೆಸ್ಟನಿಯ ವೈವಾಹಿಕ ಜೀವನ ಸುಖದ್ದಾಗಿರಲಿಲ್ಲ. ಎರಡು ಬಾರಿ ಮದುವೆಯಾಗಿ ಎರಡೂ ಮದುವೆಗಳು ವಿಚ್ಛೇದನದಲ್ಲಿ ಕೊನೆಗೊಂಡವು. ಬಯಸಿದ ಪ್ರೀತಿ ಅವಳಿಗೆ ಸಿಗಲಿಲ್ಲ. ಮಕ್ಕಳಂತೂ ಕನಸಿನ ಮಾತು ಎನ್ನಿಸಿತ್ತು. ವೈಯಕ್ತಿಕ ಜೀವನ ಅವಳನ್ನು ಕಾರ್ಯಕ್ಷೇತ್ರದಲ್ಲಿ ತಗ್ಗಿಸುತ್ತ ಹೋಯಿತು.

ಅಂದು ಸಂಜೆಯ ಕಾರ್ಯಕ್ರಮಕ್ಕಾಗಿ ಕ್ಲಾಸೆಟ್‌ನಲ್ಲಿ ಜೋಡಿಸಿಟ್ಟ ಎಲ್ಲ ಬಟ್ಟೆಗಳನ್ನು ಡೆಸ್ಟನಿ ತಡಕಾಡುತ್ತಿದ್ದಳು. ಬೆಲೆಬಾಳುವ ಉಡುಪುಗಳು, ಚಪ್ಪಲಿಗಳು, ಬ್ರ್ಯಾಂಡೆಡ್ ಬ್ಯಾಗುಗಳು, ಕೈಗಡಿಯಾರ, ಆಭರಣಗಳನ್ನೆಲ್ಲ ಸಿಕ್ಕಷ್ಟು ಬೆಲೆಗೆ ಕಷ್ಟಕಾಲದಲ್ಲಿ ಮಾರಿಬಿಟ್ಟಿದ್ದಳು. ಯಾರೂ ಕೊಳ್ಳದೇ ಬಿಟ್ಟ ಕೆಲವೇ ಉಡುಗೆಗಳೆಲ್ಲ ತೊಟ್ಟು ಹಳತಾಗಿವೆ, ಹೊಳಪು ಮಾಸಿವೆ. ಅವುಗಳಲ್ಲಿಯೇ ಒಂದನ್ನು ಎತ್ತಿಕೊಂಡಳು.

ಮ್ಯಾಚಿಂಗ್ ಚಪ್ಪಲಿಯ ಬಗ್ಗೆ ಯೋಚಿಸುವಂತಿರಲಿಲ್ಲ.

ಇರುವ ಒಂದು ಜೊತೆ ಚಪ್ಪಲಿಯನ್ನೇ ಎಲ್ಲ ಕಡೆ ತೊಡಬೇಕು, ಆ ಚಪ್ಪಲಿ ಹಳತಾಗಿ ಹರಿಯುವ ಸ್ಥಿತಿಯಲ್ಲಿತ್ತು. ಹಳತಾದರೂ ಈ ಚಪ್ಪಲಿಗಳಿಗೆ ಅವಳ ಹೃದಯದಲ್ಲಿ ವಿಶೇಷ ಸ್ಥಾನವಿದೆ. ರಂಗಭೂಮಿಗೆ ಕಾಲಿಟ್ಟ ಹೊಸತರಲ್ಲಿ ಪ್ರಸಿದ್ಧ ನಿರ್ದೇಶಕರ ನೇತೃತ್ವದಲ್ಲಿ ಭಾರತದಲ್ಲಿ ರಂಗ ಶಿಬಿರವೊಂದನ್ನು ಏರ್ಪಡಿಸಲಾಗಿತ್ತು, ಅಲ್ಲಿ ತನ್ನ ದೇಶದ ರಂಗಭೂಮಿ ಪ್ರತಿನಿಧಿಯಾಗಿ ಭಾಗವಹಿಸಿದ್ದಾಗ ಇದೇ ಚಪ್ಪಲಿಗಳನ್ನು ಧರಿಸಿದ್ದಳು, ಆ ಶಿಬಿರದ ಮೊದಲ ನಿಯಮವೆಂದರೆ ನಾಟಕ ನಡೆಯುವ ಸ್ಥಳದಲ್ಲಿ, ವೇದಿಕೆಯಲ್ಲಿ ಚಪ್ಪಲಿಯನ್ನು ತೊಡದಿರುವುದು. ಆ ನಿಯಮವನ್ನು ಅದೆಷ್ಟು ಶಿಸ್ತಿನಿಂದ ಪಾಲಿಸಿದಳೆಂದರೆ ಅಂದಿನಿಂದ, ಪಾತ್ರದ ಅವಶ್ಯಕತೆಗಲ್ಲದೆ ಡೆಸ್ಟನಿ ಎಂದಿಗೂ ವೇದಿಕೆಯಲ್ಲಿ ಚಪ್ಪಲಿಗಳನ್ನು ಧರಿಸಲಿಲ್ಲ, ಚಪ್ಪಲಿಯನ್ನು ಕಳಚಿಟ್ಟೇ ವೇದಿಕೆ ಏರುತ್ತಿದ್ದುದು.

ಡೆಸ್ಟನಿ ತನ್ನ ಈ ಹಳೆಯ ಚಪ್ಪಲಿಯನ್ನು ಜತನದಿಂದ ಕಾಯ್ದುಕೊಂಡು ಬಂದಿದ್ದಳು. ಈ ಚಪ್ಪಲಿಯ ಮೇಲೆ ಡೆಸ್ಟನಿಗೆ ಏಕಕಾಲಕ್ಕೆ ಗೌರವವೂ, ವಿಷಾದವೂ ಇದೆ. ಈ ಚಪ್ಪಲಿಯನ್ನು ತುಳಿಯುವಾಗ ಡೆಸ್ಟನಿಗೆ ತನ್ನ ಸ್ವಂತ ತಂಗಿ ಕೆಲ್ಲೀ ನೆನಪಾಗುತ್ತಾಳೆ. ಕೆಲ್ಲೀ, ಸಹ-ಸಾಹಿತಿಗಳೊಂದಿಗೆ ಪ್ರತಿಸ್ಪರ್ಧಿಸಲಾಗದೆ ಹತಾಶೆಗೊಂಡ ಕವಯತ್ರಿ. ಡೆಸ್ಟನಿಯ ನಟನಾ ಕೌಶಲ್ಯ, ಯಶಸ್ಸಿನ ಕುರಿತಾಗಿ ಮಾಧ್ಯಮಗಳು ಪ್ರಶಂಸಿಸಿದಾಗ, ಡೆಸ್ಟನಿಗೆ ಹೊಸ ಸಿನೆಮಾಗಳಲ್ಲಿ ಬೇಡಿಕೆ ಬಂದಂತೆಲ್ಲ ಕೆಲ್ಲೀ ಮಾತ್ಸರ್ಯದಿಂದ ಕುದಿಯುತ್ತಿದ್ದಳು. ಡೆಸ್ಟನಿಯ ಭರವಸೆಯನ್ನು ತುಳಿಯುವ ಸಲುವಾಗಿ ಅಸೂಯೆಯಿಂದ ಕೆಟ್ಟ ಕವಿತೆಗಳನ್ನು ಬರೆದು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿ, ತನ್ನ ಹತಾಶೆಯನ್ನು ಪ್ರದರ್ಶಿಸಿ ಪ್ರಚಾರ ತೆಗೆದುಕೊಳ್ಳುವವಳು, ಅನುಕಂಪ ಗಿಟ್ಟಿಸಿಕೊಳ್ಳುವವಳು. ನಕಲಿ ಪ್ರೊಫೈಲುಗಳನ್ನು ತೆರೆದು ಅವುಗಳಿಂದ ಸಹ ಸಾಹಿತಿಗಳ ಭಾವಚಿತ್ರಗಳಿಗೆ, ಪೋಸ್ಟ್‌ಗಳಿಗೆ ಕೆಟ್ಟ ಕಾಮೆಂಟುಗಳನ್ನು ಬರೆಯುತ್ತಿದ್ದಳು. ಕ್ರಮೇಣ ತಂಗಿಯ ಮೇಲಿನ ಪ್ರೀತಿ ದ್ವೇಷವಾಗುತ್ತ ಹೋಯಿತು. ಡೆಸ್ಟನಿಯ ಸಹನೆಯ ಕಟ್ಟೆ ಒಡೆಯತೊಡಗಿತ್ತು. ಅಕ್ಕಳಾಗಿ ಹೇಳಬೇಕಾದಷ್ಟು ತಿಳಿ ಹೇಳಿ ಸೋತಳು. ತನ್ನ ಕುರಿತಾಗಿ ಕೆಟ್ಟದಾಗಿ ಪೋಸ್ಟ್ ಹಾಕಿದ್ದ ಕಾರಣ ರಾತ್ರೋರಾತ್ರಿ, ಡೆಸ್ಟನಿ ತಂಗಿಗೆ ಇದೇ ಚಪ್ಪಲಿಯಲ್ಲಿ ಒಂದೇಟು ಕೊಟ್ಟಿದ್ದಳು. ಅದೇ ರಾತ್ರಿ, ಡೆಸ್ಟನಿ ಸ್ವಂತ ತಂಗಿ ಕೆಲ್ಲೀಯಿಂದ ಕಳಚಿಕೊಂಡಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಕೂಡ ತಂಗಿಯನ್ನು ಬ್ಲಾಕ್ ಮಾಡಿ ನಿರಾಳಳಾದದ್ದು.

ಆಕೆ ಶ್ರೇಷ್ಠ ನಟಿ ಎಂಭ ಹೆಸರು ಪಡೆದಿದ್ದಳು; ಪ್ರತಿಭೆಗೆ ಇನ್ನೊಂದು ಹೆಸರು ಡೆಸ್ಟನಿ. ಆದರೆ ಕಾಲನ ಹೊಡೆತ ಬಲವಾಗಿತ್ತು; ಬದುಕು ಕಷ್ಟಕ್ಕೆ ಸಿಲುಕಿತ್ತು. ಚಪ್ಪಲಿ ಕಿತ್ತುಹೋಗಿದ್ದರೂ, ಹೊಸದನ್ನು ಕೊಳ್ಳಲಾಗದ ಸ್ಥಿತಿ!

ಮತ್ತೆ ಕೆಲ್ಲೀ ಮರಳಿದ್ದು ತನ್ನ ಬ್ಲಡ್ ಕ್ಯಾನ್ಸರ್ ರಿಪೋರ್ಟಿನೊಂದಿಗೆ. ಡೆಸ್ಟನಿ ತನ್ನ ಮನೆಯನ್ನು, ಹಣವನ್ನೆಲ್ಲ ತಂಗಿಯ ಚಿಕಿತ್ಸೆಗಾಗಿ ಸುರಿದು ಬರಿದಾಗಿ ಈ ಹಳೆಯ ಬಡಾವಣೆ ಸೇರಿದ್ದು. ಅಷ್ಟಾದರೂ ಕೆಲ್ಲೀಯನ್ನು ಉಳಿಸಿಕೊಳ್ಳಲಾಗಲಿಲ್ಲ, ಈ ಚಪ್ಪಲಿ ಮಾತ್ರ ಪಶ್ಚಾತ್ತಾಪದ ಜೊತೆ ಕೆಲ್ಲೀಯನ್ನು ನೆನಪಿಸುತ್ತದೆ. ಹಿರಿಯಳಾಗಿ ಹುಟ್ಟಿದ್ದ ತಪ್ಪಿಗಾಗಿ ತಂಗಿಯ ತಪ್ಪಿಗೂ ಡೆಸ್ಟನಿಯೇ ಪಶ್ಚಾತ್ತಾಪ ಪಡುತ್ತಿರುತ್ತಾಳೆ.

★★★

ಅಂದು ಸಂಜೆಯ ಕಾರ್ಯಕ್ರಮಕ್ಕೆ ಡೆಸ್ಟನಿಯನ್ನು ಕರೆದೊಯ್ಯಲು ಎನ್‌ಜಿಓ ವಾಹನದ ವ್ಯವಸ್ಥೆ ಮಾಡಿತ್ತು. ಅವಳು ಸಭಾಂಗಣ ತಲುಪಿದಾಗ ಪ್ರೀತಿಯಿಂದ ಚಪ್ಪಾಳೆ, ಕೇಕೆ, ಸಿಳ್ಳೆಗಳಿಂದ ಅವಳನ್ನು ಸ್ವಾಗತಿಸಲಾಯಿತು. ಬೃಹತ್ ಸಭಾಂಗಣದಲ್ಲಿ ಸಾವಿರಾರು ಜನ ನೆರೆದಿದ್ದರು. ಸಭಾಂಗಣದ ಮುಂದಿನ ಸಾಲುಗಳಲ್ಲಿ ಪ್ರಸಿದ್ಧ ವ್ಯಕ್ತಿಗಳಿಗಾಗಿ ಆಸನಗಳನ್ನು ಕಾಯ್ದಿರಿಸಲಾಗಿತ್ತು. ದುಬಾರಿ ಬಟ್ಟೆಗಳನ್ನು ಧರಿಸಿದ ನಟ-ನಟಿಯರು, ನಿರ್ದೇಶಕರುಗಳ ಸಾಲಿನಲ್ಲಿ ಕುಳಿತುಕೊಳ್ಳುವಾಗ ಡೆಸ್ಟನಿಗೆ ಒಳಗೊಳಗೇ ಇರಿಸುಮುರಿಸಾಗುತ್ತಲಿತ್ತು.

ಡೆಸ್ಟನಿಯನ್ನು ವೇದಿಕೆಗೆ ಆಹ್ವಾನಿಸಲಾಯಿತು. ಅವಳು ಪಾದರಕ್ಷೆಗಳನ್ನು ಕಳಚುವಾಗ ಎಡಚಪ್ಪಲಿಯ ಒಂದು ಪಟ್ಟಿ ಕಿತ್ತು ಬಂತು. ಚಪ್ಪಲಿಗಳನ್ನು ಕುಳಿತಿದ್ದ ಆಸನದಡಿ ಯಾರ ಲಕ್ಷ್ಯಕ್ಕೂ ಬಾರದಂತೆ ಕಾಲಿನಿಂದಲೇ ನಿಧಾನಕ್ಕೆ ತಳ್ಳಿ ವೇದಿಕೆಗೆ ನಡೆದಳು.

ಮತ್ತೆ ಚಪ್ಪಾಳೆ. ಡೆಸ್ಟನಿಯ ಮೆತ್ತಗಿನ ಮಧುರ ಧ್ವನಿ ಇವತ್ತಿಗೂ ಆಕರ್ಷಿಸುವಂಥದ್ದು, ರಂಗಭೂಮಿಯಲ್ಲಿ ಪಳಗಿದ ಧ್ವನಿ, ಧ್ವನಿವರ್ಧಕವಿಲ್ಲದೆಯೂ ಮೆತ್ತಗಿನ ಭಾವದಲ್ಲಿ ಮಾತನಾಡಬಲ್ಲವಳು. ವೇದಿಕೆ ಏರಿದರೆ ಪಾತ್ರವೇ ತಾನಾಗುವವಳು. ಸಿಂಡ್ರೆಲಾ ನಾಟಕದ ನೂರಾರು ಪ್ರದರ್ಶನಗಳಲ್ಲಿ ಸಿಂಡ್ರೆಲಾಳಾಗಿ ಡೆಸ್ಟನಿ ನಟಿಸಿದ್ದಳು. 'ಗಜಚಿರಿಥಿಡಟ್ಟಿ ಢಟ್ಟ ಡಿಜಿಠಜ್ಟಟ್ಟ, ಢಟ್ಟ ್ಥಿಥಿಟ. ಏಚಿಡಟ್ಥಿ ಚಿಜಿಠಜ ಜ್ಞಿ ಢಟ್ಟ ಟ್ಟಥಿಚಿಞ ಜ್ಞಿಥ ಠಟಞಥಿಥಚಿಢ, ಢಟ್ಟ ಚಿಜ್ಞಿಚಿಟಡಿ ಡಿಜ್ಞಟಞಥಿ ಠಞಜ್ಞಿಜ್ಞಿಜ ಠಿಜ್ಟಟ್ಟಜಜ' ನಾಟಕದ ಈ ಒಂದು ಸಾಲಿನೊಂದಿಗೆ ಅವಳ ಮಾತು ಕೊನೆಗೊಂಡಾಗ ಸಭಾಂಗಣದ ತುಂಬ ಕರತಾಡನ, ಸಭಿಕರೆಲ್ಲ ನಿಂತು ಗೌರವ ಸೂಚಿಸಿದರು. ಮೆಚ್ಚುಗೆಯ ಪ್ರತೀಕವಾಗಿ ವೇದಿಕೆಯಲ್ಲಿ ದುಬಾರಿ ಬೆಲೆಯ ಹೂವಿನ ಬೊಕೆ ಮತ್ತು ಸ್ಪಾರ್ಕ್ಲಿಂಗ್ ಸೈಡರ್ ಬಾಟಲಿಯನ್ನು ಕೊಟ್ಟು ಸನ್ಮಾನಿಸಲಾಯಿತು. ಆದರೆ, ಡೆಸ್ಟನಿಗೆ ಇವೆಲ್ಲಕ್ಕಿಂತ ತನಗೊಂದು ಜೊತೆ ಚಪ್ಪಲಿ ಹೆಚ್ಚು ಉಪಯೋಗವಾಗುತ್ತಿತ್ತು ಎನ್ನಿಸುತ್ತಲಿತ್ತು.

ಸಮಾರಂಭದ ನಂತರ, ಸಂಘಟಕರು ಅವಳನ್ನು ಮನೆಗೆ ಬಿಡಲು ಕಾರಿನ ವ್ಯವಸ್ಥೆ ಮಾಡಿದರು. ತೊಡಲಾಗದಷ್ಟು ಕಿತ್ತುಹೋಗಿದ್ದ ಚಪ್ಪಲಿಯನ್ನು ಸಭಾಂಗಣದಲ್ಲಿಯೇ ಬಿಟ್ಟು ಬರಿಗಾಲಿನಲ್ಲಿ ನಡೆಯುವುದನ್ನು ಬಿಟ್ಟು ಬೇರೆ ದಾರಿಯಿರಲಿಲ್ಲ, ಕಾರಿನಲ್ಲಿ ಪ್ರಯಾಣದುದ್ದಕ್ಕೂ ಮೌನವಾಗಿ ಗಾಜಿನಿಂದ ಹೊರಗೆ ಖಾಲಿನೋಟವೊಂದನ್ನು ಬೀರುತ್ತ ಕುಳಿತಿದ್ದಳು. ಇಂದಿನ ಸಂಜೆಯನ್ನು ಮರೆಯುವುದಕ್ಕೆ ಮೊದಲ ಹೆಜ್ಜೆಯೆಂದರೆ ಪುಷ್ಪಗುಚ್ಛ ಮತ್ತು ಸೈಡರ್ ಬಾಟಲಿಯನ್ನು ಕಾರಿನಲ್ಲಿಯೇ ಬಿಡುವುದು, ಹಾಗೆಯೇ ಮಾಡಿದಳು. ಚಪ್ಪಲಿ ಮಾತ್ರ ಮನದಲ್ಲಿಯೇ ಇತ್ತು.

ಮನೆ ಸಮೀಪಿಸಿದಾಗ ಕಾರಿನಿಂದ ಇಳಿದಳು. ಬರಿದಾದ ಅಂಗಾಲಿಗೆ ತಣ್ಣನೆಯ ನೆಲ ತಾಕಿ ಚಪ್ಪಲಿಯನ್ನು ನೆನಪಿಸುತ್ತಲಿತ್ತು. ಮನೆಯ ಒಳ ಹೊಕ್ಕವಳೇ ನೇರ ಬಾತ್‌ರೂಮಿಗೆ ತೆರಳಿ ಬೆಚ್ಚಗಿನ ಸ್ನಾನ ಮಾಡಿ ಹಾಸಿಗೆ ಸೇರಿದಳು, ಸೋತ ಮನಸಿಗೆ ನಿದ್ರೆ ಯಾವಾಗ ಹತ್ತಿತೋ ತಿಳಿಯಲಿಲ್ಲ.

ಬೆಳಗ್ಗೆದ್ದಾಗ ತಡವಾಗಿತ್ತು. ಉಪಹಾರ ಮುಗಿಸಿ ಫೋನಿನಲ್ಲಿ ಸಂದೇಶಗಳನ್ನು ಓದುತ್ತಿದ್ದಳು. ಸಿನೆಮಾ ನಿರ್ದೇಶಕರೊಬ್ಬರು ಸಂದೇಶ ಕಳಿಸಿದ್ದರು. 'ನಟಾಲಿಯಾಳ ಚಪ್ಪಲಿ' ಎನ್ನುವ ಚಲನಚಿತ್ರದಲ್ಲಿ ನಟಿಸಲು ಆಫರ್ ನೀಡಿದ್ದರು. ಒಪ್ಪಿಗೆಯಾದರೆ ವಿವರಗಳನ್ನು ಚರ್ಚಿಸಲು ಮುಂದಿನ ವಾರಾಂತ್ಯದಲ್ಲಿ ಭೇಟಿಯಾಗೋಣ ಅಂತಲೂ ಇತ್ತು. ಡೆಸ್ಟನಿಯ ಮುಖದಲ್ಲೊಂದು ವ್ಯಂಗ್ಯ ನಗು ಹಾದುಹೋಯಿತು. ಯೋಚಿಸುತ್ತಿರುವಂತೆಯೇ ಕರೆಗಂಟೆ ಬಾರಿಸಿ ಹೋಗಿ ಬಾಗಿಲು ತೆರೆದಳು. ನಿನ್ನೆ ರಾತ್ರಿ ಅವಳನ್ನು ಮನೆಗೆ ಬಿಟ್ಟ ವಾಹನದ ಚಾಲಕ ನಿಂತಿದ್ದ. 'ಮೇಡಂ, ನೀವು ನಿನ್ನೆ ಇವುಗಳನ್ನು ಕಾರಿನಲ್ಲಿ ಬಿಟ್ಟಿದ್ದಿರಿ' ಎನ್ನುತ್ತ ಪೇಪರ್ ಬ್ಯಾಗನ್ನು ಕೊಟ್ಟು ನಿಲ್ಲದೆಯೇ ನಡೆದ. ಡೆಸ್ಟನಿಯೂ ಅನ್ಯಮನಸ್ಕಳಾಗಿ ಅದನ್ನು ತೆಗೆದುಕೊಂಡಳು.

ಬಾಗಿಲು ಮುಚ್ಚಿ ಒಳ ನಡೆದವಳು ಬ್ಯಾಗ್ ತೆರೆದು ನೋಡಿದಳು. ಒಳಗೆ ಅವಳ ಹಳೆಯ ಚಪ್ಪಲಿಗಳನ್ನು ಅಂದವಾಗಿ ಸುತ್ತಿಡಲಾಗಿತ್ತು, ಜೊತೆಯಲ್ಲಿ ಅದೇ ಗಾತ್ರದ ಒಂದು ಹೊಚ್ಚಹೊಸ ಜೋಡಿ ಶೂಗಳನ್ನು ಇಡಲಾಗಿತ್ತು. ಅವಳ ಕಣ್ಣುಗಳು ನೀರಿನಿಂದ ತುಂಬಿದವು. ಬಾಗಿಲು ತೆರೆದು ರಸ್ತೆಯಲ್ಲೊಮ್ಮೆ ನೋಡಿದಳು. ದೂರದ ತಿರುವಿನಲ್ಲಿ ಹಿಂದಿನ ರಾತ್ರಿ ತನ್ನನ್ನು ಮನೆ ತಲುಪಿಸಿದ ಟ್ಯಾಕ್ಸಿ ಕಣ್ಮರೆಯಾಗುತ್ತಲಿತ್ತು.

ಬಿಡುಗಡೆಗೂ ಮುನ್ನ ಟೀಕಿಸಬಹುದೇ?

ಗಿರೀಶ್ ವಾಘ್, 1980ರಲ್ಲೇ ಕೆ.ವಿ.ನಾರಾಯಣರ ಮೂಲಕ ಪರಿಚಯವಾಗಿದ್ದರೂ ನಂತರ ಸಿಕ್ಕೂ ಇರಲಿಲ್ಲ. 'ಸನ್ನಿಧಾನ' ಕಾದಂಬರಿ ಹೊರಬಂದಾಗ ಓದಿ ಒಂದು ಪತ್ರ ಬರೆದರು. ತನಗೆ ತೋರಿಸುವ(ಶೋಯಿಂಗ್) ರೀತಿಯ ಬರವಣಿಗೆಯೇ ಇಷ್ಟ. ನಿಮ್ಮದು ಹೇಳುವ (ಟೆಲ್ಲಿಂಗ್) ರೀತಿಯ ಬರವಣಿಗೆ. ಆದರೂ ಅದು ನನ್ನನ್ನು ಆಕರ್ಷಿಸಿದೆ. ಅದಕ್ಕೆ ಕಾರಣ ದಟ್ಟ ಸಮಕಾಲೀನತೆ ಮತ್ತು ವೈವಿಧ್ಯಮಯವಾದ ಕಥಾ ಪ್ರಪಂಚ. 1982ರ 'ಕ್ರಮ' ನಾಟಕದಿಂದಲೂ ನಾನು ನಿಮ್ಮ ಬರವಣಿಗೆಯನ್ನು ಗಮನಿಸುತ್ತಿದ್ದೇನೆ. ನಿಮಗೆ ಒಳ್ಳೆ ಭವಿಷ್ಯವಿದೆ ಎಂದೆಲ್ಲಾ ಬರೆದಿದ್ದರು. ಈ ಪತ್ರದಿಂದ ಪ್ರಾರಂಭವಾದ ನಮ್ಮ ಒಡನಾಟ ಇನ್ನೂ ಮುಂದುವರೆಯುತ್ತಿದೆ. ಈ ಒಡನಾಟದಲ್ಲಿ ಗಿರೀಶ್, ನಾನು ಬರೆದು ಪ್ರಕಟಿಸಿದ, ಪ್ರಕಟಿಸದೆ ಹೋದ ಎಲ್ಲ ಬರವಣಿಗೆಗಳನ್ನು ಓದಿದ್ದಾರೆ, ತಿದ್ದಿದ್ದಾರೆ, ಪ್ರೇರೇಪಿಸಿದ್ದಾರೆ. ಇದು ಒಂದು ಕಾದಂಬರಿಯ ಮೆಚ್ಚುಗೆಯೇ ಕಾರಣವಾಗಿ ದೊರೆತ ಅಜೀವ ಸಂವೇದನಾಶೀಲ ಒಡನಾಟ. ನಂತರದ ವರ್ಷಗಳಲ್ಲೂ ಗಿರೀಶ್ 'ಸನ್ನಿಧಾನ' ಕಾದಂಬರಿಯನ್ನು ಎಷ್ಟೊಂದು ಹೊಸ ತಲೆಮಾರಿನ ಓದುಗರ ಕೈಲಿ ಓದಿಸಿದರು, ಓದಿಸುತ್ತಲೇ ಇದ್ದಾರೆ. ಹೀಗೆ ಅವರು ಓದಿಸಿದವರಲ್ಲಿ ಸಿ. ಎಸ್.ಮಹೇಶ್‌ಕುಮಾರ್, ಎ.ಪಿ.ಅಶ್ವಿನ್‌ಕುಮಾರ್ ಮುಖ್ಯರು. ಇಬ್ಬರೂ ನನ್ನ ಗೆಳೆಯರಾದರು. ನನ್ನ ಕೃತಿಗಳಿಗೆ ಮುನ್ನುಡಿ ಬರೆದುಕೊಟ್ಟರು. ಒಂದು ಕಾದಂಬರಿಯಿಂದ ಇನ್ನೊಬ್ಬ ಓದುಗನ ಮನಸ್ಸಿನ ಸನ್ನಿಧಾನದಲ್ಲಿ ನಮಗೆ ಸ್ಥಳ ಸಿಗುವುದು ದೊಡ್ಡ ಅದೃಷ್ಟವೇ ಸರಿ.

ಗಿರೀಶರು ಪತ್ರದಲ್ಲಿ ಇನ್ನೊಂದು ಅಂಶದ ಕಡೆ ಕೂಡ ಗಮನ ಸೆಳೆದರು. ಕಾದಂಬರಿ ಪ್ರತಿ ಮಾರುಕಟ್ಟೆಗೆ ಬರುವ ಮುನ್ನವೇ 'ಲಂಕೇಶ ಪತ್ರಿಕೆ'ಯಲ್ಲಿ ಯೋಗಪ್ಪನ್‌ನವರು ಕಾದಂಬರಿ ಬಗ್ಗೆ, ನನ್ನ ಬರವಣಿಗೆ ಬಗ್ಗೆ ಕೆಟ್ಟ ಅಭಿಪ್ರಾಯ ರೂಪಿಸುವಂತಹ ಸಮೀಕ್ಷೆ ಬರೆದಿದ್ದರು. 'ಕಾದಂಬರಿಕಾರನ ಸೋಲು' ಎಂಬ ಶೀರ್ಷಿಕೆಯಿಟ್ಟು ಒಂದು ಲೇಖನ ಬರೆದು, ಈ ಪತ್ರವನ್ನು ಅಚ್ಚುಮಾಡಿ ಎಂದು ಗಿರೀಶ್ ಸೂಚಿಸಿದ್ದರು. ನಾನು ಹಾಗೇನೂ ಮಾಡದೇ ಹೋದರೂ, ಈ ವಿದ್ಯಮಾನದ ಬಗ್ಗೆ ಪ್ರಸ್ತಾಪಿಸಿ ಬೇರೆ ಕಡೆ ಬರೆದಿದ್ದೇನೆ. ಕೆಲವು ಸಜ್ಜನರು, ಸಭ್ಯರ ಪ್ರಕಾರ ಇದೆಲ್ಲ ಈಗ ಹಳೆಯ ಸಮಾಚಾರ. ಆ ಸಂಪಾದಕರೂ ಇಲ್ಲ, ಸಮೀಕ್ಷಕರೂ ಇಲ್ಲ, ಮರೆತು ಬಿಡುವುದೇ ಸರಿ. ಇಲ್ಲಿ ವೈಯಕ್ತಿಕ ಆಪಾದನೆ, ಬೇಸರ ಮುಖ್ಯವಲ್ಲ. ಒಂದು ಕೃತಿ ಪ್ರಕಟವಾದಾಗ, ಪ್ರಯೋಗ ಶೀಲವಾಗಿದ್ದಾಗ ಓದುಗರನ್ನು ನಿರ್ಮಾಣ ಮಾಡುವ ಬದಲು ಇರುವ ಓದುಗರನ್ನು ನಾಶ ಮಾಡುವ, ಓದುಗರು ಅದರ ಸಮೀಪವೂ ಸುಳಿಯದಂತೆ ಮಾಡುವ ವಿದ್ಯಮಾನ ಯಾವ ರೀತಿಯಲ್ಲಿ ಎಲ್ಲ ಕಾಲದಲ್ಲೂ ಕೆಲಸ ಮಾಡುತ್ತದೆ ಎಂಬುದನ್ನು ಓದುಗರ ಮುಂದೆ ನಿವೇದಿಸಲು ಇದನ್ನೆಲ್ಲ ಬರೆಯಬೇಕಾಯಿತು. ಇದರಲ್ಲೆಲ್ಲ ನಥಿಂಗ್ ಪರ್ಸನಲ್ ಎಂದು ಲೋಕಾಭಿರಾಮ ಶೈಲಿಯಲ್ಲಿ ಹೇಳುವ ಹಾಗೂ ಇಲ್ಲ. ಏಕೆಂದರೆ, ಈ ಸಮೀಕ್ಷೆ ಪ್ರಕಟವಾದಾಗ ಒಂದೆರಡು ವಾರದ ಹಿಂದೆ-ಮುಂದೆ ಇದೇ ಪತ್ರಿಕೆಯಲ್ಲಿ ನನ್ನ ಕತೆಗಳಿಗೆ ಶೀರ್ಷಿಕೆ ಇಡುವ ರೀತಿಯನ್ನು ಗೇಲಿ ಮಾಡಿ, ಉನ್ನತ ಪ್ರಶಸ್ತಿಗಾಗಿ ಪ್ರಯತ್ನಿಸಲು ನಾನು ದಿಲ್ಲಿ ಕಡೆ ಹೋಗಿರುವೆನೆಂದು ಬರೆಯಲಾಗಿತ್ತು. ಒಂದಿಷ್ಟು ಹಿರಿಯ ಲೇಖಕರನ್ನು ಹೆಸರಿಸಿ ಅವರೊಡನೆ ನನ್ನನ್ನು ಕ್ಲಬ್ ಮಾಡುವ ಪ್ರಯತ್ನ ಕೂಡ ಈ ಬರಹದಲ್ಲಿತ್ತು.

ಇದು ನನ್ನ ಬಗ್ಗೆ, ನನ್ನ ಬರವಣಿಗೆ ಬಗ್ಗೆ ಇದ್ದ ನಿಲುವಿಗಿಂತ ಹೆಚ್ಚಾಗಿ, ಕುರ್ತಕೋಟಿಯವರ ಮುನ್ನುಡಿ ಕುರಿತೇ ಆಗಿತ್ತು

ಈಗಾಗಲೇ ಅರವತ್ತಕ್ಕೂ ಹೆಚ್ಚು ಪುಸ್ತಕಗಳನ್ನು ರಚಿಸಿರುವ ಹಿರಿಯ ಸಾಹಿತಿ ಕೆ.ಸತ್ಯನಾರಾಯಣ ಅವರ 'ನನ್ನ ಪುಸ್ತಕಗಳ ಆತ್ಮಚರಿತ್ರೆ' ಇದರ ಆಯ್ದ ಭಾಗಗಳನ್ನು ಇಲ್ಲಿ ನೀಡಲಾಗಿದೆ.



ನನ್ನ ಪುಸ್ತಕಗಳ ಆತ್ಮಚರಿತ್ರೆ
ಲೇ: ಕೆ.ಸತ್ಯನಾರಾಯಣ
ಪ್ರ: ಯಾಜಿ ಪ್ರಕಾಶನ ಹೊಸಪೇಟೆ
7019637741
ಬೆಲೆ ರು.360/-

ಎಂದು ನನ್ನ ಅಭಿಪ್ರಾಯ. ಕುರ್ತಕೋಟಿಯವರನ್ನು ಒಪ್ಪದ, ಅವರ ಮನೋಧರ್ಮದ ಬಗ್ಗೆ ಪ್ರತಿರೋಧ ಇರುವ ಒಂದು ಲೇಖಕ ವರ್ಗ ಇತ್ತು. ಇರಲಿ! ಇದರಲ್ಲಿ ತಪ್ಪೇನಿಲ್ಲ. ಹಾಗೆಂದು ಆ ಪ್ರತಿರೋಧವನ್ನು ಅವರು ಮುನ್ನುಡಿ ಬರೆದ ಎಲ್ಲ ಕೃತಿಗಳಿಗೂ ಅನ್ವಯಿಸುವುದು ತಪ್ಪಾಗುತ್ತದೆ.

ಯಾವುದೋ ಸಭೆಗೆ ಮದ್ರಾಸಿಗೆ ಬಂದಿದ್ದ ಅನಂತಮೂರ್ತಿ ನಮ್ಮ ಮನೆಗೆ ಫೋನ್ ಮಾಡಿದರು. ಫೋನ್ ತೆಗೆದುಕೊಂಡಾಗ, 'ನಾನು ಈಗಾಗಲೇ ಒಂದು ಸಲ ಕರೆ ಮಾಡಿದ್ದೆ, ಹೇಳಲಿಲ್ಲವೇ, ಗೊತ್ತಾಗಲಿಲ್ಲವೇ?' ಎಂದು ಕೇಳಿದರು. ಫೋನ್ ತೆಗೆದುಕೊಂಡಿದ್ದು ನನ್ನ ಮಗಳು. ಅವಳಿಗೆ ಕರೆ ಮಾಡಿದವರು ಯಾರು ಎಂದು ಗೊತ್ತಾಗಿರಲಿಲ್ಲ. ನೆನಪಿನಲ್ಲೂ ಇರಲಿಲ್ಲ. ಕೆಲ ವರ್ಷಗಳು ಅವರ ಸಂಪರ್ಕ ತಪ್ಪಿ ಹೋಗಿತ್ತು. ವಿಶೇಷವಾದ ಕಾರಣಗಳೇನಿರಲಿಲ್ಲ, ಹಾಗೇ. ಆಗ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದರು. ಅವರನ್ನು ಸದಾ ಸುತ್ತುವರೆಯುವ, ಅವರ ಅಭಿಪ್ರಾಯ ಸಮಯಗಳನ್ನು ನಿರ್ದೇಶಿಸುವ ಒಂದು ಗುಂಪು ಸದಾ ಅವರ ಸುತ್ತ ಇರುತ್ತಿತ್ತು. ಆ ರೀತಿಯ ಚಟುವಟಿಕೆಗಳು ಅಂದಿಗೂ, ಇಂದಿಗೂ ನನಗೆ ಹೆಚ್ಚು ಇಷ್ಟವಾಗುವುದಿಲ್ಲ. ಋಜುವಾತು ಪತ್ರಿಕೆಯ ಪ್ರಾರಂಭದಿಂದ ಒಂದೇ ಬಳಗದಲ್ಲಿದ್ದುದು ನಿಜ. ಮೊದ ಮೊದಲ ಸಂಚಿಕೆಗಳಿಗೆ ಒಟ್ಟಾಗಿ ಕೆಲಸ ಮಾಡಿದ್ದೂ ನಿಜ. ನಮಗೆ ಈ ಪತ್ರಿಕೆಯೆಂದರೆ ಕನ್ನಡದ ಒಳ್ಳೆ ಬರವಣಿಗೆಗಳಿಗೆ ಇನ್ನೊಂದು ವೇದಿಕೆ. ಆದರೆ ಅನಂತಮೂರ್ತಿ ಗಣ್ಯ ಲೇಖಕರು. ಅವರ ಒಟ್ಟು ಬದುಕಿನಲ್ಲಿ ಇದೊಂದು ಹಾದು ಹೋಗುವ ವೇದಿಕೆ. ಗಣ್ಯ ಲೇಖಕರೊಬ್ಬರು ಸಂಪಾದಕರಾಗಿದ್ದಾಗ ಅವರಿಗೆ ಪ್ರಭಾವಿ ವ್ಯಕ್ತಿತ್ವವಿದ್ದಾಗ, ಯಾವುದೇ ವೇದಿಕೆಗೆ ಅವರ ವರ್ಚಸ್ಸು, ದೃಷ್ಟಿಕೋನ ಪ್ರಾಪ್ತವಾಗುವುದು ಅನಿವಾರ್ಯ. ಇದು ಸಹಜ.

ಆದರೆ ಕನ್ನಡ ಸಾಹಿತ್ಯ ಲೋಕವನ್ನು, ಸಾಹಿತಿಗಳನ್ನು ಅನಂತಮೂರ್ತಿ ಮಾತ್ರವಲ್ಲ ಯಾವುದೇ ಒಬ್ಬ ಲೇಖಕನ ದೃಷ್ಟಿಕೋನದಿಂದ ನೋಡುವುದು ಅಷ್ಟು ದೊಡ್ಡ ಲೇಖಕನಲ್ಲದ, ಆದರೆ ಲೇಖಕನಾಗಿ ವಿಶಿಷ್ಟತೆ, ಸ್ವಂತಿಕೆ ಹೊಂದಿರಲೇಬೇಕಾದ, ನನ್ನಂಥವನಿಗೆ ಅದೆಲ್ಲ ಅನಿವಾರ್ಯವೂ ಅಲ್ಲ, ಅಗತ್ಯವೂ ಅಲ್ಲ. ಇದನ್ನೆಲ್ಲ ಹೇಳಲಾಗುವುದಿಲ್ಲ. ಯಾರ ಕೈಲೂ ಹೇಳಿಕೊಳ್ಳಲಾಗುವುದಿಲ್ಲ. ಆದರೆ ಸಂಬಂಧ, ಒಡನಾಟದಲ್ಲಿ ನಮಗೆ ಗೊತ್ತಿಲ್ಲದಂತೆ ವ್ಯಕ್ತವಾಗುತ್ತಿರುತ್ತದೆ. ಇದೆಲ್ಲಕ್ಕಿಂತ ಮುಖ್ಯವಾಗಿ ನಮ್ಮ ವೃತ್ತಿಯ ಜವಾಬ್ದಾರಿ, ಘನತೆ, ಕುಟುಂಬದ ಸದಸ್ಯರು, ಮಕ್ಕಳ ಬಗ್ಗೆ ಇರುವ ಜವಾಬ್ದಾರಿಗೂ ಸಮಯ ಮಾಡಿಕೊಳ್ಳಬೇಕಲ್ಲ. ಅದೂ ಅಲ್ಲದೆ, ಮದ್ರಾಸಿನಲ್ಲಿದ್ದುಕೊಂಡು ಸಾಹಿತ್ಯ ಪ್ರಪಂಚ ನನ್ನ ದಿನನಿತ್ಯದ ಬದುಕಿನ ಭಾಗವಾಗದೇ ಹೋಗಿದ್ದಾಗ, ಯಾರ ಒಡನಾಟವೂ ಅನಿವಾರ್ಯವಾಗುವುದಿಲ್ಲ. ಈ ಎಲ್ಲ ಅಂಶಗಳೂ ಅಪ್ರಜ್ಞಾಪೂರ್ವಕವಾಗಿ ಮನಸ್ಸಿನಲ್ಲಿ ಕೆಲಸ ಮಾಡುತ್ತಾ ಮಾನ್ಯರೊಡನೆ ಒಡನಾಟ ಕಡಿಮೆಯಾಗಿರಬೇಕು.

'ನನ್ನಿಂದ ನಿನಗೆ ಅನ್ಯಾಯ ಆಗಿದೆ, ಹೋದ ಕಡೆಯೆಲ್ಲ ಜನ ನಿನ್ನ ಕತೆ, ಪ್ರಬಂಧಗಳ ಬಗ್ಗೆ ಮಾತನಾಡುತ್ತಾರೆ. ನನಗೇ ಗಮನಿಸಲು ಸಾಧ್ಯವಾಗಿಲ್ಲ. ಎಲ್ಲವನ್ನೂ ಓದಬೇಕು, ಈಗ ಹೊಸದಾಗಿ ಏನು ಬರೆದಿರುವೆ' ಎಂದು ಮಾತು ಪ್ರಾರಂಭವಾಯಿತು.

ಮಾತಿನ ಮೊದಲ ಭಾಗಕ್ಕೆ ನಾನು ಹೇಗೆ ಸ್ಪಂದಿಸಬಹುದು; ಕೊನೆಯ ಭಾಗಕ್ಕೆ ಉತ್ತರವಾಗಿ 'ಸನ್ನಿಧಾನ' ಕಾದಂಬರಿ ಬರೆದಿರುವುದು, ಕುರ್ತಕೋಟಿ ಮುನ್ನುಡಿ ಬರೆಯುತ್ತಿರುವುದನ್ನು ಹೇಳಿದೆ.

'ಏನಿದು, ನಾವು ಯಾರೂ ಓದದೆ, ಅಲ್ಲಿಯ ತನಕ ಈ ಕಾದಂಬರಿ ಹೇಗೆ ಹೋಯಿತು!' ಎಂದು ಆಶ್ಚರ್ಯ ವ್ಯಕ್ತಪಡಿಸಿದರು. ಈ ಆಶ್ಚರ್ಯಕ್ಕೆ ಗಂಭೀರವಾದ, ಪ್ರಾಮಾಣಿಕವಾದ ಉತ್ತರ ಕಷ್ಟ. ಹೀಗೇ ಕಾದಂಬರಿ ಬರೆದೆ, ಅವರು ಕೇಳಿದರು, ಕೊಟ್ಟಿರುವೆ ಎಂಬ ಲಹರಿಯ ಉತ್ತರ ಕೊಟ್ಟೆ. ಸರ್ವಮಂಗಳಾ ಕೂಡ ಇದೇ ರೀತಿಯ ಮಾತುಗಳಲ್ಲಿ ಇದೇ ಮನೋಭಾವವನ್ನು ವ್ಯಕ್ತಪಡಿಸಿದ್ದರು.

ನಂತರವೂ ಅನಂತಮೂರ್ತಿ ಕಾದಂಬರಿ ಓದಲಿಲ್ಲ. ಅವರು ಓದಲೇಬೇಕೆಂದು ನನಗೆ ತೀವ್ರವಾಗಿ ಅನಿಸಲೂ ಇಲ್ಲ. ಹಾಗೆ ಅವರು ಮನಸ್ಸಿಟ್ಟು ನನ್ನ ಕತೆಗಳನ್ನು ಓದಿದ್ದು ಮುಂದೆ ಎಷ್ಟೋ ವರ್ಷಗಳ ನಂತರ.

ಇದನ್ನೆಲ್ಲ ಬರೆಯುವಾಗಲೂ ಮರೆಯಬಾರದ ಒಂದು ಅಂಶವೆಂದರೆ, ಆ ಸ್ತರದ ಎತ್ತರದ ಲೇಖಕರ ಸಾಮಾಜಿಕ ಮತ್ತು ವೈಯಕ್ತಿಕ ಸಮಯದ ಮೇಲಿರುವ ಅಸಾಧಾರಣ ಒತ್ತಡ, ಎಷ್ಟು ಲೇಖಕರನ್ನು ಅವರು ಓದಬಹುದು, ಎಷ್ಟು ಕೃತಿಗಳಿಗೆ ಪ್ರತಿಕ್ರಿಯಿಸಬಹುದು? ಅಲ್ಲದೇ ಪ್ರತಿಯೊಬ್ಬ ಲೇಖಕನಿಗೂ, ಪ್ರತಿದಿನವೂ ಅವನಿಗೆಂದೇ ಬೇಕಾದ ಖಾಸಗಿ ಸಮಯದ ಅವಶ್ಯಕತೆಯೂ ಇರುತ್ತದಲ್ಲ. . . .

ಹಿಮಾಲಯದ ನಡುವೆ ಅಪೂರ್ವ ಅನುಭವ!

← ಮೊದಲ ಪುಟದಿಂದ

ಶಿವಭಕ್ತರಿಗಂತೂ ಇಲ್ಲಿನ ಒಂದೊಂದು ಕಣದಲ್ಲೂ ಶ್ರೀಖಂಡ ಮಹಾದೇವನೇ ಕಂಡಾನು. ಈ ಚಾರಣದಲ್ಲಿ ಭೀಮ್‌ದ್ವಾರ್ ಮುಖ್ಯವಾದ ಘಟ್ಟ. ಈ ಪ್ರದೇಶದಲ್ಲಿ ನೂರಕ್ಕೂ ಹೆಚ್ಚು ಟೆಂಟುಗಳಿರುತ್ತವೆ.

ಇಪ್ಪತ್ತು ಗಂಟೆ ಚಾರಣ!

ನಾಲ್ಕನೇ ದಿನದ ಚಾರಣ ಈ 13,000 ಅಡಿ ಎತ್ತರದಲ್ಲಿರುವ ಭೀಮ್ ದ್ವಾರದಿಂದ 17,150 ಅಡಿ ಎತ್ತರದಲ್ಲಿರುವ ಶ್ರೀಖಂಡ ಮಹದೇವನನ್ನು ದರ್ಶನ ಮಾಡಿ ಮತ್ತೇ ಭೀಮ್ ದ್ವಾರ್‌ಗೆ ಹಿಂದಿರುಗಬೇಕು. ಈ ದಿನದ ಚಾರಣ ಕೇವಲ ಬಂಡೆಕಲ್ಲುಗಳ ಮೇಲೆ ಹಾಗೂ ಹಿಮನದಿಗಳ ಮೇಲೆ ನಡೆಯುವುದಿದ್ದು ಸುಮಾರು 18ರಿಂದ 21 ಗಂಟೆಗಳ ಚಾರಣವಾಗುತ್ತದೆ. ಹಾಗಾಗಿಯೇ, ಭೀಮ್‌ದ್ವಾರ್‌ಗೆ ಸಂಜೆ ಬಂದು ತಲುಪುತ್ತಿದ್ದಂತೆ ನಮಗೆ ನಿದ್ರಿಸಲು ಇತರ ಚಾರಣಿಗರು ಸಲಹೆ ನೀಡುತ್ತಾರೆ.

ಭೀಮದ್ವಾರ್‌ನಿಂದ ಕಲ್ಲು ಬಂಡೆಗಳ ಮೇಲೆ ಸುಮಾರು 4 ಗಂಟೆಗಳು ಚಾರಣ ಮಾಡಿದರೆ ಪಾರ್ವತೀ ಭಾಗ್ ಸಿಗುತ್ತದೆ. ಇಲ್ಲಿಂದ ಬಹು ದೂರದಲ್ಲಿ ಒಂದು ಅಡಿ ಎತ್ತರದಷ್ಟು ಕಾಣುವ ಮಹಾದೇವನ ದರ್ಶನ ಮಾಡಬಹುದು; ಕೆಲವರು ಇಲ್ಲಿಂದಲೇ ಮಹಾದೇವನನ್ನು ಕಂಡು, ಹಿಂದಿರುಗುತ್ತಾರಂತೆ.

ಈ ರಾತ್ರಿ 12ರಿಂದ 2 ಗಂಟೆಯ ಮಧ್ಯದಲ್ಲಿ ಚಾರಣ ಆರಂಭಿಸಬೇಕು. ಭಾರವಾದ ವಸ್ತುಗಳನ್ನೆಲ್ಲಾ ಟೆಂಟಿನಲ್ಲಿಯೇ ಬಿಟ್ಟು, ಎರಡು ನೀರಿನ ಬಾಟಲಿಗಳನ್ನು ಮತ್ತು ತಿನ್ನಲು ಭಾರವಲ್ಲದ ತಿನಿಸುಗಳನ್ನು ಹೊತ್ತುಕೊಂಡು ಹೋಗುವುದು ಸೂಕ್ತ. 10ರಿಂದ 11 ಗಂಟೆ ಚಾರಣ ಮಾಡಿದಮೇಲೆ ಶ್ರೀಖಂಡ ಮಹದೇವನ ದರ್ಶನವಾಗುತ್ತದೆ. ಅಲ್ಲಿಂದ ಮತ್ತೆ 9ರಿಂದ 10 ಗಂಟೆಗಳ ವಾಪಸು ಚಾರಣವನ್ನು ಆ ದಿನವೇ ಮಾಡಬೇಕು. ರಾತ್ರಿ ಅಲ್ಲಿ ತಂಗುವಂತಿಲ್ಲ. ಹಾಗಾಗಿ ಇದಕ್ಕಾಗಿಯೇ ಸರಕಾರ ನೇಮಿಸಿರುವ ಒಂದು ತಂಡ ಮಧ್ಯಾಹ್ನ 1 ಗಂಟೆಯ ನಂತರ ಮಹಾದೇವನ ಸನ್ನಿಧಿಯಲ್ಲಿರುವ ಎಲ್ಲರೂ ಹೊರನಡೆಯುವುದನ್ನು ಖಾತ್ರಿಪಡಿಸಿಕೊಳ್ಳುತ್ತದೆ ಮತ್ತು ಈ ವಿಶೇಷ ತಂಡದ ಸದಸ್ಯರೂ ಅವರೊಡನೆ ಹಿಂದಿರುಗುತ್ತಾರೆ. ಈ ನಾಲ್ಕನೇ ದಿನದ ಚಾರಣ ನಮ್ಮ ಭಕ್ತಿ ಮತ್ತು ಶಕ್ತಿಗೆ ಒಂದು ಪರೀಕ್ಷೆಯೇ ಸರಿ.

ಎಂಬತ್ತು ಅಡಿ ಎತ್ತರದ ಕಲ್ಲು

ಆ ದಿನದ ಕಠಿಣ ಚಾರಣ ಮುಗಿಸುವುದು ಬಹಳ ಕಷ್ಟದ ಕೆಲಸ; ವಾತಾವರಣ ಸರಿ ಇಲ್ಲದೇ ಇದ್ದರೆ, ಜೀವಕ್ಕೆ ಅಪಾಯಕಾರಿಯೂ ಹೌದು. ಇಲ್ಲಿರುವ ಶ್ರೀಖಂಡ ಮಹದೇವ 80 ಅಡಿ ಎತ್ತರದೊಂದು ಕಲ್ಲು. ಕಲ್ಲೆಂದರೆ ತಪ್ಪಾಗುತ್ತದೆ ನಾನು ಶ್ರೀಖಂಡನೆಂದೇ ಹೇಳುತ್ತೇನೆ. ಈ ಶ್ರೀಖಂಡ, ಪರ್ವತದ ತುದಿಯಲ್ಲಿ ಪ್ರತ್ಯೇಕವಾಗಿ ನಿಂತಿದ್ದು ಆ ಪರ್ವತದ ಯಾವುದೇ ವಿಸ್ತರಣೆಯ ಭಾಗವಾಗಿ ಕಾಣಿಸುತ್ತಿಲ್ಲ. ಈ ಎತ್ತರದ ಶ್ರೀಖಂಡ 5 ಕಲ್ಲುಗಳನ್ನು ಜೋಡಿಸಿದ್ದಂತೆ ಮಧ್ಯದಲ್ಲಿ ಬಿರುಕುಗಳು ಕಾಣಿಸುತ್ತಿದ್ದು, ಇವು ಪಂಚ ರುದ್ರರಿರುವ ಒಂದು ಶಿಲೆ ಎಂಬುದು ಭಕ್ತರ ನಂಬಿಕೆ. ವರ್ಷವಿಡೀ ಇದರ ಸುತ್ತಲಿನ ಪರ್ವತಗಳಲ್ಲಿ ಹಿಮ ಬಿದ್ದರೂ, ಈ ಶ್ರೀಖಂಡದ ಮೇಲೆ ಒಂದು ಹನಿಯೂ ಹಿಮ ಇರುವುದಿಲ್ಲ. ಇದರ ಮುಂದೆ ಸುಮಾರು ನೂರು ಜನ ಕುಳಿತುಕೊಳ್ಳಬಹುದಾದ ಸಮತಟ್ಟಾದ ಜಾಗವಿದ್ದು, ಹಲವು ಭಕ್ತರು ತಮ್ಮ ಮೈಮೇಲೆ ಜ್ಞಾನವೇ ಇಲ್ಲವೇನೋ ಎಂಬಂತೆ ಭಕ್ತಿಪರವಶವಾಗಿ ಮಂತ್ರಗಳನ್ನು ಪಠಿಸುತ್ತಾ ನಮಸ್ಕರಿಸುತ್ತಿರುತ್ತಾರೆ. ಆಸ್ತಿಕರಿಗೆ ಇದು ದೈವ ಸನ್ನಿಧಿ, ಪ್ರಕೃತಿ ಪ್ರೇಮಿಗಳಿಗೆ ಒಂದು ಅಭೂತಪೂರ್ವ ಅನುಭವ. 17,150 ಅಡಿ ಎತ್ತರದ ಈ ಜಾಗವು ಯಾತ್ರಾಸ್ಥಳ ಮತ್ತು ಚಾರಣದ ಸ್ಥಳ. ಜಗತ್ತಿನ ಎಷ್ಟೋ ದೇಶಗಳಲ್ಲಿರುವ ಅತಿ ಎತ್ತರದ ಪರ್ವತಕ್ಕಿಂತ, ಈ ಜಾಗ ಇನ್ನಷ್ಟು ಎತ್ತರದಲ್ಲಿದೆ!

ಮಹಾದೇವನ ದರ್ಶನವಾದ ನಂತರ ಅವನನ್ನು ಬಿಟ್ಟು ಬರುವ ನೋವು ಅಷ್ಟಿಷ್ಟಲ್ಲ. 'ನನ್ನಿಂದ ಮತ್ತೆ ಇಷ್ಟೆಲ್ಲಾ ಚಾರಣ ಮಾಡಲೂ ಸಾಧ್ಯವೇ ಅಥವಾ ಶ್ರೀಖಂಡ ಮಹಾದೇವ, ಈಗ ನಿನ್ನ ನೋಡಿದ್ದಷ್ಟೇ ನನ್ನ ಅದೃಷ್ಟವೇ' ಎಂದು ಮಹಾದೇವನನ್ನು ಮನದಲ್ಲೇ ಮಾತನಾಡಿಸುತ್ತಿರುತ್ತೇವೆ. ಹೋದ ದಾರಿಯಲ್ಲೇ ಮತ್ತೇ ಹಿಂದಿರುಗಬೇಕು. 5ನೇ ದಿನ ಭೀಮ್‌ದ್ವಾರದಿಂದ ಭೀಮ್ ತಲಾಯ್ 6ನೇ ದಿನ ಭೀಮ್ ತಲಾಯ್‌ನಿಂದ ತಚರು ಮತ್ತು 7ನೇ ದಿನ ತಚರುವಿನಿಂದ ಸಿಂಗಡ್ ಅಥವಾ ಜಾವನ್ ಹಳ್ಳಿಗೆ ವಾಪಸ್. ಅಲ್ಲಿಗೆ ಯಾತ್ರೆ ಸಂಪೂರ್ಣವಾದಂತೆ.

ಈ ವರ್ಷ ಅಂದರೆ 2024ರಲ್ಲಿ ಜುಲೈ 14ರಿಂದ 29ರ ವರೆಗೆ ಈ ಯಾತ್ರೆ ನಡೆಯುವುದೆಂದು ಗೆಳೆಯ ಚೇತನ್ ತಿಳಿಸಿದ. ಜೂನ್ ಮೊದಲ ವಾರದಲ್ಲಿ ಇದಕ್ಕಾಗಿ ಆನ್ ಲೈನ್ ನೊಂದಾಯಿಸಿ, ಜುಲೈ 20ರಿಂದ ನಾವು 8 ಜನರ ಗುಂಪು ಯಾತ್ರೆ ಆರಂಭಿಸುವುದಾಗಿ ಆಯ್ಕೆ ಮಾಡಿಕೊಂಡೆವು. ಈ ಯಾತ್ರೆಯ ಆರಂಭದಲ್ಲಿ ಆ ಶಿವನು ಮಾಡಿದ ಪರೀಕ್ಷೆ ಅಷ್ಟಿಷ್ಟಲ್ಲ. ಯಾತ್ರೆಗೆ ಒಂದು ವಾರ ಮುಂಚೆ ನನಗೆ ಪೂರ್ತಿ ಕೆಮ್ಮು, ಕಫ, ಜ್ವರ. ಯಾತ್ರೆಯ ಹಿಂದಿನ ದಿನ ಮನೆಯ ಮೇಲೆ ಹರಿವಿದ್ದ ಬಟ್ಟೆಗಳನ್ನು ತರಲು ಎರಡು ಮಹಡಿ ಹತ್ತಿ ಹೋಗಲೂ ಶಕ್ತಿ ಇರಲಿಲ್ಲ.

ಮನೆಯಿಂದ ವಿಮಾನ ನಿಲ್ದಾಣಕ್ಕೆ ಹೋಗುವಾಗ ನಮ್ಮ ಕಾರ್ ಅಪಘಾತಕ್ಕೆ ಈಡಾಯಿತು! ಯಾರಿಗೂ ಹೆಚ್ಚೇನೂ ಗಾಯಗಳಾಗದೇ ಪಾರಾಗಿ ಬೇರೊಂದು ಕಾರಿನಲ್ಲಿ ವಿಮಾನ ನಿಲ್ದಾಣ ತಲುಪಿದೆವು. ಯಾತ್ರೆಯಲ್ಲಿ ಒಂದೆರಡು ಸಲ 'ನನ್ನಿಂದ ಮುಂದುವರೆಯಲು ಸಾಧ್ಯವಿಲ್ಲ, ನೀವು ಮುಂದೆ ಹೋಗಿ' ಎಂದು ಸಂಗಾತಿಗಳಿಗೆ ಖಡಾಖಂಡಿತವಾಗಿ ಹೇಳಿದರೂ, ಗುಂಪಿನವರ ಪ್ರೇರಣೆಯ ಮಾತಿನಿಂದ ಹಾಗೂ ಅಗೋಚರ ಶಕ್ತಿಯ ಪ್ರಭಾವದಿಂದ ಚಾರಣ ಮುಂದುವರೆಸಿದೆ.

ಕೆಲವು ಅನುಭವಗಳು

- **ಚಾರಣ ಆರಂಭಿಸಿದ ತಕ್ಷಣವೇ ಮನಸ್ಸು ನಿರ್ಮಲವಾಗುತ್ತದೆ ಮತ್ತು ಶಾಂತವಾಗುತ್ತದೆ.**
- **ಚಾರಣದ 7 ದಿನ ಸ್ನಾನಮಾಡಿ ದೇಹ ಶುದ್ದಿಪಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದಿದ್ದರೂ, ಚಾರಣದುದ್ದಕ್ಕೂ ಶಿವನನ್ನು ಸ್ಮರಿಸುತ್ತಾ ಸಾಗುವಾಗ ಮನಸ್ಸು ಶುದ್ದವಾಗುತ್ತದೆ ಶುಭ್ರವಾಗುತ್ತದೆ.**
- **ಹಿಮಾಲಯದ ಒಂದೊಂದು ಗಿಡ, ಮರ, ಹೂವು, ಕಲ್ಲು ಬಂಡೆಗಳು, ಜಲಪಾತಗಳು ಶಿವನಾಮವನ್ನು ಜಪಿಸುತ್ತಾ ಇವೆಯೇನೋ ಎಂದನಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.**
- **ಚಾರಣ ಕಷ್ಟವೆನಿಸುವ ಜಾಗದಲ್ಲಿ, ಯಾರೋ ಒಬ್ಬ ಅಪರಿಚಿತರು ಬಂದು ಸಹಾಯ ಹಸ್ತ ನೀಡುತ್ತಾರೆ, ಆದರೆ ಮತ್ತೇ ಅವರನ್ನು ನಾವು ಕಾಣುವುದೇ ಇಲ್ಲ. ಇದು ಮನಸ್ಸಿನ ತರ್ಕಕ್ಕೆ ಮೀರಿದ್ದು.**
- **17,150 ಅಡಿ ಎತ್ತರದಲ್ಲಿರುವ ಶ್ರೀಖಂಡ ಮಹಾದೇವನ ಸನ್ನಿಧಿಗೆ ಹೋಗುತ್ತಿದ್ದಂತೆ ನನ್ನ ಮನಸ್ಸು ಶೂನ್ಯ ಭಾವವನ್ನು ಪಡೆದದ್ದಂತೂ ನಿಜ. ಗೆಳೆಯನೊಡನೆ ನಾನು ಕೂಡಿ ರುದ್ರ ಪಠಿಸಿದರೆ, ಮಿಕ್ಕ 6 ಜನ ಯಾವುದೋ ಭಕ್ತಿ ಲೋಕದಲ್ಲಿ ಮುಳುಗಿದ್ದರು. ಇನ್ನೇನು ವಾಪಸ್ ಹೊರಡಬೇಕು ಎಂದಾಗಲೇ ನಾವು ಯಾರೂ ಅಲ್ಲಿ ಫೋಟೋ ತೆಗೆಸಿಕೊಂಡಿಲ್ಲವೆಂದು ನೆನಪಾಗಿ, ಫೋಟೋ ತೆಗೆಸಿಕೊಂಡೆವು.**
- **ಬೆಂಗಳೂರಿಗೆ ಹಿಂದಿರುಗಿ ಬಂದಮೇಲೂ ಆ ಪರ್ವತಯಾತ್ರೆಯ ದೃಶ್ಯಗಳೂ ಕಾಣುತ್ತಲೇ ಇರುತ್ತವೆ. ಇದು ನನ್ನ ಅನುಭವ. ಗೆಳೆಯ ಚೇತನ್, ಅವನ ಪತ್ನಿ ಸಂಧ್ಯಾ ಹಾಗೂ ಅವರ ಬಳಗದವರು ಈ ಕಠಿಣ ಯಾತ್ರೆಗೆ ಕಾರಣರೆಂಬುದನ್ನು ನಾನು ನೆನಪಿಸಿಕೊಳ್ಳಲೇಬೇಕು.**

ಚಾರಣಿಗರ ರೂಪದಲ್ಲಿ, ಅಂದರೆ ಪರ್ವತಾರೋಹಿಗಳು ಉಪಯೋಗಿಸುವ ಸೌಲಭ್ಯಗಳನ್ನು ಬಳಸದೇ, ಅಷ್ಟು ಎತ್ತರದ ಜಾಗಕ್ಕೆ ನಡೆದು ಹೋಗಿ ಬಂದೆವು ಎಂಬುದು ನನ್ನ ಮಟ್ಟಿಗೆ ವಿಸ್ಮಯಕಾರಿ ಮತ್ತು ಅವಿಸ್ಮರಣೀಯ ಅನುಭವ.

ವೇದಿಕೆಯಲ್ಲಿರುವ ಎಲ್ಲರ ಹೆಸರನ್ನೂ ಹೇಳಬೇಕೇ?

Ask the Editor

3 ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ಈರಣ್ಣ ಬೆಂಗಾಲಿ, ರಾಯಚೂರು

● ಸಂಪಾದಕರೇ, ಇತ್ತೀಚಿನ ದಿನಗಳಲ್ಲಿ ಸಭೆ-ಸಮಾರಂಭಗಳಲ್ಲಿ ವೇದಿಕೆ ಮೇಲೆ ಕುಳಿತ ಹತ್ತಾರು ಜನರ ಹೆಸರುಗಳನ್ನು ಎಲ್ಲರೂ ಹೇಳುವುದು ಅತೀವ ಕಿರಿಕಿರಿಯನ್ನುಂಟು ಮಾಡುತ್ತಿದೆ. ಇದರಿಂದ ಸಮಯ ವ್ಯರ್ಥ. ಸಭಿಕರಿಗೂ ಹಿಂಸೆ. ಇದಕ್ಕೆ ಏನಾದರೂ ಪರಿಹಾರ ಇಲ್ಲವೇ?

– ಈರಣ್ಣ ಅವರೇ, ಇದೊಂದು ವಿಚಿತ್ರ ಸಾರ್ವಜನಿಕ ಕಾಯಿಲೆ. ಅದರಲ್ಲೂ ರಾಜಕಾರಣಿಗಳಿಗೆ ಅಂಟಿದ ಜಾಡ್ಯ. ಅವರಿಗೆ ವೇದಿಕೆ ಮೇಲೆ ಮತ್ತು ಮುಂಭಾಗದಲ್ಲಿ ಕುಳಿತ ಎಲ್ಲರ ಹೆಸರುಗಳನ್ನೂ ಹೇಳುವ ಗೀಳು. ಅವರೆಲ್ಲರ ಹೆಸರುಗಳನ್ನು ಹೇಳದಿದ್ದರೆ, ಅಷ್ಟು ಮತ ಕಮ್ಮಿ ಬೀಳಬಹುದೆಂದು ಅವರೇನಾದರೂ ಭಾವಿಸಿದ್ದಾರಾ, ಗೊತ್ತಿಲ್ಲ ಅಥವಾ ಅವರ ಹೆಸರುಗಳನ್ನೂ ಹೇಳಿದರೆ ಅವರೆಲ್ಲ ತಮ್ಮ ಪಕ್ಷಕ್ಕೆ ಮತ ಹಾಕುತ್ತಾರೆ ಎಂದು ತಿಳಿದಿದ್ದಾರಾ, ಉಹುಂ.. ಗೊತ್ತಿಲ್ಲ. ಪ್ರಧಾನಿ, ಮುಖ್ಯಮಂತ್ರಿಗಳು ಅಥವಾ ಗಣ್ಯರು ಮಾತಿಗೆ ನಿಂತಾಗ, ವೇದಿಕೆಯಲ್ಲಿ ಕುಳಿತ ಇತರರಿಗೆ ಅವರು ತಮ್ಮ ಹೆಸರುಗಳನ್ನೂ ಹೇಳಲಿ ಎಂಬ ಆಸೆಯಿರುತ್ತದೆ. ಕೆಲವರು ಶಿಷ್ಟಾಚಾರಕ್ಕಾಗಿ ಎಲ್ಲರ ಹೆಸರುಗಳನ್ನೂ ಪ್ರಸ್ತಾಪಿಸುವುದುಂಟು.

ಆದರೆ ವೇದಿಕೆ ಮೇಲಿರುವ ಎಲ್ಲರೂ ಎಲ್ಲರ ಹೆಸರುಗಳನ್ನೂ ಹೇಳಬೇಕಿಲ್ಲ. ವೇದಿಕೆ ಮೇಲೆ ಕುಳಿತ 'ಗಣ್ಯ ಮಾನ್ಯರೇ..' ಎಂದು ಹೇಳಬಹುದು. ಆದರೆ ಇದೊಂದು ಕೆಟ್ಟ ಚಾಳಿ. ಇನ್ನು ಕೆಲವರಿಗೆ ಮಾತಿಗೆ ನಿಂತಾಗ, ಟ್ರ್ಯಾಕ್ ಗೆ ಬರಲು ತುಸು ಸಮಯ ಬೇಕು. ಅಂಥವರು ಎಲ್ಲರ ಪದವಿ, ಹೆಸರು ಮತ್ತು ತಮ್ಮ ಸಂಬಂಧ-ಒಡನಾಟ ಉಲ್ಲೇಖಿಸಿ ಹೆಸರುಗಳನ್ನು ಹೇಳುತ್ತಾರೆ. ರಾಜಕೀಯ ಸಮಾವೇಶಗಳಲ್ಲಿ ವೇದಿಕೆ ಮೇಲೆ ಇಪ್ಪತ್ತು ಜನ ಕುಳಿತಿದ್ದರೆ, ಎಲ್ಲರೂ ತಮ್ಮ ಪಾಳಿ ಬಂದಾಗ ಅವರೆಲ್ಲರ ಹೆಸರುಗಳನ್ನೂ ಹೇಳುತ್ತಾರೆ. ಅದು ಕ್ರೂರ ಹಿಂಸೆ.

ಈ ವಿಷಯದಲ್ಲಿ ಯಾರಿಗೂ ಉಪದೇಶ ಮಾಡಬೇಕಿಲ್ಲ. ಅವರೇ ತಿಳಿದುಕೊಳ್ಳಬೇಕು. ತಮ್ಮ ಮಾತಿನಿಂದ ಕೇಳುಗರಿಗೆ ಕಿರಿಕಿರಿಯಾಗುತ್ತದೆ ಎಂಬ ಸೂಕ್ಷ್ಮ ಸಂವೇದನೆ ಭಾಷಣಕಾರರಿಗೆ ಇರಬೇಕು. ಈ ವಿಷಯದಲ್ಲಿ ಕಾನೂನು ಅಥವಾ ನಿಯಮವನ್ನು ರೂಪಿಸಬೇಕಿಲ್ಲ. ಸಮಯ, ಸಂದರ್ಭ ನೋಡಿ ವೇದಿಕೆಯ ಮೇಲೆ ಕುಳಿತವರೆಲ್ಲರ ಹೆಸರುಗಳನ್ನು ಹೇಳಬೇಕೇ, ಬೇಡವೇ ಎಂಬ ವಿವೇಚನೆ ಭಾಷಣಕಾರರಿಗೆ ಇರಬೇಕು.

ವೇದಿಕೆ ಮೇಲೆ ಹತ್ತಕ್ಕೂ ಹೆಚ್ಚು ಜನ ಕುಳಿದ್ದಾಗ, ಎಲ್ಲರೂ ಎಲ್ಲರ ಹೆಸರುಗಳನ್ನೂ ತಮ್ಮ ಮಾತಿನ ಆರಂಭದಲ್ಲಿ ಪ್ರಸ್ತಾಪಿಸಿದರೆ, ಕಾರ್ಯಕ್ರಮದ ನಿರೂಪಕರು, 'ದಯವಿಟ್ಟು ಎಲ್ಲರ ಹೆಸರುಗಳನ್ನೂ ಪ್ರಸ್ತಾಪಿಸಿ ಸಮಯ ವ್ಯರ್ಥ ಮಾಡಬೇಡಿ' ಎಂದು ವಿನಂತಿಸಿಕೊಳ್ಳಬಹುದಷ್ಟೇ.

ವೇಣುಗೋಪಾಲ ಕಂಚಿತೋಟ, ಕಡೂರು

● ಭಟ್ರೇ, 'ಆಸ್ಕ್ ದಿ ಎಡಿಟರ್' ಅಂಕಣದಲ್ಲಿ ನೀವು ಓದುಗರ ಎಲ್ಲ ಪ್ರಶ್ನೆಗಳಿಗೂ, ಸಮಸ್ಯೆಗಳಿಗೂ ಉತ್ತರಿಸುತ್ತೀರಿ. ನಿಮ್ಮ ಸಮಸ್ಯೆಗಳಿಗೆ ಯಾರು ಉತ್ತರಿಸುತ್ತಾರೆ? ಅಥವಾ ನಿಮಗೆ ಸಮಸ್ಯೆಗಳೇ ಇಲ್ಲವಾ?

– ವೇಣುಗೋಪಾಲ ಅವರೇ, ಜಗತ್ತಿನಲ್ಲಿ ಸಮಸ್ಯೆಗಳು ಇಲ್ಲದವರು ಯಾರಿದ್ದಾರೆ? ಮನುಷ್ಯರಿಗೊಂದೇ ಅಲ್ಲ, ದೇವರಿಗೂ ಸಮಸ್ಯೆಗಳಿವೆ. ಹೀಗಿರುವಾಗ ನಾನು ಯಾವ ಮರದ ತೊಪ್ಪಲು? ನನ್ನ ಓದುಗರು ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುತ್ತಾರೆ. ಕಾರಣ ಅವರಿಗೊಂದು ವೇದಿಕೆ (ಆಸ್ಕ್ ದಿ ಎಡಿಟರ್ ಅಂಕಣ) ಇದೆ, ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳಲು, ಭಾವನೆಗಳನ್ನು ತೋಡಿಕೊಳ್ಳಲು ಅವರಿಗೊಬ್ಬ ಸಂಪಾದಕನಿದ್ದಾನೆ.

ನನಗೆ ಯಾರಿದ್ದಾರೆ? ನಾನು ಯಾವ ಸಂಪಾದಕನ ಮುಂದೆ ಹೇಳಿಕೊಳ್ಳಬೇಕು? ಯಾವ ಸಂಪಾದಕ 'ಆಸ್ಕ್ ದಿ ಎಡಿಟರ್' ಎಂಬ ವೇದಿಕೆ ತೆರೆದಿಟ್ಟುಕೊಂಡು ಕುಳಿತಿದ್ದಾನೆ? ನಾನು ನನ್ನ ಸಮಸ್ಯೆಗಳನ್ನು ಹೇಳಿಕೊಂಡರೆ ಯಾವ ಸಂಪಾದಕ ಅದಕ್ಕೆ ಪರಿಹಾರ ಸೂಚಿಸುತ್ತಾನೆ? ದಯವಿಟ್ಟು ಹೇಳಿ. ನನಗೂ ನನ್ನದೇ ಆದ ಸಮಸ್ಯೆಗಳಿವೆ. ನನಗೂ ಯಾರಾದರೂ ಸಂಪಾದಕನ ಮುಂದೆ ಹೇಳಿಕೊಳ್ಳೋಣ ಅನಿಸುತ್ತದೆ. ಆದರೆ ಹೇಳಿಕೊಳ್ಳಲು ಸಂಪಾದಕರೇ ಇಲ್ಲವಲ್ಲ?

ಯಾರಿಗೆ ಹೇಳೋಣ ನನ್ನ ಪ್ರಾಬ್ಲಮ್ಮು?!

ನವೀನ ಕೆ., ಬೆಂಗಳೂರು

● ಭಟ್ರೇ, ನಾನು ಖಾಸಗಿ ಸಂಸ್ಥೆಯೊಂದರಲ್ಲಿ ಉನ್ನತ ಸ್ಥಾನದಲ್ಲಿದ್ದೇನೆ. ಎಲ್ಲಿಗೆ ಹೊರಡುವಾಗಲೂ ಕನಿಷ್ಠ ಐದಾರು ಡ್ರೆಸ್ಸುಗಳನ್ನು ಬದಲಿಸುತ್ತೇನೆ. ಯಾವ ಡ್ರೆಸ್ ಧರಿಸಿದರೂ ಸಮಾಧಾನವಾಗುವುದಿಲ್ಲ. 'ಹೆಂಗಸರಿಗಿಂತ ಹೆಚ್ಚು ಸಲ ಡ್ರೆಸ್ ಬದಲಿಸುತ್ತೀರಲ್ಲ?' ಎಂದು ಹೆಂಡತಿ ಗದರುತ್ತಾಳೆ. ಕೆಲವೊಮ್ಮೆ ಪ್ಯಾಂಟ್ ಸೆಟ್ ಆದರೆ, ಶರ್ಟ್ ಸೆಟ್ ಆಗುವುದಿಲ್ಲ. ಶರ್ಟ್ ಸೆಟ್ ಆದ್ರೆ, ಪ್ಯಾಂಟ್ ಆಗುವುದಿಲ್ಲ. ಅರ್ಧರ್ಧ ಗಂಟೆ ಡ್ರೆಸ್ ಮಾಡಿ ಕೊಳ್ಳಲು ತೆಗೆದುಕೊಂಡಿದ್ದುಂಟು. ನನ್ನ ಈ ಸಮಸ್ಯೆಗೆ ಪರಿಹಾರವೇನು?

– ನವೀನ ಅವರೇ, ಈ ವಿಷಯದಲ್ಲಿ ನಿಮ್ಮೊಂದಿಗೆ ಪ್ರಬಲ ಪೈಪೋಟಿಗೆ ಇಳಿಯಬಲ್ಲ ಇನ್ನೊಬ್ಬ ವ್ಯಕ್ತಿಯಿದ್ದರೆ ಅದು ನಾನು. ಈ ಸಮಸ್ಯೆಗೆ ಮೊದಲು ನಾನು ಉತ್ತರ ಕಂಡುಕೊಳ್ಳುತ್ತೇನೆ. ನಂತರ, ಈ ಪ್ರಶ್ನೆಗೆ ಉತ್ತರಿಸುತ್ತೇನೆ. ಅಲ್ಲಿ ತನಕ ಬಟ್ಟೆ ಬದಲಿಸುತ್ತಾ ಇರಿ. ಬಣ್ಣ ಬದಲಿಸುವುದಕ್ಕಿಂತ ಬಟ್ಟೆ ಬದಲಿಸುವುದು ಎಷ್ಟೋ ವಾಸಿ.

ನವ್ಯಾ ಎ., (ಇಮೇಲ್ ಮೂಲಕ)

● ನಿತ್ಯವೂ ನಾನು ಏನನ್ನಾದರೂ ಓದುತ್ತಿರುತ್ತೇನೆ. ಕಥೆ, ಕಾದಂಬರಿ, ಸೆಲ್ಫ್ ಹೆಲ್ಪ್ ಪುಸ್ತಕಗಳು ಒಟ್ಟಾರೆ ಏನನ್ನಾದರೂ ಓದುತ್ತೇನೆ. ಕೆಲವು ತೀರಾ ಆಸಕ್ತಿದಾಯಕ ಕಥೆ, ಕಾದಂಬರಿಗಳನ್ನು ಹೊರತುಪಡಿಸಿ ಬೇರೆ ಯಾವ ಓದೂ ನೆನಪಿನಲ್ಲಿ ಉಳಿಯದು. ನನ್ನ ಪ್ರಕಾರ ನೆನಪಿನಲ್ಲಿ ಉಳಿಯುವುದು ಎಂದರೆ ನನ್ನದಾಗಿಸಿಕೊಳ್ಳುವುದು. ಕೆಲವು ಕಥೆಗಳನ್ನು ಓದುವಷ್ಟು ಕಾಲ ಸುತ್ತಲಿನ ಜಗತ್ತನ್ನು ಮರೆತುಬಿಟ್ಟಿರುತ್ತೇನೆ. ಓದಿ ಮುಗಿಸಿ ಮರಳಿ ವಾಸ್ತವ ಜಗತ್ತಿಗೆ ಬಂದ ಮೇಲೆ 'ಆಹಾ ಎಂಥಾ ಅನುಭವ' ಎಂದು ಮತ್ತೆ ಮತ್ತೆ ಮೆಲುಕು ಹಾಕಿ ಆಸ್ವಾದಿಸುತ್ತೇನೆ. ಅದರಲ್ಲಿ ನನಗೆ ಸಂಬಂಧಿಸಿದ, ತೀರಾ ಆಪ್ತವಾದ ಏನೋ ಒಂದು ಅನುಭವ, ಮಾಹಿತಿ ನನ್ನದಾಗಿರುತ್ತದೆ. ಆದರೆ ಉಳಿದ ಓದು, ಮಾಹಿತಿ ಸಂಗ್ರಹ ವ್ಯರ್ಥ ಅನಿಸುತ್ತದೆ. ಶಾಲೆ-ಕಾಲೇಜುಗಳಲ್ಲಿ ಓದಿದಂತೆ ಅಧ್ಯಾಯಗಳ ನಂತರ ಪ್ರಶ್ನೆ ಕೇಳಿಕೊಂಡು ಪದೇ ಪದೇ ಮನನ ಮಾಡಬೇಕೆ ಅಥವಾ ಟಿಪ್ಪಣಿ ಮಾಡಿಕೊಳ್ಳಬೇಕೇ ?

– ನವ್ಯಾ ಅವರೇ, ಓದಿದ್ದನ್ನು ನೆನಪಿಟ್ಟುಕೊಳ್ಳುವುದು ಹೇಗೆ ಎಂಬುದು ನಿಮ್ಮ ಪ್ರಶ್ನೆ ತಾನೇ? ಓದಿದ್ದೆಲ್ಲವೂ ನೆನಪಿನಲ್ಲಿ ಇರುವುದಿಲ್ಲ, ಹಾಗೆ ನೆನಪಲ್ಲಿ ಇಟ್ಟುಕೊಳ್ಳಬೇಕಾಗಿಯೂ ಇಲ್ಲ. ನೀವು ಕ್ರಮಿಸಿದ ದಾರಿಯಲ್ಲಿ ಸಿಗುವ ಎಲ್ಲ ಊರುಗಳು ನಿಮಗೆ ನೆನಪಾಗದೇ ಹೋಗಬಹುದು. ನೀವು ನೋಡಿದ್ದೆಲ್ಲವೂ, ಕೇಳಿದ್ದೆಲ್ಲವೂ ನೆನಪಿನಲ್ಲಿ ಇರುವುದಿಲ್ಲ. ನಮಗೆ ಪ್ರಿಯವಾದ, ಆಸಕ್ತಿದಾಯಕವಾದ ಸಂಗತಿಗಳು, ನಾವು ಪ್ರಯತ್ನಪಡದಿದ್ದರೂ ನೆನಪಿನಲ್ಲಿ ಇರುತ್ತವೆ. ನಾವು ಆಸಕ್ತಿಯಿಂದ ಗಮನಿಸಿದ ಯಾವ ವಿಷಯವೂ ಮರೆತು ಹೋಗುವುದಿಲ್ಲ. ಪ್ರೇಮ-ಸಲ್ಲಾಪ ಅಥವಾ ಪ್ರೇಮಪತ್ರ ಮರೆತು ಹೋಯಿತು ಎಂದು ಹೇಳಿದವರನ್ನು ನಾನಂತೂ ಕೇಳಿಲ್ಲ. ಕಾರಣ ನಾವು ಅವನ್ನು ಗಮನವಿಟ್ಟು ಕೇಳಿರುತ್ತೇವೆ. ಹಾಗೆ ನೋಡಿದರೆ, ನೆನಪಿನಲ್ಲಿ ಇಟ್ಟುಕೊಳ್ಳುವುದು ಕಷ್ಟವಲ್ಲ.

ನವ್ಯಾ ಅವರೇ, ನಾನು ನಿಮಗೊಂದು ಪ್ರಶ್ನೆ ಕೇಳುತ್ತೇನೆ – ಓದಿದ್ದನ್ನು ನೀವು ಹೇಗೆ ಮರೆಯುತ್ತೀರಿ? ಅದಕ್ಕೆ ಯಾವ ಟೆಕ್ನಿಕ್ ಬಳಸುತ್ತೀರಿ? ಯಾರಾದರೂ ನಿಮಗೆ ಬೈದರೆ, ಬೇಡವೆಂದರೂ ನಿಮಗೆ ಮರೆಯಲು ಸಾಧ್ಯವಾಗುವುದಿಲ್ಲ. ಅದು ಪದೇ ಪದೆ ನೆನಪಾಗುತ್ತದೆ. ಎಷ್ಟೋ ವರ್ಷಗಳ ನಂತರವೂ ಮರೆತು ಹೋಗುವುದಿಲ್ಲ. ಹೀಗಿರುವಾಗ ಈಗ ಓದಿದ್ದನ್ನು ಹೇಗೆ ಮರೆಯುತ್ತೀರಿ? ಮರೆಯಲು ಯಾವುದಾದರೂ ವಿಧಾನಗಳಿವೆಯಾ? ಇಲ್ಲವಲ್ಲ.

ಕಂಪ್ಯೂಟರಿನಲ್ಲಿ ಬೇಡವಾದ ಫೈಲುಗಳನ್ನು ಡಿಲೀಟ್ ಮಾಡಬಹುದು. ನಮ್ಮಲ್ಲಿ ಅಂಥ ಸೌಲಭ್ಯ ಇದೆಯಾ? ಇಲ್ಲವೇ ಇಲ್ಲ. ಹೀಗಾಗಿ ಮರೆಯುವುದು ಅಷ್ಟು ಸುಲಭ ಅಲ್ಲ. ನಿಮ್ಮ ತಂದೆ-ತಾಯಿ, ಅಣ್ಣ-ತಮ್ಮ, ಅಕ್ಕ-ತಂಗಿ ಹೆಸರುಗಳನ್ನು ನಿಮಗೆ ಮರೆಯುವುದು ಸಾಧ್ಯವಾ? ಅವರ ಹೆಸರುಗಳು ನೆನಪಾಗದೇ , ನಿಮಗೆ ಎಂದಾದರೂ ಸಮಸ್ಯೆ ಆಗಿದೆಯಾ? ಇಲ್ಲವಲ್ಲ.

ಈಗ ನೀವು ಓದಿದ್ದು ಹೇಗೆ ಮರೆತು ಹೋಗುತ್ತದೆ ಎಂಬ ಪ್ರಶ್ನೆಯನ್ನು ನಿಮಗೆ ನೀವೇ ಕೇಳಿಕೊಳ್ಳಿ. ನೀವು ಯಾವುದಾದರೂ ವಿಷಯವನ್ನು ಗಮನವಿಟ್ಟು ಓದಿದರೆ ಮರೆಯಲು ಸಾಧ್ಯವೇ ಇಲ್ಲ. ನನಗೆ ನೆನಪಿಟ್ಟುಕೊಳ್ಳುವುದು ಕಷ್ಟ ಅಲ್ಲ, ಆದರೆ ಮರೆಯುವುದು. ನೀವು ಏನನ್ನಾದರೂ ಓದಿದರೆ, ಕೇಳಿದರೆ, ನೋಡಿದರೆ, ಹೇಗೆ ಮರೆಯುತ್ತೀರಿ? ನೆನಪಿಟ್ಟುಕೊಳ್ಳುವುದಕ್ಕಿಂತ, ಮರೆಯುವುದು ಕಷ್ಟ ಎಂಬ ಸಂಗತಿಯನ್ನು ಮನಸ್ಸಿನಲ್ಲಿ ತುಂಬಿಕೊಳ್ಳಿ. ನಂತರ ನೀವು ಯಾವುದನ್ನೂ ಮರೆಯುವುದಿಲ್ಲ.

ರವಿಕುಮಾರ ಗೌಡ, (ಇಮೇಲ್ ಮೂಲಕ)

● ಸಂಪಾದಕರೇ, ನನಗೀಗ 21 ವರ್ಷ. ಈಗಾಗಲೇ ಪತ್ರಿಕೋದ್ಯಮ ಸೇರಿದಂತೆ ಮೂರು ವಿಷಯಗಳಲ್ಲಿ ಪದವಿಯನ್ನು ಗಳಿಸಿಕೊಂಡಿದ್ದೇನೆ. ಪ್ರಸ್ತುತ ಕಾನೂನು ಪದವಿಯ ಮೊದಲ ವರ್ಷದ ಅಂತಿಮ ಭಾಗದಲ್ಲಿದ್ದೇನೆ. ಆದರೆ ಮನಸ್ಸು ಪತ್ರಿಕೋದ್ಯಮದ ಕಡೆಗೆ ತವಕಿಸುತ್ತಿದೆ. ಈಗ ನಾನೇನು ಮಾಡಲಿ?

– ರವಿಕುಮಾರ ಅವರೇ, Listen to your inner voice ಎಂಬ ಮಾತಿದೆ. ನಿಮ್ಮ ಅಂತರಾತ್ಮ ಅಥವಾ ಒಳದನಿ ಏನು ಹೇಳುತ್ತೋ ಅದನ್ನೇ ಮಾಡಬೇಕಂತೆ. ಕಾರಣ ನಮ್ಮ ಒಳದನಿ ಯಾವತ್ತೂ ನಮ್ಮನ್ನು ಸರಿಯಾದ ದಿಕ್ಕಿನೆಡೆಗೆ ಕರೆದುಕೊಂಡು ಹೋಗಲು ಸಹಾಯ ಮಾಡುತ್ತದೆ. ಇರಲಿ. ನೀವು ಪತ್ರಿಕೋದ್ಯಮ ಪದವಿ ಗಳಿಸಿದ ನಂತರ, ಈಗ ಕಾನೂನು ವ್ಯಾಸಂಗ ಮಾಡುತ್ತಿರುವುದು ಒಳ್ಳೆಯದೇ. ಪತ್ರಕರ್ತರಾಗುವವರಿಗೆ ಕಾನೂನಿನ ಜ್ಞಾನವಿದ್ದರೆ ಒಳ್ಳೆಯದು. ನೀವು ಕಾನೂನು ಅಥವಾ ಕೋರ್ಟ್ ವರದಿಗಾರ ಆಗಬಹುದು.

ಸಾಮಾನ್ಯವಾಗಿ ಹೆಚ್ಚಿನ ಪತ್ರಕರ್ತರಿಗೆ ಕಾನೂನಿನ ಬಗ್ಗೆ ಆಳವಾದ ಜ್ಞಾನವಿರುವುದಿಲ್ಲ. ನೀವು ಆ ವಿಷಯವನ್ನು ವ್ಯಾಸಂಗ ಮಾಡಿ ಬಂದರೆ, ಉಳಿದವರಲ್ಲಿ ಇಲ್ಲದ ಪರಿಣತಿ ನಿಮ್ಮಲ್ಲಿ ಇದ್ದಂತಾಗುತ್ತದೆ. ಇದು ಒಂದು ರೀತಿಯಲ್ಲಿ advantage. ಹೀಗಾಗಿ ಕಾನೂನು ವ್ಯಾಸಂಗವನ್ನು ಅರ್ಧಕ್ಕೆ ಮೊಟಕುಗೊಳಿಸಬೇಡಿ.

ಪತ್ರಕರ್ತರಾಗಿ ಕೆಲಸ ಮಾಡಿ ಬಳಿಕ, ಒಂದು ವೇಳೆ ಪತ್ರಿಕೋದ್ಯಮ ಬೋರು ಅಂತೆನಿಸಿದರೆ, ನೀವು ಕರಿಕೋಟು ಧರಿಸಿ ಪ್ರ್ಯಾಕ್ಟೀಸು ಮಾಡಬಹುದು. ಹೀಗಾಗಿ ಕಾನೂನು ವ್ಯಾಸಂಗವನ್ನು ಅರ್ಧಕ್ಕೆ ನಿಲ್ಲಿಸಬೇಡಿ.

ನೀವು ಕಾನೂನನ್ನು ವ್ಯಾಸಂಗ ಮಾಡುವಾಗಲೂ ಪತ್ರಿಕೆಗಳಿಗೆ ಫ್ರೀಲಾನ್ಸರ್ ಆಗಿ ಬರೆಯಬಹುದು. ಒಂದು ಪತ್ರಿಕೆಯನ್ನು ಸೇರಿದರೆ, ಅದಕ್ಕೊಂದೇ ಬರೆಯಬೇಕಾಗುತ್ತದೆ. ಫ್ರೀಲಾನ್ಸರ್ ಆದರೆ, ಯಾವ ಪತ್ರಿಕೆಗಾದರೂ ಬರೆಯಬಹುದು. ಅದೊಂದು advantage. ಪತ್ರಿಕೆಗೆ ಕೆಲಸಕ್ಕೆ ಸೇರುವುದಕ್ಕಿಂತ ಮುನ್ನ ನೀವು ಕನಿಷ್ಠ ನೂರಾರು ಲೇಖನಗಳನ್ನು ಬರೆದಿದ್ದರೆ, ನಿಮಗೊಂದು ಆತ್ಮವಿಶ್ವಾಸ ತನ್ನಷ್ಟಕ್ಕೆ ನೆಲೆಗೊಳ್ಳುತ್ತದೆ. ವೃತ್ತಿಗೆ ಬರುವುದಕ್ಕಿಂತ ಮುನ್ನವೇ ನಿಮ್ಮ ಹೆಸರು ಚಾಲ್ತಿಗೆ ಬರುವಂತಾಗುತ್ತದೆ. ಪತ್ರಕರ್ತರಾಗಲು ಆಸಕ್ತಿಯೊಂದೇ ಅಲ್ಲ, ಆ ನಿಟ್ಟಿನಲ್ಲಿ ಆಳವಾದ ಅಧ್ಯಯನವೂ ಅಷ್ಟೇ ಮುಖ್ಯ.

ಜ್ಯೋತಿ ಮಠದ, (ಇಮೇಲ್ ಮೂಲಕ)

● ಸಂಪಾದಕರೇ, ನನಗೆ ಪತ್ರಿಕೋದ್ಯಮದಲ್ಲಿ ಅತೀವ ಆಸಕ್ತಿಯಿದೆ. ಆದರೆ ನಾನು ಪತ್ರಿಕೋದ್ಯಮ ಓದಿಲ್ಲ. ಪತ್ರಿಕೋದ್ಯಮ ವಿದ್ಯಾಭ್ಯಾಸ ಮಾಡಲು ಏನೆಲ್ಲ ಅರ್ಹತೆ ಇರಬೇಕು? ಇದಕ್ಕಾಗಿ ಯಾವ ಪುಸ್ತಕಗಳನ್ನು ರೆಫರ್ ಮಾಡಬೇಕು? ಪತ್ರಿಕೋದ್ಯಮ ಓದಲು ಎಲ್ಲಿ ಅವಕಾಶ ಉಂಟು? ನಿಮ್ಮ ಸಲಹೆ-ಸೂಚನೆ ನನಗೆ ಅಗತ್ಯವಾಗಿದೆ.

– ಜ್ಯೋತಿ ಅವರೇ, ಪತ್ರಕರ್ತನಾಗಲು ಪತ್ರಿಕೋದ್ಯಮವನ್ನೇ ಓದಿರಬೇಕು ಎಂದೇನಿಲ್ಲ. ಪತ್ರಿಕೋದ್ಯಮವನ್ನು ಓದದೇ ಉತ್ತಮ ಪತ್ರಕರ್ತರಾದವರು ಅನೇಕ ಮಂದಿಯಿದ್ದಾರೆ. ಖುಷವಂತ ಸಿಂಗ್, ಎಂ.ಜೆ.ಅಕ್ಬರ್, ಅರುಣ್ ಶೌರಿ, ಶಾಮರಾವ್, ಖಾದ್ರಿ ಶಾಮಣ್ಣ, ವೈಎನ್ಕೆ, ಲಂಕೇಶ್ ಮುಂತಾದವರು ಪತ್ರಿಕೋದ್ಯಮ ಶಿಕ್ಷಣ ಮಾಡಿದವರಲ್ಲ. ಅವರು ಅಪರಿಮಿತ ಆಸಕ್ತಿಯಿಂದ ಪತ್ರಕರ್ತರಾದವರು. ಭಾಷೆಯನ್ನು ಶಾಸ್ತ್ರೀಯವಾಗಿ ಓದದೆಯೂ, ಉತ್ತಮವಾಗಿ ಬರೆದವರು. ಅವರಲ್ಲಿ ವಿಷಯವಿತ್ತು ಮತ್ತು ಆಸಕ್ತಿಯಿತ್ತು. ಅದನ್ನೇ ಕರಗತ ಮಾಡಿ ಕೊಂಡು ಉತ್ತಮ ಪತ್ರಕರ್ತರೆನಿಸಿಕೊಂಡರು.

ಪತ್ರಕರ್ತರಾಗಲು ಯಾವುದೇ ವಿಷಯದಲ್ಲಿ ಪದವಿ ಹೊಂದಿದ್ದರೆ ಸಾಕು. ಪತ್ರಿಕೋದ್ಯಮ ಓದಿದವರಿಗೆ ಆದ್ಯತೆ ನೀಡಬಹುದು. ಪತ್ರಿಕೋದ್ಯಮ ಓದಿದವರೆಲ್ಲ ಉತ್ತಮ ಪತ್ರಕರ್ತರಾಗುತ್ತಾರೆ ಎಂಬುದು ಸುಳ್ಳು. ಪತ್ರಿಕೋದ್ಯಮ ಓದಿದರೆ ವಿಷಯದ ಪರಿಭಾಷೆ ಬೇಗನೆ ಅರ್ಥವಾಗಬಹುದು. ಕೆಲವು ಪಟ್ಟುಗಳು ಬೇಗನೆ ಕೈಹಿಡಿಯಬಹುದು. ಪತ್ರಿಕೋದ್ಯಮ ಓದದೆಯೂ ಇವೆಲ್ಲವನ್ನೂ ಕರಗತ ಮಾಡಿಕೊಳ್ಳುವುದು ಕಷ್ಟವಲ್ಲ. ಒಳ್ಳೆಯ ಭಾಷೆ, ವಿಷಯ ಜ್ಞಾನ ಬಹಳ ಮುಖ್ಯ.

ಪ್ರತಿದಿನ ನೀವು ಎರಡು ಕನ್ನಡ ಮತ್ತು ಎರಡು ಇಂಗ್ಲಿಷ್ ಪತ್ರಿಕೆಗಳನ್ನು ತಪ್ಪದೇ ಎರಡು ವರ್ಷಗಳ ಕಾಲ ಓದಿದರೆ, ನೀವು ಉತ್ತಮ ಪತ್ರಕರ್ತರಾಗಬಹುದು. ಪತ್ರಿಕೆಗಳಿಗಿಂತ ಮಿಗಿಲಾದ ಪತ್ರಿಕೋದ್ಯಮ ಪಠ್ಯ-ಪುಸ್ತಕಗಳಿಲ್ಲ. ಒಂದು ಸುದ್ದಿಯನ್ನು ಹೇಗೆ ಬರೆದಿದ್ದಾರೆ, ಹೇಗೆ ಎಡಿಟ್ ಮಾಡಿದ್ದಾರೆ, ಅದಕ್ಕೆ ಯಾವ ರೀತಿ ಹೆಡ್ ಲೈನ್ ಬರೆದಿದ್ದಾರೆ ಮತ್ತು ಯಾವ ರೀತಿ ವಿನ್ಯಾಸ ಮಾಡಿದ್ದಾರೆ ಎಂಬುದನ್ನು ಗಮನವಿಟ್ಟು ಓದಿದರೆ, ಕಸುಬು ತನ್ನಷ್ಟಕ್ಕೆ ಒಲಿಯುತ್ತದೆ. ಪತ್ರಿಕೆಗಳನ್ನು ಓದಿಯೇ ಪತ್ರಕರ್ತರಾಗಬಹುದು.